ಕರ್ಣಾಟಕ ಕಾವ್ಯಕಲಾನಿಧಿ, ನಂ. ೩೦.

ಕನ್ನಡಭಾಷೆಯೊಳ್ ವಿರಚಿಸಿದ

ವಾಸುದೇವ ಯತೀಂದ್ರ ಪ್ರಣೀತವಾದ

# ವೇದಾಂತ ವಿವೇಕಸಾರ

(ಅದ್ವೈತಮತವಿಚಾರ.)

ಪ್ರಥಮಸಂಪುಟ (ಪ್ರಕರಣ, ೧–೧೫)

ಮ. ಆ. ರಾಮಾನುಜಯ್ಯಂಗಾರ್ಯರಿಂದ
ಪರಿಶೋಧಿಸಲ್ಪಟ್ಟ.

---

ಮೈಸೂರು;
ಸ್ಟಾರ ಪ್ರೆಸ್ಸಿನಲ್ಲಿ ಮುದ್ರಿತವಾಯಿತು.
೧೯೦೮.

ಕ್ರಯ ೧–೪–೦.

UNIVERSAL LIBRARY
OU_202210
UNIVERSAL LIBRARY

OSMANIA UNIVERSITY LIBRARY

Call No. K 294 Accession No. GK 83

Author R16V

Title

This book should be returned on or before the date last marked below.

Checked 1969

ALL RIGHTS RESERVED.

# ವೇದಾಂತ ವಿವೇಕಸಾರ

## ಪೀಠಿಕೆ.

ಈ ಗ್ರಂಥದಲ್ಲಿ ಅದ್ವೈತ ಮತಸಿದ್ಧಾಂತಪ್ರಕ್ರಿಯೆಯು ಐವತ್ತೊಂದು ಪ್ರಕರಣವಾಗಿ ವಿಭಾಗಿಸಲ್ಪಟ್ಟು ಪ್ರಶ್ನೋತ್ತರ ರೂಪದಲ್ಲಿ ಅಧ್ಯೇತೃಗಳ ಮನಸ್ಸಿಗೆ ಸುಲಭವಾಗಿ ಅಧಿರೂಢವಾಗುವಂತೆ ಕನ್ನಡದ ಭಾಷೆಯಲ್ಲಿ ಗದ್ಯರೂಪವಾಗಿ ಬರೆಯಲ್ಪಟ್ಟಿದೆ. ಗ್ರಂಥಕರ್ತನು ಗ್ರಂಥದಲ್ಲಿ ತನ್ನ ಹೆಸರನ್ನು ಹೇಳಿಕೊಂಡಿಲ್ಲ. ಈತನು ಯಾವ ಕನ್ನಡದೇಶದ ಯಾವ ಭಾಗದಲ್ಲಿ ಯಾವ ಕಾಲದಲ್ಲಿ ಇದ್ದವನೋ ತಿಳಿದು ಬರುವುದಿಲ್ಲ.

ಗ್ರಂಥಾರಂಭದಲ್ಲಿ—

"ಯಸ್ಯಾತ್ಮಭೂತಸ್ಯ ಗುರೋಃಪ್ರಸಾದಾದಹಂ ವಿಮುಕ್ತೋಽಸ್ಮಿ ಶರೀರಬಂಧಾತ್॥
ಸರ್ವೋಪದೇಷ್ಟುಃ ಪುರುಷೋತ್ತಮಸ್ಯ ತಸ್ಯಾಂಘ್ರಿಪದ್ಮಂ ಪ್ರಣತೋಽಸ್ಮಿನಿತ್ಯಂ॥"

ಎಂದೂ,

"ಮೂಢಾನ್ವಿವೇಕಿನಃಕೃತ್ವಾ ಲೋಕೇ ಸರ್ವೋಪದೇಶಕಃ।
ಯಸ್ತಿಷ್ಠತಿ ಚ ತಂ ಶ್ರೀಮದ್ವಾಸುದೇವಯತಿಂ ಭಜೇ॥"

ಎಂದೂ ಹೇಳಿಕೊಂಡಿರುವುದರಿಂದ ಈತನು ವಾಸುದೇವನೆಂಬ ಹೆಸರುಳ್ಳ ಒಬ್ಬ ಪ್ರಸಿದ್ಧನಾಗಿಯೂ ಸರ್ವೋಪದೇಷ್ಟಕನಾಗಿಯೂ ಇದ್ದ ಯತೀಶ್ವರನ ಶಿಷ್ಯನಾಗಿರಬೇಕು.

"ಅನುಗ್ರಹಾರ್ಥಂ ಮರ್ತ್ಯಾನಾಂ ಸಂಸ್ಕೃತಾನಧಿಕಾರಿಣಾಂ।
ವಿವೇಕಸಾರಶ್ಶ್ರೋತೄಣಾಂ ರಚ್ಯತೇಽಭಾಷಯಾ ಮಯಾ॥"

ಎಂದರೆ ಸಂಸ್ಕೃತದಲ್ಲಿ ಅನಧಿಕಾರಿಗಳಾಗಿ ಕೇಳಬೇಕೆಂಬ ಆಶೆಯುಳ್ಳ ಮನುಷ್ಯರಿಗೆ ಅನುಗ್ರಹಾರ್ಥವಾಗಿ ವಾಸುದೇವಯತೀಂದ್ರರ ವಿವೇಕಸಾರವೆನಿಸುವ ಗ್ರಂಥವು ನನ್ನಿಂದ ಕರ್ಣಾಟಕ ಭಾಷಾರಚನೆಯಾಗಿ ಹೇಳಲ್ಪಡುತ್ತದೆ ಎಂದು ಹೇಳಿರುವುದರಿಂದ, ಈ ಗ್ರಂಥದ ಮೂಲವು ಸಂಸ್ಕೃತದಲ್ಲಿದ್ದಂತೆಯೂ, ಆ ಮೂಲಗ್ರಂಥಕರ್ತನು ವಾಸುದೇವಯತಿಯೆಂದೂ ಅದನ್ನು ತಾನು ಕನ್ನಡಿಸಿದಂತೆಯೂ ಈ ಗ್ರಂಥಕರ್ತನು ಹೇಳುತ್ತಾನೆ. ಸಂಸ್ಕೃತಭಾಷೆಯಲ್ಲಿ "ವಾಸುದೇವ ಮನನ" ವೆಂದು ಪ್ರಸಿದ್ಧವಾದ ವಚನರೂಪವಾದ ಒಂದು ಅದ್ವೈತಗ್ರಂಥವಿದೆ. ಆ ಗ್ರಂಥವು ಬಲುಮಟ್ಟಿಗೆ ಈ ಗ್ರಂಥದ ಅಭಿಪ್ರಾಯಾನುವಾದವಾಗಿರುವುದರಿಂದಲೂ, ಈ ಗ್ರಂಥದಲ್ಲಿ ಹೇಳಿರುವಷ್ಟು ವಿಷಯಗಳು ಅದರಲ್ಲಿ ಹೇಳಿಲ್ಲವಾದುದರಿಂದಲೂ, ಈ

ಗ್ರಂಥವೂ ಅದೂ ಯಾವುದೋ ಒಂದು ಬೇರೆ ಗ್ರಂಥದ ಆಧಾರದಮೇಲೆ ಹುಟ್ಟಿರಬಹುದು. ಆ ಗ್ರಂಥವು ಯಾವುದೋ ನಿಶ್ಚಯಿಸಲಾಗುವುದಿಲ್ಲ. ಈ ಗ್ರಂಥದ ಪ್ರತಿಪ್ರಕರಣದ ಆದ್ಯಂತಗಳಲ್ಲಿ ಉದಾಹೃತವಾಗಿರುವ ಕಾರಿಕಾರೂಪವಾದ ಶ್ಲೋಕಗಳನ್ನು ನೋಡಿದರೆ, ಒಂದು ವೇಳೆ ಆ ಮೂಲಗ್ರಂಥವು ಕಾರಿಕಾರೂಪದಲ್ಲಿರಬೇಕು; ಅದರ ಶ್ಲೋಕಗಳೇ ಇವೇ ಆಗಿರಬಹುದೆಂದು ತೋರುತ್ತದೆ. ಆ ಕಾರಿಕೆಯೇ ವಾಸುದೇವ ಯತೀಂದ್ರಪ್ರೋಕ್ತವಪ್ಪ "ವಿವೇಕಸಾರ" ವೆಂಬ ಗ್ರಂಥವಾಗಿದ್ದರೂ ಇರಬಹುದು "ವಾಸುದೇವಮನನ" ಎಂದರೆ ವಾಸುದೇವ ಯತೀಂದ್ರರ ಗ್ರಂಥದ ಮನನವೆಂದು ಅರ್ಥವಾಗುವುದರಿಂದಲೂ, ಅದು ಈ ಪ್ರಕೃತ ಗ್ರಂಥದ ಅನುವಾದವಾಗಿ ಇರುವಂತೆ ಕಂಡುಬರುವುದರಿಂದಲೂ, ಆ ಎರಡು ಗ್ರಂಥವು ಏಕಕರ್ತೃಕವೆಂದು ಹೇಳಲು ಅವಕಾಶವಿದೆ. ಅವು ಭಿನ್ನಕರ್ತೃಕವಾಗಿದ್ದಲ್ಲಿ ಗ್ರಂಥಕರ್ತರಿಬ್ಬರೂ ಆ ವಾಸುದೇವಯತೀಂದ್ರರ ಶಿಷ್ಯರಾಗಿಯೇ ಇರಬೇಕು.

ಈ ಗ್ರಂಥದ ಒಂದು ಮಾತೃಕೆಯು ಮದ್ರಾಸಿನಲ್ಲಿರುವ ಪ್ರಾಚ್ಯಕೋಶಾಗಾರದಲ್ಲಿ (The Madras Oriental Manuscripts Library) ಇರುವುದರಿಂದ ಈ ಗ್ರಂಥವು ಕ್ರಿ. ಶ 1799 ಕ್ಕೆ 70, 80 ವರ್ಷಗಳಿಗಾದರೂ ಹಿಂದೆ ರಚಿತವಾಗಿರಬೇಕು. ಆದುದರಿಂದ ಏತದ್ಗ್ರಂಥಕರ್ತನು 17 ನೆಯ ಶತಮಾನದ ಅಂತ್ಯದಲ್ಲಿ ಅಥವಾ 18 ನೆಯ ಶತಮಾನದ ಆದಿಯಲ್ಲಿಯಾದರೂ ಇದ್ದಿರಬೇಕು.

ಕಾರ್ತಿಕರ ಪದ್ಧತಿಯನ್ನು ಅನುಸರಿಸಿ ಕನ್ನಡ ಮಾತಿನಲ್ಲಿ ವಿಚಾರಗ್ರಂಥವನ್ನು ಬರೆಯಬೇಕೆಂದು ಆಶೆಯುಳ್ಳವರಿಗೂ, ಅದ್ವೈತ ಮತಪ್ರಕ್ರಿಯೆಗಳನ್ನು ಚೆನ್ನಾಗಿ ವಿಚಾರಪೂರ್ವಕ ತಿಳಿಯಬೇಕೆಂದು ಆಶೆಯುಳ್ಳ ಸಂಸ್ಕೃತ ಪರಿಚಯವಿಲ್ಲದವರಿಗೂ, ಈ ಗ್ರಂಥವು ಅತ್ಯಾದರಣೀಯವಾಗಿದೆ.

ಅಲ್ಲದೆ ಈ ಗ್ರಂಥದ ಭಾಷಾಶೈಲಿಯು ಮನೋಹರವಾಗಿದೆ. ಕ್ರಮ . ಗದ್ಯಶೈಲಿಯನ್ನು ಕಲಿಯಲಪೇಕ್ಷಿಸುವರಿಗೆ ಇದು ಬಹಳ ಸಹಕಾರಿಯಾಗುತ್ತದೆ. ಹೊಸಗನ್ನಡದ ಗದ್ಯಶೈಲಿಗಳಲ್ಲಿ ಭೇದವನ್ನು ನೋಡಬೇಕೆಂದಿರುವರು, "ಕನ್ನಡ ವಚನಕಾದಂಬರಿ", "ಉತ್ತರ ರಾಮಚರಿತ್ರಕಥೆ", "ವತ್ಸರಾಜಕಥೆ", 'ಪ್ರಬೋಧ ಚಂದ್ರೋದಯನಾಟಕ ಕಥೆ", "ಬತ್ತೀಸಪುತ್ತಳಿಕಥೆ"–"ಭಿಕ್ಷಾಟನ ಚರಿತ್ರೆ", "ಭಗವದ್ಗೀತಾರ್ಥ ಪ್ರತಿಪಾದಕಕೀರ್ತನೆ" ಇವುಗಳ ಟೀಕೆಗಳನ್ನು ಪಠಿಸಬೇಕು.

# ವೇದಾಂತ ವಿವೇಕಸಾರ.

## ವಿಷಯ ಸೂಚಿಕೆ.

### ಪ್ರಥಮಸಂಪುಟ.

ಪುಟಾದಿಸಂಖ್ಯೆ.


| | |
|---|---|
| ಪ್ರಥಮ ಪ್ರಕರಣ, ಅಧ್ಯಾರೋಪಪವಾದ | ೧ |
| ದ್ವಿತೀಯ ಪ್ರಕರಣ, ಸಾಧನಚತುಷ್ಟಯಸಂಪತ್ತಿ | ೮ |
| ಮೂರನೆಯ ಪ್ರಕರಣ, ಪ್ರಪಂಚನಿರೂಪಣ ಅಥವಾ ಆತ್ಮಾನಾತ್ಮವಿವೇಕ | ೧೧ |
| ನಾಲ್ಕನೆಯ ಪ್ರಕರಣ, ದುಃಖನಿರೂಪಣ | ೧೫ |
| ಐದನೆಯ ಪ್ರಕರಣ, ಕರ್ಮಪ್ರಕರಣ | ೨೪ |
| ಆರನೆಯ ಪ್ರಕರಣ, ರಾಗದ್ವೇಷಾದಿ ಪ್ರಕರಣ | ೩೫ |
| ಏಳನೆಯ ಪ್ರಕರಣ, ಆತ್ಮಾನಾತ್ಮವಿವೇಕ | ೪೪ |
| ಎಂಟನೆಯ ಪ್ರಕರಣ, ಶರೀರತ್ರಯವಿಚಾರ | ೫೦ |
| ಒಂಬತ್ತನೆಯ ಪ್ರಕರಣ, ಅವಸ್ಥಾತ್ರಯ ಸಾಕ್ಷಿತ್ವ | ೬೮ |
| ಹತ್ತನೆಯ ಪ್ರಕರಣ, ಪಂಚಕೋಶವಿಚಾರ | ೭೭ |
| ಹನ್ನೊಂದನೆಯ ಪ್ರಕರಣ, ಸಚ್ಚಿದಾನಂದ ಪ್ರಕರಣ | ೮೭ |
| ಹನ್ನೆರಡನೆಯ ಪ್ರಕರಣ, ಅಖಂಡತ್ವ ವಿಚಾರ | ೯೭ |
| ಹದಿಮೂರನೆಯ ಪ್ರಕರಣ, ಅಜ್ಞಾನ ಪ್ರಕರಣ | ೧೦೮ |
| ಹದಿನಾಲ್ಕನೆಯ ಪ್ರಕರಣ, ಜ್ಞಾನಾಜ್ಞಾನ ಪ್ರಕರಣ | ೧೨೧ |
| ಹದಿನೈದನೆಯ ಪ್ರಕರಣ, ಶರೀರತ್ರಯ ಪ್ರಕರಣ | ೧೪೦ |

# ವೇದಾಂತ ವಿವೇಕಸಾರ.

|| ಅಧ್ಯಾರೋಪಾಪವಾದ ||

ವಾಗೀಶಾದ್ಯಾಸ್ಸುಮನಸಸ್ಸರ್ವಾರ್ಥಾನಾಮುಪಕ್ರಮೇ |
ಯಂ ನತ್ವಾ ಕೃತಕೃತ್ಯಾಸ್ಸ್ಯುಃ ತಂ ನಮಾಮಿ ಗಜಾನನಂ || ೧
ಬೋಧಾನಂದಘನಂ ನಿರಸ್ತಸಕಲಂ ಕಾರುಣ್ಯಪೂರ್ಣೇಕ್ಷಣಂ |
ಮೂಢಾನಾಮುಪದೇಶಕಂ ಚ ಸತತಂ ಪಾಪಾತ್ಮನಾಂ ಪಾಪಹಂ ||
ವೈರಾಗ್ಯಂ ಚ ಹಿ ರಾಗಿಣಾಂ ಸುಖಕರಂ ಸಂಪಾದಕಂ ಸರ್ವದಾ |
ಶ್ರೀಮದ್ದೇಶಿಕವಾಸುದೇವಯಮಿನಂ ಸರ್ವಸ್ವರೂಪಂ ಭಜೇ || ೨
ಯಸ್ಯಾತ್ಮಭೂತಸ್ಯ ಗುರೋಃ ಪ್ರಸಾದಾ |
ದಹಂ ವಿಮುಕ್ತೋಽಸ್ಮಿ ಶರೀರಬಂಧಾತ್ |
ಸರ್ವೋಪದೇಷ್ಟುಃ ಪುರುಷೋತ್ತಮಸ್ಯ |
ತಸ್ಯಾಂಘ್ರಿಪದ್ಮಂ ಪ್ರಣತೋಽಸ್ಮಿ ನಿತ್ಯಂ || ೩
ಮೂಢಾನ್ವಿವೇಕಿನಃ ಕೃತ್ವಾ ಲೋಕೇ ಸರ್ವೋಪದೇಶಕಃ |
ಯಸ್ತಿಷ್ಠತಿ ಚ ತಂ ಶ್ರೀಮದ್ವಾಸುದೇವಯತಿಂ ಭಜೇ || ೪
ಅನುಗ್ರಹಾರ್ಥಂ ಮರ್ತ್ಯಾನಾಂ ಸಂಸ್ಕೃತಾನಧಿಕಾರಿಣಾಂ |
ವಿವೇಕಸಾರಃ ಶ್ರೋತೄಣಾಂ ರಚ್ಯತೇ ಭಾಷಯಾ ಮಯಾ || ೫

ಆವನೊಬ್ಬನು ಲೋಕದಲ್ಲಿ ಮೂಢರನೆಲ್ಲಾ ವಿವೇಕವಂತರ ಮಾಡಿ ಸರ್ವೋಪದೇಶಕನಾಗಿ ಸರ್ವಸ್ವರೂಪಿಯಾಗಿಹನೋ, ಅಂಥ ವಾಸುದೇವಯತಿವರನಂ ವಂದನೆಯ ಮಾಡಿ ಸಂಸ್ಕೃತದಲ್ಲಿ ಅನಧಿಕಾರಿಗಳಾಗಿ ಕೇಳುವಂಥ ಮನುಷ್ಯರಿಗೆ ಅನುಗ್ರಹಾರ್ಥವಾಗಿ ಆ ವಾಸುದೇವಯತಿವರನಿಂದಲೇ ನಿರ್ಮಿತವಪ್ಪ ವಿವೇಕಸಾರವೆನಿಸುವ ಗ್ರಂಥವು ನನ್ನಿಂದ ಕರ್ಣಾಟಕಭಾಷಾರಚನೆಯಾಗಿ ಹೇಳಲ್ಪಟ್ಟಿತು.

ಅದರೊಳಗೆ ಹುದುಗಿರುವ ಪ್ರಕರಣಗಳೈವತ್ತೊಂದನ್ನು ಸಾಂಗವಾಗಿ ಪೇಳುವೆವು. ಅದೆಂತೆಂದರೆ—

ಅಧ್ಯಾರೋಪಾಪವಾದಗಳಿಂದ ಬ್ರಹ್ಮವನ್ನು ತಿಳಿಯಬೇಕಾಗಿ ಶಾಸ್ತ್ರದಲ್ಲಿ ಹೇಳಿದೆಯಾದಕಾರಣ ಅಧ್ಯಾರೋಪವನ್ನು ಮುಂಚಿತವಾಗಿ ನಿರೂಪಿಸುತ್ತ ಇದ್ದೇವೆ. ಅಧ್ಯಾರೋಪವೆಂಬುದೇನೆಂದರೆ— ವಸ್ತುವಿನಲ್ಲಿ

ಅವಸ್ತುವಿನ ಆರೋಪವು ಅಧ್ಯಾರೋಪವೆನಿಸುವ್ರದು. ಅದೆಂತೆನೆ:— ಶುಕ್ತಿಯಲ್ಲಿ ರಜತಾಧ್ಯಾರೋಪ, ರಜ್ಜುವಿನಲ್ಲಿ ಸರ್ಪಾಧ್ಯಾರೋಪ, ಸ್ಥಾಣುವಿನಲ್ಲಿ ಪುರುಷಾಧ್ಯಾರೋಪ, ಮರೀಚಿಕೆಯಲ್ಲಿ ಜಲಾಧ್ಯಾರೋಪ, ಆಕಾಶದಲ್ಲಿ ನೀಲಸಿತಾಧ್ಯಾರೋಪ ಹೇಗೋ ಹಾಗೆ ನಿಷ್ಪ್ರಪಂಚಸ್ವರೂಪನಾದ ಆತ್ಮನಲ್ಲಿ ಪ್ರಪಂಚದ ಆರೋಪವು ಅಧ್ಯಾರೋಪವೆನಿಸುವುದು. ಈ ಅಧ್ಯಾರೋಪವು ಏತಱಿಂದ ಬಂದುದೆಂದರೆ— ಅಧಿಷ್ಠಾನಾಜ್ಞಾನದಿಂದ ಬಂದಂಥದು. ಆ ಅಜ್ಞಾನಸ್ವರೂಪವನು ಮುಂದೆ ಸ್ಪಷ್ಟವಾಗಿ ನಿರೂಪಿಸುತ್ತೇವೆ. ಈಗ ಸಾಮಾನ್ಯವಾಗಿ ನಿರೂಪಿಸುತ್ತಿದ್ದೇವೆ. ಅದೆಂತೆನೆ:—ಒಂದು ಅಜ್ಞಾನವೇ ಪ್ರಕೃತಿಯೆಂದೂ, ಮಾಯೆಯೆಂದೂ, ಅವಿದ್ಯೆಯೆಂದೂ, ತಮಸ್ಸೆಂದೂ, ಅನೇಕವಿಧವಾಗಿ ಹೇಳಪಡುವುದು. ಇದಱೊಳಗೆ ಪ್ರಕೃತಿಯೆಂಬುದು ಆವುದೆಂದರೆ— ಗುಣಗಳ ಸಾಮ್ಯಾವಸ್ಥೆಗೆ ಪ್ರಕೃತಿಯೆಂದು ಹೆಸರು. ಈ ಪ್ರಕೃತಿಗೆ ಪ್ರಳಯಾವಸ್ಥೆಯೆಂದೂ, ಮಹಾಸುಷುಪ್ತಿಯೆಂದೂ ಹೇಳಪಡುವುದು. ಈ ಗುಣಗಳ ಸಾಮ್ಯಾವಸ್ಥೆಯು, ಬಿಳಿಯನೂಲು ಕೆಂಪುನೂಲು ಕರಿಯ ನೂಲು ಈ ಮೂಱನ್ನೂ ಸಮವಾಗಿ ಹುರಿಗೂಡಿದರೆ ಹೇಗೋ ಹಾಗೆ ಇರುವುದು. ಪ್ರಕೃತಿಯಲ್ಲಿ ಅನೇಕಕೋಟಿ ಜೀವರಾಶಿಗಳು ತಮ್ಮತಮ್ಮ ಕರ್ಮವಾಸನಾದೃಷ್ಟಗಳೊಡನೆ ಕೂಡಿಕೊಂಡವರಾಗಿ ಲಯಿಸಿ ಇದ್ದಾರೆ. ಅದೆಂತೆನೆ:— ಮೇಣದ ಉಂಡೆಯಲ್ಲಿ ಚಿನ್ನದ ರವೆಗಳು ಹೇಗೆ ಲೀನವಾಗಿವೆಯೊ ಹಾಗೆ ಪ್ರಕೃತಿಯಲ್ಲಿ ಲೀನವಾಗಿ ಇದ್ದಾರೆ. ಹೀಗೆ ಬಹುಕಾಲ ಜೀವರಾಶಿಗಳು ಪ್ರಕೃತಿಯಲ್ಲಿ ಲೀನವಾಗಿರಲಾಗಿ ಒಂದು ಸಮಯದಲ್ಲಿ ಲೀನವಾದ ಜೀವಿಗಳ ಅದೃಷ್ಟವು ಪರಿಪಕ್ವವಾಗುವುದು. ಆ ಸಮಯದಲ್ಲಿ ತ್ರಿಗುಣಾತ್ಮಕವಾದಂಥ ಪ್ರಕೃತಿಯೇ ಸತ್ವಗುಣ ವಿಜೃಂಭಿಸುವುದಱಿಂದ ಮಾಯೆಯೆಂದು ಹೇಳಪಡುವುದು. ಈಮಾಯೆಯಲ್ಲಿ ಪ್ರತಿಬಿಂಬಿಸಿದಚೈತನ್ಯವೂ ಆ ಮಾಯೆಯೂ ಮಾಯಾಸ್ಥಾನವಾದ ಚೈತನ್ಯವೂ ಇವು ಮೂಱೂ ಕೂಡಿ ಈಶ್ವರನೆಂದು ಹೇಳಪಡುವುದು. ಆ ಈಶ್ವರನಿಗೆ ಅನ್ತರ್ಯಾಮಿಯೆಂದು ಅವ್ಯಾಕೃತನೆಂದು ಎರಡು ಹೆಸರು. ಈತನೇ ಜಗತ್ಸ್ರಷ್ಟೃವೆಂದು ಹೇಳಪಡುವನು. ಸೃಷ್ಟಿಸುವುದಱಲ್ಲಿ ಉಪಾದಾನಕಾರಣವೆಂದೂ, ನಿಮಿತ್ತಕಾರಣವೆಂದೂ, ಎರಡುಕಾರಣಗಳು ಬೇಕೆಂಬುದನು ಲೋಕ

ದಲ್ಲಿ ಕಂಡುಇದ್ದೇವೆ. ಘಟಶರಾವಾದಿಗಳು ಹುಟ್ಟುವುದಱಲ್ಲಿ ಮೃತ್ತು ಉಪಾದಾನಕಾರಣವಪ್ಪುದು; ಕುಲಾಲನೂ ಕುಲಾಲವ್ಯಾಪಾರಾದಿಗಳೂ ನಿಮಿತ್ತಕಾರಣವಪ್ಪವು. ಪಟಗಳು ಹುಟ್ಟುವುದಱಲ್ಲಿ ತಂತುಗಳು ಉಪಾದಾನಕಾರಣವಪ್ಪುದು; ತಂತುವಾಯನು ಊಕ ಮೊದಲಾದ ತದ್ವ್ಯಾಪಾರಾದಿಗಳು ನಿಮಿತ್ತಕಾರಣವಪ್ಪವು. ಈ ಪ್ರಕಾರವಾಗಿ ಲೋಕದಲ್ಲಿ ಘಟಪಟಾದ್ಯುತ್ಪತ್ತಿಯು ಎರಡು ಕಾರಣಗಳಿಂದ ಹೇಗೆ ಆಯಿತೋ ಹಾಗೆಯೇ ದಾರ್ಷ್ಟಾಂತಿಕದಲ್ಲೂ ಎರಡು ಕಾರಣಗಳಿಂದ ಜಗತ್ತಿಗೆ ಉತ್ಪತ್ತಿಯೆಂದು ತೋಱಪಡುತ್ತ ಇದೆ. ಅದೆಂತೆಂದು ವಿಚಾರಿಸಲ್ಪಟ್ಟತಾಗಿ;— ಮಾಯೆಯು ಉಪಾದಾನಕಾರಣವು, ಈಶ್ವರನು ನಿಮಿತ್ತಕಾರಣವು ಎಂದು ಹೇಳೋಣವೆಂದರೆ ಶ್ರುತಿಗೆ ವಿರೋಧ ಬರುತ್ತ ಇದೆ. ಇಷ್ಟುಮಾತ್ರವೇ ಅಲ್ಲ. ಉಪಾದಾನಕಾರಣವು ಸತ್ಪದಾರ್ಥವಾಗಿರಬೇಕು; ಆತ್ಮನು ಮಾಯೆಯು ಎರಡು ಪದಾರ್ಥಗಳಾಗುತ್ತ ಇವೆಯಾದಕಾರಣ ಅದ್ವೈತಹಾನಿ ಬರುವುದು. ಈಪಕ್ಷವಾಗದು. ಪಕ್ಷಾಂತರವ ಹೇಳೇವು. ಮಾಯೆ ನಿಮಿತ್ತಕಾರಣ, ಈಶ್ವರನು ಉಪಾದಾನಕಾರಣವೆಂದು ಹೇಳೋಣವೆಂದರೆ— ಪೂರ್ವದೋಷಾದಿಯಲ್ಲಿ ಶ್ರುತಿಗೂ ಅದ್ವೈತಕ್ಕೂ ವಿರೋಧ ತೋಱುತಿದೆ. ಲೋಕದಲ್ಲಿ ಚೇತನವನು ನಿಮಿತ್ತಕಾರಣವಾಗಿ ಕಂಡು ಇದ್ದೇವೆ. ಅಚೇತನವಾದ ಮಾಯೆ ನಿಮಿತ್ತಕಾರಣವು ಆಗಲಾರದು. ಅದ್ವೈತಹಾನಿಯು ಬರುವುದು. ಈ ವಿಷಯಗಳು ಉಂಟಾಗಿರುವುದಱಿಂದ ಕೇವಲ ಮಾಯೆಯು ಉಪಾದಾನಕಾರಣವಾಗಲಾರದು; ನಿಮಿತ್ತಕಾರಣವೂ ಆಗಲಾರದು. ಈ ಎರಡು ಕಾರಣವನ್ನು ಈಶ್ವರನಿಗೆ ಹೇಳಬೇಕು. ಲೋಕದಲ್ಲಿ ಎರಡುಕಾರಣವು ಒಬ್ಬರಿಗೆ ಉಂಟೇ ಎಂದರೆ, ಉಂಟು. ಅದೆಂತೆನೆ? ಊರ್ಣನಾಭಿಯೆಂಬ ಜಂತುವು ಎರಡು ಕಾರಣಗಳಾಗಿ ಇರುವುದನು ಕಂಡು ಇದ್ದೇವೆ. ಅದೆಂತೆನೆ:— ಆ ಊರ್ಣನಾಭಿಯೆಂಬ ಜಂತುವು ಶರೀರಪ್ರಧಾನವಾಗಿ ಉಪಾದಾನಕಾರಣವಾಯಿತು; ಬುದ್ಧಿಪ್ರಧಾನವಾದರೆ ನಿಮಿತ್ತಕಾರಣವಾಯಿತು. ಆರೀತಿಯಾಗಿ ಈಶ್ವರನು ಸತ್ವಗುಣಪ್ರಧಾನವಾಗ ಮಾಯೆಯು ಸಂಗಡ ಕೂಡಿ ನಿಮಿತ್ತಕಾರಣವಾದನು; ತಮೋಗುಣಪ್ರಧಾನವಾದ ಮಾಯೆಯು ಸಂಗಡ ಕೂಡಿ ಉಪಾದಾನಕಾರಣವಾದನು. ಆ ಉಭಯಕಾರಣ

ವಾದ ಈಶ್ವರನ ಬೆಸೆಯಿಂದ ಜಗತ್ತು ಹುಟ್ಟಿದ ಪ್ರಕಾರವನು ಹೇಳು ತ್ತ ಇದ್ದೇವೆ. ಅದೆಂತೆನೆ:— ಈಶ್ವರನು ಸತ್ವಗುಣಪ್ರಧಾನವಾದ ಮಾ ಯೆಯಿಂದ ಕೂಡಿ ತಮೋಗುಣಪ್ರಧಾನವಾದ ಮಾಯೆಯನು ಈಕ್ಷಿಸ ಲಾಗಿ ಆ ತಮೋಗುಣಪ್ರಧಾನವಾದ ಮಾಯೆಯು ಸಂಗಡ ಕೂಡಿದ ಚೈತ ನ್ಯದಿಂದ ತ್ರಿಗುಣಾತ್ಮಕವಾದ ಆಕಾಶ ಹುಟ್ಟಿತು. ಆ ಆಕಾಶದ ಸಂಗಡ ಕೂಡಿದ ಚೈತನ್ಯದಿಂದ ತ್ರಿಗುಣಾತ್ಮಕವಾದ ವಾಯು ಹುಟ್ಟಿತು. ಆ ವಾಯುವಿನೊಡನೆ ಕೂಡಿದ ಚೈತನ್ಯದಿಂದ ತ್ರಿಗುಣಾತ್ಮಕವಾದ ತೇಜಸ್ಸು ಹುಟ್ಟಿತು. ಆ ತೇಜಸ್ಸಿನ ಸಂಗಡ ಕೂಡಿದ ಚೈತನ್ಯದಿಂದ ತ್ರಿಗುಣಾತ್ಮ ಕವಾದ ಜಲ ಹುಟ್ಟಿತು. ಆ ಜಲದೊಡನೆ ಕೂಡಿದ ಚೈತನ್ಯದಿಂದ ತ್ರಿಗು ಣಾತ್ಮಕವಾದ ಪೃಥಿವಿ ಹುಟ್ಟಿತು ಇವು ಅಪಂಚೀಕೃತಭೂತವೆಂತಲೂ ಸೂಕ್ಷ್ಮಭೂತಗಳೆಂತಲೂ ತನ್ಮಾತ್ರೆಗಳೆಂತಲೂ ಹೇಳಪಡುವುವು. ಈ ಭೂತಗಳಿಂದ ಸಮಷ್ಟಿವ್ಯಷ್ಟ್ಯಾತ್ಮಕವಾದ ಲಿಂಗಶರೀರ ಹುಟ್ಟಿತು. ಸ ಮಷ್ಟಿವ್ಯಷ್ಟಿಸ್ವರೂಪವನ್ನು ಮುಂದೆ ನಿರೂಪಿಸುತ್ತ ಇದ್ದೇವೆ. ಆ ಲಿಂಗಶರೀರವು ಹದಿನೇಳು ಅವಯವದೊಡನೆ ಕೂಡಿಕೊಂಡು ಇರುವುದು. ಆ ಹದಿನೇಳವಯವಗಳಾವುವೆಂದರೆ ? ಶ್ರೋತ್ರತ್ವಕ್ಚಕ್ಷುಜಿಹ್ವಾಘ್ರಾಣಗ ಳು, ಪ್ರಾಣಾಪಾನವ್ಯಾನೋದಾನಸಮಾನಗಳು, ವಾಕ್ಪಾಣಿಪಾದಪಾಯೂ ಪಸ್ಥಗಳು, ಮನೋಬುದ್ಧಿಗಳು. ಇದು ಹದಿನೇಳವಯವವೆನಿಸುವು ದು. ಇದರುತ್ಪತ್ತಿಯನ್ನು ಹೇಳುವೆವು. ಆಕಾಶದ ಸಾತ್ವಿಕಾಂಶದಿಂದ ಶ್ರೋತ್ರೇಂದ್ರಿಯ ಹುಟ್ಟಿತು. ವಾಯುವಿನ ಸಾತ್ವಿಕಾಂಶದಿಂದ ತ್ವಗಿಂ ದ್ರಿಯ ಹುಟ್ಟಿತು. ತೇಜಸ್ಸಿನ ಸಾತ್ವಿಕಾಂಶದಿಂದ ಚಕ್ಷುರಿಂದ್ರಿಯ ಹು ಟ್ಟಿತು. ಜಲದ ಸಾತ್ವಿಕಾಂಶದಿಂದ ಜಿಹ್ವೇಂದ್ರಿಯ ಹುಟ್ಟಿತು. ಪೃಥಿವಿ ಯ ಸಾತ್ವಿಕಾಂಶದಿಂದ ಘ್ರಾಣೇಂದ್ರಿಯ ಹುಟ್ಟಿತು. ಇದು ಜ್ಞಾನೇಂದ್ರಿಯ ಗಳ ಉತ್ಪತ್ತಿಯೆನಿಸುವುದು. ಈ ಭೂತಗಳ ಸಾತ್ವಿಕಾಂಶಸಮಷ್ಟಿ ಯಿಂದ ಅಂತಃಕರಣ ಹುಟ್ಟಿತು. ಅದು ವೃತ್ತಿಭೇದದಿಂದ ಮನೋಬುದ್ಧ್ಯ ಹಂಕಾರಚಿತ್ತಗಳೆಂದ ನಾಲ್ಕು ವಿಧವಾಯಿತು. ಹದಿನೇಳವಯವದ ಲೆಕ್ಕ ಕ್ಕೆ ಮನಸ್ಸೂ ಚಿತ್ತವೂ ಕೂಡಿ ಒಂದಾಯಿತು; ಬುದ್ಧಿಯೂ ಅಹಂ ಕಾರವೂ ಕೂಡಿ ಒಂದಾಯಿತು. ಕರ್ಮೇಂದ್ರಿಯಗಳು ಹುಟ್ಟಿದ ಪ್ರಕಾರ

ವನ್ನು ಹೇಳುವೆವು. ಆಕಾಶದ ರಜೋಂಶದಿಂದ ವಾಗಿಂದ್ರಿಯವು ಹುಟ್ಟಿತು. ವಾಯುವಿನ ರಜೋಂಶದಿಂದ ಪಾಣೀಂದ್ರಿಯವು ಹುಟ್ಟಿತು. ತೇಜಸ್ಸಿನ ರಜೋಂಶದಿಂದ ಪಾದೇಂದ್ರಿಯವು ಹುಟ್ಟಿತು. ಜಲದ ರಜೋಂಶದಿಂದ ಪಾಯ್ವಿಂದ್ರಿಯವು ಹುಟ್ಟಿತು. ಪೃಥಿವಿಯ ರಜೋಂಶದಿಂದ ಉಪಸ್ಥೇಂದ್ರಿಯವು ಹುಟ್ಟಿತು. ಇದು ಕರ್ಮೇಂದ್ರಿಯಗಳ ಉತ್ಪತ್ತಿಯೆನಿಸುವುದು. ರಜೋಂಶಸಮಷ್ಟಿಯಿಂದ ಪ್ರಾಣ ಹುಟ್ಟಿತು. ಆ ಪ್ರಾಣವು ವೃತ್ತಿಭೇದದಿಂದ ಪ್ರಾಣಾಪಾನವ್ಯಾನೋದಾನಸಮಾನವೆಂದು ಐದು ವಿಧಗಳಾದುವು. ಉಪವಾಯುಗಳು ಇವಯೊಳಗೆ ಅಂತರ್ಭೂತಗಳು. ಈಹದಿನೇಳವಯಗಳು ಕೂಡಿ ಸಮಷ್ಟಿವ್ಯಷ್ಟ್ಯಾತ್ಮಕವಾದ ಲಿಂಗಶರೀರವೆಂದು ಹೇಳಲ್ಪಡುವುದು. ಆ ಈಶ್ವರನೇ ಸಮಷ್ಟಿಲಿಂಗಶರೀರದಲ್ಲಿ ಅಭಿಮಾನಿಸಿ ಹಿರಣ್ಯಗರ್ಭನಾದನು. ಈತನಿಗೆ ಸೂತ್ರಾತ್ಮನೆಂತಲು ಮಹಾಪ್ರಾಣನೆಂತಲು ಎರಡು ಹೆಸರು. ಈ ಪ್ರಕಾರ ಸೂಕ್ಷ್ಮಸೃಷ್ಟಿಯನ್ನು ತಿಳಿದುಕೊಂಬುದು. ಸ್ಥೂಲಸೃಷ್ಟಿಪ್ರಕಾರವನ್ನು ಹೇಳುವೆವು. ಈಶ್ವರನ ಈಕ್ಷಣಗಳಿಂದ ತಮೋಗುಣಪ್ರಧಾನಗಳಾದ ಅಪಂಚೀಕೃತಭೂತಗಳು ಒಂದೊಂದು ಎರಡೆರಡು ಭಾಗಗಳಾದುವು. ಅದರಲ್ಲಿ ಅರ್ಧವ ಬಿಟ್ಟು ಕಡಮೆ ಅರ್ಧದಲ್ಲಿ ಮತ್ತೊಂದು ನಾಲ್ಕು ಭಾಗಗಳಾದುವು. ಆ ಭಾಗಗಳಲ್ಲಿ ಸ್ವಾಂಶಗಳ ಬಿಟ್ಟು ಇತರ ಭಾಗಗಳಲ್ಲಿ ಕೂಡಿ ಪಂಚೀಕೃತಭೂತಗಳಾದುವು. ಇವಕ್ಕೆ ಸ್ಥೂಲಭೂತಗಳೆಂದೂ ಹೆಸರು. ಈ ಭೂತಗಳಲ್ಲಿ ಈಶ್ವರನ ಈಕ್ಷಣದಿಂದ ಅಂಡವೂ ಆ ಅಂಡದಲ್ಲಿ ಅತಲ|ವಿತಲ|ಸುತಲ|ತಲಾತಲ|ರಸಾತಲ|ಮಹಾತಲ|ಪಾತಾಳಗಳೆಂಬ ಏಳು ಅಧೋಲೋಕಗಳೂ, ಭೂಲೋಕ|ಭುವರ್ಲೋಕ|ಸುವರ್ಲೋಕ|ಮಹರ್ಲೋಕ|ಜನಲೋಕ|ತಪೋಲೋಕ|ಸತ್ಯಲೋಕಗಳೆಂಬ ಮೇಲಣ ಏಳುಲೋಕಗಳು ಆಯಾಲೋಕಕ್ಕೆ ಉಚಿತವಾದ ಉದ್ಭಿಜ್ಜ|ಸ್ವೇದಜ|ಅಂಡಜ|ಜರಾಯುಜಗಳೆಂಬ ಚತುರ್ವಿಧಭೂತಗಳೂ ಪುಟ್ಟಿದುವು. ಇದೆಲ್ಲವೂ ಕೂಡ ಸ್ಥೂಲಪ್ರಪಂಚವೆಂದು ಹೇಳಲ್ಪಡುವುದು. ಇದರಲ್ಲಿ ಅಭಿಮಾನಿಸಿದ ಈಶ್ವರನಿಗೆ ವಿರಾಟ್ ಎಂದು ಹೆಸರು. ಈತನಿಗೆ ವೈಶ್ವಾನರನೆಂತಲು ವೈರಾಜಸನೆಂತಲು ಎರಡು ಹೆಸರು. ಸಮಷ್ಟಿಸ್ವರೂಪವ ನಿರೂಪಿಸಿದೆವು. ವ್ಯಷ್ಟಿ

ಸ್ವರೂಪವನ್ನು ನಿರೂಪಿಸುತ್ತಿದ್ದೇವೆ. ವ್ಯಷ್ಟಿಯು ಸಮಷ್ಟಿಯಲ್ಲಿಯೇ ಅಂತರ್ಭೂತವಾದರೂ ವಿಶೇಷವ ತಿಳಿಯಬೇಕಾಗಿ ತಿರುಗಿ ನಿರೂಪಿಸುತ್ತ ಇದ್ದೇವೆ. ಅದೆಂತೆಂದರೆ - ಜಾಗ್ರದವಸ್ಥೆಯಲ್ಲಿಯೂ ಸ್ಥೂಲಶರೀರದಲ್ಲಿಯೂ ಅಭಿಮಾನಿಸಿದ ಆತ್ಮನಿಗೆ ವಿಶ್ವನೆಂದು ಹೆಸರು. ಈತನಿಗೆ ವ್ಯಾವಹಾರಿಕನೆಂದೂ ಚಿದಾಭಾಸನೆಂದೂ ಎರಡು ಹೆಸರು. ಸ್ವಪ್ನಾವಸ್ಥೆಯಲ್ಲಿಯೂ ಲಿಂಗಶರೀರದಲ್ಲಿಯೂ ಅಭಿಮಾನಿಸಿದ ಆತ್ಮನಿಗೆ ತೈಜಸನೆಂದು ಹೆಸರು. ಈತನಿಗೆ ಪ್ರಾತಿಭಾಸಿಕನೆಂತಲೂ ಸ್ವಪ್ನಕಲ್ಪಿತನೆಂತಲೂ ಎರಡು ಹೆಸರು. ಸುಷುಪ್ತ್ಯವಸ್ಥೆಯಲ್ಲಿಯೂ ಕಾರಣಶರೀರದಲ್ಲಿಯೂ ಅಭಿಮಾನಿಸಿದ ಆತ್ಮನಿಗೆ ಪ್ರಾಜ್ಞನೆಂದು ಹೆಸರು. ಈತನಿಗೆ ಪಾರಮಾರ್ಥಿಕನೆಂತಲೂ ಅವಚ್ಛಿನ್ನನೆಂತಲೂ ಎರಡು ಹೆಸರು. ಇದು ಸ್ಥೂಲಪ್ರಪಂಚದ ಉತ್ಪತ್ತಿಯೆನಿಸುವುದು. ಈ ಪ್ರಪಂಚದ ಅವಾಂತರಸೃಷ್ಟಿಸ್ಥಿತಿಪ್ರಳಯಗಳಿಗೋಸ್ಕರ ಆ ಈಶ್ವರನೇ ಮೂರು ಮೂರ್ತಿಗಳಾದನು. ಅದೆಂತೆಂದರೆ—ಸತ್ವದೊಡನೆ ಕೂಡಿಕೊಂಡು ರಕ್ಷಕನಾದ ವಿಷ್ಣುವಾದನು. ರಜೋಗುಣದೊಡನೆ ಕೂಡಿಕೊಂಡು ಸೃಷ್ಟಿಕರ್ತನಾದ ಬ್ರಹ್ಮದೇವನಾದನು. ತಮೋಗುಣದೊಡನೆ ಕೂಡಿಕೊಂಡು ಸಂಹಾರಕರ್ತನಾದ ರುದ್ರನಾದನು. ಈ ತ್ರಿಮೂರ್ತಿಗಳೊಳಗೆ ಬ್ರಹ್ಮದೇವನು ವಿರಾಂಡಭೂತನಾದನು; ವಿಷ್ಣು ಹಿರಣ್ಯಗರ್ಭಾಂತರ್ಭೂತನಾದನು, ರುದ್ರನು ಕಾರಣಪ್ರಪಂಚಾಂತರ್ಭೂತನಾದನು. ಈಪ್ರಕಾರವಾದ ಕಾರಣಪ್ರಪಂಚೋತ್ಪತ್ತಿಯನ್ನು ಹೀಗೆಂದು ತಿಳಿದುಕೊಂಬುದು. ಇದೇ ಅಧ್ಯಾರೋಪವೆಂದು ಹೇಳಪಡುವುದು.

ಅಪವಾದವ ಹೇಳೇವು. ಅಪವಾದವೆಂಬುದೇನೆಂದರೆ— ಕಾರಣವ್ಯತಿರಿಕ್ತವಾಗಿ ಕಾರ್ಯವಿಲ್ಲವೆಂದು ತಿಳಿವಣ. ಅದಕ್ಕೆ ದೃಷ್ಟಾಂತವಾವುದೆಂದರೆ—ಹೇಳೇವು. ಮೃತ್ತಿನಿಂದ ಹುಟ್ಟಿದ ಘಟಶರಾವಾದಿಗಳು ಮೃದ್ವ್ಯತಿರಿಕ್ತವಾಗಿ ಹೇಗೆ ಇಲ್ಲವೋ, ತಂತುವಿನಿಂದ ಹುಟ್ಟಿದ ಪಟಾದಿಗಳು ಹೇಗೆ ತಂತುವ್ಯತಿರಿಕ್ತವಾಗಿ ಇಲ್ಲವೋ, ಸ್ವರ್ಣದಿಂದ ಹುಟ್ಟಿದ ಕಟಕಮುಕುಟಾದಿಗಳು ಸ್ವರ್ಣವ್ಯತಿರಿಕ್ತವಾಗಿ ಹೇಗೆ ಇಲ್ಲವೋ, ಕಬ್ಬಿಣದಿಂದ ಹುಟ್ಟಿದ ಖಡ್ಗಾದಿಗಳು ಕಬ್ಬಿಣ ಹೊರತಾಗಿ ಹೇಗೆ ಇಲ್ಲವೋ, ಹಾಗೆ ಆತ್ಮನಿಂದ ಹುಟ್ಟಿದ ಪ್ರಪಂಚವು ಆತ್ಮವ್ಯತಿರಿಕ್ತವಾಗಿ ಇಲ್ಲವೆಂದು ತಿಳಿವಣ. ತಿಳಿವ

ಪ್ರಕಾರವ ಹೇಳೇವು. ಅದೆಂತೆನೆ ? ಪಂಚೀಕೃತಪಂಚಮಹಾಭೂತಗಳ ದೆಸೆಯಿಂದ ಹುಟ್ಟಿದಂಥ ಅಂಡವೂ, ಆ ಅಂಡದಲ್ಲಿ ಇರುವಂಥ ಹದಿನಾಲ್ಕು ಲೋಕಗಳೂ, ಆಯಾಲೋಕಗಳಿಗುಚಿತವಾದ ಚತುರ್ವಿಧಭೂತಗ್ರಾಮಗಳೂ, ಅದಕ್ಕೆ ಕಾರಣಗಳಾದ ಪಂಚೀಕೃತಪಂಚಮಹಾಭೂತಗಳು ಹೊರತಾಗಿ ಬೇರೆ ಇಲ್ಲವೆಂದು ತಿಳಿವಣ. ಅಪಂಚೀಕೃತಪಂಚಮಹಾಭೂತಗಳನು ಈಪ್ರಕಾರವಾಗಿಯೇ ತಿಳಿವಣ. ಅದೆಂತೆಂದರೆ—ಹೇಳೇವು. ಜಲದಿಂದ ಹುಟ್ಟಿದ ಪೃಥ್ವಿಯು ಜಲವ್ಯತಿರಿಕ್ತವಾಗಿ ಇಲ್ಲವೆಂದು ತಿಳಿವಣ; ತೇಜಸ್ಸಿನಿಂದ ಹುಟ್ಟಿದ ಜಲವು ತೇಜೋವ್ಯತಿರಿಕ್ತವಾಗಿ ಇಲ್ಲವೆಂದು ತಿಳಿವಣ; ವಾಯುವಿನಿಂದ ಹುಟ್ಟಿದ ತೇಜಸ್ಸು ವಾಯುವ್ಯತಿರಿಕ್ತವಾಗಿ ಇಲ್ಲವೆಂದು ತಿಳಿವಣ; ಆಕಾಶದಿಂದ ಹುಟ್ಟಿದ ವಾಯು ಆಕಾಶವ್ಯತಿರಿಕ್ತವಾಗಿ ಇಲ್ಲವೆಂದು ತಿಳಿವಣ; ಮಾಯೆಯಿಂದ ಹುಟ್ಟಿದ ಆಕಾಶವು ಮಾಯೆಗೆ ವ್ಯತಿರಿಕ್ತವಾಗಿ ಇಲ್ಲವೆಂದು ತಿಳಿವಣ. ಮಾಯಾಸ್ವರೂಪವನ್ನು ವಿಚಾರಿಸುತ್ತ ಇದ್ದೇವೆ. ಮಾಯೆಯನ್ನು ಸತ್ತೆಂದು ಹೇಳಕೂಡದು ಕಾಲತ್ರಯದಲ್ಲೂ ಇಲ್ಲವಾಗಲಾಗಿ; ಅಸತ್ತೆಂದೂ ಹೇಳಕೂಡದು, "ಅಹಮಜ್ಞಃ" ಎಂಬ ಅನುಭವವಿದ್ದೀತಾಗಿ; ಸದಸತ್ತೆಂದೂ ಹೇಳಕೂಡದು ವಿರುದ್ಧವಾದ ಕಾರಣ. ಮತ್ತೇನೆಂದರೆ, ಅನಿರ್ವಚನೀಯವೆಂದು ಹೇಳತಕ್ಕದು. ಅನಿರ್ವಚನೀಯವೆಂಬುದೇನೆಂದರೆ- ಮಿಥ್ಯಾಸ್ವರೂಪವೆನಿಸುವುದು. ಅದೆಂತೆನೆ— ಅವಯವ ವ್ಯುತ್ಪತ್ತಿಯಿಂದ ಮಿಥ್ಯೆಯೆಂದು ತೋರುತ್ತದೆ. "ಯಾ ಮಾ, ಸಾ ಮಾಯಾ; ಯಾ ನ ವಿದ್ಯತೇ, ಸಾ ಅವಿದ್ಯಾ" ಎಂಬುದರಿಂದ ಹಾಗೆಯಹುದಲ್ಲ. ಚಿದ್ವ್ಯತಿರಿಕ್ತವಾಗಿ ವಸ್ತ್ವಂತರವೇ ಇಲ್ಲ; ಆ ಚಿನ್ಮಾತ್ರಸ್ವರೂಪವೇ ನಾನೆಂದು ಯಾವನು ತಿಳಿಯುತ್ತಿದ್ದಾನೆಯೋ ಆತನೇ ಮುಕ್ತನೆಂದು ವೇದಾಂತಗಳೆಲ್ಲಾ ಹೇಳುತ್ತ ಇವೆ.

ಇಂತೀಕನ್ನಡಭಾಷೆಯೊಳ್ ವಿರಚಿಸಿದ ವಾಸುದೇವಯತೀಂದ್ರಪ್ರೋಕ್ತಮಪ್ಪ
ವಿವೇಕಸಾರವೆಂಬ ಗ್ರಂಥದಲ್ಲಿ
ಅಧ್ಯಾರೋಪಾಪವಾದಮಂ ಪೇಳ್ದುದು,
ಪೀಠಿಕಾಪ್ರಕರಣಂ.

# ಎರಡನೆಯ ಪ್ರಕರಣ.

॥ ಸಾಧನಚತುಷ್ಟಯಸಂಪತ್ತಿ ॥

---

ಯಃ ಸ್ಯಾತ್ಸಾಧನಸಂಪನ್ನ ಈಶ್ವರಸ್ಯ ಪ್ರಸಾದತಃ।
ಯಜ್ಞಾದಿಕರ್ಮಕರಣಾ ತ್ತೋಽಧಿಕಾರೀ ನಿರೂಪ್ಯತೇ ॥

ವೇದಾಂತವಿಚಾರದಲ್ಲಿ ಸಾಧನಚತುಷ್ಟಯಸಂಪತ್ತಿಯುಳ್ಳವನೇ ಅಧಿಕಾರಿಯೆನಿಸುವನು. ಅದೆಂತೆಂದೊಡೆ, ಹೇಳೇವು. ಬೃಹಸ್ಪತಿಸವನದಲ್ಲಿ ಬ್ರಾಹ್ಮಣನೇ ಹೇಗೆ ಅಧಿಕಾರಿಯೋ, ಕ್ಷತ್ರಿಯ ವೈಶ್ಯರು ಹೇಗೆ ಅಧಿಕಾರಿಗಳಲ್ಲವೋ; ರಾಜಸೂಯದಲ್ಲಿ ಕ್ಷತ್ರಿಯನುಮಾತ್ರ ಹೇಗೆ ಅಧಿಕಾರಿಯೋ, ಬ್ರಾಹ್ಮಣವೈಶ್ಯರು ಹೇಗೆ ಅಧಿಕಾರಿಗಳಲ್ಲವೋ; ವೈಶ್ಯಸ್ತೋಮದಲ್ಲಿ ವೈಶ್ಯನು ಹೇಗೆ ಅಧಿಕಾರಿಯೋ, ಬ್ರಾಹ್ಮಣಕ್ಷತ್ರಿಯರು ಅಧಿಕಾರಿಗಳಲ್ಲವೋ— ಹಾಗೆ ವೇದಾಂತವಿಚಾರದಲ್ಲೂ ಸಾಧನಚತುಷ್ಟಯಸಂಪತ್ತಿಯುಳ್ಳವನೇ ಅಧಿಕಾರಿಯೆನಿಸುವನು.

ಸಾಧನಚತುಷ್ಟಯಸಂಪತ್ತಿ ಆವುದೆಂದರೆ?— ನಿತ್ಯಾನಿತ್ಯವಸ್ತುವಿವೇಕ, ಇಹಾಮುತ್ರಫಲಭೋಗವಿರಾಗ, ಶಮಾದಿಷಟ್ಕಸಂಪತ್ತಿ, ಮುಮುಕ್ಷುತ್ವ.

ಬ್ರಹ್ಮವೇ ನಿತ್ಯ, ಜಗತ್ತು ಅನಿತ್ಯವೆಂದು ಶ್ರುತಿಸ್ಮೃತಿಗುರುಮುಖವಾಗಿ ತಿಳಿಯುವುದೇ ನಿತ್ಯಾನಿತ್ಯವಿವೇಕವೆನಿಸುವುದು. ಇಹಾಮುತ್ರಾರ್ಥಫಲಭೋಗವಿರಾಗವಾವುದೆಂದರೆ:— ಈ ಲೋಕದಲ್ಲಿ ಕರ್ಮಜನ್ಯಗಳಾಗಿ ಅನಿತ್ಯಗಳಾಗಿ ಇರುವಂಥ ಸ್ರಕ್ಚಂದನಾದಿವಿಷಯಭೋಗಗಳು, ಪರಲೋಕದಲ್ಲಿ ಕರ್ಮಜನ್ಯಗಳಾಗಿ ಅನಿತ್ಯಗಳಾಗಿ ಇರುವಂಥ ಅಪ್ಸರಸ್ತ್ರೀಸಂಭೋಗಾದಿಗಳು—ಇವುಗಳನ್ನು ಶ್ವವಾಂತಾಶನಮೂತ್ರಪುರೀಷಗಳಂತೆ ಕಾಣುವಂಥದೇ ಇಹಾಮುತ್ರಫಲಭೋಗವಿರಾಗವೆನಿಸುವುದು. ಶಮಾದಿಷಟ್ಕಸಂಪತ್ತಿಯಾವುದೆಂದರೆ:— ಶಮವೆಂತಲೂ, ದಮವೆಂತಲೂ, ತಿತಿಕ್ಷೆಯೆಂತಲೂ, ಉಪರತಿಯೆಂತಲೂ, ಸಮಾಧಾನವೆಂತಲೂ, ಶ್ರದ್ಧೆಯೆಂತಲೂ,

ಆಱುವಿಧಗಳಾಗಿರುವುವು. ಅವಱಲ್ಲಿ ಶಮವೆಂಬುದಾವುದೆಂದರೆ— ಮನಸ್ಸನ್ನು ಶ್ರವಣಾದಿವ್ಯತಿರಿಕ್ತವಾಗಿರುವಂಥ ವಿಷಯಗಳಿಂದ ತಿರಿಗಿಸಿ ಶ್ರವಣಾದಿಗಳಲ್ಲಿಯೇ ಬಿಡುವಣ. ದಮವೆಂಬುದಾವುದೆಂದರೆ?— ಜ್ಞಾನೇಂದ್ರಿಯಕರ್ಮೇಂದ್ರಿಯಗಳನ್ನು ಶ್ರವಣಾದಿವ್ಯತಿರಿಕ್ತವಾದ ವಿಷಯಗಳ ದೆಸೆಯಿಂದ ತಿರಿಗಿಸಿ ಶ್ರವಣದಲ್ಲಿ ನಿಲಿಸುವಂಥದೇ ದಮವೆನಿಸುವುದು ತಿತಿಕ್ಷೆಯಾವುದೆಂದರೆ ?— ಶೀತೋಷ್ಣಾದಿಗಳ ಸಹಿಸುವಣ, ಮಂಜಿನಲ್ಲಿದ್ದುಕೊಂಡು ಶೀತವನೂ ಬಿಸಿಲಿನಲ್ಲಿದ್ದುಕೊಂಡು ಉಷ್ಣವನೂ ಸಹಿಸಬೇಕೆಂಬುದರ್ಥವಲ್ಲ. ಪ್ರಾರಬ್ಧವಶದಿಂದ ಆವ ವೇಳೆಯಲ್ಲಿ ಏನು ಬರುವುದೋ ಅದನ್ನು ಅನುಭವಿಸಿ ತೀರಬೇಕೆಂಬ ಬುದ್ಧಿನಿಶ್ಚಯವೇ ತಿತಿಕ್ಷೆಯೆನಿಸುವುದು. ಉಪರತಿಯಾವುದೆಂದರೆ?-ವಿಹಿತವಾದ ಕರ್ಮಗಳನ್ನು ವಿಧ್ಯುಕ್ತವಾಗಿ ಬಿಡುವಂಥದು ಇದೇ ಸನ್ಯಾಸವೆಂದು ಹೇಳವಡುವುದು. ಕರ್ಮವ ಮಾಡದೆ ಇರಬೇಕೆಂಬುದು ಅರ್ಥವಲ್ಲ. ವಿಹಿತವಾದ ಕರ್ಮಗಳನ್ನು ಕರ್ಮತ್ವಾಭಿಮಾನವಿರಹಿತನಾಗಿ ಫಲವನು ಅಪೇಕ್ಷಿಸದೆ ಮಾಡುವುದೇ ಉಪರತಿಯೆನಿಸುವುದು. ಸಮಾಧಾನವೆಂಬುದಾವುದೆಂದರೆ?— ತಿರುಗಿದಂಥ ಮನಸ್ಸನು ಇಂದ್ರಿಯಗಳನು ವಾಸನಾವಶದಿಂದ ವಿಷಯದತ್ತಲೆ ಅವು ಹೋಗುವುದಾದರೆ, ಶ್ರವಣಾದಿವ್ಯತಿರಿಕ್ತವಾದಂಥ ವಿಷಯಗಳ ದೆಸೆಯಿಂದ ತಿರಿಗಿ ಶ್ರವಣಾದಿಗಳಲ್ಲಿಯೇ ನಿಲಿಸುವಂಥದು ಸಮಾಧಾನವೆನಿಸುವುದು. ಶ್ರದ್ಧೆಯೆಂಬುದಾವುದೆಂದರೆ?— ಪೂರ್ವದಲ್ಲಿ ಆವಾವುದಱಲ್ಲಿ ಏನೇನು ವಿಶ್ವಾಸವಿತ್ತೋ ಅದನೆಲ್ಲಾ ಗುರು ವೇದಾಂತವಾಕ್ಯೇಶ್ವರರಲ್ಲಿ ನಿಲಿಸುವಂಥದೇ ಶ್ರದ್ಧೆಯೆನಿಸಿಕೊಂಬುದು. ಮುಮುಕ್ಷುತ್ವವಾವುದೆಂದರೆ, ಮೋಕ್ಷೇಚ್ಛೆಯೆನಿಸುವುದು. ಸಮಸ್ತವಾದಂಥವರು ಮೋಕ್ಷವಾಗಬೇಕೆಂದು ಹೇಳುತ್ತಿದ್ದಾರೆ, ಅದು ಮುಮುಕ್ಷುತ್ವವಲ್ಲ. ಮತ್ತೆಹೇಗೆಂದರೆ?— ಮನೆ ಬೆಂದುಹೋಗುತ್ತಿರಲಾಗಿ ಮನೆಯಹೊಕ್ಕ ಪುರುಷನು ಪುತ್ರಮಿತ್ರಕಳತ್ರಾದಿಗಳು ಏನಾಗಿ ಹೋದರೋ ಎಂದು ಚಿಂತಿಸಿ, ಅಗ್ನಿಯಿಂದ ತಪಿಸಲ್ಪಟ್ಟವನಾಗಿ, ಆ ಪುತ್ರಮಿತ್ರಕಳತ್ರಾದಿಗಳನ್ನು ಬಿಟ್ಟು ಬಂದು ಶೀತಜಲವನು ಪ್ರವೇಶಮಾಡುವಂತೆ, ಸಂಸಾರದಲ್ಲಿ ತಾಪತ್ರಯವೆಂಬ ಅಗ್ನಿಯಿಂದ ತಪ್ತನಾಗಿ ಪುರುಷನು ಈ ಸಂಸಾರತಾಪವನು ಯಾರು ಹೋಗಿಸುವರೋ, ಸದ್ಗುರುಗಳಲ್ಲಿ ಉಂಟೋ, ಇದಕ್ಕೆ ಸಾಧನಗಳು

ಏನು ಬೇಕೋ ಎಂದು ತಪಿಸಿಕೊಂಡಿರುವಂಥವನ ಚಿತ್ತವೃತ್ತಿಗೆ ಮುಮುಕ್ಷುತ್ವವೆಂದು ಹೆಸರು. ಈ ನಾಲ್ಕು ಸಾಧನಗಳುಳ್ಳಂಥವನೇ ಅಧಿಕಾರಿಯೆನಿಸಿಕೊಂಬನು.

ಶ್ರವಣಕ್ಕೆ ಮೊದಲೇ ಸಾಧನಚತುಷ್ಟಯವ ಸಂಪಾದಿಸಿಕೊಂಡು ಶ್ರವಣದಲ್ಲಿ ಎಱಗಿದಲ್ಲದೆ ಜ್ಞಾನ ಹುಟ್ಟಲಾರದು. ಗುರುಗಳು ಅನಧಿಕಾರಿಗೆ ಉಪದೇಶವ ಮಾಡಬಾರದು. ಅದೆಂತೆಂದರೆ:— ಶೂದ್ರನಿಗೆ ಉಪನಯನವ ಮಾಡಿಸಿದರೂ ಯಾಗವ ಮಾಡಿಸಿದರೂ, ಅವನಿಗೆ ಬ್ರಾಹ್ಮಣ್ಯವು ಸ್ವರ್ಗಫಲವು, ಹೇಗೆ ಸಿದ್ಧಿಸದೋ, ಅದೇರೀತಿಯಾಗಿ ಸಾಧನಚತುಷ್ಟಯಸಂಪತ್ತಿಯಿಲ್ಲದವನಿಗೆ ಶ್ರವಣಾದಿಗಳ ಮಾಡಿಸಿದರೆ ಅವನಿಗೆ ಆ ಜ್ಞಾನಫಲವು ಸಿದ್ಧಿಸದು. ಹಾಗಾದರೆ ಶ್ರವಣಾದಿಗಳು ವ್ಯರ್ಥವಾಗಿ ಹೋಗುವುದೇ ಎಂದರೆ, ಹೋಗದು; ಅದಱಿಂದ ಬಂದು ಅದೃಷ್ಟವು ಹುಟ್ಟುವುದು. ಈ ಸಾಧನಚತುಷ್ಟಯವು ಶ್ರವಣಕ್ಕೆ ಪೂರ್ವವಿಲ್ಲದೆ ಇದ್ದರೂ ಶ್ರವಣಕಾಲದಲ್ಲಾದರೂ ಗುರುಮುಖವಾಗಿ ವಿಚಾರಿಸಿ ಸಂಪಾದಿಸಕೊಳ್ಳಬೇಕು.

ಅಧಿಕಾರಿಗೆ ನಾಲ್ಕುವಿಶೇಷಣಗಳನ್ನು ಏಕೆ ಹೇಳಬೇಕು ? ನಿತ್ಯಾನಿತ್ಯವಸ್ತುವಿವೇಕವೊಂದೇಸಾಲದೆ ಎಂದರೆ, ಸಾಲದು. ಲೋಕದಲ್ಲಿ ಶಾಸ್ತ್ರಜ್ಞರಿಗೆ ನಿತ್ಯಾನಿತ್ಯವಸ್ತುವಿವೇಕವುಂಟಾದರೂ ವಿಷಯಾದಿಗಳ ಆಸಕ್ತಿಯುಂಟಾಗಿ, ಕಾಮ್ಯಕರ್ಮಗಳನೇ ಮಾಡುತ್ತಾ ಇದ್ದಾರೆಯಾದ ಕಾರಣ, ಅವರಿಗೆ ಅಧಿಕಾರಿತ್ವವ ಕಾಣೆವು. ಅನಂತರದಲ್ಲಿ, ಎರಡನೆಯ ಸಾಧನವು ಆಗಬೇಕು. ಈ ಎರಡು ಸಾಧನವೇ ಸಾಕೆಂದು ಹೇಳುವೆವೆಂದರೆ, ಸಾಲದು. ಅದೆಂತೆಂದರೆ ? ಲೋಕದಲ್ಲಿ ಕೆಲವು ಋಷೀಶ್ವರರಿಗೆ ನಿತ್ಯಾನಿತ್ಯವಸ್ತುವಿವೇಕವೂ ಇಹಾಮುತ್ರಾರ್ಥಫಲಭೋಗವಿರಾಗವೂ ಉಂಟು. ಅವರಿಗೆ ಕೋಪತಾಪಗಳು ಅಧಿಕವಾಗಿ ಶಮಾದಿಷಟ್ಕಸಂಪತ್ತಿಯಿಲ್ಲವಾದ ಕಾರಣ ಅವರಿಗೂ ಅಧಿಕಾರಿತ್ವವಕಾಣೆವು. ಅನಂತರದಲ್ಲಿ ಮೂಱನೆಯ ಸಾಧನವು ಬೇಕು. ಹಾಗಾದರೆ ಮೂಱುಸಾಧನಗಳೇ ಸಾಕೆಂದು ಹೇಳೋಣವೆಂದರೆ, ಸಾಲದು. ಅದೆಂತೆಂದರೆ ? ಲೋಕದಲ್ಲಿ ಮೂಱು ಸಾಧನಗಳುಳ್ಳವರು ಕೆಲವರುಂಟು. ಅವರಾರೆಂದರೆ ? ಕೃಷ್ಣಾಜಿನವನ್ನು ಕಕ್ಷದಲ್ಲಿ ಇಱುಕಿ ತಲೆಗಳಲ್ಲಿ ಜಡೆಯ ಬಳೆಯಿಸಿಕೊಂಡು ಯೋಗೀಶ್ವರರೆಂಬ

ಹೆಸರನ್ನು ಮಾಡಿಕೊಂಡು, ಸಂಸಾರವನ್ನು ಬಿಟ್ಟು ವಿರಕ್ತರಾಗಿ ಉಪಶಾಂತರಾಗಿ ಪ್ರತಿಗ್ರಹವು ಇಲ್ಲದೇನೇ ಇರುವರು. ಅವರೂ ವೇದಾಂತಶ್ರವಣವೆಂದರೆ ಸಮೀಪಕ್ಕೆ ಬಾರರಾದಕಾರಣ, ಅವರಿಗೂ ಅಧಿಕಾರಿತ್ವವ ಕಾಣೆವು. ಆದುದರಿಂದ ನಾಲ್ಕನೆಯ ಸಾಧನವು ಬೇಕು. ಈ ನಾಲ್ಕು ಸಾಧನವು ವೇದಾಂತವಿಚಾರಕ್ಕೆ ಅಧಿಕಾರತ್ವವನ್ನುಂಟುಮಾಡುವುದು. ಈ ಸಾಧನಚತುಷ್ಟಯಸಂಪತ್ತಿಯು ಕಾಯಿಕ ವಾಚಿಕೇಂದ್ರಿಯ ವ್ಯಾಪಾರರೂಪವಲ್ಲ, ಮನೋವ್ಯಾಪಾರರೂಪವಾಗಲಾಗಿ, ವಿಷಯದಲ್ಲಿ ದೋಷದೃಷ್ಟಿಯುಳ್ಳಂಥವರಿಗೆ ಸುಲಭದಲ್ಲಿಯೇ ಸಂಪಾದಿಸಬಹುದಾದಕಾರಣ, ಸಾಧನಚತುಷ್ಟಯಸಂಪತ್ತಿಯುಂಟು, ಎಂಬುದಕ್ಕೆ ಸಮ್ಮತಿವಚನಂಗಳು:—

ಶ್ಲೋ॥ ಯಾವದನ್ಯನ್ನ ಸಂತ್ಯಕ್ತಂ ತಾವತ್ಸಾಮಾನ್ಯಮೇವ ಹಿ ।
ವಸ್ತುನಾ ಸಾಧ್ಯತೇ ಲೋಕೇ ಸ್ವಾತ್ಮಲಾಭೇ ತು ಕಾ ಕಥಾ ॥
ಸಹೇತು ಸಫಲಂ ಕರ್ಮ ಧನಮೂಲಮಶೇಷತಃ ।
ತ್ಯಜತ್ಯೇವ ಹಿ ತದ್ಜ್ಞೇಯಂ ತ್ಯಕ್ತುಃಪ್ರತ್ಯಕ್ಪರಂ ಪದಂ ॥

ಇಂತೀಕನ್ನಡಭಾಷೆಯೊಳ್ ವಿರಚಿಸಿದ ವಾಸುದೇವಯತೀಂದ್ರಪ್ರೋಕ್ತಮಪ್ಪ
ವಿವೇಕಸಾರದಲ್ಲಿ
ಸಾಧನಚತುಷ್ಟಯಸಂಪತ್ತಿಯಂ ಪೇಳ್ದುದು,
ದ್ವಿತೀಯಪ್ರಕರಣಂ ಸಮಾಪ್ತಂ.

## ಮೂರನೆಯ ಪ್ರಕರಣ.

॥ ಪ್ರಪಂಚನಿರೂಪಣಂ, ಅಥವಾ ಆತ್ಮಾನಾತ್ಮವಿವೇಕ ॥

ಚೇತನಾಚೇತನೇ ಯೇವೈ ಶ್ರುತೌ ಸಮ್ಯಕ್ಸಮರ್ಥಿತೇ ।
ತೇ ದ್ವೇ ಮಯಾ ವಿರಚ್ಯೇತೇ ಭಾಷಯಾ ಶೃಣ್ವತಾಮಿಹ ॥

ಪ್ರಪಂಚವು ಎಷ್ಟು ಪದಾರ್ಥವೆಂದು ವಿಚಾರಿಸುತ್ತಿದ್ದೇವೆ. ಅದೆಂತೆಂದರೆ:— ಪ್ರಪಂಚವು ಆತ್ಮವೆಂತಲೂ ಅನಾತ್ಮವೆಂತಲೂ ಎರಡು ಪದಾರ್ಥಗಳು. ಆತ್ಮನು ಪ್ರಪಂಚಾತೀತನಷ್ಟೆ. ಪ್ರಪಂಚಾತೀತನಾದ ಆತ್ಮನು ಪ್ರಪಂಚಾಂತಃಪಾತಿಯೆಂದು ಹೇಳಬಹುದೇ ಎಂದರೆ— ಹೇಳಬಹು

ದು. ಅದೆಂತೆಂದರೆ?- ಪ್ರಪಂಚವು ಚೇತನಾಚೇತನಾತ್ಮಕವಾಗಿ ತೋಱು ತ್ತಾ ಇದೆಯಾಗಲಾಗಿ, ಪ್ರಪಂಚಾತೀತನಾದ ಆತ್ಮನನ್ನು ಪ್ರಪಂಚಾಂತಃ ಪಾತಿಯೆಂದು ಹೇಳಬಹುದು. ಅದೆಂತೆಂದರೆ?— ಆತ್ಮನೆಂಬುದು ಚೇತನ ವಷ್ಟೆ. ಚೇತನವಾದಂಥ ಆತ್ಮನು ಪ್ರಪಂಚದಲ್ಲಿ ಕೂಡದೆ ಹೋದರೆ ಪ್ರಪಂಚವು ಚೇತನಾಚೇತನಾತ್ಮಕವಾಗಿ ತೋಱುವುದಿಲ್ಲ. ಪ್ರಪಂಚವು ಚೇತನಾಚೇತನಾತ್ಮಕವಾಗಿಯೇ ತೋಱುತ್ತ ಇದೆಯಾಗಲಾಗಿ, ಪ್ರಪಂ ಚಾತೀತನಾದ ಆತ್ಮನ ಪ್ರಪಂಚಾಂತಃಪಾತಿಯೆಂದು ಹೇಳಬಹುದು. ಹಾ ಗಾದರೆ, ಪ್ರಪಂಚದಲ್ಲಿ ಚೇತನವಾವುದು, ಅಚೇತನವಾವುದು ?- ಎಂದರೆ, ನಡೆವಂಥದು, ನೆಗೆದುಹಾಱುವುದು, ಹರಿಯುವುದು, ಓಡುವುದು, ಹತ್ತು ವುದು, ಚೇತನವೆನಿಸುವುದು; ಪೃಥ್ವೀಜಲಪರ್ವತವೃಕ್ಷಾದಿಗಳು ಅಚೇತ ನವೆನಿಸುವುದು. ಅದಂತಿರಲಿ. ಪ್ರಪಂಚವು ಅನೇಕ ಪದಾರ್ಥವಾಗಿ ತೋ ಱುತ್ತಾ ಇದೆಯಾಗಲಾಗಿ, ಎರಡೇ ಪದಾರ್ಥಗಳೆಂದು ಹೇಳಬಹುದೇ ?- ಎಂದರೆ, ಆತ್ಮವೆಂತಲೂ ಅನಾತ್ಮವೆಂತಲೂ ಪ್ರಪಂಚವು ಎರಡು ವಿಧವೆಂದು ಹೇಳಬಹುದಲ್ಲಾ. ಅನಂತರದಲ್ಲಿ ಆ ಅನಾತ್ಮಪದಾರ್ಥವೊಂದೇ ಕಾರ್ಯ ರೂಪವಾಗಿ ಪರಿಣಾಮಿಸಿ ಅನೇಕ ಪದಾರ್ಥಗಳಾಯಿತು; ಆತ್ಮನು ಅದಱೊ ಡನೆ ಕೂಡಿಕೊಂಡು ಅನೇಕರೋಪಾದಿಯಾಗಿ ತೋಱುತ್ತಾ ಇದ್ದಾನೆ. ಆ ಅನಾತ್ಮದೊಡನೆ ಕೂಡಿದ ಆತ್ಮನು ಎಷ್ಟು ವಿಧವಾಗಿ ತೋಱುತ್ತಾ ಇ ದ್ದಾನೆ?-ಎಂದರೆ, ಜೀವನೆಂತಲೂ ಈಶ್ವರನೆಂತಲೂ ಎರಡು ವಿಧವಾಗಿತೋ ಱುತ್ತಾ ಇದ್ದಾನೆ. ಆ ಜೀವನಾಗಿ ತೋಱುವ ಆತ್ಮನು ಎಷ್ಟು ವಿಧವಾಗಿ ತೋಱುತ್ತಾ ಇದ್ದಾನೆ ಎಂದರೆ?— ಅನೇಕ ಜೀವಿಗಳಾಗಿ ತೋಱುತ್ತಾ ಇ ದ್ದಾನೆ. ಆ ಈಶ್ವರನಾಗಿ ತೋಱುವ ಆತ್ಮನು ಎಷ್ಟು ವಿಧವಾಗಿ ತೋಱು ತ್ತಾ ಇದ್ದಾನೆ ಎಂದರೆ ?- ಅನೇಕ ಈಶ್ವರನಾಗಿ ತೋಱುತ್ತಾ ಇದ್ದಾನೆ. ಜೀವನಾಗಿ ತೋಱುವ ಆತ್ಮನು ಅನೇಕ ಜೀವರಾಗಿ ತೋಱಲಿ; ಈಶ್ವರ ನಾಗಿ ತೋಱುವ ಆತ್ಮನು ಅನೇಕ ಈಶ್ವರರಾಗಿ ತೋಱುವುದು ಹೇಗೆ?- ಎಂದರೆ, ಪುಣ್ಯಕ್ಷೇತ್ರಾದಿಗಳಲ್ಲಿಯೂ ಪತ್ತನಗ್ರಾಮಾದಿಗಳಲ್ಲಿಯೂ ಮನೆ ಮನೆಗೂ ಆತ್ಮನು ಅನೇಕ ಈಶ್ವರರಾಗಿ ತೋಱುತ್ತಾ ಇದ್ದಾನೆಯಾಗಲಾ ಗಿ, ಅಲ್ಲಲ್ಲಿ ತೋಱುವಂಥದೆಲ್ಲವೂ ವ್ಯಕ್ತಿಲಾದಾರು ತಾವು ಪ್ರತಿಮೆಗಳ

ಷ್ಟ ತೋರುತ್ತ ಇವೆ. ಅದೆಲ್ಲವೂ ಈಶ್ವರನಾಗಿ ತೋರುತ್ತಾ ಇದೆ ಎಂದು ಹೇಳಬಹುದೇ ? ಎಂದರೆ – ಹೇಳಬಹುದು. ಅದೆಂತೆಂದರೆ? ವ್ಯಷ್ಟಿ ಲಾದಾರುತಾಮ್ರಪ್ರತಿಮೆಗಳಲ್ಲಿ ಎಲ್ಲರಿಗೂ ಈಶ್ವರತ್ವಬುದ್ಧಿಯುಲ್ಲದೆ ಪ್ರತಿಮಾದಿಬುದ್ಧಿ ಸರ್ವಾತ್ಮನಾ ಇಲ್ಲವಾಗಲಾಗಿ ಅವರಲ್ಲಿ ಪ್ರತಿಮಾದಿಬುದ್ಧಿಯುಂಟಾಗಿ ಈಶ್ವರತ್ವಬುದ್ಧಿಯಿಲ್ಲದೇ ಹೋದರೆ ಪೂಜಾಭಿಷೇಕಗಳಗೋಸ್ಕರ ಲಕ್ಷಾಂತರವರಹಗಳನು ಏಕೆ ವೆಚ್ಚಮಾಡಿಯಾರು ? ಅದುಕಾರಣ ಪ್ರತಿಮಾದಿಗಳಲ್ಲಿ ಈಶ್ವರತ್ವಬುದ್ಧಿ ಬರಬಹುದಲ್ಲ. ಅದೆಂತೆಂದರೆ– ಮನುಷ್ಯಶರೀರವು ಶುಕ್ಲಶೋಣಿತಗಳ ದೆಸೆಯಿಂದ ಹುಟ್ಟಿರುವುದರಿಂದಲೂ, ಮಾಂಸಮೂತ್ರಪುರೀಷಾದಿಗಳಿಂದ ನಿರ್ಮಿಸಲ್ಪಟ್ಟು ಇರುವುದರಿಂದಲೂ, ಸ್ರಕ್ಚಂದನಾದಿಗಳಿಂದ ಶರೀರಕ್ಕೆ ಸುಗಂಧವ ಸಂಪಾದಿಸುವವೆಂದರೆ ಶರೀರಸ್ಪರ್ಶನಮಾತ್ರದಿಂದಲೇ ಆ ಸ್ರಕ್ಚಂದನಾದಿಗಳು ದುರ್ಗಂಧಗಳಾಗಿ ಹೇಯಗಳಾಗಿ ಹೋಗುವುದರಿಂದಲೂ, ಶರೀರವು ಮೃತವಾಗಿ ಹೋದ ಹೊತ್ತಿಗೂ ಇರುವಂಥವರಿಗೆ ಅರ್ಥಚ್ಛೇದಾದಿಕ್ಲೇಶಗಳ ಮಾಡುವುದರಿಂದಲೂ, ಈ ಶರೀರವು ಹೇಯಪದಾರ್ಥವೆಂಬುದಕ್ಕೆ ಸಂದೇಹವಿಲ್ಲ. ಈ ದೋಷಾದಿಗಳು ಆ ಪ್ರತಿಮೆಗಳಲ್ಲಿ ಇಲ್ಲವಾದುದರಿಂದಲೂ, ಆ ಪ್ರತಿಮೆಗಳಲ್ಲಿ ಸಮರ್ಪಿಸಿದಂಥ ಸ್ರಕ್ಚಂದನಾದಿಗಳು ಪರರಿಗೆ ಕೃತಾರ್ಥತೆಯ ಮಾಡುವುದರಿಂದಲೂ, ಆ ಪ್ರತಿಮೆಗಳಿಗೆ ಹಾನಿ ಬಂದ ಹೊತ್ತಿಗೂ ತಿರಿಗಿ ಉಪಕಾರಕ್ಕೆ ಬರುವುದರಿಂದಲೂ, ಆ ಪ್ರತಿಮಾದಿಗಳಲ್ಲಿ ಈಶ್ವರತ್ವಬುದ್ಧಿ ಬರುವಂಥದು ಉಚಿತವಹುದಲ್ಲ. ಅದಂತಿರಲಿ. ಒಂದು ಅನಾತ್ಮಪದಾರ್ಥವೇ ಕಾರ್ಯರೂಪವಾಗಿ ಪರಿಣಮಿಸಿ ಅನೇಕವಾಗಿ ತೋರುವಂಥದು ಸಹಜ. ಅದರ ಸಂಗಡ ಮತ್ತೊಂದು ಪದಾರ್ಥವು ಕೂಡಿಕೊಂಡು ಅನೇಕವಾಗಿ ತೋರಪಡುತಲಿದೆ ಎಂಬುದರಲ್ಲಿದೃಷ್ಟಾಂತವಾವುದೆಂದರೆ– ಹೇಳೇವು. ಪೃಥಿವಿಯೊಂದೇ ಕಾರ್ಯರೂಪವಾಗಿ ಪರಿಣಮಿಸಿ, ಪರ್ವತಗಳೆಂತಲೂ ವನಗಳೆಂತಲೂ ಗೋಪುರಗೃಹಕುಡ್ಯಕುಸೂಲಘಟಶರಾವಾದಿಗಳೆಂತಲೂ ಅನೇಕವಾಗಿ ತೋರುತ್ತಾ ಇದೆ; ಅದರೊಡನೆ ಕೂಡಿಕೊಂಡು ಆಕಾಶವು ಘಟಾಕಾಶವೆಂತಲೂ ಮಠಾಕಾಶವೆಂತಲೂ ವೃಕ್ಷಾಕಾಶವೆಂತಲೂ ಪರ್ವತವನಾಕಾಶವೆಂತಲೂ ಗೃಹಕುಡ್ಯಕುಸೂಲಾಕಾಶವೆಂತಲೂ ಹೀಗೆ ಅನೇಕವಿಧಗಳಾಗಿ ತೋರು

ತ್ತ ಇದೆಯೋ, ಹಾಗೆ ಆತ್ಮನು ಕಾರ್ಯರೂಪವಾಗಿ ಪರಿಣಾಮಿಸಿದಂಥ ಅನಾತ್ಮಪದಾರ್ಥದೊಡನೆ ಕೂಡಿಕೊಂಡು ಕೃಷ್ಣನೆಂತಲೂ ರಾಮನೆಂತಲೂ ನರಸಿಂಹನೆಂತಲೂ ಅನೇಕ ವಿಧಗಳಾಗಿ ತೋರುತ್ತಾ ಇದ್ದಾನೆ. ಅದುಕಾರಣ ಈ ಪೃಥಿವ್ಯಾಕಾಶದೃಷ್ಟಾಂತವು ಅವಚ್ಛಿನ್ನಪಕ್ಷಕ್ಕೆ ದೃಷ್ಟಾಂತವೆಂದು ಹೇಳಪಡುವುದು. ಪ್ರತಿಬಿಂಬಪಕ್ಷ ದೃಷ್ಟಾಂತನನು ಹೇಳೇವು. ಅದೆಂತೆಂದರೆ ? ಒಂದು ಜಲವೇ ಉಪಾಧಿವಶದಿಂದ ಸಮುದ್ರಗಳೆಂತಲೂ ನದಿಗಳೆಂತಲೂ ಕಾಲುವೆಗಳೆಂತಲೂ ತಟಾಕವಾಪಿಗಳೆಂತಲೂ ಭಾಂಡಜಲಗಳೆಂತಲೂ ಹೇಳಪಡುತ ಇದೆ. ಆ ಜಲದಲ್ಲಿ ಸೂರ್ಯನೊಬ್ಬನೇ ಪ್ರತಿಬಿಂಬಿಸಿ ಅನೇಕರೂಪವಾಗಿ ತೋರುತ್ತಾ ಇದ್ದಾನೆ. ಹಾಗೆ ಆತ್ಮನು ಅನಾತ್ಮಕಾರ್ಯವಾದಂಥ ಅಂತಃಕರಣದಲ್ಲಿ ಪ್ರತಿಬಿಂಬಿಸಿ ಅನೇಕ ರೂಪವಾಗಿ ತೋರುತ್ತ ಇದ್ದಾನೆ. ಹೀಗೆ ತೋರುತ್ತ ಇದ್ದರೂ ಅನಾತ್ಮಕಾರ್ಯವಾದಂಥ ಅಂತಃಕರಣಧರ್ಮಾದಿಗಳು ಆತ್ಮನ ಕಾಲತ್ರಯದಲ್ಲೂ ಸ್ಪರ್ಶನವ ಮಾಡಲಾರವು. ಅದೆಂತೆಂದರೆ ? ಜಲಗತವಾದ ಶೈತ್ಯಚಲನಾದಿವಿಕಾರಗಳು ಜಲದಲ್ಲಿ ಪ್ರತಿಬಿಂಬಿಸಿದಂಥ ಪ್ರತಿಬಿಂಬನ ಹೇಗೆ ಸ್ಪರ್ಶನವಮಾಡಲಾರದೋ, ಹಾಗೆ ಅಂತಃಕರಣಾದಿವಿಕಾರಗಳು ಅಂತಃಕರಣದಲ್ಲಿ ಪ್ರತಿಬಿಂಬಿಸಿದಂಥ ಜೀವನನ್ನು ಸ್ಪರ್ಶನವ ಮಾಡಲಾರವು. ಅಂತಃಕರಣಗಳಿಗೆ ಅಧಿಷ್ಠಾನಭೂತವಾದ ಪ್ರತ್ಯಗಾತ್ಮನಸ್ಪರ್ಶನವ ಮಾಡಲಾರದೆಂಬುದ ಹೇಳಬೇಕಾದರೆ, ಇಷ್ಟುಮಾತ್ರವಲ್ಲ. ಪೃಥ್ವಿಯ ವಿಕಾರಗಳು ಪೃಥ್ವಿಯ ಕಾರ್ಯದ ವಿಕಾರಗಳು ಪೃಥ್ವಿಗೆ ಆಧಾರಭೂತವಾದ ಆಕಾಶವ ಹೇಗೆ ಸ್ಪರ್ಶನ ಮಾಡಲಾರವೋ, ಹಾಗೆ ಅನಾತ್ಮವಾದಂಥ ಅಜ್ಞಾನವು ಅಜ್ಞಾನಕಾರ್ಯಗಳಾದ ದೇಹೇಂದ್ರಿಯಾದಿಧರ್ಮಗಳು, ಅಜ್ಞಾನಕ್ಕೂ ಅಜ್ಞಾನಕಾರ್ಯಕ್ಕೂ ಆಧಾರಭೂತವಾದಂಥ ಪ್ರತ್ಯಗಾತ್ಮನ ಸ್ಪರ್ಶನವ ಮಾಡಲಾರವು.

ಈಪ್ರಕಾರವಾಗಿ ಆತ್ಮಾನಾತ್ಮವಿವೇಕವ ತಿಳದು, ಆ ಆತ್ಮನ ಸ್ವರೂಪವು ನಾನೇ ಎಂದು ಆವನ ತಿಳಿಯುತ್ತ ಇದ್ದಾನೆಯೋ, ಅವನೇ ಮುಕ್ತನೆಂದು ವೇದಾಂತಲ್ಲಿ ಹೇಳುತ್ತಾ ಇದೆ.

ಶ್ಲೋ ॥ ಆತ್ಮಾನಾತ್ಮವಿವೇಕೇನ ಪುಂಸಃ ಸಂಸಾರನಿರ್ವೃತಿಃ ।
ತದ್ವಿನಾ ಜನ್ಮಕೋಟ್ಯಾಪಿ ಬಂಧಚ್ಛೇದೋನ ಸಿಧ್ಯತಿ ॥

ಇಂತೀಕನ್ನಡಭಾಷೆಯೊಳ್ ವಿರಚಿಸಿದ ವಾಸುದೇವಯತೀಂದ್ರಪ್ರೋಕ್ತವಾದ

**ವಿವೇಕಸಾರದಲ್ಲಿ**

ಪ್ರಪಂಚನಿರೂಪಣವಂ ಪೇಳ್ದುದು,

ತೃತೀಯ ಪ್ರಕರಣಂ.

## ನಾಲ್ಕನೆಯ ಪ್ರಕರಣಂ.

॥ ದುಃಖನಿರೂಪಣಂ ॥

ಶ್ಲೋ॥ ಜನೇ ಯದ್ದುಃಖಮಸ್ತ್ಯೇತತ್ಕಿಂ ಸ್ವರೂಪಮುತಾ ನ್ಯತಃ ।
ಸಮ್ಯಗಾಗಂತುಕಂ ವೇತಿ ಚಿಂತ್ಯತೇ ಭಾಷಯಾ ಮಯಾ ॥

ಪ್ರಾಣಿಗಳಿಗೆ ದುಃಖವು ಸ್ವಾಭಾವಿಕವೋ ಆಗಂತುಕವೋ, ಎಂದು ವಿಚಾರಿಸುತ್ತ ಇದ್ದೇವೆ. ಅದೆಂತೆಂದರೆ — ಪ್ರಾಣಿಗಳಿಗೆ ದುಃಖವು ಆಗಂತುಕವೆಂದು ಹೇಳಬೇಕು. ಸ್ವಾಭಾವಿಕವೆಂದು ಹೇಳಕೂಡದು. ಸ್ವಾಭಾವಿಕವೆಂದು ಹೇಳಿಕೆಯಾದರೆ ದುಃಖನಿವೃತ್ತಿಗೋಸ್ಕರ ಆರೂ ಯತ್ನವ ಮಾಡದೆ ಇರಬೇಕು. ಯತ್ನವ ಮಾಡುತ್ತಾ ಇದ್ದಾರೆಯಾಗಲಾಗಿ, ದುಃಖವನು ಸ್ವಾಭಾವಿಕವೆಂದು ಹೇಳಕೂಡದು, ಆಗಂತುಕವೆಂಬೇ ಹೇಳತಕ್ಕದು. ಅದಂತಿರಲಿ. ದುಃಖವು ಸ್ವಾಭಾವಿಕವೇ ಆಗಲಿ, ದುಃಖನಿವೃತ್ತಿಗೋಸ್ಕರ ಯತ್ನವನ್ನು ಮಾಡಲಿ, ಎಂದರೆ ? ಸ್ವಾಭಾವಿಕವೆಂಬುದು ಸ್ವರೂಪವಾಯಿತಾದಕಾರಣ ಸ್ವರೂಪಕ್ಕೆ ಹಾನಿ ಬರುವುದು; ಬಂದರೂ ಬರಲಿ, ಎಂದರೆ? ನಿವೃತ್ತದುಃಖನಾಗಿ ಇರುವವನೊಬ್ಬನೂ ಇಲ್ಲದೆ ಹೋಗುವುದಾದಕಾರಣ ದುಃಖ ಸ್ವಾಭಾವಿಕವೆಂದು ಹೇಳಕೂಡದು. ಇದು ಸ್ವಾಭಾವಿಕವಾದರೆ, ಹೋಗದೆ?— ಎಂದರೆ, ಹೋಗದು. ಅದೆಂತೆಂದರೆ ? ದೃಷ್ಟಾಂತಪೂರ್ವಕವಾಗಿ ಹೇಳೇವು. ಬೇವಿನ ಎಲೆಗೆ ಕಹಿಯಾಗಿರುವುದು ಸ್ವಾಭಾವಿಕವಷ್ಟೆ. ಕಹಿಯು ಹೋಗಿ ಬೇವಿನ ಸೊಪ್ಪು ಇರುವಂಥದುದನು ಎಲ್ಲಿಯೂ ಕಾಣೆವಲ್ಲಾ. ಆ ರೀತಿಯಾಗಿ ಆತ್ಮನಲ್ಲಿ ದುಃಖವೂ, ಸ್ವಾಭಾವಿಕವಾದರೆ ಹೋಗಲಾರದಾದಕಾರಣ ಆಗಂತುಕವೆಂದೇ ಹೇಳತಕ್ಕ

ದು. ಅನಂತರದಲ್ಲಿ ಆತ್ಮನಿಗೆ ದುಃಖವು ಸ್ವಾಭಾವಿಕವೇ ಆಗಲಿ, ಅದಕ್ಕೆ ನಿವೃತ್ತಿಯು ಬರಲಿ: ಹೇಗೆಂದರೆ ? ಅಗ್ನಿಗೆ ಉಷ್ಣತ್ವವು ಸ್ವಾಭಾವಿಕವಷ್ಟೆ; ಸ್ವಾಭಾವಿಕವಾದ ಉಷ್ಣತ್ವಕ್ಕೆ ಮಣಿಮಂತ್ರಾದಿಗಳಿಂದ ನಿವೃತ್ತಿಯನ್ನೂ, ಶೈತ್ಯಕ್ಕೆ ಆವಿರ್ಭಾವವನ್ನೂ ಕಂಡು ಇದ್ದೇವೆ. ಮತ್ತು ಜಲಕ್ಕೆ ಶೈತ್ಯವು ಸ್ವಾಭಾವಿಕನಷ್ಟೆ; ಸ್ವಾಭಾವಿಕವಾದಂಥ ಶೈತ್ಯಕ್ಕೆ ಅಗ್ನಿಸಂಪರ್ಕದಿಂದ ನಿವೃತ್ತಿಯನ್ನೂ, ಉಷ್ಣತ್ವಕ್ಕೆ ಆವಿರ್ಭಾವವನ್ನೂ ಕಂಡು ಇದ್ದೇವೆ. ಆ ರೀತಿಯಾಗಿ ಆತ್ಮನಿಗೂ ಸ್ವಾಭಾವಿಕವಾದಂಥ ದುಃಖಕ್ಕೆ ಉತ್ಕೃಷ್ಟಕರ್ಮೋಪಾಸನೆಗಳಿಂದ ನಿವೃತ್ತಿಯೂ, ಸುಖಕ್ಕೆ ಆವಿರ್ಭಾವವೂ ಬರುವುದೆಂದು ಹೇಳೋಣ, ಎಂದರೆ— ದುಃಖಕ್ಕೆ ತಾತ್ಕಾಲಿಕಪರಿಭವವೇ ಹೊರತಾಗಿ ಆತ್ಯಂತಿಕನಿವೃತ್ತಿಯು ಬರಲಾರದು. ಅದೆಂತೆಂದರೆ ? ಅಗ್ನ್ಯಾದಿಗಳಿಗೆ ತಾತ್ಕಾಲಿಕವಾದಂಥ ಮಣಿಮಂತ್ರೌಷಧಾದಿಗಳು ಹೋದಬಳಿಕ ಪರಿಭೂತವಾದಂಥ ಉಷ್ಣಾದಿಗಳಿಗೆ ಕಾಲಾಂತರದಲ್ಲಿ ಹೇಗೆ ಆವಿರ್ಭಾವ ಬರುತ್ತಾ ಇದೆಯೋ, ಆ ರೀತಿಯಾಗಿ ಆತ್ಮನಿಗೂ ಉತ್ಕೃಷ್ಟಕರ್ಮೋಪಾಸನಫಲರೂಪವಾದಂಥ ಸುಖಕ್ಕೆ ನಾಶವು ಬರುತ್ತಾ ಇರಲಾಗಿ ದುಃಖವು ತಿರಿಗಿ ಆವಿರ್ಭವಿಸುವುದು; ದುಃಖಕ್ಕೆ ಆತ್ಯಂತಿಕನಿವೃತ್ತಿಯು ಬರಲಾರದು. ಇಷ್ಟುಮಾತ್ರವಲ್ಲ. ದುಃಖವು ಸ್ವಾಭಾವಿಕವೆಂದು ಹೇಳುವುದರಿಂದ ಮೋಕ್ಷಕ್ಕೆ ಜನ್ಯತ್ವವೂ ಅನಿತ್ಯತ್ವವೂ ಬರುವುವು. ಬಂದರೂ ಬರಲಿ, ಎಂದರೆ ? ಅದಾರಿಗೂ ಸಮ್ಮತವಾಗದು. ಇಷ್ಟುಮಾತ್ರವಲ್ಲ. ಆತ್ಮನು ಆನಂದಸ್ವರೂಪನೆಂದು ಹೇಳುವಂಥ ಅನೇಕ ಶ್ರುತಿಸ್ಮೃತೀತಿಹಾಸಪುರಾಣಾಗಮಾಭಿಯುಕ್ತವಚನಗಳಿಗೂ ವೈಯರ್ಥ್ಯಬರುವುದು. ಮತ್ತು ಸುಷುಪ್ತ್ಯವಸ್ಥೆಯಲ್ಲಿಯೂ, ಸಮಾಧ್ಯವಸ್ಥೆಯಲ್ಲಿಯೂ ತೂಷ್ಣೀಂಭೂತಾವಸ್ಥೆಯಲ್ಲಿಯೂ ಆತ್ಮನು ಇದ್ದಾನೆಯಾಗಲಾಗಿ, ಅಲ್ಲಿಯೂ ಆತ್ಮನಿಗೆ ಸ್ವಾಭಾವಿಕವಾದ ದುಃಖವು ತೋರಬೇಕು. ತೋರಲಿಲ್ಲವಾಗಿ, ಈ ಅವಸ್ಥಾತ್ರಯದಲ್ಲಿಯೂ ಪ್ರಾಣಿಗಳಿಗೆ, ದುಃಖಿಗಳಾಗಿದ್ದೇವೆಂಬ, ಅನುಭವವಿಲ್ಲ, ಸುಖವಾಗಿ ಇದ್ದೇವೆಂದು ಅನುಭವವಿರುವುದರಿಂದ— ಆತ್ಮನಿಗೆ ದುಃಖವು ಸ್ವಾಭಾವಿಕವೆಂದು ಅಂಗೀಕರಿಸಕೂಡದು. ಅಂಗೀಕರಿಸಿದರೆ, ಸುಖಾನುಭವಕ್ಕೆ ವೈಯರ್ಥ್ಯ ಬರುವುದಾಗಲಾಗಿ ದುಃಖವನ್ನು ಆಗಂತುಕ

ಮೋಹದಿಂದಲೇ ಹೇಳತಕ್ಕದ್ದು.

ಈ ದುಃಖವು ಏತಕ್ಕೆಯಿಂದ ಬಂದಿತೆಂದರೆ?– ಶರೀರಪರಿಗ್ರಹದಿಂದ ಲೇ ಬಂದಂಥದು. ಅದುಕಾರಣ ಎಲ್ಲೆಲ್ಲಿ ಶರೀರಪರಿಗ್ರಹವುಂಟೋ ಅ ಲ್ಲೆಲ್ಲಾ ದುಃಖವುಂಟೆಂದು ವ್ಯಾಪ್ತಿ. ಹೀಗೆ ಆದಾದರೂ ಹೇಳುವರೇ? ರಾಜಪ್ರಭೃತಿಗಳಲ್ಲಿ ಸುಖವೇ ಅನುಭವಿಸಲ್ಪಡುತಿದೆಯಾದಕಾರಣ ಶರೀರ ಪರಿಗ್ರಹವಿದ್ದ ಬಳಿಯಲ್ಲೆಲ್ಲವೂ ದುಃಖವೇ ಅನುಭವಿಸಲ್ಪಡುತ್ತಿದೆ ಎಂ ದು ಹೇಳಬಹುದೇ? ಎಂದರೆ— ಹೇಳಬಹುದು. ಅದೆಂತೆನೆ? ರಾಜಪ್ರ ಭೃತಿಗಳಲ್ಲಿಯೂ ದುಃಖವೇ ಅನುಭವಿಸಲ್ಪಡುತ್ತಿದೆ. ಆ ದುಃಖವಾವುದೆಂ ದರೆ, ಹೇಳುತ್ತ ಇದ್ದೇವೆ. ರಾಜಪ್ರಭೃತಿಗಳಿಗೆ ದೇಹದಲ್ಲಿ ರೋಗ ಬಂದರೆ ದುಃಖ; ಮಕ್ಕಳಿಲ್ಲದೆ ಇದ್ದರೂ, ಮಕ್ಕಳುಂಟಾಗಿ ಹೇಳಿದ ಹಾಗೆ ಕೇಳದೆ ಇದ್ದರೂ, ಮತ್ತು ಪ್ರಿಯವಾದ ಮಕ್ಕಳು ಮೃತರಾದರೂ, ದುಃಖ; ಶ ತ್ರುಗಳು ಬಲವಂತವಾಗಿ ರಾಜ್ಯವನ್ನು ಅಪಹರಿಸುವರೆಂಬ ದುಃಖ; ಹೆಂಡತಿಯರು ಒಬ್ಬರಿಗೊಬ್ಬರು ಕೋಪಿಸಿಕೊಂಡು ಔಷಧಪ್ರಯೋಗ ಮಾಡಿಯಾರೆಂಬ ದುಃಖ; ರಾಜ್ಯದಲ್ಲಿ ಮಳೆಯಿಲ್ಲದಿದ್ದರೂ ಮಳೆ ಅಧಿಕವಾ ದರೂ ದುಃಖ; ತನಗೆ ವಾರ್ಧಿಕ್ಯ ಬಂದಿತು, ಹೆಂಡತಿ ಮಕ್ಕಳು ದೇಶಕೋ ಶಗಳೆಲ್ಲವನ್ನೂ ಬಿಟ್ಟು ಹೋಗುತ್ತಾ ಇದ್ದೇನೆ ಎಂಬ ದುಃಖ—ಇವುಮೊ ದಲಾದ ದುಃಖಗಳು ಬಹುವಾಗಿ ರಾಜಪ್ರಭೃತಿಗಳಲ್ಲೂ ಕಾಣಬರುವುದರಿಂ ದ ಅವರು ಸುಖಸ್ವರೂಪಿಗಳು ಎಂಬುದ ಮೋಹದಿಂದಲೇ ಹೇಳತಕ್ಕ ದು. ಮೋಹದಿಂದ ದುಃಖವು ಸುಖವಾಗಿ ತೋರುವುದೇ? –ಎಂದರೆ, ತೋರುವುದು. ಅದೆಂತೆಂದರೆ? ಹೊಟ್ಟೆಯ ಹೊತ್ತು ಮಾರುವವನಿಗೆ ಒಂದು ಪಡಿ ಅಕ್ಕಿ ಸಿಕ್ಕಿತು ಎಂದರೆ, ಹೊಟ್ಟೆಯಭಾರದಿಂದ ಬಂದಂಥ ದುಃಖವನ್ನು ಸ್ವಲ್ಪವೂ ಎಣಿಸದೆ ಸಂತೋಷಪಡುತ್ತಾ ಇದ್ದಾನೆ. ಬೆಸ್ತರು ತ ಮ್ಮ ದೊರೆಗೆ ಪಲ್ಲಕ್ಕಿ ಹೊರುವಾದರೆ ಸಂತೋಷಪಡುತ್ತಾ ಇದ್ದಾರೆ, ಇಲ್ಲದಿದ್ದರೆ ದುಃಖಪಡುತ್ತಾ ಇದ್ದಾರೆ. ಕೆಲಸ ಮಾಡುವವನು ಕೆಲಸವುಂಟಾದರೆ ಸಂ ತೋಷಪಡುತ್ತಾ ಇದ್ದಾನೆ, ಇಲ್ಲದಿದ್ದರೆ ದುಃಖಪಡುತ್ತಲಿದ್ದಾನೆ. ಇವು ಮೊದಲಾದ ದುಃಖಗಳು ಅವರಿಗೆ ಹೇಗೆ ಸುಖದೋಷಾದಿಯಲ್ಲಿ ತೋರು ತ್ತವೆಯೋ ಹಾಗೆ ರಾಜಪ್ರಭೃತಿಗಳಿಗೂ ಮೋಹದಿಂದಲೇ ದುಃಖವು ಸುಖ ವಾಗಿ ತೋರುತ್ತಲಿದೆ. ಹಾಗಾದರೆ ವಿವೇಕಿಗಳಿಗೂ ದುಃಖವುಂಟೇ?– ಎಂ

ದರೆ, ಉಂಟು. ವಿವೇಕಿಯೆನಿಸುವಾತನು ಶರೀರವುಳ್ಳವನೋ ಇಲ್ಲದವನೋ, ಎಂದು ವಿಚಾರಿಸುತ್ತಿದ್ದೇವೆ. ಅಶರೀರನಾದವನಿಗೆ ವಿವೇಕಿಯೆಂದು ವ್ಯವಹಾರವಿಲ್ಲವಾದುದರಿಂದ ಶರೀರವುಳ್ಳವನೇ ವಿವೇಕಿಯೆಂದು ಹೇಳಪಡುವನು. ಅಂತಪ್ಪ ವಿವೇಕಿಗೂ ದುಃಖವುಂಟೇ? ಎಂದರೆ— ಉಂಟು. ಅದೆಂತೆಂದರೆ ? ಹೇಳೇವು. ವಿವೇಕಿಗೂ ಹಸಿವು, ನೀರಡಿಕೆಗಳು, ಶೀತೋಷ್ಣಾದಿದ್ವಂದ್ವದುಃಖಗಳೂ, ಹೊಟ್ಟೆಯ ನೋವು, ತಲೆಯ ನೋವು, ಕಣ್ಣು ಕೈಕಾಲು ಮೊದಲಾದ ನೋವುಗಳು ವ್ಯಾಘ್ರವೃಶ್ಚಿಕಸರ್ಪಾದಿಗಳಿಂದ ಬಂದಂಥ ಭಯಕಂಪಾದಿಗಳು-ಇವುಮೊದಲಾದುವೆಲ್ಲವೂ ಉಂಟಾದಕಾರಣ ವಿವೇಕಿಗೂ ದುಃಖವುಂಟು. ಹಾಗಾದರೆ ವಿವೇಕಿಗೂ ಅವಿವೇಕಿಗೂ ಭೇದವಾವುದೆಂದರೆ, ಹೇಳೇವು. ವಿವೇಕಿಯಾದಂಥವನು ಸರ್ವದುಃಖಗಳನ್ನು ಅಂತಃಕರಣನಿಷ್ಠವಾಗಿಯೂ, ಸಾಕ್ಷಿಯಾದ ತನಗಿಲ್ಲವೆಂತಲೂ ನೋಡುವನು; ಅವಿವೇಕಿಯಾದಂಥವನು ಅನ್ಯನಿಷ್ಠವಾದ ಈ ದುಃಖಗಳೆಲ್ಲವನ್ನೂ ತನ್ನಲ್ಲಿ ಆರೋಪಿಸಿಕೊಂಡು, ಹೆಂಡತಿಮಕ್ಕಳು ಸುಖದಲ್ಲಿದ್ದರೆ ತಾನು ಸುಖದಲ್ಲಿ ಇದ್ದೇನೆಂತಲೂ, ಹೆಂಡತಿಮಕ್ಕಳು ನಾಶವಾದರೆ ತಾನು ನಾಶವಾದೆನೆಂತಲೂ, ತಪಿಸುತ್ತಿದ್ದಾನೆಯಾದಕಾರಣ ವಿವೇಕಿಗೂ ಅವಿವೇಕಿಗೂ ಭೇದವುಂಟು ಎಂಬುದು ಸಿದ್ಧವಾಯಿತು. ಹಾಗಾದರೆ, ದೇವತೆಗಳಿಗೆ ದುಃಖವುಂಟೇ, ಎಂದರೆ— ಉಂಟು. ಅದೆಂತೆಂದರೆ ? ದೇವತೆಗಳಿಗೆ ಶರೀರವುಂಟೋ ಇಲ್ಲವೋ ಎಂದರೆ, ಉಂಟು. ಅದಾವುದೆಂದರೆ, ಹೇಳೇವು. ದೇವತೆಗಳು ಉಂಟೆಂಬ ನಿಶ್ಚಯವು ಏತರಿಂದ ತಿಳಿಯಪಡುತ್ತ ಇದೆ ಎಂದರೆ,— ಶಾಸ್ತ್ರದಿಂದಲೇ ತಿಳಿಯಪಡುತ ಇದೆ. ಶಾಸ್ತ್ರವೇ ಅವರಿಗೆ ಶರೀರವುಂಟೆಂತಲೂ ದುಃಖವುಂಟೆಂತಲೂ ಹೇಳುತ್ತ ಇದೆಯಾಗಲಾಗಿ, ದೇವತೆಗಳಿಗೂ ದುಃಖವುಂಟೆಂಬುದು ಸಿದ್ಧವಾಯಿತು. ಅದೆಂತೆಂದರೆ, ಹೇಳೇವು. ಅನ್ಯೋನ್ಯಯುದ್ಧದಿಂದಲೂ, ಕ್ರೂರವಾದ ಅನ್ಯೋನ್ಯಶಾಪದಿಂದಲೂ, ಒಬ್ಬನ ಐಶ್ವರ್ಯವ ಒಬ್ಬ ಬಲಾತ್ಕಾರದಿಂದ ಅಪಹರಿಸುವುದರಿಂದಲೂ, ಒಬ್ಬನ ಹೆಂಡತಿಯ ಒಬ್ಬ ಸ್ವೀಕರಿಸುವುದರಿಂದಲೂ, ರಾಕ್ಷಸರು ಬಂದು ದೇಶಕೋಶಗಳೆಲ್ಲವನು ಕಟ್ಟಿಕೊಂಡು ಹೋಗಿ ಸಂಕಲೆಯ ಹಾಕುವುದರಿಂದಲೂ, ರಾಕ್ಷಸರಿಗೆ ಭೃತ್ಯರಾಗಿ ಇರುವುದರಿಂದಲೂ, ಪುಣ್ಯಕರ್ಮವು ಕ್ಷೀಣವಾಗಿ ಬರುತ್ತಿರಲಾಗಿ ತಮಗೆ ನಾಶಬರುತ್ತಿದೆಯೆಂಬ ಭಯವಿರುವುದರಿಂದ

ಲೂ, ಇವು ಮೊದಲಾದಂಥ ದುಃಖಗಳು ದೇವತೆಗಳಿಗೆ ಉಂಟೆಂದು ಶ್ರುತಿ ಸ್ಮೃತೀತಿಹಾಸಪುರಾಣಗಳು ಹೇಳುತ್ತಾ ಇವೆಯಾಗಲಾಗಿ, ದೇವತೆಗಳಿಗೆ ದುಃಖವುಂಟೆಂದು ಹೇಳಬಹುದಲ್ಲ. ದೇವತೆಗಳಿಗೆ ದುಃಖವುಂಟಾಯಿತಾದರೆ, ನಮಗೆ ಉಪಾಸ್ಯರು ಹೇಗೆ ಆದಾರು ? ಕೇಳಿದ ಅಭೀಷ್ಟವ ಹೇಗೆ ಕೊಟ್ಟಾರು ?— ಎಂದರೆ, ಹೇಳೇವು. ರಾಜಪ್ರಭೃತಿಗಳು ತಾವು ದುಃಖವುಂಟಾದವರಾದ ಹೊತ್ತಿಗೂ ಐಶ್ವರ್ಯವುಂಟಾದವರಾದಕಾರಣ ನಮಗೆ ಉಪಾಸ್ಯರಾಗಿ ಇಷ್ಟಫಲವನ್ನು ಹೇಗೆ ಕೊಡುತ್ತಾ ಇದ್ದಾರೆಯೋ, ಹಾಗೆಯೇ ದೇವತೆಗಳು ತಾವು ದುಃಖಿಗಳಾದ ಹೊತ್ತಿಗೂ ಯೋಗ್ಯೈಶ್ವರ್ಯಸಂಪನ್ನರಾದುದರಿಂದ ನಮಗೆ ಉಪಾಸ್ಯರಾಗಿ ಇಷ್ಟಫಲವನ್ನು ಕೊಡತಕ್ಕವರಹುದಲ್ಲ. ಅದಂತಿರಲಿ. ದೇವತೆಗಳು ಆನಂದಸ್ವರೂಪಿಗಳೆಂದು ಶಾಸ್ತ್ರ ಹೇಳುತ್ತಾ ಇದೆಯಷ್ಟೆ; ಅದಕ್ಕೆ ತಾತ್ಪರ್ಯವಾವುದೆಂದರೆ, ಹೇಳೇವು. ವಿವೇಕಿಯಾದಂಥವನು ಶರೀರದೊಡನೆ ಕೂಡಿಕೊಂಡಿರ್ದ ಹೊತ್ತಿಗೂ, ದುಃಖವನುಳ್ಳವನಾದ ಹೊತ್ತಿಗೂ ಹೇಗೆ ದುಃಖವನ್ನು ಅಂತಃಕರಣನಿಷ್ಠವಾಗಿ ನೋಡುತ್ತಾ ಇದ್ದಾನೆಯೋ, ಹಾಗೆ ಉತ್ಕೃಷ್ಟರಾದ ದೇವತೆಗಳು ದುಃಖವನ್ನು ಅಂತಃಕರಣನಿಷ್ಠವಾಗಿ ನೋಡುವರು. ಆ ದುಕಾರಣ ಅವರನ್ನು ಆನಂದಸ್ವರೂಪಿಗಳೆಂದು ಹೇಳಬಹುದು. ಅನಂತರದಲ್ಲಿ ದೇವತೆಗಳಿಗೆ ದುಃಖವುಂಟೆಂಬ ಶಾಸ್ತ್ರಕ್ಕೆ ತಾತ್ಪರ್ಯವಾವುದೆಂದರೆ, ಹೇಳೇವು. ಎಲ್ಲೆಲ್ಲಿ ಶರೀರಪರಿಗ್ರಹವುಂಟೋ ಅಲ್ಲಲ್ಲಿ ಎಲ್ಲಾ ದುಃಖವುಂಟೆಂದು ವ್ಯಾಪ್ತಿ. ಹಿರಣ್ಯಗರ್ಭಶರೀರಪರ್ಯಂತವೂ ದುಃಖಾಕ್ರಾಂತವಾಗಿಯೇ ಇರುವುದು. ಅದುಕಾರಣ ಸಶರೀರಮುಕ್ತ್ಯರ್ಥವಾಗಿ ಯತ್ನಮಾಡಬಾರದು, ಅಶರೀರಮುಕ್ತ್ಯರ್ಥವಾಗಿ ಯತ್ನವ ಮಾಡಬೇಕೆಂದು ಆ ಶಾಸ್ತ್ರಕ್ಕೆ ತಾತ್ಪರ್ಯವು. ಆಗಲಾಗಿ, ಅನಂತರದಲ್ಲಿ ಸಶರೀರಮುಕ್ತಿಯೋಪಾದಿಯಾಗಿ ಅಶರೀರಮುಕ್ತಿಯೆಂದು ಒಂದು ಉಂಟಾಗಿ ಇಲ್ಲ. ಅಶರೀರಮುಕ್ತಿಗೆ ಯತ್ನವ ಮಾಡಬೇಕು. ಅಶರೀರಮುಕ್ತಿಯು ಬೇಱವುಂಟೆಂದು ಎಲ್ಲಿಯೂ ಕಾಣೆವಲ್ಲ. ಹಾಗಾದರೆ ಸಶರೀರಮುಕ್ತಿಮಾತ್ರ ಉಂಟು, ಅಶರೀರಮುಕ್ತಿಯಿಲ್ಲೆಂದು ಸಿದ್ಧವಾಯಿತಾದಕಾರಣ ಅದಕ್ಕೆ ಪ್ರಮಾಣವುಂಟೇ ಎಂದರೆ, ಉಂಟು. ಅದೆಂತೆಂದರೆ— ಸಶರೀರಮುಕ್ತರಾದಂಥ ನಕ್ಷತ್ರಾದಿಗಳೆಲ್ಲವೂ ಪ್ರತ್ಯಕ್ಷವಾಗಿ ಕಾಣಿಸುವಹಾಗೆ ಅಶರೀರಮುಕ್ತರಾದಂಥವರು ಕಾಣಿಸುವುದಿಲ್ಲ

ಪಾದುದರಿಂದಲೂ; ಯೋಗಿಗಳಾದಂಥವರು ಯೋಗಮಹಿಮೆಯಿಂದ ಲೋಕಾಂತರಕ್ಕೆ ಹೋಗಿ ಸಶರೀರಮುಕ್ತರಾದವರನು ಕಂಡುಬಂದರೆಂದು ಶಾಸ್ತ್ರದಲ್ಲಿ ಹೇಳಿದಹಾಗೆ ಅಶರೀರಮುಕ್ತನಾದಂಥವನ ಯೋಗಿಗಳು ಕಂಡುಬಂದರೆಂದು ಶಾಸ್ತ್ರದಲ್ಲಿ ಹೇಳಲಿಲ್ಲವಾದುದರಿಂದಲೂ; ಸಶರೀರಮುಕ್ತನಾದಂಥವನು ಅನೇಕಕಾಲ ಸಶರೀರಮುಕ್ತನಾಗಿದ್ದು ತಿರಿಗಿ ಬಂದನೆಂದು ಶಾಸ್ತ್ರದಲ್ಲಿ ಹೇಳಿದಹಾಗೆ ಅಶರೀರಮುಕ್ತನಾದಂಥವನು ಅನೇಕಕಾಲ ಅಶರೀರಮುಕ್ತನಾಗಿದ್ದು ತಿರಿಗಿ ಬಂದನೆಂದು ಶಾಸ್ತ್ರದಲ್ಲಿ ಹೇಳಲಿಲ್ಲವಾದುದರಿಂದಲೂ: ಸಶರೀರಮುಕ್ತಿಯುಂಟು, ಅಶರೀರಮುಕ್ತಿಯಿಲ್ಲವೆಂದು ಹೇಳುವಣವೆಂದರೆ, ಹಾಗೆ ಹೇಳಕೂಡದು. ಅದೇಕೆಂದರೆ ? ಸುಷುಪ್ತಿಸುಖವು ಸಮಸ್ತಪ್ರಾಣಿಗಳಿಗೂ ಹೇಗೆ ಪ್ರತ್ಯಕ್ಷವೋ ಹಾಗೆ ಅಶರೀರಮುಕ್ತಿಯು ಪ್ರತ್ಯಕ್ಷವೆಂದೇ ಹೇಳಬೇಕು. ಸುಷುಪ್ತಿಸುಖವು ಪ್ರತ್ಯಕ್ಷವಾದರೆ, ಅದರೋಪಾದಿಯಲ್ಲಿ ಮುಕ್ತಿಸುಖವು ಪ್ರತ್ಯಕ್ಷವಾಗುವುದೇ? ಎಂದರೆ, ಅದ್ವಿತೀಯಸುಖಸ್ವರೂಪವಾದಂಥದು ಮುಕ್ತಿ ಸುಷುಪ್ತಿಯಲ್ಲೂ ಸಮವಾಗಿ ಇದೆಯಾಗಲಾಗಿ ತನಗೆ ಸುಷುಪ್ತಿಸುಖವು ಪ್ರತ್ಯಕ್ಷವಾಗುವಲ್ಲಿ ಮುಕ್ತಿಸುಖವು ಪ್ರತ್ಯಕ್ಷವಾಗಬಹುದಲ್ಲಾ. ಹಾಗಾದರೆ ಸುಖಪ್ರತ್ಯಕ್ಷವು ಸುಷುಪ್ತಿಮುಕ್ತಿಗಳಲ್ಲಿ ಸಮವಾಗಿದೆಯಾಗಲಾಗಿ ಸುಷುಪ್ತಿಯನೆ ಮುಕ್ತಿಯೆಂದು ಹೇಳುವಣವೆಂದರೆ, ಸುಷುಪ್ತಿಯಲ್ಲಿ ಅಜ್ಞಾನವೂ ಪುನರುತ್ಥಾನವೂ ಇವೆಯಾಗುದರಿಂದಲೂ, ಮುಕ್ತಿಯಲ್ಲಿ ಅಜ್ಞಾನವೂ ಪುನರುತ್ಥಾನವೂ ಇಲ್ಲವಾದುದರಿಂದಲೂ, ಸುಷುಪ್ತಿಯನೆ ಮುಕ್ತಿಯೆಂದು ಹೇಳಕೂಡದು. ಮತ್ತೇನೆಂದರೆ? ಸುಷುಪ್ತಿಸುಖದಂತೆ ಮುಕ್ತಿಸುಖವು ಪ್ರತ್ಯಕ್ಷವಾಗಿದೆಯಾಗಲಾಗಿ ಸಶರೀರಮುಕ್ತಿಗಿಂತಲೂ ಅಶರೀರಮುಕ್ತಿಯೇ ಪ್ರತ್ಯಕ್ಷವಾಯಿತು. ಮತ್ತು ಯೋಗಿಯಾದಂಥವನು ಅಶರೀರಮುಕ್ತನ ಕಂಡು ಬಂದು ಹೇಳದೆ ಇರುವ ಭಾವವು, ಅಶರೀರಮುಕ್ತನಾದಂಥವನು ನಾನು ಅನೇಕಕಾಲ ಅಶರೀರಮುಕ್ತನಾಗಿ ಇದ್ದು ತಿರಿಗಿ ಬಂದೆನೆಂದು ಹೇಳದೇ ಇರುವ ಭಾವವು, ಅಶರೀರಮುಕ್ತಿಯುಂಟೆಂಬುದನು ಹೇಳುತ್ತ ಇವೆ. ಸಶರೀರಮುಕ್ತಿಯುಂಟೆಂಬುದರಲಿ ಯಾವ ನಕ್ಷತ್ರಾದಿಗಳು ಪ್ರಮಾಣವಾಗಿ ಹೇಳಲ್ಪಟ್ಟವೋ, ಅವೆಲ್ಲವೂ ಸ್ವರ್ಗಲೋಕವಿಷಯಗಳಾಗಿ ಅನಿತ್ಯಗಳಾಗಿ ಪ್ರತ್ಯಕ್ಷಗಳಾಗಿ ಕಾಣಿಸಡುತಿವೆಯಾದುದರಿಂದಲೂ, ಬ್ರಹ್ಮಲೋಕವಿಷಯ

ಗಳಲ್ಲದೆ ಹೋದುದರಿಂದಲೂ, ಈ ನಕ್ಷತ್ರಾದಿಗಳು ಸಶರೀರಮುಕ್ತಿಯುಂಟೆಂಬುದರಲ್ಲಿ ಪ್ರಮಾಣವಲ್ಲ; ಶಾಸ್ತ್ರಮಾತ್ರವೇ ಪ್ರಮಾಣವೆನಿಸುವುದು, ಶಾಸ್ತ್ರಹೊರತಾಗಿ ಪ್ರಮಾಣಾಂತರವಿಲ್ಲ. ಅನಂತರದಲ್ಲಿ ಅಶರೀರಮುಕ್ತಿಯುಂಟೆಂಬುದರಲ್ಲಿ ಶಾಸ್ತ್ರಯುಕ್ತ್ಯನುಭವಗಳು ಇವೆಯಾಗಲಾಗಿ ಅಶರೀರಮುಕ್ತಿಗೋಸ್ಕರಲೇ ಯತ್ನವ ಮಾಡಬೇಕು, ಸಶರೀರಮುಕ್ತಿಗೋಸ್ಕರ ಯತ್ನವ ಮಾಡಬಾರದು, ಮಾಡಿದರೆ ದುಃಖವು ಹೋಗದೆಂಬುವುದರಲ್ಲಿ ಶಾಸ್ತ್ರಯುಕ್ತಿ ಹೇಳಲ್ಪಟ್ಟಿತು. ಇದಕ್ಕೆ ಅನುಭವವನ್ನು ಹೇಳೇವು. ಅದಾವುದೆಂದರೆ:— ಸುಷುಪ್ತ್ಯವಸ್ಥೆಯಲ್ಲಿ ಶರೀರಪರಿಗ್ರಹವಿಲ್ಲವಾಗಿ ದುಃಖವು ಇಲ್ಲ. ಜಾಗ್ರತ್ಸ್ವಪ್ನಗಳಲ್ಲಿ ಶರೀರಪರಿಗ್ರಹವಿದೆಯಾದಕಾರಣ ದುಃಖವು ಅನುಭವಿಸಲ್ಪಡುತ್ತ ಇದೆ. ಅದೆಂತೆಂದರೆ ? ಶರೀರಪರಿಗ್ರಹವು ಎಲ್ಲೆಲ್ಲಿ ಉಂಟೋ ಅಲ್ಲೆಲ್ಲವು ದುಃಖವುಂಟೆಂದು, ಶರೀರಪರಿಗ್ರಹವು ಎಲ್ಲಿ ಇಲ್ಲವೋ ಅಲ್ಲಿ ದುಃಖವು ಇಲ್ಲವೆಂದು, ಅನ್ವಯವ್ಯತಿರೇಕವ್ಯಾಪ್ತಿಯಿಂದ ಸಿದ್ಧವಾಯಿತು. ಹೀಗೆ ಆತ್ಮನಿಗೆ ಶರೀರಪರಿಗ್ರಹದಿಂದಲೇ ದುಃಖವು ಬರುತ್ತಿದೆಯಾದಕಾರಣ ಆತನಿಗೆ ದುಃಖವು ಸ್ವಾಭಾವಿಕವೆಂದು ಹೇಳಕೂಡದು, ಆಗಂತುಕವೆಂದೇ ಹೇಳಬೇಕು.

ಈ ಶರೀರವು ಏತರಿಂದ ಬಂದಂಥದು? ಎಂದರೆ, ಕರ್ಮದೊಡನೆ ಕೂಡಿದ ಪಂಚಭೂತಗಳಿಂದಲೇ ಪಂಚೀಕೃತದಿಂದ ಬಂದಂಥದೆಂದು ತೋರುತಿದೆ. ಹಾಗೆ ಏತಕೆ ಹೇಳಬೇಕು? ಕೇವಲ ಪಂಚೀಕೃತಪಂಚಮಹಾಭೂತಗಳಿಂದಲೇ ಶರೀರ ಬಂದಿತೆಂದು ಹೇಳುವಣವೆಂದರೆ, ಹಾಗೆ ಹೇಳಕೂಡದು. ಅದೆಂತೆಂದರೆ? ಸರ್ವದಲ್ಲಿಯೂ ಪಂಚೀಕೃತಪಂಚಮಹಾಭೂತಗಳು ಇವೆಯಾಗಲಾಗಿ ಅಲ್ಲಿ ಎಲ್ಲವು ಶರೀರವು ಹುಟ್ಟಬೇಕು; ಹುಟ್ಟಲಿಲ್ಲವಲ್ಲ. ಅದುಕಾರಣ ಕೇವಲ ಪಂಚಮಹಾಭೂತಗಳಿಂದ ಶರೀರವು ಬಂದಿತೆಂದು ಹೇಳಕೂಡದು. ಹಾಗೆ ನಾವು ಹೇಳಲಿಲ್ಲ. ಪಂಚಮಹಾಭೂತಗಳು ಶುಕ್ಲಶೋಣಿತಾಕಾರವಾಗಿ ಎಲ್ಲಿ ಪರಿಣಮಿಸುತ್ತಿವೆಯೋ ಅಲ್ಲಿಯಾದರೂ ಶರೀರವು ಹುಟ್ಟುವುದೆಂದು ಹೇಳುವಣವೆಂದರೆ, ಹಾಗೆ ಹೇಳಕೂಡದು. ಅದೆಂತೆಂದರೆ? ನಿತ್ಯವೂ ಸ್ತ್ರೀಪುರುಷರ ಸಂಯೋಗದಿಂದ ಶುಕ್ಲಶೋಣಿತಗಳು ಹುಟ್ಟುತ್ತಾ ಇವೆಯಾಗಲಾಗಿ ಆಗೆಲ್ಲವೂ ಒಂದೊಂದು ಶರೀರವು ಹುಟ್ಟಬೇಕು: ಹುಟ್ಟಲಿಲ್ಲವಾಗಿ ಹಾಗೆ ಹೇಳಕೂಡದು. ಹಾಗಾದರೆ ಶುಕ್ಲಶೋಣಿತಗಳು ಇಲ್ಲವೆಂದು

ಹೇಳುವಣವೆಂದರೆ, ಪ್ರತ್ಯಕ್ಷವಾಗಿ ಕಾಣಿಸುತ್ತದೆಯಾಗಿ ಹಾಗೆಹೇಳಕೂ
ಡದು. ಶುಕ್ಲಶೋಣಿತಗಳಿಗೆ ಸಂಯೋಗವಿಲ್ಲದಿದ್ದರೆ ಸ್ತ್ರೀಪುರುಷರಿಗೆ ರತಿ
ಕೂಡದಾಗಿ ಸಂಭೋಗವಿಲ್ಲವೆಂದು ಹೇಳಕೂಡದು. ಹಾಗಾದರೆ ಆ ಶುಕ್ಲ
ಶೋಣಿತವೇ ದೇಶಕಾಲಗಳನ್ನಪೇಕ್ಷಿಸಿ ಶರೀರಾಕಾರವಾಗುವುದೆಂದು ಹೇ
ಳುವಣವೆಂದರೆ ಹಾಗೆ ಹೇಳಕೂಡದು. ಹಾಗೆ ಹೇಳಕೆಯಾದರೆ ಪ್ರಾಣಿಗಳಿ
ಗೆ ವೈಚಿತ್ರ್ಯವಿಲ್ಲದೆ ಇರಬೇಕು. ಹಾಗಾದರೆ ಪ್ರಾಣಿಗಳಿಗೆ ವೈಚಿತ್ರ್ಯವುಂ
ಟೇ, ಎಂದರೆ— ಒಬ್ಬರಹಾಗೆ ಒಬ್ಬರು ಇಲ್ಲವಾಗಿ, ಪ್ರಾಣಿಗಳಿಗೆ ವೈಚಿ
ತ್ರ್ಯಉಂಟೆಂಬುದು ಸಿದ್ಧವಾಯಿತು. ಆದರೆ ಪ್ರಾಣಿವೈಚಿತ್ರ್ಯವು ದೇಶಕಾ
ಲಾದಿಗಳಿಂದ ಬರುತ್ತಿದೆಯೆಂದು ಹೇಳುವಣವೆಂದರೆ, ದೇಶಕಾಲಾದಿಗಳು ಸ
ರ್ವಪ್ರಾಣಿಗಳಿಗೂ ಸಾಧಾರಣಕಾರಣವಾಗಿದೆಯಾಗಲಾಗಿ ದೇಶಕಾಲಾದಿಗ
ಳಿಂದ ಜಗದ್ವೈಚಿತ್ರ್ಯ ಬರುತ್ತಲಿದೆ ಎಂದು ಹೇಳಕೂಡದು. ಆದೇಶಕಾ
ಲಾದಿಗಳು ಸಾಧಾರಣಕಾರಣವೇ ಆಗಲಿ, ಅದರಿಂದ ಜಗದ್ವೈಚಿತ್ರ್ಯ
ವು ಬರುವುದೇ, ಎಂದರೆ— ಸಾಧಾರಣಕಾರಣವಾದಂಥ ದೇಶಕಾಲಾದಿಗಳಿಂ
ದ ಘಟಾದಿವೈಚಿತ್ರ್ಯವ ಕಾಣೆವಾಗಲಾಗಿ ದೇಶಕಾಲಾದಿಗಳಿಂದ ಜಗದ್ವೈ
ಚಿತ್ರ್ಯ ಬರುತ್ತಲಿದೆ ಎಂದು ಹೇಳಕೂಡದು. ಮತ್ತಾವುದರಿಂದ ಘಟಾದಿ
ವೈಚಿತ್ರ್ಯವು ಬರುತ್ತ ಇದೆ? ಎಂದರೆ ಅಸಾಧಾರಣಕಾರಣವಾದ ಕುಲಾಲ
ವ್ಯಾಪಾರವೈಚಿತ್ರ್ಯದಿಂದಲೇ ಬಂದಿತೆಂದು ತೋರುತ್ತಾ ಇದೆ. ಆ ರೀತಿಯಾ
ಗಿ ಪಂಚೀಕೃತಪಂಚಮಹಾಭೂತಂಗಳು ಶುಕ್ಲಶೋಣಿತಾಕಾರವಾಗಿ ಪರಿ
ಣಾಮಿಸಿ ಸಾಧಾರಣಕಾರಣವಾದ ದೇಶಕಾಲಗಳನಪೇಕ್ಷಿಸಿದ ಹೊತ್ತಿಗೂ ಅ
ಸಾಧಾರಣಕಾರಣವಾದ ಕಾರಣಾಂತರವನು ಅಪೇಕ್ಷಿಸಿಯೇ ವಿಚಿತ್ರಶರೀರಾ
ದ್ಯಾಕಾರವಾಗಿ ಪರಿಣಮಿಸುತ್ತ ಇದೆಯೆಂತಲೇ ಹೇಳಬೇಕು. ಆ ಕಾರಣಾಂ
ತರವಾವುದೆಂದರೆ? ಕರ್ಮವೇ ಆಗತಕ್ಕದು. ಹಾಗಾದರೆ, ಕರ್ಮಕ್ಕೆ ಇಂಥ ಸಾ
ಮರ್ಥ್ಯವಿದ್ದೀತಾಗಿ ಕೇವಲ ಕರ್ಮದಿಂದಲೇ ಶರೀರ ಬಂದಿತೆಂದು ಹೇಳುವಣ
ವೆಂದರೆ, ಕರ್ಮವು ನಿರಾಶ್ರಯವಾಗಿ ಇರಲಿಲ್ಲವಾದುದರಿಂದಲೂ, ಕ್ಷಣಿಕವಾಗಿ
ಸ್ಥಾಯಿಯಾಗಿ ಇದೆಯಾದುದರಿಂದಲೂ, ಕೇವಲವಾದ ಕರ್ಮದಿಂದ ಶರೀರ ಬಂ
ದಿತೆಂದು ಹೇಳಕೂಡದು. ಮತ್ತೇನೆಂದರೆ? ಕರ್ಮದೊಡನೆ ಕೂಡಿದಂಥ ಪಂ
ಚೀಕೃತಪಂಚಮಹಾಭೂತಂಗಳಿಂದ ಶರೀರ ಬಂದಿತೆಂದು ಹೇಳಬೇಕು. ಹೀ
ಗೆ ಹೇಳುವುದರಿಂದ ಎರಡುಕಾರಣದ ದೆಸೆಯಿಂದ ಶರೀರ ಹುಟ್ಟಿತೆಂದು ಹೇ

ಳಪಟ್ಟಿತು. ಈ ಎರಡುಕಾರಣಗಳ ಒಳಗೆ ನಿಮಿತ್ತಕಾರಣವಾದ ಕರ್ಮವೈಚಿತ್ರ್ಯದಿಂದ ಶರೀರವೈಚಿತ್ರ್ಯವು ಬರುತ್ತಿದೆ. ಈ ಯರ್ಥದಲ್ಲಿ ದೃಷ್ಟಾಂತವ ಹೇಳೇವು. ಅದೆಂತೆಂದರೆ? ಘಟವು ಹುಟ್ಟುವುದಕ್ಕೆ ಕೇವಲ ಉಪಾದಾನಕಾರಣವಾದ ಮೃತ್ಸ್ಯವಿನಿಂದಲೂ, ಕೇವಲ ನಿಮಿತ್ತಕಾರಣವಾದ ಕುಲಾಲವ್ಯಾಪಾರಮಾತ್ರದಿಂದಲೂ ಕಾರ್ಯವು ಹೇಗೆ ಹುಟ್ಟಲಾರದೋ, ಕುಲಾಲವ್ಯಾಪಾರವು ಮಣ್ಣನ್ನು ಆಶ್ರಯಿಸುವುದರಿಂದ ಕಾರ್ಯವು ಹೇಗೆ ಹುಟ್ಟುತ್ತಲಿದೆಯೋ, ಮಣ್ಣು ಏಕರೂಪವಾಗಿ ಇದ್ದಹೊತ್ತಿಗೂ ಕುಲಾಲವ್ಯಾಪಾರದಿಂದ ಕಾರ್ಯದಲ್ಲಿ ಹೇಗೆ ವೈಚಿತ್ರ್ಯವು ಬರುತ್ತಲಿದೆಯೋ– ಹಾಗೆ ದಾರ್ಷ್ಟಾಂತಿಕದಲ್ಲೂ ಕೇವಲ ಪಂಚಮಹಾಭೂತಗಳಿಂದಲೂ ಶರೀರ ಬರಲಾರದು, ಕೇವಲ ಕರ್ಮದಿಂದಲೂ ಶರೀರ ಹುಟ್ಟಲಾರದು. ಕರ್ಮದೊಡನೆ ಕೂಡಿಕೊಂಡಿರುವಂಥ ಪಂಚೀಕೃತಪಂಚಮಹಾಭೂತಗಳಿಂದಲೇ ಶರೀರ ಹುಟ್ಟುತ್ತಾ ಇದೆ; ಕರ್ಮವೈಚಿತ್ರ್ಯದಿಂದಲೇ ಶರೀರವೈಚಿತ್ರ್ಯವು ಬರುತ್ತಾ ಇದೆ–ಎಂದು ತಿಳಿದುಕೊಂಬುದು. ದೃಷ್ಟಾಂತದಲ್ಲಿ ಉಪಾದಾನಕಾರಣವಾದಂಥ ಮಣ್ಣು ಇದ್ದಹೊತ್ತಿಗೂ ನಿಮಿತ್ತಕಾರಣವಾದಂಥ ಕುಲಾಲವ್ಯಾಪಾರವಿಲ್ಲದೆ ಹೋಯಿತಾದರೆ ಘಟವು ಹೇಗೆ ಹುಟ್ಟುವುದಿಲ್ಲವೋ, ಹಾಗೆ ದಾರ್ಷ್ಟಾಂತಿಕದಲ್ಲೂ ಉಪಾದಾನಕಾರಣವಾದ ಈಶ್ವರಸೃಷ್ಟವಾಗಿರುವಂಥ ಭೂತಗಳು ಕಾರ್ಯವಾದಂಥ ಭೌತಿಕಪ್ರಪಂಚವು ಹೇಗೆ ಇದ್ದಹೊತ್ತಿಗೂ 'ಆತ್ಮನೇ ತಾನು ಎಂಬ ಜ್ಞಾನದಿಂದ, ನಿಮಿತ್ತಕಾರಣವಾದ ಕರ್ಮವು ಆವನಿಗೆ ನಾಶವಾಗಿ ಹೋಗುತ್ತಿದೆಯೋ, ಆತನಿಗೆ ಶರೀರವು ಬರಲಾರದು. ಅದೆಂತೆಂದರೆ? ಪ್ರಪಂಚವು ಕಾಲತ್ರಯದಲ್ಲೂ ಇಲ್ಲದ ಹೊತ್ತಿಗೂ ಅದ್ವಿತೀಯನಾದ ಆತ್ಮವೇ ತಾನು ಎಂಬ ಜ್ಞಾನವಿಲ್ಲದುದರಿಂದ ತೋರುತ್ತಾ ಇದೆ. ಹಾಗೆ ತೋರುವುದಾದರೂ ಇಲ್ಲವೆಂಬ ಜ್ಞಾನವು ಆವನಿಗೆ ಬರುತ್ತಿದೆಯೋ ಅವನಿಗೆ ಜನ್ಮವಿಲ್ಲವೆಂಬುದು ಅನ್ವಯವ್ಯತಿರೇಕವ್ಯಾಪ್ತಿಯಿಂದ ಸಿದ್ಧವಾಯಿತು. ಅನ್ವಯವ್ಯತಿರೇಕವೆನೆಂದರೆ, ಹೇಳೇವು. ಅದೆಂತೆಂದರೆ— ಕರ್ಮವುಂಟಾದರೆ ಶರೀರವುಂಟು, ಕರ್ಮವಿಲ್ಲದಿದ್ದರೆ ಶರೀರವಿಲ್ಲವೆಂಬಂಥದು, ಅನ್ವಯವ್ಯತಿರೇಕವೆನಿಸುವುದು. ಅದು ಎಲ್ಲಿ ಅನುಭವಿಸಲ್ಪಟ್ಟಿತೆಂದರೆ– ಜಾಗ್ರತ್ಸ್ವಪ್ನಗಳಲ್ಲಿ ಸ್ಥೂಲಸೂಕ್ಷ್ಮಭೋಗಪ್ರದವಾದ ಕರ್ಮವು ಇದೆಯಾಗಲಾಗಿ ಶರೀರವು ಇದೆ, ಸುಷುಪ್ತ್ಯವಸ್ಥೆಯಲ್ಲಿ ಸ್ಥೂಲ

ಸೂಕ್ಷ್ಮ ಭೋಗಪ್ರದವಾದ ಕರ್ಮವು ಇಲ್ಲವಾಗಲಾಗಿ ಶರೀರವು ಇಲ್ಲ. ಆದ್ದರಿಂದ ಕರ್ಮವುಂಟಾದರೆ ಶರೀರವುಂಟು, ಕರ್ಮವು ಇಲ್ಲದಿದ್ದರೆ ಶರೀರವು ಇಲ್ಲ ಎಂಬ ಅರ್ಥವು ಶ್ರುತಿಯುಕ್ತ್ಯನುಭವಗಳಿಂದ ಹೇಳಲ್ಪಟ್ಟಿದ್ದಾಯಿತು.

ಶ್ಲೋ॥ ಸಶರೀರಸ್ಯ ದುಃಖಿತ್ವವ್ಯಾಪ್ತಿರವ್ಯಾಹತಾ ಯತಃ ।
ಅತಃ ಶರೀರಮುಕ್ತ್ಯರ್ಥಂ ಯತ್ನಂ ಕುರ್ಯಾದತಂದ್ರಿತಃ ॥ ೧

ನ ಭೂತಪಂಚಕಾನ್ನಾಪಿ ಕರ್ಮಣಃ ಕೇವಲಾದಪಿ ।
ಉಭಾಭ್ಯಾಂ ಮಿಳಿತಾಭ್ಯಾಂ ತು ಶರೀರಮುಪಜಾಯತೇ ॥ ೨

ತಚ್ಚ ಕರ್ಮಾನವಾಪ್ತಿಸ್ಸ್ಯಾತ್ ಜ್ಞಾನಾದೇವ ನ ಚಾನ್ಯತಃ ॥
ಇತಿ ಯಸ್ಯ ದೃಢಾ ಬುದ್ಧಿಃ ಸ ಮುಕ್ತಸ್ಸ ಚ ಪಂಡಿತಃ ॥ ೩
ಅತಃ ಸರ್ವಪ್ರಯತ್ನೇನ ಜ್ಞಾನಾಭ್ಯಾಸರತೋ ಭವೇತ್ ॥

ಇಂತೀ ಕನ್ನಡಭಾಷೆಯೊಳ್ ವಿರಚಿಸಿದ ವಾಸುದೇವಯತೀಂದ್ರಪ್ರೋಕ್ತವಪ್ಪ
ವೇದಾಂತವಿವೇಕಸಾರದಲ್ಲಿ
ಶರೀರನಿರೂಪಣಮಂ ಪೇಳ್ದುದು,
ಚತುರ್ಥಪ್ರಕರಣಂ.

---

## ಐದನೆಯ ಪ್ರಕರಣ.

### ॥ ಕರ್ಮಪ್ರಕರಣ ॥

---

ಕರ್ಮವಿಷಯವಿಧವೊಂದು ವಿಚಾರಿಸುತ್ತ ಇದ್ದೇನೆ. ಅದೆಂತೆಂದರೆ:— ಪುಣ್ಯಕರ್ಮವೆಂತಲೂ, ಪಾಪಕರ್ಮವೆಂತಲೂ, ಮಿಶ್ರಕರ್ಮವೆಂತಲೂ, ಕರ್ಮವು ಮೂರುವಿಧಗಳಾಗಿರುತ್ತವೆ. ಅವುಗಳಲ್ಲಿ ಪುಣ್ಯಪಾಪವೆರಡಕ್ಕೂ, ಮಿಶ್ರಕರ್ಮಕ್ಕೂ ಫಲವಾವುದು, ಎಂದರೆ— ಹೇಳುತ್ತೇನೆ. ಅದೆಂತೆನೆ ? ಪುಣ್ಯಕರ್ಮಕ್ಕೆ ದೇವಾದಿಶರೀರಪ್ರಾಪ್ತಿ ಫಲವೆನಿಸುವುದು; ಪಾಪಕರ್ಮಕ್ಕೆ, ತಿರ್ಯಗಾದಿಶರೀರಪ್ರಾಪ್ತಿ ಫಲವೆನಿಸುವುದು. ಪುಣ್ಯೋತ್ಕರ್ಷಕ್ಕೆ ಫಲವಾವುದೆಂದರೆ, ಹಿರಣ್ಯಗರ್ಭಾದಿಶರೀರಪ್ರಾಪ್ತಿ ಫಲವೆನಿಸುವುದು; ಪುಣ್ಯಸಾಮಾನ್ಯಕ್ಕೆ

ಯಕ್ಷರಕ್ಷಃಪಿಶಾಚಾದಿಶರೀರಪ್ರಾಪ್ತಿ ಫಲವೆನಿಸುವುದು. ಪಾಪೋತ್ಕರ್ಷಕ್ಕೆ ಪರರಿಗೆ ತಾಪಕರಗಳಾದಂಥ ಗುಚ್ಛಗುಲ್ಮಯೂಕವೃಶ್ಚಿಕವನವುಕ್ಷಿಕಾದಿ ಶರೀರಪ್ರಾಪ್ತಿ ಫಲವೆನಿಸುವುದು; ಪಾಪವುಧ್ಯಮಕ್ಕೆ ಅಪ್ರಪನಸನಾರಿಕೇಳಮಹಿಷಗರ್ಧಭಾದಿಶರೀರಪ್ರಾಪ್ತಿ ಫಲವೆನಿಸುವುದು; ಪಾಪಸಾಮಾನ್ಯಕ್ಕೆ ಗೋಗಜಾಶ್ವತ್ಥತುಲಸ್ಯಾದಿಶರೀರಪ್ರಾಪ್ತಿ ಫಲವೆನಿಸುವುದು. ಮಿಶ್ರಸಾಮಾನ್ಯಕ್ಕೆ ಫಲವೇನೆಂದರೆ, — ಚಂಡಾಲಪುಲ್ಕಸವ್ಯಾಧಾದಿಶರೀರಪ್ರಾಪ್ತಿ ಫಲವೆನಿಸುವುದು; ಮಿಶ್ರಮಧ್ಯಮಕ್ಕೆ ಸ್ವಾಶ್ರಮಗಳಿಗೆ ಉಚಿತವಾದ ಶಾಸ್ತ್ರ್ಯಕರ್ಮಕರಣಗಳಿಗೆ ಯೋಗ್ಯವಾದಂಥ ಶರೀರಪ್ರಾಪ್ತಿ ಫಲವೆನಿಸುವುದು; ಮಿಶ್ರೋತ್ಕರ್ಷಕ್ಕೆ ಫಲವಾವುದೆಂದರೆ- ನಿಷ್ಕಾಮಕರ್ಮಾನುಷ್ಠಾನದಿಂ ಚಿತ್ತಶುದ್ಧಿ ಬಂದು, ಚಿತ್ತಶುದ್ಧಿದ್ವಾರಾ ಸಾಧನಚತುಷ್ಟಯಸಂಪತ್ತಿ ಬಂದು, ಸಾಧನಚತುಷ್ಟಯಸಂಪತ್ತಿದ್ವಾರಾ ಸದ್ಗುರುಲಾಭವುಂಟಾಗಿ, ಸದ್ಗುರುಲಾಭಪೂರ್ವಕವಾಗಿ ಮಾಡಲ್ಪಟ್ಟ ಶ್ರವಣಮನನನಿಧಿಧ್ಯಾಸನದಿಂ ಬಂದಂಥ ಜ್ಞಾನದ್ವಾರಾ ಜೀವನ್ಮುಕ್ತಿಸುಖವನು ಕೊಡುವಂಥ ಶರೀರಪ್ರಾಪ್ತಿಯೇ ಮಿಶ್ರೋತ್ಕರ್ಷಕ್ಕೆ ಫಲವೆನಿಸುವುದು. ಆಗಲಾಗಿ ವಿವೇಕಿಯಾದವನು ಕರ್ಮಫಲತಾರತಮ್ಯವನು ವಿಚಾರಿಸಿ ಮಿಶ್ರೋತ್ಕರ್ಷ ಹೇಗೆ ಸಿದ್ಧಿಸುವುದೋ ಹಾಗೆ ಯತ್ನವ ಮಾಡಬೇಕು. ಈ ಪುಣ್ಯಪಾಪಮಿಶ್ರರೂಪವಾದ ಕರ್ಮವು ಏತಱಿಂದ ಮಾಡಪಡುತ್ತದೆ ?- ಎಂದರೆ, ತ್ರಿವಿಧಕರಣಗಳಿಂದಲೇ ಮಾಡಲ್ಪಡುತ್ತದೆ ಎಂದು ಹೇಳಬೇಕು. ಸಮಸ್ತವಾಗಿರುವಂಥವರು— ನಾನು ಈ ಕರ್ಮವ ಮಾಡಿದೆನೆಂದು ಹೇಳುತ್ತಿದ್ದಾರಾಗಲಾಗಿ ಅವರ ಅನುಭವದಿಂದ ಆತ್ಮನಿಷ್ಠವಾಗಿ ಕರ್ತೃತ್ವವು ತೋಱುತ್ತ ಇದೆ. ಅದಱಿಂದ ಕರ್ತೃತ್ವವನು ಆತ್ಮನಿಷ್ಠವಾಗಿಯೇ ಹೇಳುವಣ, ಎಂದರೆ- ಆತ್ಮನು ನಿರ್ವಿಕಾರನಾದಕಾರಣ ನಿರ್ವಿಕಾರನಾದಂಥ ಆತ್ಮನಿಗೆ ಕರ್ತೃತ್ವವನು ಹೇಳಕೂಡದು. ಹಾಗಾದರೆ, ಈ ಕರ್ತೃತ್ವವು ಆತ್ಮನಲ್ಲಿ ತೋಱುತ್ತ ಇದೆಯಷ್ಟೆ, ಇದಕ್ಕೆ ಗತಿಯಾವುದು ?— ಎಂದರೆ, ಅನ್ಯನಿಷ್ಠವಾದ ಕರ್ತೃತ್ವವು ಅನ್ಯನಿಷ್ಠವಾಗಿಯೇ ತೋಱುವುದಱಿಂದ ಆತ್ಮನಿಗೆ ಕರ್ತೃತ್ವವನ್ನು ಆಗಂತುಕವೆಂದೇ ಹೇಳತಕ್ಕದು. ಅದಂತಿರಲಿ. ಅನ್ಯನಿಷ್ಠವಾದ ಕರ್ತೃತ್ವವು ಆತ್ಮನಲ್ಲಿ

ತೋರುತ್ತ ಇದೆ ಎಂದು ಏತಕ್ಕೆ ಹೇಳಬೇಕು? ಆತ್ಮನಿಗೆ ಸ್ವಾಭಾವಿಕವೆಂದೇ ಹೇಳುವಣ?- ಎಂದರೆ, ಹಾಗೆ ಹೇಳಕೂಡದು. ಹಾಗೆ ಹೇಳಕೆಯಾದರೆ, ಕರ್ತೃತ್ವವು ಹೋಗುವುದಕ್ಕೋಸ್ಕರ ಯಾರೂ ಯತ್ನವ ಮಾಡದೆ ಇರಬೇಕು. ಮುಮುಕ್ಷುಗಳಾದಂಥವರು ಯತ್ನವ ಮಾಡುವುದರಿಂದ ಕರ್ತೃತ್ವವನು ಸ್ವಾಭಾವಿಕವೆಂದು ಹೇಳಕೂಡದು. ಕರ್ತೃತ್ವವು ಸ್ವಾಭಾವಿಕವೇ ಆಗಲಿ, ಅದು ಹೋಗುವುದಕ್ಕೋಸ್ಕರ ಯತ್ನವ ಮಾಡಲಿ ?— ಎಂದರೆ, ಸ್ವಾಭಾವಿಕವೆಂಬುದು ಸ್ವರೂಪವಾಯಿತಾದಕಾರಣ ಸ್ವರೂಪನಾಶನಾರ್ಥವಾಗಿ ಯತ್ನವ ಮಾಡುತ್ತ ಇದ್ದಾರೆ ಎಂದು ಅರ್ಥವಾಯಿತು. ಸ್ವರೂಪನಾಶನಾರ್ಥವಾಗಿ ಯಾರೂ ಯತ್ನವ ಮಾಡುವುದಿಲ್ಲವಾಗಿ, ಸ್ವಾಭಾವಿಕಕರ್ತೃತ್ವನಿವೃತ್ತ್ಯರ್ಥವಾಗಿ ಯತ್ನವ ಮಾಡುತ್ತಲಿದ್ದಾರೆಂದು ಹೇಳಕೂಡದು. ಇಷ್ಟುಮಾತ್ರವಲ್ಲ. ಸ್ವಾಭಾವಿಕವಾದಂಥ ಕರ್ತೃತ್ವಕ್ಕೆ ನಿವೃತ್ತಿ ಬರುವಲ್ಲಿ ಸ್ವರೂಪವೇ ನಾಶವಾಗುವುದರಿಂದ ಕರ್ತೃತ್ವದಿಂದ ಬಿಡಲ್ಪಟ್ಟು ಅಕರ್ತೃವಾಗಿ ಇರುವಂಥವರು ಒಬ್ಬರೂ ಇಲ್ಲದೆ ಹೋಗುವರಾಗಲಾಗಿ, ಕರ್ತೃತ್ವವು ಸ್ವಾಭಾವಿಕವೆಂದು ಹೇಳಕೂಡದು. ಅನಂತರದಲ್ಲಿ, ಕರ್ತೃತ್ವವು ಸ್ವಾಭಾವಿಕವೇ ಆಗಲಿ, ಅದಕ್ಕೆ ನಿವೃತ್ತಿಯೂ ಬರಲಿ?— ಎಂದರೆ, ಹೇಳೇವು. ಅಗ್ನಿಗೆ ಉಷ್ಣತ್ವವು ಸ್ವಾಭಾವಿಕವಷ್ಟೆ. ಸ್ವಾಭಾವಿಕವಾದ ಉಷ್ಣತ್ವಕ್ಕೆ ಮಣಿಮಂತ್ರೌಷಧಿಗಳಿಂದ ಹೇಗೆ ನಿವೃತ್ತಿ ಬರುತ್ತ ಇದೆಯೋ, ಹಾಗೆ ಆತ್ಮನಿಗೂ ಕರ್ತೃತ್ವವು ಸ್ವಾಭಾವಿಕವೆಂದು ಹೇಳಬಹುದಲ್ಲ. ಅಂಥ ಸ್ವಾಭಾವಿಕವಾದ ಕರ್ತೃತ್ವಕ್ಕೆ ಉತ್ಕೃಷ್ಟಕರ್ಮೋಪಾಸನಾದ್ಯನುಷ್ಠಾನದಿಂದ ನಿವೃತ್ತಿ ಬರುತ್ತ ಇದೆ - ಎಂದು ಹೇಳುವಣವೆಂದರೆ, ಅಗ್ನಿಗೆ ಉಷ್ಣತ್ವವು ಕಾಲಾಂತರದಲ್ಲಿ ಮಣಿಮಂತ್ರಾದಿವಿಯೋಗದಿಂದ ಹೇಗೆ ಆವಿರ್ಭವಿಸುತ್ತ ಇದೆಯೋ, ಹಾಗೆ ಆತ್ಮನಿಗೆ ಕರ್ತೃತ್ವವು ಉತ್ಕೃಷ್ಟಕರ್ಮೋಪಾಸನಫಲಕ್ಕೆ ನಾಶವು ಬರುತ್ತ ಇರಲಾಗಿ ತಿರಿಗಿಯೂ ಆವಿರ್ಭವಿಸುವುದು. ಹೀಗೆ ಹೇಳುವುದರಿಂದ ಸಕರ್ತೃತ್ವನಿವೃತ್ತಿರೂಪವಾದಂಥ ಮುಕ್ತಿಗೆ ಜನ್ಯತ್ವಾನಿತ್ಯತ್ವಗಳು ಬರುವುವು. ಮತ್ತು ಆತ್ಮನು ಅಕರ್ತೃವೆಂದು ಹೇಳುವಂಥ ಶ್ರುತ್ಯಾದಿಗಳಿಗೂ ವೈಯರ್ಥ್ಯಬರುವುದು. ಅದಂತಿರಲಿ. ಸುಷುಪ್ತಿಯಲ್ಲಿಯೂ ಆತ್ಮನು ಇರುವುದರಿಂದ ಅಲ್ಲಿ ಈ

ಕರ್ತೃತ್ವವು ತೋರಬೇಕು; ತೋರಲಿಲ್ಲವಾಗಿ, ಆತ್ಮನಿಗೆ ಕರ್ತೃತ್ವವನು ಸ್ವಾಭಾವಿಕವೆಂದು ಹೇಳಕೂಡದು. ಸುಷುಪ್ತಿಯಲ್ಲಿ ಆತ್ಮನಿದ್ದರೆ ಕರ್ತೃತ್ವವು ಏಕೆ ತೋರಬೇಕು; ತೋರಬೇಡವಲ್ಲ ? ಅದೆಂತೆಂದರೆ, ಹೇಳೇವು. ತಕ್ಷಾದಿಗಳಿಗೆ ಸ್ವಕಾರ್ಯಕರ್ತೃತ್ವರ ಕರ್ತೃತ್ವವು ಇದ್ದರೊತ್ತಿಗೂ ಸ್ನಾನಭೋಜನಶಯನವಿಹಾರಕಾಲಗಳಲ್ಲಿ ವಾಸ್ಯಾದಿಕರಣಸಂಯೋಗವಿಲ್ಲವಾಗಲಾಗಿ ಕರ್ತೃತ್ವವು ಹೇಗೆ ತೋರಲಿಲ್ಲವೋ, ವಾಸ್ಯಾದಿಕರಣಸಂಯೋಗಾನಂತರದಲ್ಲಿ ಹೇಗೆ ತೋರುತ್ತ ಇದೆಯೋ– ಹಾಗೆ ಆತ್ಮನಿಗೂ ಸುಷುಪ್ತ್ಯವಸ್ಥೆಯಲ್ಲಿ ಕರ್ತೃತ್ವವು ಇದೆ; ಇದ್ದರೊತ್ತಿಗೂ ತ್ರಿವಿಧಕರಣಸಂಯೋಗವಿಲ್ಲವಾದಕಾರಣ, ಕರ್ತೃತ್ವ ತೋರಲಿಲ್ಲ; ಜಾಗ್ರತ್ಸ್ವಪ್ನಗಳಲ್ಲಿ ಕರಣಸಂಯೋಗ ದೆಯಾದಕಾರಣ ಕರ್ತೃತ್ವ ತೋರುತ್ತ ಇದೆ– ಎಂದು ಹೇಳುವಣವೆಂದರೆ, ತೂಷ್ಣೀಂಭೂತಾವಸ್ಥೆಯಲ್ಲೂ ಕರಣಸಂಯೋಗವಿದೆಯಾಗಲಾಗಿ ಅಲ್ಲಿಯೂ ಕರ್ತೃತ್ವ ತೋರಬೇಕು. ತೋರಲಿಲ್ಲವಾಗಲಾಗಿ, ಆತ್ಮನಿಗೆ ಕರ್ತೃತ್ವವು ಸ್ವಾಭಾವಿಕವಲ್ಲ. ಮತ್ತೇನೆಂದರೆ ? ಆಗಂತುಕವೆಂದೇ ಸಿದ್ಧವಾಯಿತು. ಆಗಂತುಕವೆಂದರೇನು ?– ಎಂದರೆ ಹೇಳೇವು. ಅನ್ಯನಿಷ್ಠವಾದಂಥ ಧರ್ಮವು ಅನ್ಯನಿಷ್ಠವಾಗಿ ತೋರುವಂಥದು ಆಗಂತುಕವೆನಿಸುವುದು. ಹಾಗೆ ತೋರುವುದೇ ಎಂದರೆ, ತೋರುವುದು. ಅದೇತೆಂದರೆ– ಓಡೆಯು ಹತ್ತಿಕೊಂಡ ಹೋಗುವಂಥ ಪುರುಷನಿಗೆ ಅಜ್ಞಾನದಿಂದ ಓಡೆಯಲ್ಲಿ ನಿಷ್ಠವಾದ ಚಾಂಚಲ್ಯವು ಸ್ಥಿರವಾದಂಥ ತೀರಸ್ಥವಾದ ವೃಕ್ಷಗಳಲ್ಲಿಯೂ, ಸ್ಥಿರವೃಕ್ಷಾದಿನಿಷ್ಠವಾದಂಥ ಅಚಾಂಚಲ್ಯವು ಓಡೆಯಲ್ಲಿ ನಿಷ್ಠವಾಗಿಯೂ ಹೇಗೆ ತೋರುತ್ತ ಇದೆಯೋ ಹಾಗೆ ತ್ರಿವಿಧಕರಣನಿಷ್ಠವಾಗಿ ಇದ್ದಂಥ ಕರ್ತೃತ್ವವು ಅಜ್ಞಾನದಿಂದ ಆತ್ಮನಿಷ್ಠವಾಗಿಯೂ, ಆತ್ಮನಿಷ್ಠವಾಗಿದ್ದಂಥ ಅಕರ್ತೃತ್ವವು ತ್ರಿವಿಧಕರಣನಿಷ್ಠವಾಗಿಯೂ ತೋರುತ್ತ ಇದೆ. ದೃಷ್ಟಾಂತಾಂತರವ ಹೇಳೇವು. ಚಂದ್ರನ ನೋಡುವಂಥ ಪುರುಷನಿಗೆ ಮೇಘನಿಷ್ಠವಾಗಿದ್ದಂಥ ಚಾಂಚಲ್ಯ ಚಂದ್ರನಿಷ್ಠವಾಗಿಯೂ, ಚಂದ್ರನಿಷ್ಠವಾದ ಅಚಾಂಚಲ್ಯ ಮೇಘನಿಷ್ಠವಾಗಿಯೂ ಹೇಗೆ ತೋರುತ್ತ ಇದೆಯೋ, ಹಾಗೆ ತ್ರಿವಿಧಕರಣನಿಷ್ಠವಾಗಿರುವ ಕರ್ತೃತ್ವ ಅಜ್ಞಾನದಿಂದ ಆತ್ಮನಿಷ್ಠವಾಗಿಯೂ, ಆತ್ಮನಿಷ್ಠ

ವಾಗಿದ್ದಂಥ ಅಕರ್ತೃತ್ವವು ತ್ರಿವಿಧಕರಣನಿಷ್ಠವಾಗಿಯೂ ತೋಱುತ್ತ ಇದೆಯಾಗಲಾಗಿ ಆತ್ಮನಿಗೆ ಕರ್ತೃತ್ವವು ಆಗಂತುಕವೇ ಸರಿ.

ಹಾಗಾದರೆ, ತ್ರಿವಿಧಕರಣಕ್ಕೆ ಕರ್ತೃತ್ವವು ಉಂಟಾದರಷ್ಟೆ ಅದು ಆತ್ಮನಿಷ್ಠವಾಗಿ ತೋಱುತ್ತಿದೆ ಎಂದು ಹೇಳಬಹುದು. ತ್ರಿವಿಧಕರಣಗಳು ಅಚೇತನವಾಗಲಾಗಿಯೂ ಅದಕ್ಕೆ ಕರ್ತೃತ್ವವ ಹೇಳಲಾಗದು. ಅದು ಹೇಗೆಂದರೆ, ಹೇಳೇವು. ಲೋಕದಲ್ಲಿ ಚೇತನಗಳಾಗಿ ಇದ್ದಂಥವರಿಗೆ ಕರಣಸಾಪೇಕ್ಷವಾಗಿ ಕರ್ತೃತ್ವವು ಕಾಣಪಡುತಿದೆಯಾಗಲಾಗಿ, ಅಚೇತನಗಳಾಗಿ ಇದ್ದಂಥ ತ್ರಿವಿಧಕರಣಗಳಿಗೆ ಕರ್ತೃತ್ವವ ಹೇಳುವುದಕೆ ಕೂಡದು. ಹೇಳಿಕೆಯಾದರೆ, ಚೇತನತ್ವವನ್ನು ಕರಣಾಂತರವನ್ನು ಕಲ್ಪಿಸಬೇಕು. ಹಾಗೆ ಕಲ್ಪಿಸಕೂಡದಾಗಲಾಗಿ, ತ್ರಿವಿಧಕರಣಗಳಿಗೆ ಕರ್ತೃತ್ವವೇ ಕೂಡದೆಂದು ಹೇಳುವಣವೆಂದರೆ, ಹೇಳಬಹುದು. ಅದು ಹೇಗೆಂದರೆ, ಹೇಳೇವು. ಲೋಕದಲ್ಲಿ ಅಚೇತನಗಳಿಗೆ ಕರ್ತೃತ್ವವು ಕಾಣಪಟ್ಟು ಇದೆಯಾಗಲಾಗಿ ಅಚೇತನಗಳಾದಂಥ ತ್ರಿವಿಧಕರಣಗಳಿಗೂ ಕರ್ತೃತ್ವವ ಹೇಳಬಹುದು. ಲೋಕದಲ್ಲಿ ಎಲ್ಲಿ ಕಾಣಪಡುತಿದೆ?– ಎಂದರೆ, ವಾಯ್ವಾದಿಗಳಲ್ಲಿ ಕಾಣಪಟ್ಟಿತು. ಅದು ಹೇಗೆಂದರೆ, ಹೇಳೇವು. ಅಚೇತನವಾದಂಥ ವಾಯುವಿಗೆ ಕರಣವನ್ನು ಚೇತನವನ್ನು ಅಪೇಕ್ಷಿಸದೆ ವೃಕ್ಷಾದಿಗಳನ್ನು ಮುರಿವಣವೆಂಬಂಥ ಕ್ರಿಯೆಯನ್ನು ಕೂಡಿ ಕರ್ತೃತ್ವವು ಕಾಣಪಡುತಿದೆ. ಇಷ್ಟುಮಾತ್ರವಲ್ಲ. ಪ್ರವಾಹಕ್ಕೂ ಕರಣವನ್ನು ಜೀವತ್ವವನ್ನು ಅಪೇಕ್ಷಿಸದೆ ವೃಕ್ಷಗಳನು ಕೀಳುವಣವೆಂಬಂಥ ಕ್ರಿಯೆಯನು ಕೂಡಿ ಕರ್ತೃತ್ವವು ಕಾಣಪಡುತಿದೆಯಾಗಲಾಗಿ ಅಚೇತನವಾದಂಥ ತ್ರಿವಿಧಕರಣಗಳಿಗೂ ಚೇತನತ್ವವನ್ನು ಕರಣಾಂತರವನ್ನು ಕಲ್ಪಿಸದೆ ಕರ್ಮಕ್ಕೀಸ್ವರ ಕರ್ತೃತ್ವವು ಕೂಡಿತಲ್ಲ. ಹಾಗಾದರೆ ತ್ರಿವಿಧಕರಣಗಳಿಂದಲೂ ಮಾಡಲ್ಪಟ್ಟಂಥ ಪುಣ್ಯಪಾಪಮಿಶ್ರಕರ್ಮಗಳಾವುವೆಂದರೆ, ಹೇಳೇವು. ಅದು ಹೇಗೆಂದರೆ ? ಸಚಿಂತೆಯೆಂದೂ ಸವಿಶೇಷಚಿಂತೆಯೆಂದೂ, ನಿರ್ವಿಶೇಷಚಿಂತೆಯೆಂದೂ, ಪರಲೋಕಚಿಂತೆಯೆಂದೂ, ಪರರಿಗೆ ಹಿತಪ್ರಾಪ್ತಿಚಿಂತೆಯೆಂದೂ, ಭಕ್ತಿಜ್ಞಾನವೈರಾಗ್ಯಚಿಂತೆಯೆಂದೂ– ಇವು ವೆ ದಲಾದುದು ಮನಸ್ಸಿನಿಂದ ಮಾಡಲ್ಪಟ್ಟಂಥ ಪುಣ್ಯಕರ್ಮವೆನಿಸುತ್ತದು. ಸದಾವಿಷಯಚಿಂತೆಯೂ, ಪರರಿಗೆ

ಅಹಿತಚಿಂತೆಯೂ, ವೇದಶಾಸ್ತ್ರಗಳಿಗೆ ಅಪ್ರಾಮಾಣ್ಯಚಿಂತೆಯೂ, ಧರ್ಮಾಧರ್ಮಾದ್ಯಭಾವಚಿಂತೆಯೂ, ಪರಲೋಕಾದ್ಯಭಾವಚಿಂತೆಯೂ - ಇವು ಮೊದಲಾದುದು ಮನಸ್ಸಿನಿಂದ ಮಾಡಲ್ಪಟ್ಟಂಥ ಪಾಪಕರ್ಮವೆನಿಸುವುದು; ಸವಿಶೇಷನಿರ್ವಿಶೇಷಧ್ಯಾನಕಾಲದಲ್ಲಿ ಮಾಡಲ್ಪಟ್ಟಂಥ ವಿಷಯಾದಿಚಿಂತೆಯು ಮನಸ್ಸಿನಿಂದ ಮಾಡಲ್ಪಟ್ಟ ಮಿಶ್ರಕರ್ಮವೆನಿಸುವುದು. ವೇದಾಧ್ಯಯನವು, ಶಾಸ್ತ್ರಪಠನವು, ಗೀತಾಸಹಸ್ರನಾಮಪಠನವು, ಗಾಯತ್ರೀಪಂಚಾಕ್ಷರಾದಿಜಪವು, ಭಗವನ್ನಾಮಕೀರ್ತನವು, ಪರೋಪಕಾರವಾರ್ತಾದಿಗಳು - ಇವು ಮೊದಲಾದುದು ವಾಕ್ಕಿನಿಂದ ಮಾಡಲ್ಪಟ್ಟ ಪುಣ್ಯಕರ್ಮವೆನಿಸುವುದು. ಸರ್ವದಾ ದೊಡ್ಡವರ ದೂಷಿಸುವಂಥದು, ಪರರನು ಆಡಬಾರದಂಥ ಮಾತುಗಳ ಆಡುವಂಥದು, ಅಸತ್ಯವ ಹೇಳುವಂಥದು, ಚಾಡಿಯ ಹೇಳುವಂಥದು - ಇವು ಮೊದಲಾದುದು ವಾಕ್ಕಿನಿಂದ ಮಾಡಲ್ಪಟ್ಟ ಪಾಪಕರ್ಮವೆನಿಸುವುದು; ವೇದಾಧ್ಯಯನ ಜಪಾದಿಕಾಲಗಳಲ್ಲಿ ಲೌಕಿಕವಾರ್ತೆಯು, ಅಸತ್ಯಾದಿಗಳ ಹೇಳುವುದು, ವಾಕ್ಕಿನಿಂದ ಮಾಡಲ್ಪಟ್ಟಂಥ ಮಿಶ್ರಕರ್ಮವೆನಿಸುವುದು ಪುಣ್ಯತೀರ್ಥಗಳಲ್ಲಿ ಸ್ನಾನವ ಮಾಡುವಂಥದು, ಗುರುದೇವತಾದಿಗಳಿಗೆ ನಮಸ್ಕಾರವ ಮಾಡುವಂಥದು, ಹರಕೆ, ಪ್ರದಕ್ಷಿಣೆಗಳು, ಪರರ ಪೀಡಿಸದೆ ಇರುವಂಥದು - ಇವು ಮೊದಲಾದುದು ಕಾಯದಿಂದ ಮಾಡಲ್ಪಟ್ಟ ಪುಣ್ಯವೆನಿಸುವುದು. ಸರ್ವದಾ ಪರರ ಪೀಡಿಸುವಂಥದು, ಪರಸ್ತ್ರೀಗಮನವು, ಬಲವಂತಮಾಡಿ ಪರಧನಗಳನಪಹರಿಸುವುದು, ಕಳುವಂಥದು, ವಿಟರ ಸಂಗಡ ಕೂಡಿಕೊಂಡು ಸಂಚರಿಸುವಂಥದು - ಇವು ಮೊದಲಾದುದು ಕಾಯದಿಂದ ಮಾಡಲ್ಪಟ್ಟ ಪಾಪಕರ್ಮವೆನಿಸುವುದು; ಬ್ರಾಹ್ಮಣಭೋಜನನಿಮಿತ್ತವಾಗಿ ಬ್ರಾಹ್ಮಣರ ಪೀಡಿಸುವಂಥದು, ಪರದ್ರವ್ಯವನಪಹರಿಸಿ ಅಚಿವಟ್ಟಿಗೆಯಿರಿಸುವಣ, ಬಿಟ್ಟಿಯ ಹಿಡಿದು ಕೊಳವ ತೋಡಿಸುವಣ, ಪರರ ಸ್ವಾಸ್ಥ್ಯವ ತೆಗೆದುಕೊಂಡು ಗುಡಿಗಳ ಬಿಡುವಣ - ಇವು ಮೊದಲಾದುದು ಕಾಯದಿಂದ ಮಾಡಲ್ಪಟ್ಟ ಮಿಶ್ರಕರ್ಮವೆನಿಸುವುದು. ಹೀಗೆ ತ್ರಿವಿಧಕರಣಗಳಿಂದಲೂ ತ್ರಿವಿಧಕರ್ಮವು ಮಾಡಪಡುತಿದೆ.

ಈ ವಿಚಾರಕ್ಕೆ ಫಲವೇನೆಂದರೆ:—ಮುಖ್ಯಫಲವೆನುತಲೂ, ಅವಾಂತರಫಲವೆನುತಲೂ ಫಲವೆರಡು ವಿಧ. ಇವರಲ್ಲಿ ಮುಖ್ಯಫಲವೆಂದರೆ-ತ್ರಿವಿಧ

ವಾದ ಕರ್ಮಗಳನು ತ್ರಿಕರಣಗಳೇ ಮಾಡುತ್ತ ಇವೆ; ಆತ್ಮನು ಒಂದು ಕರ್ಮವನ್ನೂ ಮಾಡಲಿಲ್ಲ. ಆ ಅಕರ್ತನಾದ ಆತ್ಮ, "ನಾನು," ಎಂದು ದೃಢ ನಿಶ್ಚಯು ಬರುವಂಥದೇ ಮುಖ್ಯಫಲವೆನಿಸುವುದು ಅವಾಂತರಫಲವೇನೆಂದರೆ-ಹೀಗೆ ನಿಶ್ಚಯು ಬಂದ ಹೊತ್ತಿಗೂ ತ್ರಿವಿಧಕರಣಗಳನು ಪುಣ್ಯಕರ್ಮಗಳಲ್ಲಿಯೇ ಬಿಡಬೇಕು; ಪ್ರಮಾದವಶದಿಂದ ಪುಣ್ಯಕರ್ಮದಲ್ಲಿ ಬಿಡಕೂಡದೆ ಹೋದ ಹೊತ್ತಿಗೂ ತ್ರಿವಿಧಕರಣಗಳನು ಮಿಶ್ರಕರ್ಮದಲ್ಲಿಯಾದರು ಬಿಡಬೇಕು. ಸರ್ವಾತ್ಮನಾ ಪಾಪಕರ್ಮದಲ್ಲಿ ಬಿಡದೆ ಇರಬೇಕು— ಎಂಬುದೇ ಅವಾಂತರಫಲವೆನಿಸುವುದು. ಒಂದಕ್ಕೆ ಎರಡು ಫಲವುಂಟೇ— ಎಂದರೆ, ಉಂಟು. ಅದೆಂತೆಂದರೆ, ಹೇಳೇವು. ಬಾಳೆಯ ತೋಟ ಹಾಕಿದವನಿಗೆ ಬಾಳೆಯು ಹಣ್ಣು ತಂದು ತನಗೆ ಬೇಕಾದಹಾಗೆ ವಿನಿಯೋಗಮಾಡುವುದು ಹೇಗೆ ಮುಖ್ಯಫಲವೋ, ಎಲೆ ಕಾಯಿ ದಿಂಡು ಕಂದು ಮೊದಲಾದುವುಗಳ ವಿನಿಯೋಗ ಮಾಡುವಂಥದು ಹೇಗೆ ಅವಾಂತರಫಲವೋ, ಹಾಗೆ ಈ ವಿಚಾರಕ್ಕೆ ಮುಖ್ಯಫಲವೆನುತಲೂ ಅವಾಂತರಫಲವೆನುತಲೂ ಎರಡು ವಿಧ ಫಲಗಳುಂಟು.

ಹಾಗೆ ಈ ತ್ರಿವಿಧಕರಣಗಳು ಒಂದಱಿಂದ ಒಂದು ಪ್ರೇರಿಸಪಟ್ಟು ತ್ರಿವಿಧಕರ್ಮವ ಮಾಡುತ ಇವೆಯೋ ತಾವೇ ಮಾಡುತ ಇವೆಯೋ, ಎಂದು ವಿಚಾರಿಸುತ್ತ ಇದ್ದೇವೆ. (ತಾವೇ ಮಾಡುತ್ತ ಇವೆ) ಎಂದು ಹೇಳುವಣವೆಂದರೆ ಹಾಗೆ ಹೇಳಕೂಡದು. ಹಾಗೆ ಹೇಳಿಕೆಯಾದರೆ, ಪರಶು ಕೊಡಲಿ ಮೊದಲಾದುವು ಕರಣಗಳಾದಕಾರಣ ಅವಕ್ಕೂ ಪ್ರೇರಕನ ಅಪೇಕ್ಷಿಸದೆ ಕರ್ತೃತ್ವವು ಬರಬೇಕು. ಹಾಗ ಕಾಣಲಾಗಲಾಗಿ, ಒಂದಱಿಂದ ಪ್ರೇರಿಸಲ್ಪಟ್ಟು ಕರ್ಮವ ಮಾಡುತ್ತ ಇದೆಯೆಂತಲೇ ಹೇಳಬೇಕು. ಹಾಗಾದರೆ ಚೇತನದಿಂದ ಪ್ರೇರಿಸಪಟ್ಟು ಮಾಡುತ್ತ ಇದೆಯೋ, ಅಚೇತನದಿಂದ ಪ್ರೇರಿಸಪಟ್ಟು ಮಾಡುತ್ತ ಇದೆಯೋ— ಎಂದು ವಿಚಾರಿಸುತ್ತ ಇದ್ದೇವೆ. ಚೇತನದಿಂದಲೇ ಪ್ರೇರಿಸಪಟ್ಟು ಮಾಡುತ್ತ ಇದೆಯೆಂದು ಹೇಳುವಣ—ಎಂದರೆ, ಚೇತನನಾದ ಆತ್ಮನು ನಿರ್ವಿಕಾರನಾದಕಾರಣ ಚೇತನದಿಂದ ಪ್ರೇರಿಸಪಟ್ಟು ಮಾಡುತ್ತ ಇದೆ ಎಂದು ಹೇಳಕೂಡದು. ಮತ್ತೆ ಹೇಗೆಂದರೆ? ಅಚೇತನದಿಂದಲೆ ಪ್ರೇರಿಸಪಟ್ಟು ಮಾಡುತ್ತ ಇದೆಯೆಂದು ಹೇಳಬೇಕು.

ಹೀಗೆ ಅಚೇತನದಿಂದ ಪ್ರೇರಿಸಪಟ್ಟು ಮಾಡುತ್ತ ಇದೆ ಎಂದು ಹೇಳಿಕೆ ಯಾದರೆ, ಘಟವು ಘಟಾಂತರದಿಂದ ಪ್ರೇರಿಸಲ್ಪಟ್ಟುದಾಗಿ ಜಲಾಹರಣಾದಿಕ್ರಿಯೆಗಳನು ಮಾಡಬೇಕು. ಹಾಗೆ ಕಾಣೆವಾಗಲಾಗಿಯು, ಗುಡಿಯ ನಾನು ಕಟ್ಟಿಸಿದೆನು, ನಾನು ಸಹಸ್ರಬ್ರಾಹ್ಮಣಭೋಜನವ ಮಾಡಿಸಿದೆನು, ನಾನು ಯಜ್ಞವ ಮಾಡಿಸಿದೆನು, ಎಂದು ಆತ್ಮನಿಷ್ಠವಾಗಿಯೇ ಕಾರಯಿತೃತ್ವವು ತೋರುತ್ತ ಇದೆ ಯಾಗಲಾಗಿ, ಆತ್ಮನಿಗೆ ಕಾರಯಿತೃತ್ವವನ್ನು (ಹೇಳಬೇಕು.) ಹಾಗೆ ಹೇಳುವಣವೆಂದರೆ- ಆತ್ಮನು ನಿರ್ವಿಕಾರನಾದಕಾರಣ ಆತ್ಮನಿಗೆ ಕಾರಯಿತೃತ್ವವನು ಹೇಳಕೂಡದು. ಹಾಗಾದರೆ ಈ ಕಾರಯಿತೃತ್ವಾನುಭವಕ್ಕೆ ಗತಿಯೇನು?– ಎಂದರೆ, ಅನ್ಯನಿಷ್ಠವಾದ ಕಾರಯಿತೃತ್ವವು ಆತ್ಮನಲ್ಲಿ ತೋರುತ್ತ ಇದೆಯಾಗಲಾಗಿ, ಆತ್ಮನಿಗೆ ಕಾರಯಿತೃತ್ವವು ಆಗಂತುಕವೆಂದೇ ಹೇಳಬೇಕು. ಅನ್ಯನಿಷ್ಠನಾದಂಥ ಕಾರಯಿತೃತ್ವವು ಆತ್ಮನಲ್ಲಿ ತೋರುತ್ತ ಇದೆ ಎಂದು ವಿತರ್ಕ್ಕ ಹೇಳಬೇಕು ? ಆತ್ಮನಿಗೆ ಸ್ವಾಭಾವಿಕವೆಂತಲೇ ಹೇಳುವಣ– ಎಂದರೆ, ಹಾಗೆ ಹೇಳಕೂಡದು. ಸ್ವಾಭಾವಿಕವೆಂದು ಹೇಳಿಕೆಯಾದರೆ, ಕಾರಯಿತೃತ್ವವು ಹೋಗುವುದಕ್ಕೋಸ್ಕರ ಯಾರೂ ಯತ್ನವ ಮಾಡದೆ ಇರಬೇಕು. ಮುಮುಕ್ಷುಗಳಾದಂಥವರು ಯತ್ನವ ಮಾಡುತ್ತ ಇದ್ದಾರೆಯಾದಕಾರಣ ಆತ್ಮನಿಗೆ ಕಾರಯಿತೃತ್ವವು ಸ್ವಾಭಾವಿಕವೆಂದು ಹೇಳಕೂಡದು. ಕಾರಯಿತೃತ್ವವು ಸ್ವಾಭಾವಿಕವಾಗಲಿ, ಅದು ಹೋಗುವುದಕ್ಕೆ ಯತ್ನವ ಮಾಡಲಿ–ಎಂದರೆ, ಸ್ವಾಭಾವಿಕವಾದುದು ಸ್ವರೂಪವಾಯಿತಾದಕಾರಣ ಸ್ವರೂಪನಾಶನಾರ್ಥವಾಗಿಯೇ ಯತ್ನವ ಮಾಡುತ್ತ ಇದ್ದಾರೆ ಎಂದು ಬರುವುದು. ಸ್ವರೂಪನಾಶನಾರ್ಥವಾಗಿ ಯಾರೂ ಯತ್ನವ ಮಾಡರಾಗಲಾಗಿ, ಸ್ವಾಭಾವಿಕಕಾರಯಿತೃತ್ವನಿವೃತ್ತ್ಯರ್ಥವಾಗಿ ಯತ್ನವ ಮಾಡುತ್ತಲಿದ್ದಾರೆಂದು ಹೇಳಕೂಡದು. ಇಷ್ಟುಮಾತ್ರವಲ್ಲ. ಸ್ವಾಭಾವಿಕವಾದ ಕಾರಯಿತೃತ್ವಕ್ಕೆ ನಿವೃತ್ತಿ ಬರುವಾಗ್ಯೆ ಸ್ವರೂಪವೇ ನಾಶವಾಗಿ ಹೋಗುತ್ತ ಇದೆ ಯಾದಕಾರಣ ಕಾರಯಿತೃತ್ವದಿಂದ ಬಿಡಲ್ಪಟ್ಟು ಅಕಾರಯಿತೃವಾಗಿ ಇರುವಂಥವನೊಬ್ಬನೂ ಇಲ್ಲದೆ ಹೋಗುವನಾದಕಾರಣ ಕಾರಯಿತೃತ್ವ ಸ್ವಾಭಾವಿಕವೆಂದು ಹೇಳಕೂಡದು. ಅದಂತಿರಲಿ. ಕಾರಯಿತೃತ್ವ ಸ್ವಾಭಾವಿಕವಾಗಿರಲಿ, ಅದಕ್ಕೆ

ನಿವೃತ್ತಿಯೂ ಬರಲಿ (–ಎಂದರೆ ಕೂಡದು.) ಅದೆಂತೆಂದರೆ, ಹೇಳೇವು. ಅಗ್ನಿಗೆ ಉಷ್ಣತ್ವವು ಸ್ವಾಭಾವಿಕವಷ್ಟೆ. ಸ್ವಾಭಾವಿಕವಾದ ಉಷ್ಣತ್ವಕ್ಕೆ ಮಣಿಮಂತ್ರೌಷಧಿಗಳಿಂದ ಹೇಗೆ ನಿವೃತ್ತಿ ಬರುತ್ತ ಇದೆಯೋ ಹಾಗೆ ಆತ್ಮನಿಗೂ ಸ್ವಾಭಾವಿಕವಾದ ಕಾರಯಿತೃತ್ವಕ್ಕೆ ಉತ್ಕೃಷ್ಟಕರ್ಮೋಪಾಸನಾದ್ಯನುಷ್ಠಾನದಿಂದ ನಿವೃತ್ತಿ ಬರುತ್ತ ಇದೆ ಎಂದು ಹೇಳೋಣವೆಂದರೆ, ಅಗ್ನಿಗೆ ಉಷ್ಣತ್ವವು ಕಾಲಾಂತರದಲ್ಲಿ ಮಣಿಮಂತ್ರೌಷಧಿವಿಯೋಗದಿಂದ ಹೇಗೆ ಆವಿರ್ಭವಿಸುತ್ತಿದೆಯೋ ಹಾಗೆ ಆತ್ಮನಿಗೂ ಕಾರಯಿತೃತ್ವವು, ಉತ್ಕೃಷ್ಟಕರ್ಮೋಪಾಸನಫಲಕ್ಕೆ ನಾಶವು ಬರುತ್ತಿರಲಾಗಿ ತಿರಿಗಿಯು ಆವಿರ್ಭವಿಸುವುದು. ಹೀಗೆ ಹೇಳಿಕೆಯಾದರೆ ಕಾರಯಿತೃತ್ವನಿವೃತ್ತಿರೂಪವಾದ ಮುಕ್ತಿಗೆ ಜನ್ಯತ್ವವು ಬರುವದು. ಇಷ್ಟುಮಾತ್ರವಲ್ಲ. ಆತ್ಮನು ಅಕಾರಯಿತೃವೆಂದು ಹೇಳುವಂಥ ಶ್ರುತ್ಯಾದಿಗಳಿಗೂ ವೈಯರ್ಥ್ಯ ಬರುವದು. ಸುಷುಪ್ತಿಯಲ್ಲೂ ಆತ್ಮನಿದ್ದಕಾರಣ ಅಲ್ಲಿಯೂ ಆತ್ಮನಿಗೆ ಕಾರಯಿತೃತ್ವ ತೋರಬೇಕು. ಅದಂತಿರಲಿ. ಸುಷುಪ್ತಿಯಲ್ಲಿ ಆತ್ಮನಿದ್ದರೆ ಕಾರಯಿತೃತ್ವ ಏಕೆ ತೋರಬೇಕು, ತೋರಬೇಕವಲ್ಲ ? ಅದೆಂತೆಂದರೆ, ಹೇಳೇವು. ಉಪಾಧ್ಯಾಯನಿಗೆ ಅಧ್ಯಾಪಕತ್ವವಿದೆ ಎಂದ ಹೊತ್ತಿಗೂ ನಿಯಮ್ಯರಾದಂಥ ಶಿಷ್ಯಸನ್ನಿಧಾನವಿಲ್ಲದುದರಿಂದ ಅಧ್ಯಾಪಕತ್ವ ಹೇಗೆ ತೋರಲಿಲ್ಲವೋ, ಶಿಷ್ಯಸನ್ನಿಧಾನದಿಂದ ಹೇಗೆ ತೋರುತ್ತಿದೆಯೋ; ಮತ್ತು ರಾಜಪ್ರಭೃತಿಗಳಿಗೆ ನಿಯಂತೃತ್ವ ಸ್ವಾಭಾವಿಕವಾಗಿ ಇದ್ದ ಹೊತ್ತಿಗೂ ನಿಯಮ್ಯರಾದಂಥ ಮಂತ್ರಿಪುರೋಹಿತಪ್ರಭೃತ್ಯಸನ್ನಿಧಾನದಿಂದ ನಿಯಂತೃತ್ವ ಹೇಗೆ ತೋರುವುದಿಲ್ಲವೋ, ಅವರ ಸನ್ನಿಧಾನವುಂಟಾದರೆ ಹೇಗೆ ತೋರುತ್ತ ಇದೆಯೋ, ಹಾಗೆ ಆತ್ಮನಿಗೂ ಸುಷುಪ್ತ್ಯವಸ್ಥೆಯಲ್ಲಿ ಕಾರಯಿತೃತ್ವ ಸ್ವಾಭಾವಿಕವಾಗಿದ್ದರೂ ನಿಯಮ್ಯಗಳಾದ ತ್ರಿವಿಧಕರಣಸಂಪರ್ಕವು ಇಲ್ಲವಾಗಲಾಗಿ ಕಾರಯಿತೃತ್ವ ತೋರಲಿಲ್ಲ. ಜಾಗ್ರತ್ಸ್ವಪ್ನಗಳಲ್ಲಿ ನಿಯಮ್ಯವಾಗಿರುವಂಥ ಕರಣಸಂಯೋಗವಿದೆಯಾಗಲಾಗಿ ಕಾರಯಿತೃತ್ವ ತೋರುತ್ತ ಇದೆ ಎಂದು ಹೇಳುವಣ– ಎಂದರೆ, ಹಾಗೆ ಹೇಳಕೂಡದು. ಹಾಗೆ ಹೇಳಿಕೆಯಾದರೆ ತೂಷ್ಣೀಂಭೂತಾವಸ್ಥೆಯಲ್ಲೂ ಕರಣಸಂಪರ್ಕವಿದೆಯಾದಕಾರಣ ಅಲ್ಲಿಯೂ ಕಾರಯಿತೃತ್ವ ತೋರಬೇಕು.

ತೋಱಲಿಲ್ಲವಾದುದಱಿಂದ ಆತ್ಮನಿಗೆ ಕಾರಯಿತೃತ್ವವು ಸ್ವಾಭಾವಿಕವೆಂದು ಹೇಳಕೂಡದು; ಆಗಂತುಕವೆಂದೇ ಹೇಳಬೇಕು. ಆಗಂತುಕವೆಂದರೇನು ? ಎಂದರೆ– ಅನ್ಯನಿಷ್ಠವಾದ ಧರ್ಮವು ಅನ್ಯನಿಷ್ಠವಾಗಿ ತೋಱುವಂತೆ ಇರುವುದೇ ಆಗಂತುಕವೆಂದು ಹೇಳಪಡುವುದು. ಅದಂತಿರಲಿ. ಅನ್ಯನಿಷ್ಠವಾದಂಥ ಧರ್ಮವು ಅನ್ಯನಿಷ್ಠವಾಗಿ ತೋಱುತ್ತದೆಯೆ ?–ಎಂದರೆ, ತೋಱುವುದು. ಅದೆಂತೆಂದರೆ ? ಜಪಾಕುಸುಮದ ಲೋಹಿತತ್ವವು ಸ್ಫಟಿಕನಿಷ್ಠವಾಗಿ ಹೇಗೆ ತೋಱುತ್ತ ಇದೆಯೋ, ಅಗ್ನಿನಿಷ್ಠವಾದ ಉಷ್ಣತ್ವವು ಅಯಃಪಿಂಡದಲ್ಲಿಯೂ ಅಯಃಪಿಂಡನಿಷ್ಠವಾದ ದೀರ್ಘತ್ವವರ್ತುಲತ್ವಾದಿಗಳು ಅಗ್ನಿಯಲ್ಲಿಯೂ ಹೇಗೆ ತೋಱುತ್ತ ಇದೆಯೋ, ಹಾಗೆ ರಾಗದ್ವೇಷಾದಿನಿಷ್ಠವಾದ ಕಾರಯಿತೃತ್ವವು ಅಜ್ಞಾನದಿಂದ ಆತ್ಮನಿಷ್ಠವಾಗಿಯೂ, ಆತ್ಮನಿಷ್ಠವಾದಂಥ ಅಕಾರಯಿತೃತ್ವವು ರಾಗದ್ವೇಷಾದಿನಿಷ್ಠವಾಗಿಯೂ ತೋಱುತ್ತ ಇದೆ. ಅದಂತಿರಲಿ. ಅಚೇತನಗಳಿಗೆ ಕಾರಯಿತೃತ್ವವ ಹೇಳಕೂಡದು. ಹೇಳಿಕೆಯಾದರೆ, ಘಟವು ಘಟಾಂತರವನ್ನು ಪ್ರೇರಿಸಬೇಕೆಂದು ಹೇಳವೆವಲ್ಲಾ, ಅದಕ್ಕೆ ಉತ್ತರವೇನು ? ಎಂದರೆ– ಅಲ್ಲಿ ಯೋಗ್ಯತೆಯು ಇಲ್ಲವಾದುದಱಿಂದ ಪ್ರೇರಕತ್ವವು ಕೂಡದು. ಎಲ್ಲಿ ಯೋಗ್ಯತೆಯುಂಟೋ ಅಲ್ಲಿ ಪ್ರೇರಕತ್ವವು ಕೂಡುವುದೆಂದು ತೋಱುತ್ತ ಇದೆ. ಯೋಗ್ಯತೆ ಉಂಟಾದ ಬಳಿಯಲ್ಲಿ ಎಲ್ಲಿ ಪ್ರೇರಕತ್ವವ ಕಂಡಿರೆಂದರೆ-- ಹೇಳೇವು. ಅಗ್ನಿ ಬಿರಾಣಿಮದ್ದಿನ ಸಂಗಡ ಕೂಡಿಕೊಂಡು ಇರುವ ಪಿರಂಗಿ ಗುಂಡುಗಳಿಂದ ಚತುರಂಗಬಲಗಳನ್ನು ಸಂಹರಿಸುತ್ತ ಇದೆಯಾಗಲಾಗಿ ಅಚೇತನವಾದ ಅಗ್ನಿಗೆ ಅಚೇತನವಾದ ಪಾಷಾಣಾದಿಗಳ ಸಂಗಡ ಕೂಡಿಕೊಂಡ ಮಾತ್ರವೇ ಪ್ರೇರಕತ್ವವು ಕಾಣಪಡುತ ಇದೆ. ಇಷ್ಟುಮಾತ್ರವಲ್ಲ. ಪ್ರೇತಶರೀರಕ್ಕೂ ಸ್ವಜ್ಞಾತಿಜನಗಳಿಂದ ಮಾಡಲ್ಪಟ್ಟ ಕ್ರಿಯೆಗಳಿಂದ ಕಾರಯಿತೃತ್ವವು ಕಾಣಪಡುತ ಇದೆ. ಹಾಗೆಯೇ ಅಚೇತನಗಳಾದಂಥ ರಾಗದ್ವೇಷಾದಿಗಳಿಗೂ ತ್ರಿವಿಧಕರಣಗಳಿಂದ ಮಾಡಲ್ಪಟ್ಟ ತ್ರಿವಿಧಕರ್ಮಕ್ಕೋಸ್ಕರ ಕಾರಯಿತೃತ್ವವ ಹೇಳಬಹುದು. ಅದಂತಿರಲಿ. ಹೀಗೆ ಹೇಳಿಕೆಯಾದರೆ ಆತ್ಮನಿಗೆ ಸರ್ವಾಂತರ್ಯಾಮಿತ್ವವನ್ನು ಹೇಳುವಂಥ ಶ್ರುತ್ಯಾದಿಗಳಿಗೆ ತಾತ್ಪರ್ಯವೇನು ? ಎಂದರೆ– ಆತ್ಮನು ನಿರ್ವಿಕಾರನಾಗಲಾಗಿ ಆತ್ಮನಿಗೆ

ಅಸ್ಮದಾದಿಗಳಹಾಗೆ ಕಾರಯಿತೃತ್ವವ ಹೇಳಕೂಡದು. ಮತ್ತೆ ಹೇಗೆ ?–ಎಂದರೆ–ಆದಿತ್ಯನ ಸನ್ನಿಧಾನದಿಂದ ಸಮಸ್ತಪ್ರಾಣಿಗಳೂ ಸ್ವಸ್ವಕಾರ್ಯಗಳಲ್ಲಿ ಹೇಗೆ ಪ್ರವರ್ತಿಸುತ್ತಿದ್ದಾವೋ, ಅಯಸ್ಕಾಂತಸನ್ನಿಧಾನದಿಂದ ಅಯಸ್ಸು ಹೇಗೆ ಚಲಿಸುತ್ತ ಇದೆಯೋ, ಹಾಗೆ ಆತ್ಮಸನ್ನಿಧಾನಮಾತ್ರದಿಂದ ಸಮಸ್ತವಾದ ದೇಹೇಂದ್ರಿಯಾದಿಜಗತ್ತೂ ಚರಿಸುತ್ತಿದೆಯೆಂದು ಆ ಶ್ರುತಿಸ್ಮೃತ್ಯಾದಿಗಳಿಗೆ ತಾತ್ಪರ್ಯವು ತಿಳಿಯತಕ್ಕದು. ಹೀಗೆ ಹೇಳಿದುದರಿಂದ ಆತ್ಮನಿಗೆ ನಿರ್ವಿಕಾರತ್ವ ಸಿದ್ಧಿಸಿತೆ ? ಎಂದರೆ-ಸಿದ್ಧಿಸಿತು. ಅದೆಂತೆಂದರೆ–ಆದಿತ್ಯಪ್ರಕಾಶಸನ್ನಿಧಾನದಿಂದ ಸಕಲವಾದ ಪ್ರಾಣಿಗಳು ವ್ಯಾಪಾರ ಮಾಡುತ್ತ ಇದ್ದಹೊತ್ತಿಗೂ ಪ್ರಾಣಿನಿಷ್ಠವಾದ ವಿಕಾರಾದಿಗಳು ಆ ಆದಿತ್ಯನ ಹೇಗೆ ಸ್ಪರ್ಶನಮಾಡಲಾರವೋ, ಅಯಸ್ಕಾಂತಸಾನ್ನಿಧ್ಯದಿಂದ ಅಯಸ್ಸು ಚಲಿಸುತ್ತಿದ್ದಹೊತ್ತಿಗೂ ಅಯೋನಿಷ್ಠವಾದ ವಿಕಾರಗಳು ಆ ಅಯಸ್ಕಾಂತವ ಹೇಗೆ ಸ್ಪರ್ಶನವ ಮಾಡಲಿಲ್ಲವೋ, ಹಾಗೆಯೇ ಆತ್ಮಸನ್ನಿಧಾನದಿಂದ ಚೇಷ್ಟಿಸುವಂಥ ಜಗನ್ನಿಷ್ಠವಾದಂಥ ವಿಕಾರಾದಿಗಳು ಆ ಆತ್ಮನ ಸ್ಪರ್ಶನಮಾಡಲಾರವು. ಆದಕಾರಣ ಆತ್ಮನಿಗೆ ನಿರ್ವಿಕಾರತ್ವವು ಕೂಡುವುದೆಂದು ಹೇಳಬಹುದಲ್ಲ.

ಆದರೆ ಈ ವಿಚಾರಕ್ಕೆ ಫಲವೇನು ? ಎಂದರೆ-ಹೇಳೇವು. ಕರ್ಮವ ನಡಿಸುವುದರಲ್ಲಿ, ಅಧಿಕಾರಿಗಳಾದವರಿಂದ ಮಾಡಲ್ಪಟ್ಟ ತೇರ ನಡಿಸುವಣೆಂಬ ವ್ಯಾಪಾರವು ಅಭಿಮಾನದಿಂದ ಅವರಿಗೆ ನಿಯಂತೃವಾಗಿ ಸ್ವಸ್ಥನಾದಂಥ ಪ್ರಭುವಿನಲ್ಲಿ, ನಾನು ಎರಡು ಗಳಿಗೆಯಲ್ಲೇ ತೇರ ನಡಿಸಿದೆನು ಎಂದು ಹೇಗೆ ತೋರುತ್ತ ಇದೆಯೋ, ಹಾಗೆ ರಾಗದ್ವೇಷಾದಿನಿಷ್ಠವಾದಂಥ ಈ ಕಾರಯಿತೃತ್ವವು ಅಧ್ಯಾಸವಾಗಿ ಆತ್ಮನಿಷ್ಠವಾಗಿ ತೋರುತ್ತ ಇದೆ. ವಿಚಾರಿಸುವಾಗ ಸರ್ವಾತ್ಮನಾ ಆತ್ಮನಿಗೆ ಕಾರಯಿತೃತ್ವವು ಇಲ್ಲವಾಗಲಾಗಿ, ಅಕಾರಯಿತೃವಾಗಿ ನಿರ್ವಿಕಾರವಾಗಿ ಇರುವ ಆತ್ಮನು ನಾನು ಎಂಬ ದೃಢನಿಶ್ಚಯವು ದೃಢವಾಗಿ ಬರುವಂಥದೇ ಈ ವಿಚಾರಕ್ಕೆ ಫಲ. ಈಯರ್ಥದಲ್ಲಿ ಸಂಶಯವಿಲ್ಲ.

ಶ್ಲೋ॥ ತ್ರಿವಿಧೈರೇವ ಕರಣೈಃ ಪುಣ್ಯಂ ಪಾಪಂ ಚ ಮಿಶ್ರಕಂ ।
ಕ್ರಿಯತೇ ನ ಮಯಾ ಕರ್ಮೇತ್ಯೇವಂ ಬುದ್ಧಿರ್ವಿಮುಚ್ಯತೇ ॥ ೧

ರಾಗಾದ್ಯೈರೇವ ನಿರ್ವೃತ್ತಿಂ ಪ್ರೇರಕತ್ವಂ ನ ಮೇ ಕ್ವಚಿತ್ ।
ಇತಿ ಯಸ್ಯ ದೃಢಾ ಬುದ್ಧಿಃ ಸಮುಕ್ತಸ್ಸಚ ಪಂಡಿತಃ ॥ ೮

ಇಂತೀಕನ್ನಡಭಾಷೆಯೊಳ್ ವಿರಚಿಸಿದ ವಾಸುದೇವ ಯತೀಂದ್ರಪ್ರೋಕ್ತಮಪ್ಪ
ವೇದಾಂತವಿವೇಕಸಾರದಲ್ಲಿ
ಕರ್ಮಪ್ರಕರಣಮಂ ಪೇಳ್ದುದು,
ಪಂಚಮ ಪ್ರಕರಣಂ.

---

## ಆರನೆಯ ಪ್ರಕರಣ.

॥ ರಾಗದ್ವೇಷಾದಿ ಪ್ರಕರಣಂ ॥

ಶ್ಲೋ॥ ರಾಗಶ್ಚದ್ವಾದ್ವೇಷಯುಕ್ತೋ ಬದ್ಧೋ ಮುಕ್ತೋ ಭವೇನ್ನಹಿ ।
ತದ್ರಾಗಾದಿಃ ಕತಿ ವಿಧಃ ಕೇನ ಸ್ಯಾದಿತಿ ಚಿಂತ್ಯತೇ ॥ ೧

ಟೀಕು— ಯಾವ ರಾಗದ್ವೇಷಾದಿಗಳಿಂದ ಪ್ರೇರಿಸಲ್ಪಟ್ಟಂಥದಾಗಿ ತ್ರಿವಿಧಕರಣಗಳು ತ್ರಿವಿಧಕರ್ಮವನ್ನು ಮಾಡುತ್ತಲಿವೆಯೋ ಆ ರಾಗದ್ವೇಷಾದಿಗಳು ಎಷ್ಟು ವಿಧವೆಂದು ವಿಚಾರಿಸುತ್ತಲಿದ್ದೇವೆ. ಅದೆಂತೆಂದರೆ:— ರಾಗವೆನುತಲೂ, ದ್ವೇಷವೆನುತಲೂ, ಕಾಮವೆನುತಲೂ, ಕ್ರೋಧವೆನುತಲೂ, ಲೋಭವೆನುತಲೂ, ಮೋಹವೆನುತಲೂ, ಮದವೆನುತಲೂ, ಮಾತ್ಸರ್ಯವೆನುತಲೂ, ಈರ್ಷ್ಯೆಯೆನುತಲೂ, ಅಸೂಯೆಯೆನುತಲೂ, ಡಂಭವೆನುತಲೂ, ದರ್ಪವೆನುತಲೂ, ಅಹಂಕಾರವೆನುತಲೂ, ಇಚ್ಛೆಯೆನುತಲೂ, ಭಕ್ತಿಯೆನುತಲೂ, ಶ್ರದ್ಧೆಯೆನುತಲೂ, ಹದಿನಾರು ವಿಧಗಳು. ಇವಱ ಭೇದವನ್ನು ಹೇಳೇವು. ಸ್ತ್ರೀವಿಷಯವಾಗಿ ಬರುವ ಚಿತ್ತವೃತ್ತಿಗೆ ರಾಗವೆಂದು ಹೆಸರು. ಒಬ್ಬನು ಅಪಕಾರವ ಮಾಡಿದರೆ ಅದಕ್ಕೆ ಪ್ರತಿಕಾರವ ಮಾಡಬೇಕೆಂಬ ಚಿತ್ತವೃತ್ತಿಗೆ ದ್ವೇಷವೆಂದು ಹೆಸರು. ಗೃಹಾರಾಮಕ್ಷೇತ್ರಧನಧಾನ್ಯಾದಿಗಳ ಸಂಪಾದಿಸಬೇಕೆಂಬ ಚಿತ್ತವೃತ್ತಿಗೆ ಕಾಮವೆಂದು ಹೆಸರು. ತಾನು ಸಂಪಾದಿಸಿದ ಪದಾರ್ಥಗಳಿಗೆ ಯಾವನ

ವಿಘ್ನವ ಮಾಡುತ್ತಿದ್ದಾನೋ ಅವನಲ್ಲಿ ಆಗ್ರಹರೂಪವಾಗಿ ಬರುವ ಚಿತ್ತ ವೃತ್ತಿಗೆ ಕ್ರೋಧವೆಂದು ಹೆಸರು. ಆ ಸಂಪಾದಿಸಿದ ಪದಾರ್ಥಗಳನ್ನು ಯಾರಿಗೂ ವೆಚ್ಚವಮಾಡಬಾರದೆಂಬ ಚಿತ್ತವೃತ್ತಿಗೆ ಲೋಭವೆಂದು ಹೆಸರು. ಐಶ್ವರ್ಯಮದದಿಂದ ಕೃತ್ಯಾಕೃತ್ಯವನ್ನು ಅಱಿಯದೆ ಹೋಗುವಂಥ ಚಿತ್ತ ವೃತ್ತಿಗೆ ಮೋಹವೆಂದು ಹೆಸರು. ಸಕಲಸಂಪತ್ತಿಯೂ ತನಗುಂಟು, ತಾ ನೇನ ಮಾಡಿದರೂ ಸಲುವುದೆಂದು ಬಂದ ಚಿತ್ತವೃತ್ತಿಗೆ ಮದವೆಂದು ಹೆಸ ರು. ತನಗಿಂತಲೂ ಒಬ್ಬನು ಅಧಿಕನಾಗಿ ಇದ್ದುದೇ ಆದರೆ ಅವನ ಉತ್ಕ ರ್ಷವನ್ನು ಸೈರಿಸದಿರುವ ಚಿತ್ತವೃತ್ತಿಗೆ ಮಾತ್ಸರ್ಯವೆಂದು ಹೆಸರು. ಪರ ರಿಗೆ ದುಃಖವು ಬಾರದೆ ತನಗೆ ದುಃಖವು ಬರಬಹುದೇಎಂಬ ಚಿತ್ತವೃತ್ತಿಗೆ ಈರ್ಷ್ಯೆಯೆಂದು ಹೆಸರು. ನನಗೆ ಸುಖವು ಬಂದಹಾಗೆ ಪರರಿಗೆ ಸು ಖವು ಬರಬಹುದೇ ಎಂಬ ಚಿತ್ತವೃತ್ತಿಗೆ ಅಸೂಯೆಯೆಂದು ಹೆಸರು. ತಾ ನು ಮಾಡಿದ ಧರ್ಮವನು ನಾಲ್ಕು ಮಂದಿ ತಿಳಿದು ಭಲಾ! ಎನಬೇಕೆಂದು ಬರುವ ಚಿತ್ತವೃತ್ತಿಗೆ ಡಂಭವೆಂದು ಹೆಸರು. ತಾನು ದೊಡ್ಡವನು ಮಿ ಕ್ಕವರೆಲ್ಲರೂ ತನಗೆ ಸರಿಯಿಲ್ಲವೆಂದು ಬರುವ ಚಿತ್ತವೃತ್ತಿಗೆ ದರ್ಪವೆಂದು ಹೆಸರು. "ಎಲಾ! ಅಱಿಯೆಯಾ? ನನ್ನನ್ನು ನೀನೇ ಶಿಕ್ಷಿಸುವಂಥವ? ನಾನು ಹಿಡಿದ ಕಾರ್ಯವ ಬಿಡುವನಲ್ಲ" ಎಂದು ಬರುವ ಚಿತ್ತವೃತ್ತಿಗೆ ಅಹಂ ಕಾರವೆಂದು ಹೆಸರು. ಅನಿವಾರ್ಯವಾದಂಥ ಶೌಚಾದಿಕ್ರಿಯೆಗಳನ್ನು ಮಾಡ ಬೇಕು ಎಂದು ಪ್ರವರ್ತಿಸುವ ಚಿತ್ತವೃತ್ತಿಗೆ ಇಚ್ಛೆಯೆಂದು ಹೆಸರು. ಗು ರುದೇವತಾದಿಗಳಲ್ಲಿ ಬರುವ ಪ್ರೀತಿಗೆ ಭಕ್ತಿಯೆಂದು ಹೆಸರು. ಗುರುವೇ ದಾಂತವಾಕ್ಯ ಯಾಗಾದಿಕ್ರಿಯೆಗಳಲ್ಲಿ ಬರುವ ವಿಶ್ವಾಸಕ್ಕೆ ಶ್ರದ್ಧೆಯೆಂದು ಹೆಸರು. ಈ ಪ್ರಕಾರವಾಗಿ ರಾಗದ್ವೇಷಾದಿಗಳ ಸ್ವರೂಪವು ಹೇಳಪ ಟ್ಟಿದಾಯಿತು.

ಈವಿಚಾರಕ್ಕೆ ಫಲವೇನು? ಎಂದರೆ, ಹೇಳೇವು. ರಾಗವು ಆದಿಯಾಗಿ ಅಹಂಕಾರವು ಅಂತವಾದಂಥ ಹದಿಮೂಱಱಲ್ಲಿ ತ್ರಿವಿಧಕರಣಗಳಿಂದಲೂ ಕ ರ್ಮಗಳನ್ನು ಮಾಡಿದನೇಆದರೆ ನರಕದಿಂದ ಅವನಿಗೆ ನಿವೃತ್ತಿ ಬರಲಾಱದು. ಆದಕಾರಣ ರಾಗದ್ವೇಷಾದಿಕಾರಕಗಳಾದ ಚಿತ್ತವೃತ್ತಿಗಳನ್ನು ಸರ್ವಪ್ರ ಕಾರದಲ್ಲೂ ತಿರುಗಿಸಿ ಶ್ರದ್ಧಾಭಕ್ತಿರೂಪಗಳಾಗಿಯೇ ಮಾಡಿದನಾದರೆ ಕ್ರ

ಮದಿಂದ ಶೀಘ್ರವಾಗಿ ಸಂಸಾರಬಂಧದಿಂದ ಮುಕ್ತನಾದಾನು. ಆದಕಾರಣ ಶ್ರದ್ಧಾಭಕ್ತಿಗಳನ್ನೇ ಸಂಪಾದಿಸಬೇಕು. ಇಚ್ಛೆಯಿಂದ ಮಾಡಲ್ಪಟ್ಟಂಥ ಕ್ಷುತ್ಪಿಪಾಸಾದಿನಿವೃತ್ತಿಯನ್ನೂ ಮೂತ್ರಪುರೀಷವಿಸರ್ಜನಾದಿಗಳನ್ನೂ ಮಾಡದೇಹೋದನಾದರೆ ತತ್ಕಾಲದಲ್ಲಿ ಬಾಧಕವಾಗುವುದು; ಮಾಡಿದನಾದರೆ ತತ್ಕಾಲದಲ್ಲಿ ಸಾಧಕವು ಆಗುವುದು. ಅದಕಾರಣ ಸ್ವರ್ಗನರಕಾದಿಪ್ರಾಪ್ತಿಯಿಲ್ಲವೆಂದು ತಿಳಿದಂಥದೇ ಈ ವಿಚಾರಕ್ಕೆ ಫಲವೆನಿಸುವುದು. ಸುಷುಪ್ತ್ಯವಸ್ಥೆ, ತೂಷ್ಣೀಂಭೂತಾವಸ್ಥೆ, ಸಮಾಧ್ಯವಸ್ಥೆಗಳಲ್ಲಿ ರಾಗದ್ವೇಷಗಳಿಲ್ಲವಾಗಲಾಗಿ ಕರ್ಮವು ಇಲ್ಲ. ಜಾಗ್ರತ್ಸ್ವಪ್ನಗಳಲ್ಲಿ ರಾಗದ್ವೇಷವಿದೆಯಾದಕಾರಣ ಕರ್ಮವು ಇದೆ. ಅದಕಾರಣ ರಾಗದ್ವೇಷಗಳುಂಟಾದರೆ ಕರ್ಮವುಂಟು; ರಾಗದ್ವೇಷಾದಿಗಳಿಲ್ಲದೆ ಹೋದರೆ ಕರ್ಮವಿಲ್ಲವೆಂಬಂಥದು ಅನ್ವಯವ್ಯತಿರೇಕವ್ಯಾಪ್ತಿಯಿಂದ ಸಿದ್ಧವಾಯಿತು.

ಈ ರಾಗದ್ವೇಷಾದಿಗಳು ಏತಕಾರಿಂದ ಬರುತ್ತವೆ ?–ಎಂದರೆ, ಅಭಿಮಾನದಿಂದ ಬರುತ್ತವೆಯೆಂದು ಹೇಳಬೇಕು. ಸಮಸ್ತರಾದಂಥವರಿಗೂ ಅಭಿಮಾನಪೂರ್ವಕವಾದ ಪ್ರವೃತ್ತಿಯು ರಾಗಾದಿಪೂರ್ವಕವಾಗಿಯೇ ಬರುವುದೆ ? ಎಂದರೆ–ಬರುವುದು. ಅದೆಂತೆಂದರೆ—ಸ್ತ್ರೀಜನಕ್ಕೆ ತಾನು ಸ್ತ್ರೀಯೆಂದು ಯಾವಾಗ ಅಭಿಮಾನವು ಬರುತ್ತ ಇದೆಯೋ ಆಗ ರಾಗಪೂರ್ವಕವಾಗಿ ಭರ್ತೃಶುಶ್ರೂಷೆಯಲ್ಲಿಯೂ, ಗೃಹಸಂರಕ್ಷಣದಲ್ಲಿಯೂ, ಪಾಕಾದಿಕ್ರಿಯೆಗಳಲ್ಲಿಯೂ, ಪ್ರವೃತ್ತಿ ಕಾಣಪಡುತ್ತ ಇದೆ. ಆದಕಾರಣ ದಿಯಲ್ಲಿಯೇ ಪುರುಷನಿಗೂ ನಾನು ಪುರುಷನೆಂದು ಯಾವಾಗ ಅಭಿಮಾನವು ಬರುತ್ತ ಇದೆಯೋ ಆಗ ಅಭಿಮಾನದಿಂದ ರಾಗಾದಿಪೂರ್ವಕವಾಗಿ ದಾರಾದಿಪರಿಗ್ರಹಗಳಲ್ಲಿಯೂ, ಪಶ್ವಾದಿಗಳಲ್ಲಿಯೂ, ಧನಧಾನ್ಯಾರ್ಜನಗಳಲ್ಲಿಯೂ ಪ್ರವೃತ್ತಿಯು ಕಾಣಪಡುತ್ತ ಇದೆ. ಆದಕಾರಣ ದಿಯಲ್ಲಿಯೇ ಸಮಸ್ತಜನರಿಗೂ ವರ್ಣಾಶ್ರಮಾದ್ಯಭಿಮಾನದಿಂದ ಸ್ವಸ್ವೋಚಿತವ್ಯಾಪಾರಗಳಲ್ಲಿ ರಾಗಾದಿಪೂರ್ವಕವಾಗಿಯೇ ಪ್ರವೃತ್ತಿಯು ಕಾಣಪಡುತಲಿದೆಯಾದಕಾರಣ ರಾಗಾದಿಗಳಿಗೆ ಅಭಿಮಾನವೇ ಕಾರಣವೆನಿಸುವುದು.

ಆದರೆ ಈ ವಿಚಾರಕ್ಕೆ ಫಲವೇನು ?— ಎಂದರೆ, ಮುಮುಕ್ಷುಗಳಾದಂಥವರು ಸರ್ವವಸ್ತುಗಳಲ್ಲಿಯೂ ರೂಢವಾಗಿ ಇರುವಂಥ ಅಭಿಮಾನ-

ಬಿಡಬೇಕು, ಬಿಡಲ್ಪಟ್ಟಿದೆ ಆದರೆ ದುಃಖದಿಂದ ಬಿಡಲ್ಪಡುವನು ಎಂಬಂಥದೇ ಈ ವಿಚಾರಕ್ಕೆ ಫಲವೆನಿಸುವುದು. ಹಾಗಾದರೆ ಅಭಿಮಾನವುಂಟಾದರೆ ರಾಗಾದಿಗಳು ಉಂಟು: ಅಭಿಮಾನವಿಲ್ಲದಿದ್ದರೆ ರಾಗಾದಿಗಳು ಇಲ್ಲವೆಂಬುದ ಸುಷುಪ್ತಿಜಾಗ್ರತ್ಸ್ವಪ್ನಂಭೂತಾವಸ್ಥೆಗಳಲ್ಲಿ ನೋಡಿಕೊಂಬುದು.

ಆದರೆ ಈ ಅಭಿಮಾನವು ಏತಱಿಂದ ಬರುತ್ತದೆ ?-ಎಂದರೆ, ಅವಿವೇಕದಿಂದಲೇ ಬರುತ್ತಿದೆ. ಅದು ಹೇಗೆ ? ಎಂದರೆ, ಸಮಸ್ತವಾದವರಿಗೂ ಬ್ರಾಹ್ಮಣನು ನಾನು, ಕ್ಷತ್ರಿಯನು ನಾನು, ವೈಶ್ಯನು ನಾನು, ಶೂದ್ರನು ನಾನು ಎಂದು ಬ್ರಾಹ್ಮಣತ್ವಾದ್ಯಭಿಮಾನವು ಬರುತ್ತಿದೆಯಲ್ಲಾ, ಇದು ಆವುದ ಅವಲಂಬಿಸಿಕೊಂಡು ಬರುತ್ತಿದೆಯೆಂದು ಯಾರಿಗೂ ವಿವೇಕವಿಲ್ಲ; ಅದಱಿಂದ ಅಭಿಮಾನವು ಬರುತ್ತಿದೆ. ಇದಕ್ಕೆ ಅವಲಂಬನವಿಲ್ಲವೆ ?-ಎಂದರೆ, ಇಲ್ಲ. ಶರೀರವನ್ನು ಅವಲಂಬಿಸಿಕೊಂಡು ಬರುತ್ತದೆಯೆಂದು ಹೇಳುವಣವೆಂದರೆ, ಶರೀರವು ಕ್ಷತ್ರಿಯಾದಿಗಳಿಗೂ ಸಾಧಾರಣವಾಗಿ ಇದೆಯಾದ ಕಾರಣ ಅವರಿಗೂ ನಾನು ಬ್ರಾಹ್ಮಣನೆಂದು ಬರಬೇಕು. ಬರಲಿಲ್ಲವಲ್ಲ; ಅದಱಿಂದ ಬ್ರಾಹ್ಮಣತ್ವಾದಿಗಳು ಶರೀರವನ್ನು ಅವಲಂಬಿಸಿಕೊಂಡು ಬರುತ್ತಿದೆಯೆಂದು ಹೇಳಕೂಡದು. ಆದರೆ ಶಿಖಾಯಜ್ಞೋಪವೀತಗಳ ಅವಲಂಬಿಸಿಕೊಂಡು ಬರುತ್ತಿದೆಯೆಂದು ಹೇಳುವಣ-ಎಂದರೆ, ಶಿಖಾಯಜ್ಞೋಪವೀತಾದಿಗಳು ಕುಲಾಲಾದಿಗಳಿಗೂ ಸಾಧಾರಣವಾಗಿ ಇದೆಯಾಗಲಾಗಿ, ಅವರಿಗೂ ಬ್ರಾಹ್ಮಣನು ನಾನು ಎಂದು ಬರಬೇಕು. ಬರಲಿಲ್ಲವಲ್ಲ; ಅದು ಕಾರಣ ಶಿಖಾಯಜ್ಞೋಪವೀತಗಳನ್ನು ಅವಲಂಬಿಸಿಕೊಂಡು ಬರುತ್ತಿದೆಯೆಂದು ಹೇಳಕೂಡದು. ಆದರೆ ಬಂದೊಂದವಯವಕ್ಕೆ ಬ್ರಾಹ್ಮಣತ್ವವ ಹೇಳುವಣವೆಂದರೆ, ಆಯಾ ಅವಯವಗಳಿಗೆ ಬ್ರಾಹ್ಮಣತ್ವಾದಿ ನಾಮವ್ಯವಹಾರವಿಲ್ಲವಾದುದಱಿಂದಲೂ ಆಯಾ ಅವಯವಾದಿಗಳಿಗೆ ಬ್ರಾಹ್ಮಣತ್ವವ ಹೇಳಕೂಡದು. ಆದರೆ ವಿಶಿಷ್ಟವಾದ ಮಾತೃಪಿತೃಕುಲಜನ್ಯವಾದಂಥ ಅವಯವಗಳಿಗೆ ಬ್ರಾಹ್ಮಣತ್ವವ ಹೇಳುವಣವೆಂದರೆ, ವಿಶಿಷ್ಟವಾದ ಮಾತಾಪಿತ್ರಾದಿಗಳಿಂದ ತ್ಯಜಿಸಲ್ಪಟ್ಟಂಥ ಕೇಶಲೋಮನಖದಂತಮಲಮೂತ್ರಾದಿಗಳಿಗೂ ಬ್ರಾಹ್ಮಣತ್ವಾದಿ ವ್ಯವಹಾರವು ಬರಬೇಕು. ಹಾಗೆ ಕಾಣೆವಾಗಲಾಗಿ ಬಂದಕ್ಕೂ ಬ್ರಾಹ್ಮಣತ್ವಾದಿಗಳ ನಿರ್ವಚಿಸಿ ಯಾರೂ ಹೇಳಕೂಡದು.

ಆದರೆ ಬ್ರಾಹ್ಮಣತ್ವಾದಿ ವ್ಯವಹಾರಕ್ಕೆ ಗತಿಯೇನು ? ಎಂದರೆ, ಹೇಳೇವು ಅದೆಂತೆಂದರೆ— ಶೋಭನವೆಂದೂ, ಉತ್ಸವವೆಂದೂ, ಸಂತೆಯೆಂದೂ ಅನೇಕ ವಸ್ತುಸಮೂಹಂಗಳಿಗೆ ಆಯಾ ನಾಮಗಳು ಹೇಗೆ ಬರುತ್ತವೆಯೋ ಹಾಗೆ ಅನಿರ್ವಚನೀಯವಾದ ದೇಹೇಂದ್ರಿಯಾದಿಸಂಘಾತಕ್ಕೆ ವ್ಯವಹಾರದಲ್ಲಿ ಬ್ರಾಹ್ಮಣನೆಂದು ಹೆಸರು. ಹಾಗೆ ಕ್ಷತ್ರಿಯನೆನುತಲೂ, ವೈಶ್ಯನೆನುತಲೂ, ಶೂದ್ರನೆನುತಲೂ, ಸ್ತ್ರೀಯೆನುತಲೂ, ಪುರುಷನೆನುತಲೂ, ಶಾಸ್ತ್ರಿಯೆನುತಲೂ, ದೀಕ್ಷಿತನೆನುತಲೂ, ಪೌರಾಣಿಕನೆನುತಲೂ, ಭಾಗವತನೆನುತಲೂ, ದ್ರಾವಿಡನೆನುತಲೂ, ಕರ್ಣಾಟಕನೆನುತಲೂ, ತತ್ವವಾದಿಯೆನುತಲೂ, ಮಹಾರಾಷ್ಟ್ರನೆನುತಲೂ ಇವು ಮೊದಲಾದ ಸಮಸ್ತನಾಮಗಳೂ ದೇಹೇಂದ್ರಿಯಾದಿಸಂಘಾತವನ್ನು ವಿಷಯೀಕರಿಸಿಕೊಂಡು ಬರುತ್ತಿವೆಯಾದಕಾರಣ ದೇಹೇಂದ್ರಿಯಾದಿಸಂಘಾತಕ್ಕೆಯೇ ಈ ನಾಮಗಳು, ಆತ್ಮನಿಗೆ ಕಾಲತ್ರಯದಲ್ಲೂ ಈ ನಾಮಗಳು ಇಲ್ಲವೆಂದು ತಿಳಿಯದೇ ಇದ್ದರೆ ಅವಿವೇಕವೆನಿಸುವುದು. ಈ ಅವಿವೇಕದಿಂದ ಅಭಿಮಾನವು ಬರುತ್ತ ಇದೆ.

ಈ ವಿಚಾರಕ್ಕೆ ಫಲವೇನು ? ಎಂದರ ? ಆತ್ಮನಿಗೆ ಕಾಲತ್ರಯದಲ್ಲೂ ಬ್ರಾಹ್ಮಣತ್ವಾದಿಗಳು ಇಲ್ಲ; ದೇಹೇಂದ್ರಿಯಾದಿಸಂಘಾತಕ್ಕೇ ಬ್ರಾಹ್ಮಣತ್ವಾದಿಗಳೆಂದು ತಿಳಿವಂಥದೇ ಈ ವಿಚಾರಕ್ಕೆ ಫಲವೆನಿಸುವುದು.

ಈ ಅವಿವೇಕವೇತಱಿಂದ ಬಂದಿತು ? ಎಂದರೆ-ಅಜ್ಞಾನದಿಂದ ಬಂದಂಥದು. ಅಜ್ಞಾನವೆಂದರೇನು ?– ಎಂದರೆ, ತನ್ನ ತಾನಱಿಯದಿರುವುದೆ ಅಜ್ಞಾನವೆನಿಸುವುದು. ತನ್ನ ತಾನಱಿಯನೆ ? ಎಂದರೆ, ಅಱಿಯನು. ತನ್ನ ತಾನಱಿಯನೆಂದು ಹೇಳಬಹುದೇ ? ಎಂದರೆ, ಅಱಿಯದೇ ಇದ್ದನಾದಕಾರಣ ಹೇಳಬಹುದು. ಮತ್ತೇನೆಂದು ಬಲ್ಲನು? ಎಂದರೆ– ನಾನು ಬ್ರಾಹ್ಮಣನೆನುತಲೂ ಕ್ಷತ್ರಿಯನೆನುತಲೂ, ವೈಶ್ಯನೆನುತಲೂ, ಶೂದ್ರನೆನುತಲೂ ಈ ಕುಲದಲ್ಲಿ ಈ ಗೋತ್ರದಲ್ಲಿ ಹುಟ್ಟಿದಂಥವನೆನುತಲೂ, ಈ ಶರೀರವನ್ನು ಆತ್ಮನೆಂದು ಬಲ್ಲರೇ ಹೊಱತಾಗಿ ಶರೀರವ್ಯತಿರಿಕ್ತನಾಗಿ ಅಸಂಗನಾಗಿ ನಿರ್ವಿಕಾರನಾದಂಥ ಆತ್ಮನನ್ನು ಯಾರೂ ಅಱಿಯರು. ಹೀಗೆ ಅಱಿಯರೆಂದು ಹೇಳಬಹುದೇ ? ಎಂದರೆ, ಶಾಸ್ತ್ರಜ್ಞರಾದಂಥವರು ಯಾರೂ ಶರೀರವ್ಯತಿರಿಕ್ತನಾದಂಥ ಆತ್ಮನು ಒಬ್ಬನುಂಟೆಂದು ಅಱಿಯರು ? ಎಂದು ಹೇಗೆ ಹೇಳ

ವಣ ?—ಎಂದರೆ, ಹೇಳಬಹುದು. ಅದು ಹೇಗೆಂದರೆ- ಕರ್ತನಾಗಿ, ಭೋಕ್ತನಾಗಿ, ಪರಿಚ್ಛಿನ್ನನಾಗಿ, ಲೋಕಾಂತರಗಾಮಿಯಾಗಿ ಇದ್ದಂಥ ಜೀವನ ಆತ್ಮನಾಗಿ ಬಲ್ಲರೇ ಹೊಱತಾಗಿ, ಅಕರ್ತನಾಗಿ, ಅಭೋಕ್ತನಾಗಿ, ಅಪರಿಚ್ಛಿನ್ನನಾಗಿ, ಅಸಂಗನಾಗಿ, ಅಸಂಸಾರಿಯಾಗಿ, ಅದ್ವಿತೀಯನಾಗಿ, ವೇದಾಂತವೇದ್ಯನಾದಂಥ ಪ್ರತ್ಯಗಾತ್ಮನ ಯಾರೂ ಅಱಿಯರು. ಹೀಗೆ ಆತ್ಮನ ಅಱಿಯದೆ ಇರುವಂಥದೇ ಅಜ್ಞಾನವೆನಿಸುವುದು. ಈ ಅಜ್ಞಾನದಿಂದ ಅವಿವೇಕವು ಬರುತ್ತ ಇದೆ.

ಈ ಅಜ್ಞಾನವು ಏತಱಿಂದ ಬರುತ್ತದೆ ? ಅಜ್ಞಾನವು ಅನಾದಿಯಾದ ಕಾರಣ ಇಂಥದಱಿಂದ ಬರುತ್ತ ಇದೆ, ಎಂದು ಹೇಳಕೂಡದು. ಈ ಅಜ್ಞಾನಕ್ಕೆ ಸ್ವರೂಪವೇನೆಂದರೆ, ಹೇಳೇವು. ಅದೆಂತೆಂದರೆ- ಈ ಅಜ್ಞಾನವು ಜ್ಞಾನದಿಂದ ಬೋಧಿಸಲ್ಪಟ್ಟು ಹೋಗುತ್ತಿದೆಯಾಗಲಾಗಿ ಸತ್ತು ಎನುತಲೂ ಹೇಳಕೂಡದು. ಅಸತ್ತೆಂದು ಹೇಳುವಣವೆಂದರೆ— ಶಶವಿಷಾಣಾದಿಗಳೋಪಾದಿಯಲ್ಲಿ ರೀತಿ ಕಾಣದೆ ಹೋಗಬೇಕು. "ಅಹಮಜ್ಞಃ" ಎಂದು ಅಜ್ಞಾನವು ಅನುಭವಿಸಪಡುತಿದೆಯಾದಕಾರಣ ಅಜ್ಞಾನವ ಅಸತ್ತೆಂದು ಹೇಳಕೂಡದು. ಆದರೆ ಸತ್ತೆಂದು ಹೇಳುವಣವೆಂದರೆ— ವಿರುದ್ಧವಾದ ಕಾರಣ ಸತ್ತೆಂದು ಹೇಳಕೂಡದು. ಆದರೆ ಸಾವಯುವವೆಂದು ಹೇಳುವಣವೆಂದರೆ- ಇದು ಮೂಲಕಾರಣವಲ್ಲದೆ ಹೋಗಬೇಕು. ಮೂಲಕಾರಣವಾಗಿ ಇದೆಯಾಗಲಾಗಿ, ಅಜ್ಞಾನವು ಸಾವಯುವವೆಂದು ಹೇಳಕೂಡದು. ಆದರೆ ನಿರವಯುವವೆಂದು ಹೇಳುವಣವೆಂದರೆ— ಜಗದಾಕಾರವಾಗಿ ಪರಿಣಮಿಸದೆ ಹೋಗಬೇಕು. ಪರಿಣಮಿಸುತ್ತ ಇದೆಯಾದಕಾರಣ ನಿರವಯುವೆನುತಲೂ ಹೇಳಕೂಡದು. ಆದರೆ ಉಭಯಾತ್ಮಕವೆಂದು ಹೇಳುವಣವೆಂದರೆ- ವಿರುದ್ಧವಾದಕಾರಣ ಉಭಯಾತ್ಮಕವೆಂದು ಹೇಳಕೂಡದು. ಆದರೆ ಭಿನ್ನವೆಂದು ಹೇಳುವಣವೆಂದರೆ-ಅದ್ವಿತೀಯತ್ವವಾಗಿ ಬರವುದು. ಬಂದರೂ ಬರಲಿ ಎಂದು ಹೇಳಿದರಾದರೆ, ಆತ್ಮನು ಅದ್ವಿತೀಯನೆಂದು ಹೇಳುವಂಥ ಶ್ರುತ್ಯಾದಿಗಳಿಗೆ ವೈಯರ್ಥ್ಯ ಬರುವುದು. ಇಷ್ಟುಮಾತ್ರವಲ್ಲ. ಮಾಯೆಗೆ ಆತ್ಮಸತ್ತಿನಿಂದಲೂ ವ್ಯತಿರಿಕ್ತವಾದ ಸತ್ತಿಲ್ಲವಾದಕಾರಣ ಆತ್ಮನಿಂದಲೂ ಭಿನ್ನವಾದ ಪದಾರ್ಥವೆಂದು ಹೇಳಕೂಡದು. ಆದರೆ ಅಭಿನ್ನ

ವೆಂದು ಹೇಳುವಣವೆಂದರೆ,—ಆತ್ಮನು ಶಕ್ತಿಯಿಲ್ಲದೆ ಹೋಗಬೇಕು. ಆತ್ಮ ನು ಶಕ್ತಿಯಿಲ್ಲದೆ ಹೋದರೂ ಹೋಗಲಿ, ಎಂದರೆ— "ಆತ್ಮಶಕ್ತಿ" ಯೆಂದು ಪ್ರತಿಪಾದಿಸುವ ಶ್ರುತಿಗಳಿಗೆ ವೈಯರ್ಥ್ಯ ಬರುವುದು. ಇಷ್ಟುಮಾತ್ರವಲ್ಲ. ಅಭಿನ್ನವೆಂದು ಹೇಳಿದರೆ, ಮಾಯೆಗೆ ಚೇತನತ್ವ ಬರುವುದು, ಅಚೇತನತ್ವವು ಇಲ್ಲದೆ ಹೋಗಬೇಕು. ಇಷ್ಟುಮಾತ್ರವಲ್ಲ. ಆತ್ಮನಿಗೆ ಚೇತನಸ್ವರೂಪತ್ವ ಬರುವುದು: ಮಾಯೆಯೆಂದು ಹೇಳಪಡದೆ ಇರಬೇಕು, ಆತ್ಮನೆಂದು ಹೇಳಪಡಬೇಕು. ಆತ್ಮನೆಂದು ಹೇಳಪಡುತದೆ ಯೆಂದು ಹೇಳುವಣವೆಂದರೆ—ಮಾಯೆಯೆನುತಲೂ, ಪ್ರಕೃತಿಯೆನುತಲೂ, ಪ್ರಧಾನವೆನುತಲೂ, ಅವಿದ್ಯೆಯೆನುತಲೂ, ಪ್ರಳಯವೆನುತಲೂ, ಮಹಾಸುಷುಪ್ತಿಯೆನುತಲೂ, ತಮಸ್ಸೆನುತಲೂ, ಅಜ್ಞಾನವೆನುತಲೂ ಆತ್ಮಪ್ರತಿಪಾದಕವ್ಯತಿರಿಕ್ತಗಳಾದ ಶಬ್ದಗಳಿಂದ ಹೇಳಪಡುತ್ತಿದೆಯಾಗಲಾಗಿ, ಮಾಯೆಯು ಆತ್ಮನೆಂದು ಹೇಳಕೂಡದು. ಆದರೆ ಭಿನ್ನಾಭಿನ್ನವೆಂದು ಹೇಳುವಣವೆಂದರೆ— ವಿರುದ್ಧವಾದಕಾರಣ ಭಿನ್ನಾಭಿನ್ನವೆನುತಲೂ ಹೇಳಕೂಡದು. ಮತ್ತೆ ಹೇಗೆ ಹೇಳಕೂಡುವುದು ಎಂದರೆ—ಅನಿರ್ವಚನೀಯವೆಂದು ಹೇಳಬೇಕು. ಈ ಅನಿರ್ವಚನೀಯವಾದಂಥ ಅಜ್ಞಾನದಿಂದ ಅವಿವೇಕವು ಬರುತ್ತ ಇದೆ. ಆ ಅವಿವೇಕದಿಂದ ಅಭಿಮಾನವು ಬರುತ್ತ ಇದೆ. ಆ ಅಭಿಮಾನದಿಂದ ರಾಗದ್ವೇಷಗಳು ಬರುತ್ತ ಇವೆ. ಆ ರಾಗದ್ವೇಷಗಳಿಂದ ಕರ್ಮವು ಬರುತ್ತ ಇದೆ. ಆ ಕರ್ಮದಿಂದ ಶರೀರವು ಬರುತ್ತ ಇದೆ. ಆ ಶರೀರಪರಿಗ್ರಹದಿಂದ ದುಃಖವು ಬರುತ್ತ ಇದೆ. ಈ ದುಃಖವು ಆತ್ಯಂತಿಕವಾಗಿ ಯಾವಾಗ ಹೋಗುವುದೆಂದರೆ— ಸರ್ವಾತ್ಮನಾ ಶರೀರಪರಿಗ್ರಹವಿಲ್ಲದೆ ಹೋದರೆ ಹೋಗುವುದು. ಶರೀರಪರಿಗ್ರಹ ಯಾವಾಗ ಹೋಗುವುದೆಂದರೆ—ಕರ್ಮವು ಹೋದರೆ ಹೋಗುವುದು. ಕರ್ಮವು ಯಾವಾಗ ಹೋಗುವುದೆಂದರೆ—ರಾಗದ್ವೇಷಗಳು ಹೋದರೆ ಹೋಗುವುದು. ರಾಗದ್ವೇಷಗಳು ಯಾವಾಗ ಹೋಗುವುವೆಂದರೆ— ಅಭಿಮಾನ ಹೋದರೆ ಹೋಗುವುವು. ಅಭಿಮಾನ ಯಾವಾಗ ಹೋಗುವುದೆಂದರೆ— ಅವಿವೇಕ ಹೋದರೆ ಹೋಗುವುವು. ಅವಿವೇಕ ಯಾವಾಗ ಹೋಗುವುದೆಂದರೆ— ಅಜ್ಞಾನ ಹೋದರೆ ಹೋಗುವುದು. ಅಜ್ಞಾನ ಯಾವಾಗ ಹೋಗುವುದೆಂದರೆ— ಅದ್ವಿತೀಯಬ್ರಹ್ಮಾತ್ಮೈಕ್ಯ

ಪರೋಕ್ಷಜ್ಞಾನದಿಂದ ಹೋಗುವುದು; ಮತ್ತೇತರಿಂದಲೂ ಹೋಗದು. ಕರ್ಮದಿಂದ ಅಜ್ಞಾನಕ್ಕೆ ನಿವೃತ್ತಿ ಬರುವುದೆಂದು ಹೇಳುವಣವೆಂದರೆ– ಕರ್ಮಕ್ಕೂ ಅಜ್ಞಾನಕ್ಕೂ ವಿರೋಧವಿಲ್ಲವಾದಕಾರಣ ಅಜ್ಞಾನಕ್ಕೆ ನಿವೃತ್ತಿ ಬರಲಾರದು. ಮತ್ತೇನೆಂದರೆ, ಅಜ್ಞಾನಕ್ಕೆ ವೃದ್ಧಿಯನ್ನೇ ಮಾಡುವುದು. ಅದೆಂತೆಂದರೆ ? ದೃಷ್ಟಾಂತಪೂರ್ವಕವಾಗಿ ನಿರೂಪಿಸುತ್ತ ಇದ್ದೇವೆ. ಆ ದೃಷ್ಟಾಂತವೇನೆಂದರೆ, ಹೇಳೇವು. ಅಮಾವಾಸ್ಯೆಯ ಕತ್ತಲೆಗೆ ವಿರೋಧವಿಲ್ಲದಂತೆ ಮೇಘಾವರಣವು ಅಂಧಕಾರಕ್ಕೆ ನಿವೃತ್ತಿಯನ್ನು ಮಾಡದೆ ಅಂಧಕಾರವನ್ನು ನಿಬಿಡವಾಗಿ ಹೇಗೆ ಮಾಡುತ್ತ ಇದೆಯೋ, ಹಾಗೆ ಕರ್ಮವು ಅಜ್ಞಾನಕ್ಕೆ ವೃದ್ಧಿಯ ಮಾಡುವುದೇ ಹೊರತಾಗಿ ನಿವೃತ್ತಿಯ ಮಾಡಲಾರದು. ಆ ಅಂಧಕಾರವು ತನಗೆ ವಿರೋಧಿಯಾದಂಥ ಸೂರ್ಯಪ್ರಕಾಶದಿಂದ ಹೇಗೆ ನಿವೃತ್ತಿಯಾಗುತ್ತ ಇದೆಯೋ, ಹಾಗೆ ಆತ್ಮಜ್ಞಾನಕ್ಕೂ ವಿರೋಧಿಯಾದಂಥ ಅದ್ವಿತೀಯಬ್ರಹ್ಮಾತ್ಮೈಕ್ಯಾಪರೋಕ್ಷಜ್ಞಾನದಿಂದ ಹಾಗೆ ನಿವೃತ್ತಿ, ಮತ್ತೆ ಯಾವುದರಿಂದಲೂ ನಿವೃತ್ತಿ ಬರಲಾರದು. ಈ ಅಜ್ಞಾನವು ಏತರಿಂದ ಬರುವುದೆಂದರೆ– ಆತ್ಮಾನಾತ್ಮವಿವೇಕದಿಂದಲೇ ಬರಬೇಕು. ಮತ್ತೆ ಏತರಿಂದಲೂ ಬಾರದು. ಹಾಗಾದರೆ ಕರ್ಮೋಪಾಸನಯೋಗಾದಿಗಳಿಂದ ಬರುವುದೆಂದು ಹೇಳುವಣವೆಂದರೆ, ಹಾಗೆ ಹೇಳಕೂಡದು. ಏಕೆ ಹೇಳಕೂಡದು ? ಎಂದರೆ– ಜ್ಞಾನವು ವಸ್ತುತಂತ್ರವಾದ ಕಾರಣ ಪುರುಷತಂತ್ರವಾದ ಕರ್ಮದಿಂದ ಅಂತಃಕರಣಶುದ್ಧಿ ಬರುವುದೇ ಹೊರತು ಜ್ಞಾನವು ಬರಲಾರದು. ಜ್ಞಾನವು ಪ್ರಮಾಣಜನ್ಯವಾದಕಾರಣ ಮಾನಸಕ್ರಿಯಾತ್ಮಕವಾದಂಥ ಉಪಾಸನೆಯಿಂದ ಚಿತ್ತೈಕಾಗ್ರತೆ ಬರುವುದೇ ಹೊರತಾಗಿ ಜ್ಞಾನವು ಬರಲಾರದು. ಯೋಗವು ಮಾನಸಕ್ರಿಯಾರೂಪವಾದ ಕಾರಣ ಅಣಿಮಾದ್ಯೈಶ್ವರ್ಯಾದಿಗಳನ್ನು ಸಂಪಾದಿಸಿ ಜ್ಞಾನಕ್ಕೂ ಜ್ಞಾನಫಲವಾದಂಥ ಕೃತಕೃತ್ಯಾದಿಗಳಿಗೂ ವಿಘ್ನವ ಮಾಡುವುದೇ ಹೊರತಾಗಿ ಜ್ಞಾನವ ಹುಟ್ಟಿಸಲಾರದು. ಆದರೆ ಜ್ಞಾನವು ಏತರಿಂದ ಬರುವುದೆಂದರೆ– ಆತ್ಮಾನಾತ್ಮವಿಚಾರದಿಂದಲೇ ಬರಬೇಕು. ಅದೆಂತು, ಎಂದರೆ–ದೃಷ್ಟಾಂತಪೂರ್ವಕವಾಗಿ ನಿರೂಪಿಸುತ್ತ ಇದ್ದೇವೆ. ಗಾಯತ್ರಿ, ಸಾಲಿಗ್ರಾಮ, ರುದ್ರಾಕ್ಷಾದಿಗಳ ತತ್ವಜ್ಞಾನವು ಆದಕದಕುಚಿತವಾದಂಥ ಪರೀಕ್ಷಾನಿಘರ್ಷಣಾದಿ ವಿಚಾರಗ

ಳಿಂದ ಹೇಗೆ ಹುಟ್ಟುತ್ತ ಇದೆಯೋ, ಸ್ನಾನಧ್ಯಾನಪ್ರಾಣಾಯಾಮಾದಿಗಳಿಂದ ಹೇಗೆ ಹುಟ್ಟಲಿಲ್ಲವೋ, ಹಾಗೆ ಬ್ರಹ್ಮತತ್ವಜ್ಞಾನವು ಆತ್ಮಾನಾತ್ಮವಿಚಾರದಿಂದ ಹುಟ್ಟುತ್ತ ಇದೆಯೋ ಹೊರತಾಗಿ, ಕರ್ಮೋಪಾಸನೆಗಳಿಂದ ಹುಟ್ಟಲಾರದು.

ಅದುಕಾರಣ ಮುಮುಕ್ಷುವಾದಂಥವನು ಸರ್ವದಾ ಸರ್ವಪ್ರಯತ್ನದಿಂದಲೂ ಆತ್ಮಾನಾತ್ಮವಿಚಾರವ ಮಾಡಬೇಕು. ಹೀಗೆ ಮಾಡಿದುದೇ ಆದರೆ ಸಂಸಾರದಿಂದ ಬಿಡಲ್ಪಟ್ಟು, ಶೀಘ್ರವಾಗಿ ಜೀವನ್ಮುಕ್ತಿಸುಖವನ್ನು ಹೊಂದುವನೆಂದು ವೇದಾಂತಸಿದ್ಧಾಂತವಾದುದು.

ಶ್ಲೋ ॥ ದುಃಖಹೇತುರ್ಹಿ ದೇಹಸ್ಯಾ ದ್ದೇಹಹೇತುಶ್ಚ ಕರ್ಮ ತತ್ ॥
ಕರ್ಮಹೇತುಶ್ಚ ರಾಗಾದೀ ರಾಗೋ ಮಾನಾದಿಕಾರಣಂ ॥೧॥

ಅವಿವೇಕೋ ಮಾನಹೇತುರಜ್ಞಾನಂ ತಸ್ಯ ಕಾರಣಂ ॥
ಜ್ಞಾನಾನ್ನ ನಶ್ಯೇತ್ತದಜ್ಞಾನಂ ತದ್ಜ್ಞಾನಂ ಸ್ಯಾದ್ವಿಚಾರತಃ ॥೨॥

ಅಜ್ಞಾನವೃಕ್ಷಮವಿವೇಕಮಹಾಂಕುರಂ ಯೋ ।
ದೇಹಾಭಿಮಾನವಿಟಪಂ ಬಹುರಾಗಶಾಖಂ ॥
ಕರ್ಮಪ್ರಜಸ್ಥಲಜದೇಹಫಲಾಟುಮೇತಂ ।
ಜ್ಞಾನಾಸಿನಾರ್ತ್ತರಸಮೇಷ ಸುಧೀಶ್ಛಿನತ್ತಿ ॥೩॥

ಇಂತೀಕನ್ನಡಭಾಷೆಯೊಳ್ ವಿರಚಿಸಿದ ವಾಸುದೇವ ಯತೀಂದ್ರ ಪ್ರೋಕ್ತಮಪ್ಪ

ವೇದಾಂತವಿವೇಕಸಾರದಲ್ಲಿ

ರಾಗದ್ವೇಷಪ್ರಕರಣಮಂ ಪೇಳ್ದುದು,

ಷಷ್ಠಪ್ರಕರಣಂ.

# ಏಳನೆಯ ಪ್ರಕರಣ.

॥ ಆತ್ಮಾನಾತ್ಮವಿವೇಕ ॥

ಶ್ಲೋ ॥ ಆತ್ಮಾನಾತ್ಮವಿವೇಕೇನ ಮುನಿರ್ಮುಚ್ಯೇತ ಬಂಧನಾತ್ ।
ಆತ್ಮಾ ಚ ಕೀದೃಶಃ ಕೋವಾನಾತ್ಮಾ ಚೇತ್ಯತ್ರ ಚಿಂತ್ಯತೇ ॥

ಆತ್ಮಾನಾತ್ಮವಿವೇಕದಿಂದಲೇ ಜ್ಞಾನವು ಹುಟ್ಟುವುದೆಂದು ಹೇಳಪಟ್ಟಿತಾಗಲಾಗಿ, ಆ ಆತ್ಮನ ವಿಚಾರಿಸುತ್ತ ಇದ್ದೇವೆ.

ಆತ್ಮನೆಂಬುದಾರೆಂದರೆ— ಶರೀರತ್ರಯವಿಲಕ್ಷಣನಾಗಿ ಅವಸ್ಥಾತ್ರಯ ಸಾಕ್ಷಿಯಾಗಿ ಪಂಚಕೋಶವ್ಯತಿರಿಕ್ತನಾದ ಸಚ್ಚಿದಾನಂದಸ್ವರೂಪನಾದಂಥವನು ಆತ್ಮನೆಂದು ಹೇಳಪಡುವನು. ಅನಾತ್ಮನೆಂಬುದಾರೆಂದರೆ— ಸಮಷ್ಟಿವ್ಯಷ್ಟ್ಯಾತ್ಮಕವಾದಂಥ ಶರೀರತ್ರಯವು ಅನಾತ್ಮನೆಂದು ಹೇಳಪಡುವುದು. ಅದಕ್ಕೆ ಲಕ್ಷಣವೇನೆಂದರೆ- ಅನೃತಜಡದುಃಖವು ಲಕ್ಷಣವೆನಿಸುವುದು. ಸಮಷ್ಟಿಯೆಂದರೇನೆಂದರೆ- ದೃಷ್ಟಾಂತಪೂರ್ವಕವಾಗಿ ನಿರೂಪಿಸುತ್ತ ಇದ್ದೇವೆ. ಅದೆಂತೆಂದರೆ, ಹೇಳೇವು. ಮಹಾಜನವೆಂದು ಸಮಷ್ಟಿ, ಪುರುಷನೆಂದು ವ್ಯಷ್ಟಿ; ವನವೆಂದು ಸಮಷ್ಟಿ, ವೃಕ್ಷವೆಂದು ವ್ಯಷ್ಟಿ; ಗ್ರಾಮವೆಂದು ಸಮಷ್ಟಿ, ಗೃಹವೆಂದು ವ್ಯಷ್ಟಿ. ಹೀಗೆ ಅನೇಕ ಪದಾರ್ಥಗಳು ಕೂಡಿಸಿ ಸಮಷ್ಟಿ, ಒಂದೊಂದು ಪದಾರ್ಥವು ವ್ಯಷ್ಟಿ, ಎಂದು ಹೇಗೆ ಹೇಳಪಡುತ್ತ ಇದೆಯೋ- ಹಾಗೆ ದಾರ್ಷ್ಟಾಂತಿಕದಲ್ಲೂ ಸಮಸ್ತ ಪ್ರಾಣಿಗಳ ಶರೀರವು ಸಮಷ್ಟಿಯೆನಿಸುವುದು; ಒಂದೊಂದು ಪ್ರಾಣಿಯ ಶರೀರವು ವ್ಯಷ್ಟಿಯೆನಿಸುವುದು. ಆ ಶರೀರವು ಸ್ಥೂಲಶರೀರವೆನುತಲೂ, ಸೂಕ್ಷ್ಮಶರೀರವೆನುತಲೂ, ಕಾರಣಶರೀರವೆನುತಲೂ ಮೂರು ವಿಧಗಳು. ಈ ಶರೀರತ್ರಯಗಳೊಳಗೆ ಸಮಸ್ತ ಪ್ರಾಣಿಗಳ ಸ್ಥೂಲಶರೀರವು ಸಮಷ್ಟಿಸ್ಥೂಲಶರೀರವೆನಿಸುವುದು; ಸಮಸ್ತ ಪ್ರಾಣಿಗಳ ಸೂಕ್ಷ್ಮಶರೀರವು ಸಮಷ್ಟಿ ಸೂಕ್ಷ್ಮಶರೀರವೆನಿಸುವುದು; ಸಮಸ್ತ ಪ್ರಾಣಿಗಳ ಕಾರಣಶರೀರವು ಸಮಷ್ಟಿಕಾರಣಶರೀರವೆನಿಸುವುದು; ಒಬ್ಬೊಬ್ಬ ಪ್ರಾಣಿಯ ಸ್ಥೂಲಶರೀರವು ವ್ಯಷ್ಟಿಸ್ಥೂಲಶರೀರವೆನಿಸುವುದು; ಒಬ್ಬೊ

ಬ್ಬ ಪ್ರಾಣಿಯ ಸೂಕ್ಷ್ಮಶರೀರವು ವ್ಯಷ್ಟಿಸೂಕ್ಷ್ಮಶರೀರವೆನಿಸುವುದು; ಒಬ್ಬೊಬ್ಬ ಪ್ರಾಣಿಯ ಕಾರಣಶರೀರವು ವ್ಯಷ್ಟಿಕಾರಣಶರೀರವೆನಿಸುವುದು. ಈಪ್ರಕಾರವಾಗಿ ಸಮಷ್ಟಿಯೆನುತಲೂ ವ್ಯಷ್ಟಿಯೆನುತಲೂ ಏತಕ್ಕೆ ಹೇಳಬೇಕೆಂದರೆ ?– ಈಶ್ವರತ್ವವೂ ಜೀವತ್ವವೂ ಬರುವುದಕ್ಕೋಸ್ಕರ ಹೇಳಬೇಕು. ಈಶ್ವರತ್ವವೂ ಜೀವತ್ವವೂ ಇನ್ನುಮೇಲೆ ಬರಹೋಗುತ್ತದೆಯೋ ? ಎಂದರೆ– ಈಶ್ವರತ್ವವೂ ಜೀವತ್ವವೂ ಉಪಾಧಿಯಿಂದ ಅನಾದಿಯಾಗಿ ಬಂದು ಇವೆ. ಆದಹೊತ್ತಿಗೂ ಈಶ್ವರತ್ವವೂ ಜೀವತ್ವವೂ ಉಪಾಧಿಯಿಂದ ಬಂದುವೆಂದು ಯಾರೂ ಅಱಿಯರು. ಮತ್ತೇನೆಂದು ಬಲ್ಲರೆಂದರೆ– ಈಶ್ವರತ್ವವೂ ಜೀವತ್ವವೂ ವಾಸ್ತವವೆಂತಲೇ ಬಲ್ಲರು. ಅವಱೋಪಾಧಿಯಲ್ಲಿ ತಿಳಿದರೆ ದೋಷವೇನು ?, ಎಂದರೆ– ಎಷ್ಟುಪರ್ಯಂತವೂ ಹಾಗೆ ವಾಸ್ತವವೆಂದು ತಿಳಿಯುತ್ತ ಇದ್ದಾರೆಯೋ ಅಷ್ಟುಪರ್ಯಂತವೂ ಅವರಿಗೆ ಸಂಸಾರಬಂಧದಿಂದ ನಿವೃತ್ತಿ ಬರಲಾಱದು. ಸಮಸ್ತಪ್ರಜಾಮಾತೃಕೆಯಾದಂಥ ಶ್ರುತಿಯು ಈಶ್ವರತ್ವವನ್ನೂ ಜೀವತ್ವವನ್ನೂ ಉಪಾಧಿಯಿಂದ ಬಂದಂಥದೆಂದು ಹೇಳುವುದಕ್ಕೋಸ್ಕರ ಸಮಷ್ಟಿಯೆನುತಲೂ ವ್ಯಷ್ಟಿಯೆನುತಲೂ ಹೇಳುತ್ತ ಇದೆ. ಹಾಗಾದರೆ ಆವ ಉಪಾಧಿಯಿಂದ ಈಶ್ವರತ್ವವು ಬಂದಿತು; ಆವ ಉಪಾಧಿಯಿಂದ ಜೀವತ್ವವು ಬಂದಿತು ?, ಎಂದರೆ,– ಸಮಷ್ಟಿಶರೀರೋಪಾಧಿತ್ರಯದಿಂದ ಈಶ್ವರತ್ವವೂ, ವ್ಯಷ್ಟಿಶರೀರೋಪಾಧಿತ್ರಯದಿಂದ ಜೀವತ್ವವೂ ಬಂದಿತು. ಈ ಈಶ್ವರತ್ವದಲ್ಲಿ ಸಮಷ್ಟಿಕಾರಣಶರೀರವೊಂದೇ ಸಾಲದೆ– ಎಂದರೆ, ಸಾಕು. ಹಾಗಾದರೆ ಸಮಷ್ಟಿಸ್ಥೂಲಸೂಕ್ಷ್ಮಶರೀರಗಳನ್ನು ಏಕೆ ಹೇಳಬೇಕು? ಎಂದರೆ– ಉಪಾಸನಾರ್ಥವಾಗಿ ಹೇಳಪಡುತಿದೆ. ಅದೆಂತೆಂದರೆ, ಹೇಳೇವು. ಮುಖ್ಯಾಧಿಕಾರಿಯಾದಂಥವನಿಗೆ ಸಮಷ್ಟಿಕಾರಣಶರೀರೋಪಾಧಿಕನಾದ ಆತ್ಮನು ಉಪಾಸ್ಯನೆಂದು ಹೇಳಪಡುತ ಇದ್ದಾನೆ. ಈತನಿಗೆ ಈಶ್ವರನೆನುತಲೂ, ಅಂತರ್ಯಾಮಿಯೆನುತಲೂ, ಅವ್ಯಾಕೃತನೆನುತಲೂ ಮೂಱು ಹೆಸರು. ಈತನಿಗೆ ಸಮಷ್ಟಿಕಾರಣಶರೀರದಲ್ಲಿ ಅಭಿಮಾನವುಂಟೋ ಇಲ್ಲವೋ– ಎಂದರೆ, ಅಭಿಮಾನವು ಅಹಂಕಾರಧರ್ಮವಾದಕಾರಣ ಆಯುವಸ್ಥೆಯಲ್ಲಿ ಅಹಂಕಾರವಿಲ್ಲವಾಗಲಾಗಿ ಅಭಿಮಾನವುಂಟೆಂದು ಹೇಳಕೂಡ

ದು. ಮತ್ತೆ ಹೇಗೆಂದರೆ ? ಸಮಷ್ಟಿಸೂಕ್ಷ್ಮಶರೀರವಿಶಿಷ್ಟಮಾತ್ರತ್ವವೇ ಹಿರಣ್ಯಗರ್ಭತ್ವವೆಂದು ಹೇಳಬೇಕು. ಈತನ ಉಪಾಸನೆಯು ಮಾಡುವುದರಲ್ಲಿ ಅಸಮರ್ಥರಾದವರಿಗೆ ಆ ಈಶ್ವರನ ಅವಸ್ಥಾಂತರವಾದ ಸಮಷ್ಟಿಸ್ಥೂಲಶರೀರೋಪಾಧಿಕನಾದ ಈಶ್ವರನ ಉಪಾಸಿಸಹೇಳಿ ಶ್ರುತಿ ಹೇಳುತ್ತ ಇದೆ. ಈತನ ಹೆಸರೇನೆಂದರೆ, ವಿರಾಟ್ ಎನುತಲೂ, ವೈಶ್ವಾನರನೆನುತಲೂ, ವೈರಾಜನೆನುತಲೂ ಮೂರು ಹೆಸರು. ಈತನಿಗೆ ಆಸಮಷ್ಟಿಸ್ಥೂಲಶರೀರದಲ್ಲಿ ಅಭಿಮಾನವುಂಟೋ ಇಲ್ಲವೋ–ಎಂದರೆ, ನಿಯುತವಾದಂಥ ಶರೀರವಿಲ್ಲವಾದ ಕಾರಣ ಅಭಿಮಾನವುಂಟೆಂದು ಹೇಳಕೂಡದು. ಮತ್ತೇನೆಂದರೆ ? ಈಶ್ವರನಿಗೆ ಸಮಷ್ಟಿಸ್ಥೂಲಶರೀರವಿಶಿಷ್ಟಮಾತ್ರತ್ವವೂ ಈಶ್ವರತ್ವವೆಂದು ಹೇಳಬೇಕು. ಅಂತರ್ಯಾಮಿಯಾದಂಥ ಈಶ್ವರನೇ ಸಾತ್ವಿಕರಾಜಸತಾಮಸಗುಣಗಳನ್ನು ಅವಲಂಬಿಸಿಕೊಂಡು ಸೃಷ್ಟಿಸ್ಥಿತಿ ಸಂಹಾರಗಳಿಗೆ ಕರ್ತನಾಗಿ ಬ್ರಹ್ಮದೇವನೆನುತಲೂ ವಿಷ್ಣುವೆನುತಲೂ ರುದ್ರನೆನುತಲೂ ಯಾವಾಗ ಹೇಳಪಡುತ, ಇದ್ದಾನೆಯೋ; ಮತ್ತು ದುಷ್ಟನಿಗ್ರಹಶಿಷ್ಟಪರಿಪಾಲನಕ್ಕೋಸ್ಕರ ರಾಮಕೃಷ್ಣಾದ್ಯವತಾರಗಳನ್ನು ಯಾವಾಗ ಎತ್ತುತ್ತ ಇದ್ದಾನೆಯೋ: ಆಗ ಈಶ್ವರನಿಗೆ ಆಯಾಶರೀರದಲ್ಲಿ ವಿಶಿಷ್ಟತ್ವಾಭಿಮಾನವುಂಟು. ಆಯಾ ಅಭಿಮಾನವಿಲ್ಲವೆಂದು ಹೇಳುವಣವೆಂದರೆ– ಸೃಷ್ಟಿಸ್ಥಿತಿಸಂಹಾರಗಳು ಕೂಡಮಾದಕಾರಣ ಅಭಿಮಾನವುಂಟೆಂದು ಹೇಳಬೇಕು. ಹಾಗಾದರೆ ಜೀವಿಗಳಿಗೂ ಈಶ್ವರನಿಗೂ ವೈಲಕ್ಷಣ್ಯವೇನೆಂದರೆ– ಜೀವಿಗಳಿಗೆ ಅಹಂಕಾರವು ಮಾತಾಪೂರ್ವಕವಾಗಿ ಸ್ವಶರೀರದಲ್ಲಿ ಅಭಿಮಾನವಿದೆಯಾದಕಾರಣ ಇಂಥ ಅಭಿಮಾನವು ಈಶ್ವರನಿಗೆ ಇಲ್ಲವಾಗಲಾಗಿ ಲೋಕಸಂರಕ್ಷಣಾರ್ಥವಾಗಿಯೇ ಅಭಿಮಾನವಿದೆಯಾದಕಾರಣ ಜೀವನಿಗೂ ಈಶ್ವರನಿಗೂ ಹೀಗೆ ವೈಲಕ್ಷಣ್ಯವುಂಟೇ ಸರಿ. ಈ ಈಶ್ವರನೇ ಪ್ರತಿಮೆಗಳಲ್ಲಿಯೂ ಉಪಾಸ್ಯನಾಗಿ ಹೇಳಪಡುತ ಇದ್ದಾನೆ. ಹೀಗೆ ಏತಕ್ಕೆ ಹೇಳಬೇಕಾಯಿತೆಂದರೆ, ವಿರಾಡುಪಾಸನೆಯಲ್ಲಿ ಅನಧಿಕಾರಿಗಳಾಗಿದ್ದಂಥವರು ತ್ರಿಮೂರ್ತಿಗಳ ಉಪಾಸನೆಯು ಮಾಡಬೇಕು; ಆ ಮೂರ್ತಿಗಳ ಉಪಾಸನೆಯಲ್ಲಿ ಅನಧಿಕಾರಿಗಳಾಗಿ ಇದ್ದಂಥವರಿಗೆ ರಾಮಕೃಷ್ಣಾದ್ಯವತಾರಗಳನ್ನು ಉಪಾಸನೆಯು

ಮಾಡಬೇಕು; ಆ ಅವತಾರಾದಿಗಳ ಉಪಾಸನೆಗೆ ಅನಧಿಕಾರಿಗಳಾಗಿದ್ದಂಥವರಿಗೆ ಆ ಅವತಾರಸೂಚಕವಾಗಿರುವಂಥ ತಾಮ್ರಾದಿಪ್ರತಿಮೆಗಳನು ಉಪಾಸನೆಯು ಮಾಡಬೇಕು-ಎಂದು ಶಾಸ್ತ್ರವು ಹೇಳುತ್ತಿದೆಯಾಗಲಾಗಿ ಸರ್ವಜನರುಗಳೂ ಆವಾವ ಮೂರ್ತಿಗಳ ಉಪಾಸನೆಯು ಮಾಡುತ್ತ ಇದ್ದಾರೋ ಆಯಾ ಮೂರ್ತಿದ್ವಾರಾ ಅಂತರ್ಯಾಮಿಯೇ ಉಪಾಸಿಸಪಡುತ್ತಿದ್ದಾನೆ. ಈ ಮೂರ್ತ್ಯಾದಿಗಳ ಉಪಾಸನೆಯು ಮಾಡಬೇಕೆಂದು ಹೇಳುವ ಶಾಸ್ತ್ರಕ್ಕೆ ತಾತ್ಪರ್ಯವೇನೆಂದರೆ- ದ್ವಾರಾದ್ವಾರಾ ಅಂತರ್ಯಾಮಿಯನ್ನು ತಿಳಿಯಬೇಕೆಂದು ತಾತ್ಪರ್ಯ. ಹೀಗೆ ಸಮಷ್ಟಿಶರೀರೋಪಾಧಿತ್ರಯದಿಂದ ಆತ್ಮನಿಗೆ ಈಶ್ವರತ್ವವು ಬಂದಿತು; ಜೀವತ್ವವೇತರಿಂದ ಬಂದಿತೆಂದರೆ- ವ್ಯಷ್ಟಿಶರೀರೋಪಾಧಿತ್ರಯದಿಂದ ಬಂದಂಥದು. ಜೀವತ್ವಕ್ಕೆ ಶರೀರತ್ರಯವು ಬೇಕೇ ಎಂದರೆ, ಬೇಕು. ಅದು ಹೇಗೆಂದರೆ? ಜೀವನು ಅಂತಃಕರಣಪ್ರತಿಬಿಂಬವಾಗಲಾಗಿ ಜೀವತ್ವದಲ್ಲಿ ಸೂಕ್ಷ್ಮಶರೀರವು ಬೇಕು. ಸ್ಥೂಲಶರೀರವಿಲ್ಲದೆ ಕರ್ತೃತ್ವ ಕೂಡದಾಗಲಾಗಿ ಸ್ಥೂಲಶರೀರವು ಬೇಕು. ಕಾರ್ಯವಾಗಿರುವಂಥ ಸ್ಥೂಲಸೂಕ್ಷ್ಮಶರೀರಗಳು ಕಾರಣವನ್ನು ಬಿಟ್ಟು ಇರವಾದುದರಿಂದ ಎರಡಕ್ಕೂ ಕಾರಣವಾಗಿರುವಂಥ ಕಾರಣಶರೀರವು ಬೇಕು. ಈ ಪ್ರಕಾರವಾಗಿ ಜೀವತ್ವದಲ್ಲಿ ಶರೀರತ್ರಯವು ಬೇಕಾದರೆ ಆ ಶರೀರತ್ರಯದಲ್ಲಿ ಜೀವನಿಗೆ ಅಭಿಮಾನವುಂಟೋ ಇಲ್ಲವೋ- ಎಂದರೆ, ಅಭಿಮಾನವಿಲ್ಲದೆ ಕರ್ತೃತ್ವ ಕೂಡದಾಗಲಾಗಿ ಶರೀರತ್ರಯದಲ್ಲೂ ಜೀವನಿಗೆ ಅಭಿಮಾನವುಂಟು. ಹಾಗಾದರೆ ಈ ಜೀವನು ಎಷ್ಟು ಎಂದರೆ, ಮೂರು ವಿಧ. ಅವರಿಗೆ ಹೆಸರೇನೆಂದರೆ ಹೇಳೇವು. ಜಾಗ್ರದವಸ್ಥೆಯಲ್ಲಿಯೂ ವ್ಯಷ್ಟಿಸ್ಥೂಲಶರೀರದಲ್ಲಿಯೂ ಅಭಿಮಾನವ ಮಾಡಿದಂಥ ಜೀವನಿಗೆ ವಿಶ್ವನೆನುತಲೂ ವ್ಯಾವಹಾರಿಕನೆನುತಲೂ ಚಿದಾಭಾಸನೆನುತಲೂ ಮೂರು ಹೆಸರು. ಸ್ವಪ್ನಾವಸ್ಥೆಯಲ್ಲಿಯೂ ವ್ಯಷ್ಟಿಸೂಕ್ಷ್ಮಶರೀರದಲ್ಲಿಯೂ ಅಭಿಮಾನಿಸಿದಂಥ ಜೀವನಿಗೆ ತೈಜಸನೆನುತಲೂ ಪ್ರಾತಿಭಾಸಿಕನೆನುತಲೂ ಸ್ವಪ್ನಕಲ್ಪಿತನೆನುತಲೂ ಮೂರು ಹೆಸರು. ಸುಷುಪ್ತ್ಯವಸ್ಥೆಯಲ್ಲಿಯೂ ವ್ಯಷ್ಟಿಕಾರಣಶರೀರದಲ್ಲಿಯೂ ಅಭಿಮಾನವ ಮಾಡಿದ ಜೀವನಿಗೆ ಪ್ರಾಜ್ಞನೆನುತಲೂ ಪಾರಮಾರ್ಥಿಕನೆನುತಲೂ ಅವಿಚ್ಛಿನ್ನನೆನುತಲೂ ಮೂರು ಹೆಸರು. ಈ ಪ್ರಕಾರವಾಗಿ ಆತ್ಮ

ನಿಗೆ ಸಮಷ್ಟಿಶರೀರತ್ರಯದಿಂದ ಈಶ್ವರತ್ವವೂ, ವ್ಯಷ್ಟಿಶರೀರತ್ರಯದಿಂದ ಜೀವತ್ವವೂ ಬಂದಿತೆಂದು ಹೇಳಪಡುವದು. ಅದಂತಿರಲಿ. ಒಬ್ಬ ಆತ್ಮನಿಗೆ ಜೀವತ್ವವೂ ಈಶ್ವರತ್ವವೂ ಎಂಬ ರೂಪದ್ವಯವು ಹೇಗೆ ಕೂಡೀತು?— ಎಂದರೆ, ಕೂಡುವುದು. ಅದು ಹೇಗೆಂದರೆ? ದೃಷ್ಟಾಂತಪೂರ್ವಕವಾಗಿ ಹೇಳೇವು. ಒಬ್ಬ ದೇವದತ್ತನಿಗೆ ಪುತ್ರನ ಅಪೇಕ್ಷಿಸಿ ಪಿತೃತ್ವವೂ, ಪೌತ್ರನ ಅಪೇಕ್ಷಿಸಿ ಪಿತಾಮಹತ್ವವೂ ಹೇಗೆ ಬಂದಿತೋ ಹಾಗೆ ಒಬ್ಬ ಆತ್ಮನಿಗೆ ವ್ಯಷ್ಟ್ಯುಪಾಧಿಯ ಅಪೇಕ್ಷಿಸಿ ಜೀವತ್ವವೂ ಸಮಷ್ಟ್ಯುಪಾಧಿಯ ಅಪೇಕ್ಷಿಸಿ ಈಶ್ವರತ್ವವೂ ಬರಬಹುದಲ್ಲ. ಅದಂತಿರಲಿ. ಪಿತೃತ್ವಪಿತಾಮಹತ್ವಾದಿಧರ್ಮಗಳ ಸಂಗಡ ಕೂಡಿಕೊಂಡಿರುವ ದೇವದತ್ತನಲ್ಲಿ ಕಿಂಚಿಜ್ಞತ್ವ ಸರ್ವಜ್ಞತ್ವಾದಿಗಳ ಕಾಣೆವಲ್ಲ. ದಾರ್ಷ್ಟಾಂತಿಕದಲ್ಲಾದರೆ ಜೀವತ್ವ ಈಶ್ವರತ್ವಾದಿಧರ್ಮದೊಡನೆ ಕೂಡಿಕೊಂಡಿರುವ ಆತ್ಮನಲ್ಲಿ ಕಿಂಚಿಜ್ಞತ್ವವೂ ಸರ್ವಜ್ಞತ್ವವೂ ಕಾಣಪಡುತಿದೆಯಾದಕಾರಣ ಈ ದೇವದತ್ತದೃಷ್ಟಾಂತವು ಹೇಗೆ ಕೂಡೀತೆಂದರೆ, ಹೇಳೇವು. ಅದಂತಿರಲಿ. ಒಬ್ಬ ಆತ್ಮನಿಗೆ ಉಪಾಧಿದ್ವಯದಿಂದ ಜೀವತ್ವವೂ ಈಶ್ವರತ್ವವೂ ಬರಬಹುದೆಂಬುದಕ್ಕಲ್ಲಿ ದೇವದತ್ತದೃಷ್ಟಾಂತವ ಹೇಳೇವು. ಇನ್ನುಮೇಲೆ ಮಹದುಪಾಧಿಯಿಂದ ಆತ್ಮನಿಗೆ ಸರ್ವಜ್ಞತ್ವವೂ, ಕಿಂಚಿದುಪಾಧಿಯಿಂದ ಕಿಂಚಿಜ್ಞತ್ವವೂ ಬರಬಹುದೆಂಬುದಕ್ಕಲ್ಲಿ ದೃಷ್ಟಾಂತವ ಹೇಳೇವು. ಅದು ಹೇಗೆಂದರೆ? ಏಕವಾಗಿದ್ದಂಥ ಜಲಕ್ಕೆ ಕೆರೆಯೆಂಬ ಮಹದುಪಾಧಿಯಿಂದ ಅನೇಕ ಗದ್ದೆಗಳ ಪೈರು ಮಾಡುವ ಶಕ್ತಿಯೂ, ಸಮಸ್ತ ಪ್ರಾಣಿಗಳಿಗೂ ಸ್ನಾನಪಾನಾದಿಕ್ರಿಯೆಗಳ ಮಾಡಿಸುವ ಶಕ್ತಿಯೂ ಘಟವೆಂಬ ಸ್ವಲ್ಪೋಪಾಧಿಯಿಂದ ಪಾನಾದಾನಕ್ರಿಯೆಗಳ ಮಾತ್ರ ಮಾಡಿಸುವ ಶಕ್ತಿಯೂ ಹೇಗೆ ಇದೆಯೋ; ಅಗ್ನಿಗೆ ದೊಡ್ಡಬತ್ತಿಯೆಂಬ ಉಪಾಧಿಯಿಂದ ದೂರದಲ್ಲಿರುವ ಅನೇಕ ಪದಾರ್ಥಗಳ ತೋರಿಸುವ ಶಕ್ತಿಯೂ, ಚಿಕ್ಕಬತ್ತಿಯೆಂಬ ಉಪಾಧಿಯಿಂದ ಸಮೀಪದಲ್ಲಿರುವ ಅಲ್ಪಪದಾರ್ಥಗಳ ತೋರಿಸುವ ಶಕ್ತಿಯೂ ಹೇಗೆ ಇದೆಯೋ ಹಾಗೆ ಒಬ್ಬನಾದ ಆತ್ಮನಿಗೆ ಮಹತ್ತಾದ ಸಮಷ್ಟಿಕಾರಣಶರೀರೋಪಾಧಿಯಿಂದ ಸರ್ವಜ್ಞತ್ವಾದಿಗಳೂ, ಸ್ವಲ್ಪವಾದ ವ್ಯಷ್ಟಿಕಾರಣ ಶರೀರೋಪಾಧಿಯಿಂದ ಕಿಂಚಿಜ್ಞತ್ವಾದಿಗಳೂ ಬರಬಹುದು. ಹೀಗೆ ಈಶ್ವರತ್ವವೂ ಜೀವತ್ವವೂ

ಆತ್ಮನಿಗೆ ಉಪಾಧಿವಶದಿಂದ ಬಂದಂಥದು; ಪರಮಾರ್ಥಿಕವಾಗಿ ಜೀವೇಶ್ವರರಿಗೂ ಅಭೇದವೇ ಹೊಂಟಾಗಿ ಭೇದವಿಲ್ಲವೆಂದು ಶ್ರುತಿ ಹೇಳುತ್ತ ಇದೆ. ಈ ವಿರುದ್ಧಧರ್ಮಗಳ ಸಂಗಡ ಕೂಡಿಕೊಂಡು ಇರುವಂಥ ಜೀವೇಶ್ವರರಿಗೆ ಅಭೇದವು ಹೇಗೆ ಕೂಡೀತು, ಎಂದರೆ– ಕೂಡುವುದು. ಅದು ಹೇಗೆಂದರೆ? ಪೂರ್ವೋಕ್ತದೃಷ್ಟಾಂತದಲ್ಲಿ ವಿರುದ್ಧಧರ್ಮಗಳ ಸಂಗಡ ಕೂಡಿಕೊಂಡಿರುವ ಕೆರೆಯೆಂಬ ಉಪಾಧಿಜಲಕ್ಕೂ ಘಟವೆಂಬ ಉಪಾಧಿಜಲಕ್ಕೂ ವಿರುದ್ಧಾಂಶಗಳಾದಂಥ ತಟಾಕಘಟೋಪಾಧಿಗಳ ಬಿಟ್ಟು ಅವಿರುದ್ಧಾಂಶವಾದಂಥ ಜಲತ್ವದಿಂದ ಏಕತ್ವಜ್ಞಾನವು ಹೇಗೆ ಬರುತ್ತ ಇದೆಯೋ ಮತ್ತು ವಿರುದ್ಧಧರ್ಮಗಳಿಂದ ಕೂಡಿಕೊಂಡು ಇರುವಂಥ ದೊಡ್ಡಬತ್ತಿಯೆಂಬ ಉಪಾಧಿಯಗ್ನಿಗೂ ಚಿಕ್ಕಬತ್ತಿಯೆಂಬ ಉಪಾಧಿಯಗ್ನಿಗೂ ವಿರುದ್ಧಾಂಶಗಳಾದ ದೊಡ್ಡಬತ್ತಿ ಚಿಕ್ಕಬತ್ತಿಯೆಂಬ ಉಪಾಧಿಗಳ ಬಿಟ್ಟು ಅವಿರುದ್ಧವಾದ ಅಗ್ನಿತ್ವಮಾತ್ರದಿಂದಲೇ ಏಕತ್ವಜ್ಞಾನವು ಹೇಗೆ ಬರುತ್ತ ಇದೆಯೋ, ಹಾಗೆ ದಾರ್ಷ್ಟಾಂತಿಕದಲ್ಲಿಯೂ ವಿರುದ್ಧಧರ್ಮವಾದಂಥ ಸರ್ವಜ್ಞತ್ವಾದಿಗಳ ಸಂಗಡ ಕೂಡಿ ಇರುವಂಥ ಈಶ್ವರನಿಗೂ ವಿರುದ್ಧಧರ್ಮಗಳಾದಂಥ ಕಿಂಚಿಜ್ಞತ್ವಾದಿಗಳ ಸಂಗಡ ಕೂಡಿಕೊಂಡು ಇರುವಂಥ ಜೀವನಿಗೂ ವಿರುದ್ಧಾಂಶಗಳಾದಂಥ ಸರ್ವಜ್ಞತ್ವಕಿಂಚಿಜ್ಞತ್ವಾದಿಗಳನು ಬಿಟ್ಟು ಅವಿರುದ್ಧವಾದಂಥ ಚೈತನ್ಯಮಾತ್ರದಿಂದಲೇ ಏಕತ್ವಜ್ಞಾನವು ಕೂಡೀತು.

ಈಯರ್ಥವೇ ಸಕಲ ಶಾಸ್ತ್ರದಲ್ಲಿಯೂ "ಸೋಯಂ ದೇವದತ್ತಃ" ಎಂಬ ದೃಷ್ಟಾಂತಪೂರ್ವಕವಾಗಿ ಮಹಾವಾಕ್ಯಕ್ಕೂ ಅರ್ಥವೆಂದು ಜಹಲ್ಲಕ್ಷಣದಿಂದ ಹೇಳಪಡುತ್ತ ಇದೆ.

ಈಪ್ರಕಾರವಾಗಿ ಯಾವನು ವಿಚಾರಿಸಿ ನಾನೇ ಈಶ್ವರನೆಂದು ತಿಳಿಯುತ್ತಾ ಇದ್ದಾನೋ ಆತನೇ ಮುಕ್ತನೆಂದು ಶಾಸ್ತ್ರಸಿದ್ಧಾಂತವು.

ಶ್ಲೋ॥ ಸಮಷ್ಟಿವ್ಯಷ್ಟಿರೂಪೋ ಯೋನೃತಜಾಡ್ಯಾದಿಲಕ್ಷಣಃ ।
ಜೀವೇಶಯೋರುಪಾಧಿಶ್ಚ ನಾತ್ಮಾ ಸರ್ವ್ಯಗ್ವಿವೇಚಿತಃ ॥

ಸಮಷ್ಟಿವ್ಯಷ್ಟ್ಯುಪಾಧಿಭ್ಯಾಂ ಜೀವಈಶ್ವರ ಇತ್ಯಪಿ ।
ಭಿನ್ನವದ್ಭಾತಿ ಯಸ್ಸೋಯಮಾತ್ಮಾ ಭಿನ್ನಶ್ಚ ವಸ್ತುತಃ ॥೨॥

ಮಯಿ ಜೀವತ್ವಮೀಶತ್ವಂ ಕಲ್ಪಿತೋ ವಸ್ತುತೋ ನ ಹಿ ।
ಇತಿ ಯಸ್ತು ವಿಜಾನಾತಿ ಸಮುಕ್ತೋ ನಾತ್ರ ಸಂಶಯಃ ॥೩॥

ಇಂತೀಕನ್ನಡಭಾಷೆಯೊಳ್ ವಿರಚಿಸಿದ ವಾಸುದೇವ ಯತೀಂದ್ರ ಪ್ರೋಕ್ತಮಪ್ಪ
ವೇದಾಂತವಿವೇಕಸಾರದಲ್ಲಿ
ಆತ್ಮನಾತ್ಮವಿವೇಕಮಂ ಪೇಳ್ದುದು,
ಸಪ್ತಮಂ ಪ್ರಕರಣಂ.

## ಎಂಟನೆಯ ಪ್ರಕರಣ.

### 1— ಶರೀರತ್ರಯ ವಿಚಾರ—

ಶ್ಲೋ ॥ ಸ್ಥೂಲಂ ಸೂಕ್ಷ್ಮಂ ಕಾರಣಂ ವಾ ಶರೀರಂ ಕಿಂ ತದಾತ್ಮನಃ ।
ವಿಲಕ್ಷಣತ್ವಮೇತೇಭ್ಯಃ ಕಿಂ ವೇತ್ಯೇತದ್ವಿಚಿಂತ್ಯತೇ ॥

ಟೀಕು— ಆತ್ಮನು ಶರೀರತ್ರಯವಿಲಕ್ಷಣನೆಂದು ಹೇಳಲ್ಪಟ್ಟಿತು. ಶರೀರತ್ರಯವನ್ನು ತಿಳಿಯದೆ ಆತ್ಮನಿಗೆ ಶರೀರತ್ರಯವಿಲಕ್ಷಣತ್ವವನು ಹೇಳಕೂಡದು. ಅದರಿಂದ ಶರೀರತ್ರಯದ ಸ್ವರೂಪವೇನೆಂದು ವಿಚಾರಿಸುತ್ತ ಇದ್ದೇವೆ.

ಶರೀರತ್ರಯವೇನೆಂದರೆ— ಸ್ಥೂಲಶರೀರವೆನುತಲೂ, ಸೂಕ್ಷ್ಮಶರೀರವೆನುತಲೂ, ಕಾರಣಶರೀರವೆನುತಲೂ ಮೂರು ವಿಧಗಳು. ಸ್ಥೂಲಶರೀರವೆಂದರೇನೆಂದರೆ— ಕರಚರಣಾದ್ಯವಯವಾಕಾರವಾಗಿ ಸ್ತಂಭದೋಪಾದಿಯಲ್ಲಿ ತೋರುವಂಥದು ಸ್ಥೂಲಶರೀರವೆನಿಸುವುದು. ಸೂಕ್ಷ್ಮಶರೀರವೇನೆಂದರೆ— ಹದಿನೇಳವಯವದೊಡನೆ ಕೂಡಿಕೊಂಡು ಇರುವಂಥದು, ಸೂಕ್ಷ್ಮಶರೀರವೆನಿಸುವುದು. ಕಾರಣಶರೀರವೇನೆಂದರೆ— ಅಜ್ಞಾನವೇ ಕಾರಣಶರೀರವೆನಿಸುವುದು. ಇವಕ್ಕೆ ಶರೀರವೆಂದು ಏಕೆ ಹೆಸರು ಬಂದಿತೆಂದರೆ— ಜೀರ್ಣಿಸಿ ಹೋಗುತ್ತ ಇದೆಯಾಗಲಾಗಿ, ಇವಕ್ಕೆ ಶರೀರವೆಂದು ಹೆಸರು ಬಂದಿತು. ಜೀರ್ಣಿಸುಹೋಗುತ್ತಲಿವೆಯೆ ?— ಎಂದರೆ, ಜೀರ್ಣಿಸುತ್ತಿದೆ. ಅದು ಹೇಗೆಂದರೆ ?— ಈ ಸ್ಥೂಲದೇಹವು ಮೂರು ವಿಧವಾಗಿ

1. ಶರೀರವಿಲಕ್ಷಣತ್ವಪ್ರಕರಣಂ, ಎಂದು ಒಂದು ಪುಸ್ತಕದ ಪಾಠ.

ಜೀರ್ಣಿಸುತ್ತಿದೆ. ಅನ್ನವಿಲ್ಲದೆ ಹೋದರೆ ಜೀರ್ಣಿಸುತ್ತಿದೆ; ಅನ್ನವುಂಟಾಯಿತೆಂದರೆ ವ್ಯಾಧಿಗಳಿಂದಾದರೂ ಜೀರ್ಣಿಸುತ್ತ ಇದೆ; ಅನ್ನವುಂಟಾಗಿ ವ್ಯಾಧಿಗಳು ಇಲ್ಲದೆ ಇದ್ದುದಾದರೆ, ಮುಪ್ಪಿನಿಂದ ಜೀರ್ಣಿಸುತ್ತ ಇದೆ. ಸೂಕ್ಷ್ಮಶರೀರಕ್ಕೆ ಜೀರ್ಣತ್ವವು ಹೇಗೆ?, ಎಂದರೆ— ವೃದ್ಧಿಪೂರ್ವಕವಾಗಿ ಹೇಳೇವು. ಅದಕ್ಕೆ ವೃದ್ಧಿಯು ಹೇಗೆ?, ಎಂದರೆ- ರಾಗದ್ವೇಷಾದ್ಯಾಕಾರವಾಗಿ ಪರಿಣಾಮಿಸುವುದು ವೃದ್ಧಿಯೆನಿಸುವುದು; ಅದರ ಸಂಕೋಚವು ಜೀರ್ಣತ್ವವೆನಿಸುವುದು. ಕಾರಣಶರೀರಕ್ಕೆ ವೃದ್ಧಿಜೀರ್ಣತೆಗಳು ಹೇಗೆಂದರೆ— ಅಹಂ ಮಮಾದ್ಯಭಿಮಾನಾಕಾರವಾಗಿ ಪರಿಣಮಿಸುವುದೇ ವೃದ್ಧಿ, ಅದರ ಸಂಕೋಚವೇ ಜೀರ್ಣತ್ವವೆನಿಸುವುದು. ಸೂಕ್ಷ್ಮಕಾರಣಶರೀರಗಳಿಗೆ ವೃದ್ಧಿಯನ್ನೂ ಸಂಕೋಚವನ್ನೂ ಎಲ್ಲಿ ಕಂಡಿರಿ?, ಎಂದರೆ- ಅಜ್ಞಾನಿಯಲ್ಲಿ ವೃದ್ಧಿ ಕಾಣಪಡುತ್ತಿದೆ; ಮುಮುಕ್ಷುವಿನಲ್ಲಿ ಸಂಕೋಚವು ಕಾಣಪಡುತ್ತಿದೆಯಾಗಲಾಗಿ, ಇವಕ್ಕೆ ಶರೀರವೆಂದು ಹೆಸರು ಬಂದಿತು. ಇವಕ್ಕೆ ದೇಹವೆಂದು ಏತಕ್ಕೆ ಹೆಸರು ಬಂದಿತು?, ಎಂದರೆ— ದಹಿಸಪಟ್ಟು ಹೋಗುತ್ತಿದೆಯಾಗಲಾಗಿ ದೇಹವೆಂದು ಹೆಸರು ಬಂದಿತು. ದಹಿಸಪಟ್ಟು ಹೋಗುತ್ತಿದೆಯೆ ?- ಎಂದರೆ, ಹೋಗುತ್ತಿದೆ. ಅದೆಂತೆಂದರೆ-ಅಗ್ನಿಯಿಂದ ಭಸ್ಮಾಕಾರವಾಗಿ ದಹಿಸಪಟ್ಟು ಹೋಗುತ್ತಿದೆ. ಕೆಲವು ಶರೀರಗಳು ದಹಿಸಪಡಲಿಲ್ಲವಲ್ಲಾ?, ಎಂದರೆ-ಎಲ್ಲವೂ ದಹಿಸಪಡುತ್ತಿದೆ. ಅದೆಂತೆಂದರೆ—ಸರ್ವದಾ ತಾಪತ್ರಯಗಳಿಂದ ದಹಿಸಪಡುತ್ತಿದೆ. ಸೂಕ್ಷ್ಮಕಾರಣಶರೀರಗಳಿಗೆ ದಹ್ಯಮಾನತ್ವವು ಹೇಗೆಂದರೆ— ಜ್ಞಾನಾಗ್ನಿಯಿಂದ ದಹಿಸಪಡುತ್ತಿದೆಯಾಗಲಾಗಿ, ಈ ಶರೀರತ್ರಯಗಳಿಗೂ ದೇಹವೆಂದು ಹೆಸರು ಬಂದಿತು. ಪೂರ್ವಶರೀರಕ್ಕೆ ಸ್ಥೂಲಶರೀರವೆಂದು ಏತಕ್ಕೆ ಹೆಸರು ಬಂದಿತು?, ಎಂದರೆ-ಸ್ತಂಭದೋಪಾದಿಯಲ್ಲಿ ಪ್ರತ್ಯಕ್ಷವಾಗಿ ಸ್ಥೂಲವಾಗಿ ತೋರುತಲಿದೆಯಾದಕಾರಣ ಸ್ಥೂಲಶರೀರವೆಂದು ಹೆಸರು ಬಂದಿತು. ಮಧ್ಯಮಶರೀರಕ್ಕೆ ಸೂಕ್ಷ್ಮಶರೀರವೆಂದು ಏತಕ್ಕೆ ಹೆಸರು ಬಂದಿತು?, ಎಂದರೆ- ಪೂರ್ವಶರೀರದೋಪಾದಿಯಲ್ಲಿ ಸ್ಥೂಲವಾಗಿ ತೋರಲಿಲ್ಲವಾದಕಾರಣ ಇದಕ್ಕೆ ಸೂಕ್ಷ್ಮಶರೀರವೆಂದು ಹೆಸರು ಬಂದಿತು. ಇದಕ್ಕೆ ಲಿಂಗಶರೀರವೆಂದು ಏತಕ್ಕೆ ಹೆಸರು ಬಂದಿತು?, ಎಂದರೆ— ಲೀನವಾದಂಥ ಶಬ್ದಾದಿವಿಷಯಗಳನ್ನು ತಿಳಿಸುತ್ತ ಇದೆಯಾದ

ದಱಿಂದಲೂ, ಆತ್ಮಲಕ್ಷಣವ ತಿಳಿಸುತ್ತ ಇದೆಯಾದುದಱಿಂದಲೂ, ಇದಕ್ಕೆ ಲಿಂಗಶರೀರವೆಂದು ಹೆಸರು ಬಂದಿತು. ಪಶ್ಚಿಮಶರೀರಕ್ಕೆ ಕಾರಣಶರೀರವೆಂದು ಏತಕ್ಕೆ ಹೆಸರು ಬಂದಿತು ?, ಎಂದರೆ-ಈ ಯೆರಡು ಶರೀರಗಳನ್ನು ಹುಟ್ಟಿಸುತ್ತ ಇದೆಯಾದಕಾರಣ, ಕಾರಣಶರೀರವೆಂದು ಹೆಸರು ಬಂದಿತು.

ಈ ಸ್ಥೂಲಶರೀರವು ಪ್ರತ್ಯಕ್ಷವಾಗಿ ಕಾಣಪಡುತ್ತ ಇದೆಯಾದಕಾರಣ, ಸ್ಥೂಲಶರೀರವು ಉಂಟೆಂದು ಹೇಳಬಹುದು. ಸ್ಥೂಲಶರೀರದೋಪಾದಿಯಲ್ಲಿ ಸೂಕ್ಷ್ಮಶರೀರವು ಪ್ರತ್ಯಕ್ಷವಾಗಿ ಕಾಣಪಡಲಿಲ್ಲವಾದಕಾರಣ ಸ್ಥೂಲವ್ಯತಿರಿಕ್ತವಾದ ಸೂಕ್ಷ್ಮಶರೀರವು ಒಂದು ಉಂಟೆಂದು ಹೇಗೆ ತಿಳಿವಣ?, ಎಂದರೆ- ಹದಿನೇಳು ವಿಧಗಳಾದ ಕಾರ್ಯಗಳಿಂದ ಸೂಕ್ಷ್ಮಶರೀರವು ಒಂದುಂಟೆಂದು ತಿಳಿಯಬಹುದಲ್ಲ. ಈ ಹದಿನೇಳು ವಿಧವಾದಂಥ ಕಾರ್ಯಗಳು ಸ್ಥೂಲಶರೀರದಿಂದಲೆ ಮಾಡಪಡುತಿದೆ ಎಂದು ಹೇಳುವಣವೆಂದರೆ, ಸುಷುಪ್ತಿಮರಣಮೂರ್ಛಾವಸ್ಥೆಗಳಲ್ಲಿ ಇರುವಂಥ ಶರೀರದಿಂದ ಈ ಹದಿನೇಳು ವಿಧ ಕಾರ್ಯಗಳು ಮಾಡಪಡಬೇಕು; ಮಾಡಪಡಲಿಲ್ಲವಾಗಿ, ಸ್ಥೂಲಶರೀರದ ಕಾರ್ಯಗಳೆಂದು ಹೇಳಕೂಡದು. ಮತ್ತದಾವುದಱ ಕಾರ್ಯಗಳು ?, ಎಂದರೆ- ಸ್ಥೂಲಶರೀರವ್ಯತಿರಿಕ್ತವಾಗಿದ್ದಂಥ ಸೂಕ್ಷ್ಮಶರೀರದ ಕಾರ್ಯಗಳೆಂದೇ ಹೇಳಬೇಕು. ಹಾಗಾದರೆ ಸೂಕ್ಷ್ಮಶರೀರವು ಸ್ಥೂಲಶರೀರವ ಬಿಟ್ಟು ಸ್ವತಂತ್ರವಾಗಿ ಒಂದು ಕಾರ್ಯವನ್ನು ಮಾಡಲಿಲ್ಲವಾದುದಱಿಂದ ಸೂಕ್ಷ್ಮಶರೀರದ ಕಾರ್ಯಗಳೆಂದು ಹೇಗೆ ತಿಳಿವಣವೆಂದರೆ- ತಿಳಿಯಬಹುದಲ್ಲ. ಅದೆಂತೆಂದರೆ? ದೃಷ್ಟಾಂತಪೂರ್ವಕವಾಗಿ ನಿರೂಪಿಸುತ್ತ ಇದ್ದೇವೆ. ಆ ದೃಷ್ಟಾಂತವೇನು ?, ಎಂದರೆ-ಅಗ್ನಿಹೋತ್ರವು ಕಾಷ್ಠಾದಿಗಳನು ಆಶ್ರಯಿಸಿ ದಾಹಪಾಕಾದಿಕ್ರಿಯೆಗಳನ್ನು ಮಾಡಿದ ಹೊತ್ತಿಗೂ ಆ ದಾಹಪಾಕಾದಿಕ್ರಿಯೆಗಳು ಕಾಷ್ಠಾದಿಕ್ರಿಯೆಗಳು ಹೇಗೆ ಆಗದೋ, ಕಾಷ್ಠಾದಿವ್ಯತಿರಿಕ್ತವಾಗಿದ್ದಂಥ ಅಗ್ನಿಕ್ರಿಯೆಗಳು ಹೇಗೆ ಆಗುತ್ತದೆಯೋ; ಹಾಗೆ ಸೂಕ್ಷ್ಮಶರೀರವು ಸ್ಥೂಲಶರೀರವನು ಆಶ್ರಯಿಸಿ ಹದಿನೇಳು ವಿಧವಾದ ಕಾರ್ಯಗಳ ಮಾಡಿದ ಹೊತ್ತಿಗೂ ಕೇವಲವಾದ ಸ್ಥೂಲಶರೀರದ ಕಾರ್ಯಗಳು ಆಗದು, ಸ್ಥೂಲಶರೀರವ್ಯತಿರಿಕ್ತವಾದ ಸೂಕ್ಷ್ಮಶರೀರದ ಕಾರ್ಯಗಳೆಂದೇ ತಿಳಿಯಬೇಕು. ಈ ಹದಿನೇಳು ವಿಧಗಳಾದ ಕಾರ್ಯಗಳಾವುವು ?, ಎಂದರೆ-ಕಾರಣನಿರೂಪಣಪೂರ್ವಕ

ವಾಗಿ ನಿರೂಪಿಸುತ್ತ ಇದ್ದೇವೆ. ಇವಕ್ಕೆ ಕಾರಣವೇನೆಂದರೆ– ಸಪ್ತದ ಶಾವಯವಾತ್ಮಕವಾದಂಥ ಸೂಕ್ಷ್ಮಶರೀರವು ಕಾರಣವೆನಿಸುವುದು. ಸಪ್ತ ದಶಾವಯವಗಳೆಂಬುದೇನೆಂದರೆ– ಜ್ಞಾನೇಂದ್ರಿಯಪಂಚಕವು, ಕರ್ಮೇಂದ್ರಿ ಯಪಂಚಕವು, ಪ್ರಾಣಾದಿಪಂಚಕವು, ಚಿತ್ತದೊಡನೆ ಕೂಡಿದ ಮನಸ್ಸು, ಅಹಂಕಾರದೊಡನೆ ಕೂಡಿದ ಬುದ್ಧಿಯು. ಈ ಹದಿನೇಳೂ ಕೂಡಿ ಸೂ ಕ್ಷ್ಮಶರೀರವೆಂದು ಹೇಳಪಡುವುದು. ಜ್ಞಾನೇಂದ್ರಿಯಪಂಚಕವೇನೆಂದರೆ– ಶ್ರೋತ್ರತ್ವಕ್ಚಕ್ಷುಜಿಹ್ವಾಘ್ರಾಣಗಳು. ಈ ಶ್ರೋತ್ರಾದಿಗಳಿಗೆ ಜ್ಞಾನೇಂದ್ರಿ ಯಗಳೆಂದು ಏಕೆ ಹೆಸರು ಬಂದಿತು ?, ಎಂದರೆ–ಶಬ್ದಾದಿವಿಷಯಜ್ಞಾನಗಳ ನು ಹುಟ್ಟಿಸುತ್ತಿದೆಯಾದುದರಿಂದ ಇವಕ್ಕೆ ಜ್ಞಾನೇಂದ್ರಿಯಗಳೆಂದು ಹೆಸರು ಬಂದಿತು. ಇವು ಜ್ಞಾನಜನಕಗಳು ಏತಕ್ಕಾಗಬೇಕು ? ಎಂದರೆ–ಸತ್ವಗುಣ ದಿಂದ ಹುಟ್ಟಿದುದಾದಕಾರಣ ಜ್ಞಾನಜನಕಗಳಾದುವು. ಕರ್ಮೇಂದ್ರಿಯಪಂಚ ಕವೇನೆಂದರೆ– ವಾಕ್ಕು, ಪಾಣಿ, ಪಾದ, ಪಾಯು, ಉಪಸ್ಥಗಳು. ಇವಕ್ಕೆ ಕ ರ್ಮೇಂದ್ರಿಯಗಳೆಂದು ಏತಕ್ಕೆ ಹೆಸರು ಬಂದಿತು?, ಎಂದರೆ–ವಚನಾದಿಕ್ರಿಯೆ ಗಳನು ಹುಟ್ಟಿಸುತ್ತಿದೆಯಾದಕಾರಣ ಕರ್ಮೇಂದ್ರಿಯಗಳೆಂದು ಹೆಸರು ಬಂ ದಿತು. ಇವು ಕ್ರಿಯಾಜನಕಗಳು ಏಕೆ ಆಗಬೇಕು?, ಎಂದರೆ– ರಜೋಗು ಣದಿಂದ ಹುಟ್ಟಿದುದಾದಕಾರಣ ಕ್ರಿಯಾಜನಕಗಳಾದುವು. ಪ್ರಾಣಾದಿಪಂ ಚಕವೆಂದೇನೆಂದರೆ– ಪ್ರಾಣಾಪಾನವ್ಯಾನೋದಾನಸಮಾನಗಳು. ಇವಕ್ಕೆ ಪ್ರಾಣಗಳೆಂದು ಏತಕ್ಕೆ ಹೆಸರು ಬಂದಿತು ?, ಎಂದರೆ– ಸ್ಥೂಲಶರೀರವ ನ್ನುಜ್ಜೀವಿಸಿಕೊಂಡಿದ್ದುವಾದುದರಿಂದ ಇವಕ್ಕೆ ಪ್ರಾಣಗಳೆಂದು ಹೆಸರು ಬಂದಿತು. ಮನೋಬುದ್ಧಿಗಳೆಂದರೇನೆಂದರೆ– ಅಂತಃಕರಣವೃತ್ತಿವಿಶೇಷಗ ಳು. ಶ್ರೋತ್ರೇಂದ್ರಿಯವೆಂದರೇನೆಂದರೆ– ಶಬ್ದಗಳೆಲ್ಲ ಆವುದರಿಂದ ಗ್ರ ಹಿಸಪಡುತ್ತಿದೆಯೋ ಅದು ಶ್ರೋತ್ರೇಂದ್ರಿಯವೆನಿಸುವುದು. ಈ ಶಬ್ದ ಗಳು ಎಷ್ಟು ವಿಧಗಳು ?, ಎಂದರೆ– ಲೌಕಿಕವೆನುತಲೂ, ವೈದಿಕವೆ ನುತಲೂ ಎರಡು ವಿಧ. ಅವರಲ್ಲಿ ಲೌಕಿಕವೇನೆಂದರೆ– ಪ್ರಾಕೃತರೂಪಗ ಳಾದ ಅಷ್ಟಾದಶಭಾಷೆಗಳು ಲೌಕಿಕವು. ವೈದಿಕವೇನೆಂದರೆ– ಸಂಸ್ಕೃತ ರೂಪವಾದಂಥ ವೇದಶಾಸ್ತ್ರಗಳು. ಈ ಯೆರಡರಲ್ಲಿ ಲೌಕಿಕವೆಷ್ಟು ವಿಧ ವೆಂದರೆ– ಅನಂತವಿಧ. ವೈದಿಕವೆಷ್ಟು ವಿಧವೆಂದರೆ– ಅದು ಅನಂತವಿಧ.

ಇಷ್ಟು ಶಬ್ದಗಳು ಆವುದರಿಂದ ಗ್ರಹಿಸಪಡುತ್ತಿದೆಯೊ, ಅದೇ ಶ್ರೋತ್ರೇಂದ್ರಿಯವೆನಿಸುವುದು. ಈ ಶ್ರೋತ್ರೇಂದ್ರಿಯವೆಲ್ಲಿದೆ? ಎಂದರೆ-ಕರ್ಣಶಷ್ಕುಲ್ಯವಚ್ಛಿನ್ನನಭೋದೇಶವನು ಆಶ್ರಯಿಸಿಕೊಂಡು ಇದೆ. ಆ ನಭೋದೇಶವೇ ಶ್ರೋತ್ರೇಂದ್ರಿಯವೆಂದು ಹೇಳುವಣ ಎಂದರೆ— ಸುಷುಪ್ತಿಮೃತನುಊರ್ಛಾವಸ್ಥೆಗಳಲ್ಲಿ ಇರುವಂಥ ಕರ್ಣಶಷ್ಕುಲ್ಯವಚ್ಛಿನ್ನನಭೋದೇಶದಿಂದಲು ಶಬ್ದವು ಗ್ರಹಿಸಪಡಬೇಕು, ಗ್ರಹಿಸಪಡಲಿಲ್ಲವಾದಕಾರಣ, ಆ ನಭೋದೇಶವ್ಯತಿರಿಕ್ತವಾಗಿ ಶಬ್ದಗ್ರಹಣಶಕ್ತಿಮತ್ತಾಗಿ, ಸೂಕ್ಷ್ಮವಾಗಿ ಒಂದು ವಸ್ತುವು ಆ ನಭೋದೇಶವನ್ನು ಆಶ್ರಯಿಸಿಕೊಂಡು ಇದೆ. ಅದಕ್ಕೆ ಶ್ರೋತ್ರೇಂದ್ರಿಯವೆಂದು ಹೆಸರು. ಅದಕ್ಕೆ ಅಧಿಷ್ಠಾನದೇವತೆ ದಿಕ್ಕು. ಆಅಧಿಷ್ಠಾನದೇವತೆಯಿಂದ ಪ್ರೇರಿಸಲ್ಪಟ್ಟುದಾಗಿ ಶ್ರೋತ್ರೇಂದ್ರಿಯವು ಶಬ್ದಗಳನೆಲ್ಲ ಗ್ರಹಿಸಿಕೊಂಡು ಇರುವುದು. ತ್ವಗಿಂದ್ರಿಯವೇನೆಂದರೆ— ಸ್ಪರ್ಶವೆಲ್ಲವು ಆವುದರಿಂದ ಗ್ರಹಿಸಪಡುತ್ತಿದೆಯೋ ಅದು ತ್ವಗಿಂದ್ರಿಯವೆನಿಸುವುದು. ಈ ಸ್ಪರ್ಶವು ಎಷ್ಟು ವಿಧವೆಂದರೆ- ಶೀತವೆನುತಲೂ, ಉಷ್ಣವೆನುತಲೂ ಶೀತೋಷ್ಣವೆನುತಲೂ ಕಠಿಣವೆನುತಲೂ ಮೃದುವೆನುತಲೂ ಐದು ವಿಧಗಳು. ಅವರಲ್ಲಿ ಒಂದೊಂದು ಅನೇಕ ವಿಧ. ಇಷ್ಟು ಸ್ಪರ್ಶವು ಆವುದರಿಂದ ಗ್ರಹಿಸಪಡುತ್ತಿದೆಯೋ, ಅದು ತ್ವಗಿಂದ್ರಿಯವೆನಿಸುವುದು. ಈ ತ್ವಗಿಂದ್ರಿಯವು ಎಲ್ಲಿ ಇದೆ? ಎಂದರೆ-ತ್ವಕ್ಕನು ಸರ್ವತ್ರ ವ್ಯಾಪಿಸಿಕೊಂಡು ಇದೆ. ಆ ತ್ವಕ್ಕೇ ಇಂದ್ರಿಯವೆಂದು ಹೇಳುವಣವೆಂದರೆ- ಸುಪ್ತಮೃತಮೂರ್ಛಿತಶರೀರದಲ್ಲಿ ಇರುವಂಥ ತ್ವಕ್ಕಿನಿಂದಲೂ ಸ್ಪರ್ಶವು ಗ್ರಹಿಸಲ್ಪಡಬೇಕು, ಗ್ರಹಿಸಪಡಲಿಲ್ಲವಾಗಿ ತ್ವಗ್ವ್ಯತಿರಿಕ್ತವಾಗಿ ಸ್ಪರ್ಶಗ್ರಹಣಶಕ್ತಿಮತ್ತಾಗಿ ಸೂಕ್ಷ್ಮವಾಗಿ ಒಂದು ವಸ್ತುವು ಆ ತ್ವಕ್ಕನು ಆಶ್ರಯಿಸಿಕೊಂಡಿದೆ. ಅದಕ್ಕೇ ತ್ವಗಿಂದ್ರಿಯವೆಂದು ಹೆಸರು. ಅದಕ್ಕೆ ಅಧಿಷ್ಠಾನದೇವತೆ ಯಾರೆಂದರೆ- ವಾಯುವು ಅಧಿಷ್ಠಾನದೇವತೆ. ಆ ಅಧಿಷ್ಠಾನದೇವತೆಯಿಂದ ಪ್ರೇರಿಸಲ್ಪಟ್ಟ ತ್ವಗಿಂದ್ರಿಯವು ಸ್ಪರ್ಶವೆಲ್ಲವನು ಗ್ರಹಿಸಿಕೊಂಡಿರುವುದು. ಚಕ್ಷುರಿಂದ್ರಿಯವೇನೆಂದರೆ—ರೂಪವೆಲ್ಲ ಆವುದರಿಂದ ಗ್ರಹಿಸಪಡುತ್ತ ಇದೆಯೋ, ಅದು ಚಕ್ಷುರಿಂದ್ರಿಯವೆನಿಸುವುದು. ಈ ರೂಪವು ಎಷ್ಟು ವಿಧವೆಂದರೆ— ಬಿಳಪು, ಕೆಂಪು, ಕಪ್ಪು, ಹಸುರು, ಹಳದಿ ಕಪಿಲವೆಂದೂ

ಹ್ರಸ್ವ ದೀರ್ಘ ಸ್ಥೂಲ ಸೂಕ್ಷ್ಮಗಳೆಂದೂ ಹತ್ತು ವಿಧ. ಅವಲ್ಲಿ ಒಂದೊಂದೂ ಅನೇಕ ವಿಧ. ಇಷ್ಟು ರೂಪುಗಳು ಆವುದಱಿಂದ ಗ್ರಹಿಸಪಡುತಿದೆಯೋ, ಅದು ಚಕ್ಷುರಿಂದ್ರಿಯವೆನಿಸುವುದು. ಆ ಚಕ್ಷುರಿಂದ್ರಿಯವು ಎಲ್ಲಿ ಇದೆ? ಎಂದರೆ—ಕಣ್ಣಿನ ಕರಿಯಾಲಿಯನು ಆಶ್ರಯಿಸಿಕೊಂಡು ಇದೆ. ಆ ಕರಿಯ ಆಲಿಯೇ ಚಕ್ಷುರಿಂದ್ರಿಯವೆಂದು ಹೇಳುವಣವೆಂದರೆ- ಸುಪ್ತಮೃತನುರ್ಛಿತಶರೀರಗಳಲ್ಲಿ ಇರುವಂಥ ಕರಿಯಾಲಿಯಿಂದ ರೂಪವು ಗ್ರಹಿಸಪಡಬೇಕು, ಗ್ರಹಿಸಪಡಲಿಲ್ಲವಾಗಿ ಆ ಕರಿಯಾಲಿಗಿಂತಲು ವ್ಯತಿರಿಕ್ತವಾಗಿ ರೂಪಗ್ರಹಣಶಕ್ತಿಮತ್ತಾಗಿ ಸೂಕ್ಷ್ಮವಾಗಿ ಒಂದು ವಸ್ತುವು ಆ ಕರಿಯಾಲಿಯನು ಆಶ್ರಯಿಸಿಕೊಂಡಿದೆ. ಅದಕ್ಕೆ ಚಕ್ಷುರಿಂದ್ರಿಯವೆಂದು ಹೆಸರು. ಅದಕ್ಕೆ ಅಧಿಷ್ಠಾನದೇವತೆ ಯಾರೆಂದರೆ- ಸೂರ್ಯನು ಅಧಿಷ್ಠಾನದೇವತೆ. ಆ ದೇವತೆಯಿಂದ ಪ್ರೇರಿಸಲ್ಪಟ್ಟುದಾಗಿ ಚಕ್ಷುರಿಂದ್ರಿಯವು ರೂಪವನೆಲ್ಲಾ ಗ್ರಹಿಸಿಕೊಂಡು ಇರುವುದು. ರಸನೇಂದ್ರಿಯವಾದರೇನೆಂದರೆ- ರಸವೆಲ್ಲವು ಆವುದಱಿಂದ ಗ್ರಹಿಸಪಡುತ ಇದೆಯೋ, ಅದು ರಸನೇಂದ್ರಿಯವೆನಿಸುವುದು. ಆ ರಸವು ಎಷ್ಟು ವಿಧವೆಂದರೆ— ಉಪ್ಪು, ಹುಳಿ, ಕಾರ, ಕಹಿ, ಸಿಹಿ, ಒಗರು, ಎಂದು ಆಱು ವಿಧ. ಇವಲ್ಲಿ ಒಂದೊಂದೂ ಅನಂತವಿಧ. ಇಷ್ಟು ರಸಗಳೂ ಆವುದಱಿಂದ ಗ್ರಹಿಸಪಡುತ ಇದೆಯೋ ಅದು ರಸನೇಂದ್ರಿಯವೆನಿಸುವುದು. ಆ ರಸನೇಂದ್ರಿಯವೆಲ್ಲಿರುವುದೆಂದರೆ— ಕೊನೆನಾಲಗೆಯ ಆಶ್ರಯಿಸಿಕೊಂಡಿರುವುದು. ಆ ಕೊನೆನಾಲಗೆಯೇ ರಸನೇಂದ್ರಿಯವೆಂದು ಹೇಳುವಣವೆಂದರೆ- ಸುಪ್ತಮೃತನುರ್ಛಿತಶರೀರಗಳಲ್ಲಿ ಇರುವಂಥ ಕೊನೆನಾಲಗೆಯಿಂದ ಆ ರಸವು ಗ್ರಹಿಸಪಡಬೇಕು, ಗ್ರಹಿಸಲಿಲ್ಲವಾಗಿ ಆ ಕೊನೆನಾಲಗೆಯಿಂದ ವ್ಯತಿರಿಕ್ತವಾಗಿ ರಸಗ್ರಹಣಶಕ್ತಿಮತ್ತಾಗಿ ಸೂಕ್ಷ್ಮವಾಗಿ ಒಂದು ವಸ್ತು ಕೊನೆನಾಲಗೆಯನಾಶ್ರಯಿಸಿಕೊಂಡಿದೆ. ಅದಕ್ಕೆ ರಸನೇಂದ್ರಿಯವೆಂದು ಹೆಸರು. ಅದಕ್ಕೆ ಅಧಿಷ್ಠಾನದೇವತೆ ಯಾರೆಂದರೆ- ವರುಣನು ಅಧಿಷ್ಠಾನದೇವತೆ. ಆಯಧಿಷ್ಠಾನದೇವತೆಯಿಂದ ಪ್ರೇರಿಸಲ್ಪಟ್ಟ ರಸನೇಂದ್ರಿಯವು ರಸವನೆಲ್ಲವನು ಗ್ರಹಿಸಿಕೊಂಡಿರುವುದು. ಘ್ರಾಣೇಂದ್ರಿಯವೇನೆಂದರೆ-ಗಂಧವೆಲ್ಲವು ಆವುದಱಿಂದ ಗ್ರಹಿಸಪಡುತಇದೆಯೋ ಅದು ಘ್ರಾಣೇಂದ್ರಿಯವೆನಿಸುವುದು. ಆ ಗಂಧವು ಎಷ್ಟು ವಿಧವೆಂದರೆ-

ಸುಗಂಧವೆನುತಲೂ ದುರ್ಗಂಧವೆನುತಲೂ ಮಿಶ್ರಗಂಧವೆನುತಲೂ ಮೂರು ವಿಧವು. ಇವಱಲ್ಲಿ ಒಂದೊಂದೂ ಅನಂತವಿಧ. ಇಷ್ಟು ಗಂಧಗಳು ಆವುದಱಿಂದ ಗ್ರಹಿಸಪಡುತ್ತಿದೆಯೋ ಅವು ಘ್ರಾಣೇಂದ್ರಿಯವೆನಿಸುವುದು. ಆ ಘ್ರಾಣೇಂದ್ರಿಯವೆಲ್ಲಿದೆ?, ಎಂದರೆ-ನಾಸಿಕಾಗ್ರವನು ಆಶ್ರಯಿಸಿಕೊಂಡಿದೆ. ಆ ನಾಸಿಕಾಗ್ರವೇ ಘ್ರಾಣೇಂದ್ರಿಯವೆಂದು ಹೇಳುವಣವೆಂದರೆ- ಸುಪ್ತವ್ಯೃತಮೂರ್ಛಿತಶರೀರಗಳಲ್ಲಿ ಇರುವಂಥ ನಾಸಿಕಾಗ್ರದಿಂದ ಗಂಧವು ಗ್ರಹಿಸಪಡಬೇಕು, ಗ್ರಹಿಸಪಡಲಿಲ್ಲವಾಗಿ ಆ ನಾಸಿಕಾಗ್ರವ್ಯತಿರಿಕ್ತವಾಗಿ ಗಂಧಗ್ರಹಣಶಕ್ತಿಮತ್ತಾಗಿ ಸೂಕ್ಷ್ಮವಾಗಿ ಒಂದು ವಸ್ತುವು ಆ ನಾಸಿಕಾಗ್ರವನು ಆಶ್ರಯಿಸಿಕೊಂಡಿದೆ. ಅದಕ್ಕೆ ಘ್ರಾಣೇಂದ್ರಿಯವೆಂದು ಹೆಸರು. ಅದಕ್ಕೆ ಅಧಿಷ್ಠಾನದೇವತೆ ಯಾರೆಂದರೆ— ಅಶ್ವಿನೀದೇವತೆಗಳು. ಅಧಿಷ್ಠಾನದೇವತೆಗಳಾದ ಆ ಅಶ್ವಿನೀದೇವತೆಗಳಿಂದ ಪ್ರೇರಿಸಲ್ಪಟ್ಟ ಘ್ರಾಣೇಂದ್ರಿಯವು ಗಂಧವೆಲ್ಲವನು ಗ್ರಹಿಸಿಕೊಂಡು ಇರುವುದು. ಕರ್ಮೇಂದ್ರಿಯಗಳಲ್ಲಿ ವಾಗಿಂದ್ರಿಯ ನಿರೂಪಸುತ್ತ ಇದ್ದೇವೆ. ವಾಗಿಂದ್ರಿಯವೇನೆಂದರೆ— ಶಬ್ದವೆಲ್ಲವು ಆವುದಱಿಂದ ಉಚ್ಚರಿಸಪಡುತ್ತಿದೆಯೋ ಅವು ವಾಗಿಂದ್ರಿಯವೆನಿಸುವುದು. ಆವಾಗಿಂದ್ರಿಯವೆಲ್ಲಿ ಇದೆ ? ಎಂದರೆ— ಅಷ್ಟಸ್ಥಾನಗಳನು ಆಶ್ರಯಿಸಿಕೊಂಡಿದೆ. ಆ ಅಷ್ಟಸ್ಥಾನಗಳೇ ವಾಗಿಂದ್ರಿಯವೆಂದು ಹೇಳುವಣವೆಂದರೆ— ಸುಪ್ತವ್ಯೃತಮೂರ್ಛಿತಶರೀರಗಳಲ್ಲಿ ಇರುವ ಅಷ್ಟಸ್ಥಾನಗಳಿಂದ ಶಬ್ದವು ಉಚ್ಚರಿಸಪಡಬೇಕು. ಉಚ್ಚರಿಸಪಡಲಿಲ್ಲವಾದಕಾರಣ ಆಯಷ್ಟಸ್ಥಾನವ್ಯತಿರಿಕ್ತವಾಗಿ ವಚನೋಚ್ಚಾರಣಶಕ್ತಿಮತ್ತಾಗಿ ಸೂಕ್ಷ್ಮವಾಗಿ ಒಂದು ವಸ್ತುವು ಆ ಅಷ್ಟಸ್ಥಾನಗಳನು ಆಶ್ರಯಿಸಿಕೊಂಡಿದೆ, ಅದಕ್ಕೆ ವಾಗಿಂದ್ರಿಯವೆಂದು ಹೆಸರು. ಈ ವಾಕ್ಕಿನಿಂದ ಉಚ್ಚರಿಸಪಡುವ ಶಬ್ದಗಳೆಷ್ಟು ವಿಧವೆಂದರೆ— ಪೂರ್ವವೇ ಹೇಳಿ ಇದ್ದೇವಾಗಲಾಗಿ, ಆರೀತಿಗೆ ತಿಳಿದುಕೊಂಬುದು. ಇವು ಆಶ್ರಯಿಸಿಕೊಂಡಿರುವಂಥ ಅಷ್ಟಸ್ಥಾನಗಳಾವಾವುವೆಂದರೆ— ನಾಲಗೆ, ತಾಲುಮೂಲ, ಉತ್ತರಾಧರೋಷ್ಠಗಳು, ದಂತಗಳು, ನಾಸಿಕ, ಕಂಠ, ಹೃದಯ, ಬ್ರಹ್ಮರಂಧ್ರವೆಂಬ ಎಂಟು ಸ್ಥಾನಗಳನು ಆಶ್ರಯಿಸಿಕೊಂಡಿರುವುದು. ಅದಕ್ಕೆ ಅಧಿಷ್ಠಾನದೇವತೆಯಾರೆಂ

ಪ್ರೇರಿಸಪಟ್ಟ ವಾಗಿಂದ್ರಿಯವು ಶಬ್ದವನೆಲ್ಲವನು ಉಚ್ಚರಿಸಿಕೊಂಡಿರುವುದು. ಪಾಣೀಂದ್ರಿಯವೆಂದರೇನೆಂದರೆ— ಹಾನೋಪಾದಾನಕ್ರಿಯೆಗಳು ಆವುದ ಱಿಂದ ಮಾಡಪಡುತ್ತ ಇದೆಯೋ, ಅದು ಪಾಣೀಂದ್ರಿಯವೆನಿಸುವುದು. ಅದು ಎಲ್ಲಿ ಇದೆ? ಎಂದರೆ— ಅಂಗೈಯ್ಯ ಆಶ್ರಯಿಸಕೊಂಡಿದೆ. ಆ ಅಂಗೈಯ್ಯೇ ಪಾಣೀಂದ್ರಿಯವೆಂದು ಹೇಳುವಣವೆಂದರೆ — ಸುಪ್ತವ್ಯತಮೂರ್ಛಿತಶರೀರಗಳಲ್ಲಿ ಇರುವಂಥ ಅಂಗೆಯ್ಯಿಂದ ಹಾನೋಪಾದಾನಕ್ರಿಯೆಗಳು ಮಾಡಲ್ಪಡಬೇಕು. ಮಾಡಪಡಲಿಲ್ಲವಾಗಿ ಅಂಗೆಯ್ಯಿಂದ ವ್ಯತಿರಿಕ್ತವಾಗಿ ಹಾನೋಪಾದಾನಗ್ರಹಣಶಕ್ತಿ ಮತ್ತಾಗಿ ಸೂಕ್ಷ್ಮವಾಗಿ ಒಂದು ವಸ್ತುವು ಆ ಅಂಗೆಯ್ಯನು ಆಶ್ರಯಿಸಿಕೊಂಡಿದೆ. ಅದಕ್ಕೆ ಪಾಣೀಂದ್ರಿಯವೆಂದು ಹೆಸರು. ಅದಕ್ಕೆ ಅಧಿಷ್ಠಾನದೇವತೆಯಾರೆಂದರೆ— ಇಂದ್ರನು ಅಧಿಷ್ಠಾನ ದೇವತೆ. ಆ ಅಧಿಷ್ಠಾನದೇವತೆಯಿಂದ ಪ್ರೇರಿಸಪಟ್ಟ ಪಾಣೀಂದ್ರಿಯವು ಹಾನೋಪಾದಾನಕ್ರಿಯೆಗಳನು ಮಾಡಿಕೊಂಡಿರುವುದು. ಪಾದೇಂದ್ರಿಯವೆಂದರೇನೆಂದರೆ— ಗಮನಾಗಮನಾದಿಕ್ರಿಯೆಗಳು ಆವುದಱಿಂದ ಮಾಡಪಡುತ್ತ ಇದೆಯೋ ಅದು ಪಾದೇಂದ್ರಿಯವೆನಿಸುವುದು. ಅದು ಎಲ್ಲಿ ಇದೆ ? ಎಂದರೆ— ಅಂಗಾಲ ಆಶ್ರಯಿಸಿಕೊಂಡಿದೆ. ಆ ಅಂಗಾಲೇ ಪಾದೇಂದ್ರಿಯವೆಂದು ಹೇಳುವಣವೆಂದರೆ-ಸುಪ್ತವ್ಯತಮೂರ್ಛಿತಶರೀರಗಳಲ್ಲಿ ಇರುವಂಥ ಅಂಗಾಲಿಂದ ಗಮನಾಗಮನಾದಿಕ್ರಿಯೆಗಳು ಮಾಡಪಡಬೇಕು. ಮಾಡಪಡಲಿಲ್ಲವಾಗಿ ಅಂಗಾಲಿಂದ ವ್ಯತಿರಿಕ್ತವಾಗಿ ಸೂಕ್ಷ್ಮವಾಗಿ ಗಮನಾಗಮನಗ್ರಹಣಶಕ್ತಿ ಮತ್ತಾಗಿ ಒಂದು ವಸ್ತುವು ಅಂಗಾಲನು ಆಶ್ರಯಿಸಿಕೊಂಡಿದೆ. ಅದಕ್ಕೆ ಪಾದೇಂದ್ರಿಯವೆಂದು ಹೆಸರು. ಅದಕ್ಕೆ ಅಧಿಷ್ಠಾನದೇವತೆ ಯಾರೆಂದರೆ- ಉಪೇಂದ್ರನು ಅಧಿಷ್ಠಾನದೇವತೆ. ಆ ಅಧಿಷ್ಠಾನದೇವತೆಯಿಂದ ಪ್ರೇರಿಸಪಟ್ಟ ಪಾದೇಂದ್ರಿಯವು ಗಮನಾಗಮನಾದಿಕ್ರಿಯೆಗಳನು ಮಾಡಿಕೊಂಡಿರುವುದು. ಪಾಯ್ವಿಂದ್ರಿಯವು ಪುರೀಷವಿಸರ್ಜನಾದಿ ಕ್ರಿಯೆಗಳನ್ನು ಮಾಡಿಕೊಂಡು ಇರುವುದು...ಉಪಸ್ಥೇಂದ್ರಿಯವೆಂದರೇನೆಂದರೆ?— ಶುಕ್ಲ ಶೋಣಿತಮೂತ್ರವಿಸರ್ಜನಾದಿಕ್ರಿಯೆಗಳು ಆವುದಱಿಂದ ಮಾಡಪಡುತ್ತ ಇದೆಯೋ ಅದು ಉಪಸ್ಥೇಂದ್ರಿಯವೆನಿಸುವುದು. ಅದು ಎಲ್ಲಿ ಇದೆ ಎಂದರೆ— ಯೋನಿಲಿಂಗಗಳ ಆಶ್ರಯಿಸಿಕೊಂಡು ಇದೆ. ಆ ಯೋನಿಲಿಂಗಗಳೇ

ಉಪಸ್ಥೇಂದ್ರಿಯವೆಂದು ಹೇಳುವಣವೆಂದರೆ— ಸುಷುಪ್ತಮೃತಮೂರ್ಛಿತ ಶರೀರಗಳಲ್ಲಿ ಇರ ವಂಥ ಯೋನಿಲಿಂಗಗಳಿಂದಲೂ ಶುಕ್ಲ ಶೋಣಿತ ಮೂತ್ರವಿಸರ್ಜನಾದಿಕ್ರಿಯೆಗಳು ಮಾಡಪಡಬೇಕು. ಮಾಡಪಡಲಿಲ್ಲವಾಗಲಾಗಿ, ಆ ಯೋನಿಲಿಂಗಗಳಿಂದಲೂ ವ್ಯತಿರಿಕ್ತವಾಗಿ ಶುಕ್ಲ ಶೋಣಿತ ಮೂತ್ರವಿಸರ್ಜನಾದಿ ಕ್ರಿಯಾಶಕ್ತಿಮತ್ತಾಗಿ ಸೂಕ್ಷ್ಮವಾಗಿ ಬಂದು ವಸ್ತುವು ಆ ಯೋನಿಲಿಂಗಗಳನು ಆಶ್ರಯಿಸಿಕೊಂಡಿದೆ. ಅದಕ್ಕೆ ಉಪಸ್ಥೇಂದ್ರಿಯು ವೆಂದು ಹೆಸರು. ಅದಕ್ಕೆ ಅಧಿಷ್ಠಾನದೇವತೆ ಯಾರೆಂದರೆ—ಬ್ರಹ್ಮನು ಅಧಿಷ್ಠಾನದೇವತೆ. ಆ ಅಧಿಷ್ಠಾನದೇವತೆಯಿಂದ ಪ್ರೇರಿಸಲ್ಪಟ್ಟ ಉಪಸ್ಥೇಂದ್ರಿಯವು ಶುಕ್ಲ ಶೋಣಿತ ಮೂತ್ರವಿಸರ್ಜನಾದಿ ಕ್ರಿಯೆಗಳನ್ನು ಮಾಡಿಕೊಂಡು ಇರುವುದು.

ಪಂಚಪ್ರಾಣಗಳ ನಿರೂಪಿಸುತ್ತ ಇದ್ದೇವೆ. ಪಂಚಪ್ರಾಣಗಳ ಒಳಗೆ ಪ್ರಾಣವಾಯುವೆಂದರೇನೆಂದರೆ ? ಉಚ್ಛ್ವಾಸವೆಲ್ಲವು ಆವುದಱಿಂದ ಮಾಡಪಡುತ್ತ ಇದೆಯೋ ಅದು ಪ್ರಾಣವಾಯುವೆನಿಸುವುದು. ಅದು ಎಲ್ಲಿ ಇದೆ? ಎಂದರೆ—ಹೃದಯದಲ್ಲಿದೆ. ಅದಕ್ಕೆ ಅಧಿಷ್ಠಾನದೇವತೆ ಯಾರೆಂದರೆ—ವಸಿಷ್ಠನು ಅಧಿಷ್ಠಾನದೇವತೆ. ಆ ಯಧಿಷ್ಠಾನದೇವತೆಯಿಂದ ಪ್ರೇರಿಸಪಟ್ಟ ಪ್ರಾಣವಾಯುವು ಉಚ್ಛ್ವಾಸವನೆಲ್ಲ ಮಾಡಿಕೊಂಡೇ ಇರುವುದು. ಅಪಾನವಾಯುವೇನೆಂದರೆ? ನಿಶ್ವಾಸವೆಲ್ಲಾ ಆವುದಱಿಂದ ಮಾಡಪಡುತ್ತ ಇದೆಯೋ ಅದು ಅಪಾನವಾಯುವೆನಿಸುವುದು. ಅದು ಎಲ್ಲಿ ಇದೆ? ಎಂದರೆ-ಗುದವನ್ನು ಆಶ್ರಯಿಸಿಕೊಂಡು ಇದೆ. ಅದಕ್ಕೆ ಅಧಿಷ್ಠಾನದೇವತೆ ಯಾರೆಂದರೆ— ವಿಶ್ವಕರ್ತನು ಅಧಿಷ್ಠಾನದೇವತೆ. ಆ ಅಧಿಷ್ಠಾನದೇವತೆಯಿಂದ ಪ್ರೇರಿಸಲ್ಪಟ್ಟ ಅಪಾನವಾಯುವು ನಿಶ್ವಾಸವನೆಲ್ಲವನು ಮಾಡಿಕೊಂಡೇ ಇರುವುದು. ವ್ಯಾನವಾಯುವೆಂದರೇನೆಂದರೆ? ಶರೀರವನ್ನಾಶ್ರಯಿಸಿ ಧರಿಸಿಕೊಂಡು ಇಂದ್ರಿಯಂಗಳಿಗೂ ಬಲವಕೊಟ್ಟುಕೊಂಡು ಯಾವುದಿದೆಯೋ ಅದು ವ್ಯಾನವಾಯುವೆನಿಸುವುದು. ಅದು ಎಲ್ಲಿ ಇದೆ? ಎಂದರೆ—ಸರ್ವಶರೀರದಲ್ಲಿ ಇರುವುದು. ಅದಕ್ಕೆ ಅಧಿಷ್ಠಾನದೇವತೆ ಯಾರೆಂದರೆ—ವಿಶ್ವಯೋನಿಯೇ ಅಧಿಷ್ಠಾನದೇವತೆ. ಆ ಯಧಿಷ್ಠಾನದೇವತೆಯಿಂದ ಪ್ರೇರಿಸಪಟ್ಟ ವ್ಯಾನವಾಯುವು ಇಂದ್ರಿಯಂಗಳಿಗೆ ಬಲವನ್ನು ಕೊಟ್ಟುಕೊಂ

ಷು ಶರೀರವನ್ನು ಧರಿಸಿಕೊಂಡೇ ಇರುವುದು. ಉದಾನವಾಯುವೆಂದರೆ ನೆಂದರೆ? ಸುಷುಪ್ತಿಕಾಲ ಬಂದಿತೆಂದರೆ ಸಕಲೇಂದ್ರಿಯಗಳನ್ನು ಉಪಸಂ ಹರಿಸಿಕೊಂಡು ತನಗೆ ಕಾರಣವಾದ ಅಜ್ಞಾನದಲ್ಲಿ ಯಾವುದು ಲಯಿಸುತ್ತದೆ ಯೋ, ಜಾಗ್ರತ್ತಿನಲ್ಲಿ ಆ ಆ ಇಂದ್ರಿಯಗಳನ್ನು ಆ ಆ ಗೋಳಕದಲ್ಲಿ ಯಾವುದು ನಿಲಿಸುತ್ತ ಇದೆಯೋ, ಉತ್ಕ್ರಮಣಕಾಲ ಬಂದಿತೆಂದರೆ ಸಕ ಲೇಂದ್ರಿಯಗಳನು ಗ್ರಹಿಸಿಕೊಂಡು ಯಾವುದು ಪರಲೋಕಕ್ಕೆ ಹೋಗು ತ್ತಿದೆಯೋ ಅದು ಉದಾನವಾಯುವೆನಿಸುವುದು. ಅದು ಎಲ್ಲಿ ಇದೆ? ಎಂ ದರೆ—ಕಂಠದಲ್ಲಿ ಇರುವುದು. ಅದಕ್ಕೆ ಅಧಿಷ್ಠಾನದೇವತೆ ಯಾರೆಂದರೆ— ಅಜನು ಅಧಿಷ್ಠಾನದೇವತೆ. ಆ ಅಧಿಷ್ಠಾನ ದೇವತೆಯಿಂದ ಪ್ರೇರಿಸಪಟ್ಟ ಉದಾನವಾಯುವು ಈ ಹೇಳಪಟ್ಟ ವ್ಯಾಪಾರಗಳೆಲ್ಲವನು ಮಾಡಿಕೊಂಡೇ ಇರುವುದು. ಸಮಾನವಾಯುವೆನೆಂದರೆ? ಭಕ್ಷ್ಯ ಭೋಜ್ಯ ಲೇಹ್ಯ ಚೋಷ್ಯಗಳೆಂಬ ನಾಲ್ಕು ವಿಧಗಳಾದಂಥ ಅನ್ನಗಳನ್ನು ಜಠರಾಗ್ನಿಯೊಡ ನೆ ಕೂಡಿಕೊಂಡು ಪಚನೆಯ ಮಾಡಿ ಶರೀರಕ್ಕೆಲ್ಲ ವ್ಯಾಪನೆಯಮಾಡಿಸಿ ಶ ರೀರಕ್ಕೆ ಪುಷ್ಟಿಯನ್ನು ಯಾವುದು ಕೊಡುತ್ತ ಇದೆಯೋ, ಅದು ಸಮಾ ನವಾಯುವೆನಿಸುವುದು. ಅದು ಎಲ್ಲಿ ಇದೆ? ಎಂದರೆ—ಅದು ನಾಭಿದೇಶದಲ್ಲಿರು ವುದು. ಅದಕ್ಕೆ ಅಧಿಷ್ಠಾನದೇವತೆ ಯಾರೆಂದರೆ— ಜಯನು ಅಧಿಷ್ಠಾನದೇ ವತೆ. ಆ ಅಧಿಷ್ಠಾನದೇವತೆಯಿಂದ ಪ್ರೇರಿಸಪಟ್ಟ ಸಮಾನವಾಯುವು ಅ ಗ್ನಿಯಸಂಗಡ ಕೂಡಿಕೊಂಡು ಭಕ್ಷ್ಯ ಭೋಜ್ಯಗಳನು ಪಚನಮಾಡಿಸಿ ಶರೀರಕ್ಕೆ ವ್ಯಾಪನವ ಮಾಡಿಸಿ ಶರೀರಕ್ಕೆ ಪುಷ್ಟಿಯನ್ನು ಕೊಟ್ಟುಕೊಂಡು ಇರುವುದು. ಈ ವಾಯುಗಳೂ ಇದಕ್ಕೆ ಸ್ಥಾನಗಳೂ ಉಂಟೆಂಬುದರಲ್ಲಿ ಸ್ಮೃತಿ ವಚನಗಳು:—

ಶ್ಲೋ॥ "ಪ್ರಾಣೋಽಪಾನ ಸಮಾನ ಶ್ಚೋದಾನವ್ಯಾನೌ ಚ ವಾಯವಃ॥
ಹೃದಿ ಪ್ರಾಣೋ ಗುದೇಽಪಾನ ಸ್ಸಮಾನೋ ನಾಭಿಸಂಸ್ಥಿತಃ ।
ಉದಾನಃ ಕಂಠದೇಶಸ್ಥೋ ವ್ಯಾನ ಸ್ಸರ್ವಶರೀರಗಃ ॥"

ಅದಂತಿರಲಿ. ಶ್ರುತಿಗಳಲ್ಲಿ ದಶವಾಯುಗಳು ಹೇಳಪಟ್ಟಿರಲಾಗಿ ಪಂಚ ವಾಯುಗಳೆಂದು ಹೇಗೆ ಹೇಳುವಣವೆಂದರೆ-ಆ ವಾಯುಗಳು ಈ ಪಂಚವಾ ಯುಗಳಲ್ಲೇ ಅಂತರ್ಭೂತಗಳಾಗಲಾಗಿ, ಪಂಚವಾಯುಗಳೆಂದು ಹೇಳಬಹು

ವಲ್ಲ. ಆ ವಾಯುಗಳಾವುವೆಂದರೆ ? ನಾಗನೆನುತಲೂ, ಕೂರ್ಮನೆನುತಲೂ, ಕೃಕರನೆನುತಲೂ, ದೇವದತ್ತನೆನುತಲೂ, ಧನಂಜಯನೆನುತಲೂ ಐದು ವಿಧಗಳು. ಇವರ ವ್ಯಾಪಾರಗಳೇನೆಂದರೆ, ಹೇಳೇವು. ನಾಗನು ವಾಂತಿಯ ಮಾಡಿಸುವನು; ಕೂರ್ಮನು ತುಟಿಗಳನು ರೆಪ್ಪೆಗಳನು ಮುಚ್ಚಿ ತೆಗೆಸುವನು; ಕೃಕರನು ಸೀನ ಬರಿಸುವನು; ದೇವದತ್ತನು ಆಕಳಿಕೆಯ ಮಾಡಿಸುವನು; ಧನಂಜಯನು ಶರೀರವನು ಪೋಷಿಸುವನು. ಇವಕ್ಕೆ ಸ್ಥಾನಗಳೂ ಅಧಿಷ್ಠಾನದೇವತೆಗಳೂ ಹೇಗೆಂದರೆ— ಈ ವಾಯುಗಳು ಆ ಪಂಚವಾಯುಗಳಲ್ಲೇ ಅಂತರ್ಭೂತಗಳಾಗಲಾಗಿ, ಅವುಗಳ ಸ್ಥಾನಗಳೇ ಇವಕ್ಕೂ ಸ್ಥಾನಗಳು; ಆ ದೇವತೆಗಳೇ ಇವಕ್ಕೂ ದೇವತೆಗಳು.

ಅಂತಃಕರಣಚತುಷ್ಟಯಗಳ ಒಳಗೆ ಮುಂಚಿತವಾಗಿ ಮನಸ್ಸನು ನಿರೂಪಿಸುತ್ತ ಇದ್ದೇವೆ. ಮನಸ್ಸೇನೆಂದರೆ? ಸಂಕಲ್ಪವಿಕಲ್ಪಗಳು ಆವುದರಿಂದ ಮಾಡಪಡುತ್ತಿವೆಯೋ ಅದು ಮನಸ್ಸೆಂದು ಹೇಳಪಡುವುದು. ಅದು ಎಲ್ಲಿ ಇದೆ ? ಎಂದರೆ— ಗಳಾಂತರದಲ್ಲಿ ಇದೆ. ಅಧಿಷ್ಠಾನದೇವತೆ ಯಾರೆಂದರೆ — ಚಂದ್ರನು ಅಧಿಷ್ಠಾನದೇವತೆ. ಆ ಅಧಿಷ್ಠಾನದೇವತೆಯಿಂದ ಪ್ರೇರಿಸಪಟ್ಟ ಮನಸ್ಸು ಸಂಕಲ್ಪವಿಕಲ್ಪಗಳ ಮಾಡಿಕೊಂಡೇ ಇರುವುದು. ಬುದ್ಧಿಯೇನೆಂದರೆ? ನಿಶ್ಚಯವೆಲ್ಲವೂ ಆವುದರಿಂದ ಮಾಡಪಡುತ್ತಿದೆಯೋ ಅದು ಬುದ್ಧಿಯೆನಿಸುವುದು. ಅದು ಎಲ್ಲಿ ಇದೆ? ಎಂದರೆ—ಮುಖದಲ್ಲಿ ಇದೆ. ಅದಕ್ಕೆ ಅಧಿಷ್ಠಾನದೇವತೆ ಯಾರೆಂದರೆ–ಚತುರ್ಮುಖನು ಅಧಿಷ್ಠಾನದೇವತೆ. ಆ ಯಧಿಷ್ಠಾನದೇವತೆಯಿಂದ ಪ್ರೇರಿಸಪಟ್ಟ ಬುದ್ಧಿಯು ನಿಶ್ಚಯವನೆಲ್ಲವ ಮಾಡಿಕೊಂಡೇ ಇರುವುದು. ಅಹಂಕಾರವೇನೆಂದರೆ? ಅಭಿಮಾನವೆಲ್ಲ ಆವುದರಿಂದ ಮಾಡಪಡುತ್ತಿದೆಯೋ, ಅದು ಅಹಂಕಾರವೆನಿಸುವುದು. ಅದು ಎಲ್ಲಿ ಇದೆ? ಎಂದರೆ– ಹೃದಯದಲ್ಲಿ ಇದೆ. ಅದಕ್ಕೆ ಅಧಿಷ್ಠಾನದೇವತೆ ಯಾರೆಂದರೆ–ರುದ್ರನು ಅಧಿಷ್ಠಾನದೇವತೆ. ಆ ಯಧಿಷ್ಠಾನದೇವತೆಯಿಂದ ಪ್ರೇರಿಸಪಟ್ಟ ಅಹಂಕಾರವು ಅಭಿಮಾನವನೆಲ್ಲ ಮಾಡಿಕೊಂಡೇ ಇರುವುದು. ಚಿತ್ತವೇನೆಂದರೆ? ಧಾರಣೆಯೆಲ್ಲವು ಆವುದರಿಂದ ಮಾಡಪಡುತ್ತಿದೆಯೋ? ಅದು ಚಿತ್ತವೆನಿಸುವುದು. ಅದು ಎಲ್ಲಿ ಇದೆ? ಎಂದರೆ–ನಾಭಿಯಲ್ಲಿ ಇದೆ. ಅದಕ್ಕೆ ಅಧಿಷ್ಠಾನದೇವತೆ ಯಾರೆಂದರೆ—ಕ್ಷೇತ್ರಜ್ಞನಾದ ಈಶ್ವರನು ಅಧಿಷ್ಠಾನದೇವತೆ. ಆ ಅ

ವಿಷಯಾವಲೋಕತೆಯಿಂದ ಪ್ರೇರಿಸಲ್ಪಟ್ಟ ಚಿತ್ತವು ಧಾರಣೆಯನ್ನೆಲ್ಲ ವಹಿಸಿ ಕೊಂಡಿರುವುದು. ಆ ಲಿಂಗಶರೀರವು ಷೋಡಶಾತ್ಮಕವೆಂದು ಒಂದು ಶ್ರುತಿ ಹೇಳುತ್ತಿದೆ. ಆ ಪಕ್ಷದಲ್ಲಿ ಅಂತಃಕರಣವೊಂದುಮಾತ್ರವೇ ಹೇಳಪಡುವುದು. "ಸಪ್ತದಶಕಂ ಲಿಂಗಂ" ಎಂದು ಒಂದು ಶ್ರುತಿ ಹೇಳುತ್ತಿದೆ. ಆ ಪಕ್ಷದಲ್ಲಿ ಮನಸ್ಸೂ ಚಿತ್ತವೂ ಒಂದೆಂದು ಹೇಳಪಡುವುದು, ಬುದ್ಧಿಯೂ ಅಹಂಕಾರವೂ ಒಂದೆಂದು ಹೇಳಪಡುವುದು. "ನವದಶಕಂ ಲಿಂಗಂ" ಎಂದು ಒಂದು ಶ್ರುತಿ ಹೇಳುತ್ತಿದೆ. ಆ ಪಕ್ಷದಲ್ಲಿ ಮನೋಬುದ್ಧ್ಯಹಂಕಾರಚಿತ್ತಗಳು ನಾಲ್ಕು ಹೇಳಪಡುವುದು. ಹೀಗೆ ಹೇಳಿದ ಹೊತ್ತಿಗೂ ವಿರೋಧವಿಲ್ಲ. ಈ ಹೇಳಪಟ್ಟಂಥ ಹದಿನೇಳು ವಿಧಗಳಾದ ಕಾರ್ಯಗಳ ದೆಸೆಯಿಂದ ಸಪ್ತದಶಾವಯವಾತ್ಮಕವಾದ ಲಿಂಗಶರೀರವುಂಟೆಂದು ನಿಶ್ಚಯಿಸಪಟ್ಟಿತು.

ಕಾರಣಶರೀರವೊಂದುಂಟೆಂದು ಹೇಗೆ ತಿಳಿವಣವೆಂದರೆ? ಸ್ಥೂಲಸೂಕ್ಷ್ಮಗಳೆರಡು ಕಾರ್ಯಗಳಾಗಿ ಕಾಣಪಡುತ್ತಿದೆಯಾದಕಾರಣ ಇವಕ್ಕೆ ಒಂದು ಕಾರಣವುಂಟೆಂದು ಊಹಿಸಪಡುತ್ತಿದೆ. ಕಾರ್ಯಗಳಿಂದ ಕಾರಣವು ಊಹಿಸಪಡುವುದೆ ಎಂದರೆ— ಊಹಿಸಪಡುವುದು. ಅದೆಂತೆಂದರೆ, ಹೇಳೇವು. ಕಾರ್ಯವಾದಂಥ ಧೂಮದಿಂದ ಕಾರಣವಾದ ಅಗ್ನಿ ಹೇಗೆ ಊಹಿಸಪಡುತ್ತಿದೆಯೋ, ಹಾಗೆ ಕಾರ್ಯಗಳಾದಂಥ ಸ್ಥೂಲಸೂಕ್ಷ್ಮಶರೀರಗಳಿಂದ ಕಾರಣಶರೀರವೊಂದುಂಟೆಂದು ಊಹಿಸಪಡುತ್ತಿದೆ. ಇಷ್ಟುಮಾತ್ರವಲ್ಲ. 'ನಾನು ಅಜ್ಞ'' ನೆಂದು ಅಜ್ಞಾನಪ್ರತ್ಯಕ್ಷವಾಗಿ ಅನುಭವಿಸಪಡುತ್ತಿದೆಯಾಗಲಾಗಿ, ಕಾರಣಶರೀರವೊಂದುಂಟೆಂದು ಹೇಳಬಹುದಲ್ಲ.

ಈ ಪ್ರಕಾರವಾಗಿ ಶರೀರತ್ರಯವುಂಟೆಂದು ನಿಶ್ಚಯಿಸಿ, ಆ ಬಳಿಕ ಆತ್ಮನಿಗೆ ಶರೀರತ್ರಯವಿಲಕ್ಷಣತ್ವ ಹೇಗೆಂದು ವಿಚಾರಿಸಬೇಕು. ಆತ್ಮನಿಗೆ ಈ ಶರೀರತ್ರಯವಿಲಕ್ಷಣತ್ವವೆಂದರೇನೆಂದರೆ? ಆತ್ಮಲಕ್ಷಣ ಶರೀರತ್ರಯದಲ್ಲೂ ಶರೀರತ್ರಯಲಕ್ಷಣ ಆತ್ಮನಲ್ಲೂ ಇಲ್ಲದಿರುವಂಥದೇ ಆತ್ಮನಿಗೆ ಶರೀರತ್ರಯವಿಲಕ್ಷಣತ್ವವೆನಿಸುವುದು. ಹಾಗಾದರೆ ಆತ್ಮನಿಗೆ ಲಕ್ಷಣವೇನೆಂದರೆ? ಸಚ್ಚಿದಾನಂದಸ್ವರೂಪತ್ವವು ಆತ್ಮನಿಗೆ ಲಕ್ಷಣವೆನಿಸುವುದು. ಅನೃತಜಡದುಃಖಾತ್ಮಕತ್ವವು ಅನಾತ್ಮಕ್ಕೆ ಲಕ್ಷಣವೆನಿಸುವುದು. ಈ ಲಕ್ಷಣಗಳಿಗೆ ಅನ್ಯೋನ್ಯವಿಲಕ್ಷಣತ್ವವುಂಟೇ—ಎಂದರೆ, ಉಂಟು. ಅದೆಂ

ತೆಂದರೆ, ದೃಷ್ಟಾಂತಪೂರ್ವಕ ನಿರೂಪಿಸುತ್ತ ಇದ್ದೇವೆ. ಆ ದೃಷ್ಟಾಂತ ವೇನೆಂದರೆ, ಹೇಳೇವು. ಪುರುಷಲಕ್ಷಣವು ಸ್ತ್ರೀಯಲ್ಲಿ ಹೇಗೆ ಇಲ್ಲ ವೋ, ಸ್ತ್ರೀಲಕ್ಷಣವು ಪುರುಷನಲ್ಲಿ ಹೇಗೆ ಇಲ್ಲವೋ ಹಾಗೆ ಸಲ್ಲಕ್ಷಣವು ಅಸತ್ತಿನಲ್ಲಿ ಇಲ್ಲ, ಅಸಲ್ಲಕ್ಷಣವು ಸತ್ತಿನಲ್ಲಿ ಇಲ್ಲ. ಪ್ರಕಾಶಲಕ್ಷಣವು ಅಂಧಕಾರದಲ್ಲಿ ಹೇಗೆ ಇಲ್ಲವೋ, ಅಂಧಕಾರಲಕ್ಷಣವು ಪ್ರಕಾಶದಲ್ಲಿ ಹೇಗೆ ಇಲ್ಲವೋ, ಹಾಗೆ ಚಿಲ್ಲಕ್ಷಣವು ಜಡದಲ್ಲಿ ಇಲ್ಲ, ಜಡಲಕ್ಷಣವು ಚಿತ್ತಿನಲ್ಲಿ ಇಲ್ಲ. ಚಂದ್ರಿಕಾಲಕ್ಷಣವು ಆತಪದಲ್ಲಿ ಹೇಗೆ ಇಲ್ಲವೋ, ಆತಪಲಕ್ಷಣ ವು ಚಂದ್ರಿಕೆಯಲ್ಲಿ ಹೇಗಿಲ್ಲವೋ, ಹಾಗೆ ಆನಂದಲಕ್ಷಣವು ದುಃಖದಲ್ಲಿ ಇಲ್ಲ, ದುಃಖಲಕ್ಷಣವು ಆನಂದದಲ್ಲಿ ಇಲ್ಲ. ಈ ಪ್ರಕಾರವಾಗಿ ಸಚ್ಚಿದಾನಂದಗಳಿ ಗೂ, ಅನೃತಜಡದುಃಖಗಳಿಗೂ ಅನ್ಯೋನ್ಯವಿಲಕ್ಷಣತ್ವವು ಹೇಳಪಟ್ಟಿತು. ಸಲ್ಲಕ್ಷಣ ಅಸಲ್ಲಕ್ಷಣ ಚಿಲ್ಲಕ್ಷಣ ಜಡಲಕ್ಷಣ ಆನಂದಲಕ್ಷಣ ದುಃಖಲಕ್ಷಣ–ಇವನ್ನು ತಿಳಿಯದೆ ಇವಕ್ಕೆ ಅನ್ಯೋನ್ಯವಿಲಕ್ಷಣತ್ವವನ್ನು ತಿಳಿಯಕೂಡ ದಾಗಲಾಗಿ, ಇವಕ್ಕೆ ಲಕ್ಷಣ ಹೇಳೇವು. ಸತ್ತಿಗೆ ಲಕ್ಷಣವೇನೆಂದರೆ—ಒಂ ದರಿಂದಲೂ ಬಾಧಿಸಪಡದೆ ಕಾಲತ್ರಯದಲ್ಲೂ ಏಕರೂಪವಾಗಿರುವಂಥದೇ ಸಲ್ಲಕ್ಷಣವೆನಿಸುವುದು. ಅಸಲ್ಲಕ್ಷಣವೇನೆಂದರೆ— ಕಾಲತ್ರಯದಲ್ಲೂ ಇಲ್ಲ ವಾಗಿ ತೋರಿಸಿಕೊಂಡು ಬಂದೊಂದರಿಂದ ಬಾಧಿಸಲ್ಪಟ್ಟು ಹೋಗುವಂಥ ದೇ ಅಸಲ್ಲಕ್ಷಣವೆನಿಸುವುದು. ಇದಕ್ಕೆ ದೃಷ್ಟಾಂತವುಂಟೇ ಎಂದರೆ, ಉಂಟು. ಅದೇಂತೆಂದರೆ—ರಜ್ಜುವು. ರಜ್ಜುವಿನಲ್ಲಿ ಸಲ್ಲಕ್ಷಣವಿದೆಯೆ, ಎಂ ದರೆ ಇದೆ. ಅದೆಂತೆಂದರೆ, ಹೇಳೇವು. ರಜ್ಜುವಿನಲ್ಲಿ ಆರೋಪಿಸಪಟ್ಟ ಸರ್ಪಮಾಲ್ಯಾದಿಗಳೊಳಗೆ ಒಂದರಿಂದಲೂ ಆ ರಜ್ಜುವು ಬಾಧಿಸಪಡದೆ ಭ್ರಾಂತಿಕಾಲದಲ್ಲೂ ಭ್ರಾಂತಿಪೂರ್ವಕಾಲದಲ್ಲೂ ಭ್ರಾಂತಿ ಹೋದ ಬಳಿಕವೂ ಏಕರೂಪವಾಗಿ ಇದೆಯಾಗಲಾಗಿ, ಆ ರಜ್ಜುವಿನಲ್ಲಿ ಸಲ್ಲಕ್ಷಣವಿದೆ. ಆ ರಜ್ಜು ವಿನಲ್ಲಿ ಆರೋಪಿಸಪಟ್ಟ ಸರ್ಪದಲ್ಲಿ ಅಸಲ್ಲಕ್ಷಣವಿದೆಯೆ ಎಂದರೆ – ಇದೆ. ಅದೆಂತೆಂದರೆ—ಆ ಸರ್ಪವು ಭ್ರಾಂತಿಕಾಲದಲ್ಲೂ ಭ್ರಾಂತಿಪೂರ್ವಕಾಲದಲ್ಲೂ ಭ್ರಾಂತಿ ಹೋದ ತರುವಾಯದಲ್ಲೂ ತಾನು ಇಲ್ಲದೇಹೋದ ಹೊತ್ತಿಗೂ ತೋರುತ್ತ ಇದ್ದುಕೊಂಡು, ಮತ್ತೊಂದರಿಂದ ಬಾಧಿಸಪಟ್ಟುಹೋಗುತ್ತಿ ದೆಯಾಗಲಾಗಿ, ಅಸಲ್ಲಕ್ಷಣವು ಆ ಸರ್ಪದಲ್ಲಿ ಇದೆ. ರಜ್ಜುವಿನ ಲಕ್ಷಣವು

ಸರ್ಪದಲ್ಲಿ ಇಲ್ಲವಾಗಿಯೂ, ಸರ್ಪಲಕ್ಷಣವು ರಜ್ಜುವಿನಲ್ಲಿ ಇಲ್ಲವಾಗಿಯೂ ಆರಜ್ಜುಸರ್ಪಗಳಿಗೆ ಶಬ್ದದಿಂದಲೂ ಅರ್ಥದಿಂದಲೂ ಲಕ್ಷಣದಿಂದಲೂ ಪ್ರತೀತಿಯಿಂದಲೂ ವ್ಯವಹಾರದಿಂದಲೂ ವೈಲಕ್ಷಣ್ಯವು ಹೇಗೆ ಇದೆಯೋ ಹಾಗೆ ಸಲ್ಲಕ್ಷಣವು ಅಸತ್ತಾದಂಥ ದೇಹೇಂದ್ರಿಯಾದಿಪ್ರಪಂಚದಲ್ಲಿ ಇಲ್ಲವಾಗಿಯೂ, ಅಸಲ್ಲಕ್ಷಣವು ಸತ್ತಾದ ಆತ್ಮನಲ್ಲಿ ಇಲ್ಲವಾಗಿಯೂ, ಸತ್ತಿಗೂ ಅಸತ್ತಿಗೂ ಶಬ್ದದಿಂದಲೂ ಅರ್ಥದಿಂದಲೂ ಲಕ್ಷಣದಿಂದಲೂ ಪ್ರತೀತಿಯಿಂದಲೂ ವ್ಯವಹಾರದಿಂದಲೂ ವೈಲಕ್ಷಣ್ಯವಿದೆ. ಹೀಗಿರುವುದರಿಂದ ಏನು ಸಿದ್ಧಿಸಿತೆಂದರೆ—ಸತ್ತೆಂಬ ಶಬ್ದವು ಅಸತ್ತೆಂಬ ಶಬ್ದವಲ್ಲ; ಅಸತ್ತೆಂಬ ಶಬ್ದವು ಸತ್ತೆಂಬ ಶಬ್ದವಲ್ಲ; ಸಚ್ಛಬ್ದಾರ್ಥವು ಅಸಚ್ಛಬ್ದಾರ್ಥವಲ್ಲ; ಅಸಚ್ಛಬ್ದಾರ್ಥವು ಸಚ್ಛಬ್ದಾರ್ಥವಲ್ಲ; ಸಲ್ಲಕ್ಷಣವು ಅಸಲ್ಲಕ್ಷಣವಲ್ಲ; ಅಸಲ್ಲಕ್ಷಣವು ಸಲ್ಲಕ್ಷಣವಲ್ಲ; ಸತ್ಪ್ರತೀತಿಯು ಅಸತ್ಪ್ರತೀತಿಯಲ್ಲ; ಅಸತ್ಪ್ರತೀತಿಯು ಸತ್ಪ್ರತೀತಿಯಲ್ಲ; ಸದ್ವ್ಯವಹಾರವು ಅಸದ್ವ್ಯವಹಾರವಲ್ಲ; ಅಸದ್ವ್ಯವಹಾರವು ಸದ್ವ್ಯವಹಾರವಲ್ಲ; ಅದರಿಂದ ಸದ್ರೂಪವಾದಂಥ ಆತ್ಮನಿಗೂ ಅಸದ್ರೂಪವಾದಂಥ ದೇಹೇಂದ್ರಿಯಾದಿ ಪ್ರಪಂಚಕ್ಕೂ ರಜ್ಜುಸರ್ಪಗಳೋಪಾದಿಯಲ್ಲಿ ಈ ಪಂಚವಿಧಗಳಿಂದ ಕಾಲತ್ರಯದಲ್ಲೂ ಅನ್ಯೋನ್ಯವೈಲಕ್ಷಣ್ಯವು ಸಿದ್ಧಿಸಿತು.

ಇನ್ನು ಚಿಜ್ಜಡಗಳಿಗೆ ಲಕ್ಷಣವ ಹೇಳೇವು. ಚಿತ್ತಿಗೆ ಲಕ್ಷಣವೇನೆಂದರೆ? ಒಂದು ಸಾಧನವ ಒಂದು ಅಪೇಕ್ಷಿಸದೆ ತಾನು ತೋರಿಕೊಂಡು ತನ್ನಲ್ಲಿ ಆರೋಪಿಸಲ್ಪಟ್ಟಂಥ ಸರ್ವಪದಾರ್ಥಗಳನು ತೋರಿಸುವಂಥದೇ ಚಿಲ್ಲಕ್ಷಣವೆನಿಸುವುದು. ಇನ್ನು ಜಡಲಕ್ಷಣ ಹೇಗೆಂದರೆ — ತಾನು ತೋರದೆ ಅನ್ಯವಸ್ತುವನು ತೋರಿಸದೆ ಇರುವಂಥದೇ ಜಡಲಕ್ಷಣವೆನಿಸುವುದು. ಇದಕ್ಕೆ ದೃಷ್ಟಾಂತವುಂಟೆ ಎಂದರೆ, ಉಂಟು. ಆ ದೃಷ್ಟಾಂತವೇನೆಂದರೆ, ಹೇಳೇವು. ಆದಿತ್ಯನಿಂದ ಭಾಸ್ಯಮಾನವಾದ ಘಟಾದಿಗಳು ದೃಷ್ಟಾಂತವು. ಅದೆಂತೆಂದರೆ—ದೃಷ್ಟಾಂತವೆಲ್ಲವು ಏಕದೇಶವಾದ ಕಾರಣ ಏಕದೇಶದೃಷ್ಟಾಂತವಾದ ಆದಿತ್ಯನಲ್ಲಿ ಈ ಚಿಲ್ಲಕ್ಷಣವು ಉಂಟೇ ಸರಿ. ಅದು ಹೇಗೆ ಎಂದರೆ-ಆದಿತ್ಯನು ಪ್ರಕಾಶಾಂತರವನು ಅಪೇಕ್ಷಿಸದೆ, ತಾನು ತೋರಿಕೊಂಡು, ತನ್ನ ಪ್ರಕಾಶವನು ಸಂಬಂಧಿಸಿಕೊಂಡಿರುವಂಥ ಘಟಾದಿಗಳನು ತೋರಿ

ಸುತ್ತ ಇದ್ದಾನಾದಕಾರಣ ಆ ಪ್ರಕಾಶನಾದ ಆದಿತ್ಯನಲ್ಲಿ ಚಿಲ್ಲಕ್ಷಣವು ಇದೆ.
ಹಾಗಾದರೆ, ಘಟಾದಿಗಳಲ್ಲಿ ಜಡಲಕ್ಷಣವು ಇದೆಯೆ ಎಂದರೆ—ಇದೆ. ಅದೆಂತೆಂ
ದರೆ, ಹೇಳೇವು. ಘಟವು ತಾನ ತೋಱದೆ ಅನ್ಯವಸ್ತುವನು ತೋಱಿಸದೆ
ಇದ್ದೀತಾಗಲಾಗಿ, ಆ ಘಟನಲ್ಲಿ ಜಡಲಕ್ಷಣವು ಇದೆ. ಆದುದಱಿಂದ ಆದಿತ್ಯ
ಲಕ್ಷಣವು ಘಟದಲ್ಲಿ ಇಲ್ಲನಾಗಲಾಗಿಯೂ, ಘಟಲಕ್ಷಣವು ಆದಿತ್ಯನಲ್ಲಿ ಇಲ್ಲವಾ
ಗಲಾಗಿಯೂ, ಆ ಆದಿತ್ಯನಿಗೂ ಘಟಕ್ಕೂ ಶಬ್ದದಿಂದಲೂ ಅರ್ಥದಿಂದಲೂ
ಲಕ್ಷಣದಿಂದಲೂ ಪ್ರತೀತಿಯಿಂದಲೂ ವ್ಯವಹಾರದಿಂದಲೂ ಹೇಗೆ ವೈಲಕ್ಷ
ಣ್ಯವಿದೆಯೋ ಹಾಗೆ ಚಿಲ್ಲಕ್ಷಣವು ಜಡವಾದಂಥ ದೇಹೇಂದ್ರಿಯಾದಿಗಳಲ್ಲಿ
ಇಲ್ಲವಾಗಲಾಗಿಯೂ ಜಡಲಕ್ಷಣವು ಚಿತ್ತಾಗಿರುವಂಥ ಆತ್ಮನಲ್ಲಿ ಇಲ್ಲವಾ
ಗಲಾಗಿಯೂ ಚಿತ್ತಿಗೂ ಜಡವಾದಂಥ ದೇಹೇಂದ್ರಿಯಾದಿಗಳಿಗೂ ಶಬ್ದದಿಂದ
ಲೂ ಅರ್ಥದಿಂದಲೂ ಲಕ್ಷಣದಿಂದಲೂ ಪ್ರತೀತಿಯಿಂದಲೂ ವ್ಯವಹಾರದಿಂ
ದಲೂ ವೈಲಕ್ಷಣ್ಯವುಂಟು. ಇದಱಿಂದ ಏನು ಸಿದ್ಧಿಸಿತೆಂದರೆ — ಪ್ರಕಾಶ್ಯ
ನಿಷ್ಠವಾದ ವಿಕಾರಗಳಿಂದ ಪ್ರಕಾಶಕವಾದಂಥ ವಸ್ತುವಿಗೆ ಕಾಲತ್ರಯದ
ಲ್ಲೂ ಸಂಬಂಧವಿಲ್ಲವೆಂದು ಸಿದ್ಧಿಸಿತು. ಅದೆಂತೆಂದರೆ, ಹೇಳೇವು. ಪ್ರಕಾ
ಶ್ಯಘಟಾದಿನಿಷ್ಠವಾದಂಥ ಛಿದ್ರತ್ವಾಚ್ಛಿದ್ರತ್ವಾದಿಗಳಿಂದ ಹಾನಿಲಾಭಗಳು
ಸ್ಪೃಷ್ಟಮತ್ವಾಸ್ಪೃಷ್ಟಮತ್ವಗಳಿಂದ ಪ್ರತ್ಯವಾಯಾಭ್ಯುದಯಗಳು ಶ್ಲಿ
ಷ್ಟತ್ವಾಶ್ಲಿಷ್ಟತ್ವಗಳಿಂದ ಹರ್ಷವಿಷಾದಗಳು, ಸಮೀಚೀನತ್ವಾಸಮೀಚೀ
ನತ್ವಾದಿಗಳಿಂದ ಅತಿಶಯತ್ವಾನತಿಶಯತ್ವಗಳು, ಪ್ರಕಾಶಕನಾದಂಥ ಆದಿ
ತ್ಯನ ಹೇಗೆ ಸ್ಪರ್ಶನವ ಮಾಡಲಾಱವೋ ಹಾಗೆ ಪ್ರಕಾಶ್ಯದೇಹಾದಿನಿಷ್ಠವಾ
ದಂಥ ವಿಕಾರಗಳು ಗುಣಗಳು ಧರ್ಮಗಳು ಜಾತಿನಾಮಗಳು ವರ್ಣಾಶ್ರ
ಮಾದಿಕ್ರಿಯೆಗಳು ಕರ್ತೃತ್ವಭೋಕ್ತೃತ್ವಗಳು ಕಾಮಕ್ರೋಧಗಳು
ದೇಹೇಂದ್ರಿಯಾದಿಗಳಿಗೆ ಪ್ರಕಾಶಕನಾಗಿ ಸಾಕ್ಷಿಯಾಗಿ ಚಿದ್ರೂಪನಾದಂಥ
ಆತ್ಮನ ಸ್ಪರ್ಶನವ ಮಾಡಲಾಱದೆಂಬುದು ಸಿದ್ಧವಾಯಿತು. ಆನಂದಕ್ಕೂ
ದುಃಖಕ್ಕೂ ಲಕ್ಷಣ ಹೇಗೆ? ಎಂದರೆ, ಹೇಳೇವು. ಇವಕ್ಕೆ ದೃಷ್ಟಾಂತವುಂ
ಟೆ ಎಂದರೆ, ಉಂಟು. ಆ ದೃಷ್ಟಾಂತವೇನೆಂದರೆ—ಹೇಳೇವು. ಹೊಸ ಮಡಕೆ
ಯೊಳಗಣ ಶೀತಜಲವು, ಕಂಚಿನ ಮಡಕೆಯೊಳಗಣ ಹುಣಿಸೆಯಾಚೆಂಕಿಯು.
ದೃಷ್ಟಾಂತಜಲದಲ್ಲಿ ಆನಂದಲಕ್ಷಣವು ಇದೆಯೆ, ಎಂದರೆ ಇದೆ. ಅದೆಂತೆಂದರೆ,

ಅದೆಂತೆಂದರೆ, ಹೇಳೇವು. ಬಿಸಿಲ ಬೇಗೆಯಿಂದ ತಪಿಸಪಟ್ಟು ಬಂದಂಥ ಪುರುಷನು ಅಶೀತಜಲಭಾಂಡವನು ಸ್ಪರ್ಶನವ ಮಾಡಿ ನೇತ್ರಗಳಿಗೆ ಒತ್ತಿಕೊಳ್ಳುತಿದ್ದಾನೆ. ಒತ್ತಿಕೊಂಡ ಮಾತ್ರದಲ್ಲಿಯೇ ಅವನ ತಾಪವೆಲ್ಲ ಹೋಗುತ್ತಿದೆ. ಅದು ಸಾಕ್ಷಾಜ್ಜಲವಲ್ಲ, ಜಲಾವೇಶ. ಜಲಾವೇಶವು ತ್ರಿಕ್ತಾಪನಿವರ್ತಕತ್ವವ ಪ್ರತ್ಯಕ್ಷವಾಗಿ ಕಂಡಿದ್ದೇವೆ. ಇನ್ನು ಆ ಜಲವನು ಪಾನಮಾಡಿತೆಯಾದರೆ ಸಕಲ ತಾಪಗಳು ಹೋಯಿತೆಂಬಂಥದು ಸರ್ವಾನುಭವಸಿದ್ಧವಾದುದರಿಂದ ಆ ಜಲದಲ್ಲಿ ಆನಂದಲಕ್ಷಣವಿದೆ. ಆ ಹುಣಿಸೆಯ ಬೆಂಕಿಯಲ್ಲಿ ದುಃಖಲಕ್ಷಣವಿದೆಯೆ ?— ಎಂದರೆ ಇದೆ. ಅದೆಂತೆಂದರೆ? ದಾಹತಾಪಗಳಿಲ್ಲದಂಥವನಿಗೆ ಹುಣಿಸೆಯ ಬೆಂಕಿಯ ಆವೇಶವು ಅವನಲ್ಲಿ ದಾಹತಾಪಗಳನು ಮಾಡುತ್ತ ಇದೆ. ಕೆಯ್ಯಲ್ಲಿ ಬೊಬ್ಬೆಗಳು ಹೋಗುತ್ತಿವೆ. ಸಾಕ್ಷಾತ್ತಾಗಿ ಬೆಂಕಿಯಲ್ಲ, ಬೆಂಕಿಯ ಆವೇಶ. ಈ ಬೆಂಕಿಯ ಆವೇಶನೇ ತಾಪಮಾಡುವಂಥದುದ ಪ್ರತ್ಯಕ್ಷವಾಗಿ ಕಂಡು ಇದ್ದೇವೆ. ಇನ್ನು ಆ ಬೆಂಕಿಯಲ್ಲಿ ಬಿದ್ದನೆಯಾದರೆ ಭವಾಗ್ನಿ ಹೋಗುವನೆಂಬುದು ಸರ್ವಾನುಭವಸಿದ್ಧವಾದಕಾರಣ ಆ ಹುಣಿಸೆಯ ಬೆಂಕಿಯಲ್ಲಿ ದುಃಖಲಕ್ಷಣವಿದೆ. ಮತ್ತೊಂದು ದೃಷ್ಟಾಂತವುಂಟು. ಅದೆಂತೆಂದರೆ?— ಅಮೃತವು ಕಾಲಕೂಟವಿಷವು ದೃಷ್ಟಾಂತ.[1] ಆ ಅಮೃತದಲ್ಲಿ ಆನಂದಲಕ್ಷಣವಿದೆಯೆ ? ಎಂದರೆ ಇದೆ. ಅದೆಂತೆಂದರೆ– ಆ ಅಮೃತವು ತಾನು ಸುಖಸ್ವರೂಪವಾಗಿದ್ದುಕೊಂಡು ತನ್ನನು ಪಾನವ ಮಾಡಿದಂಥವರಿಗೆ ನಿರತಿಶಯವಾದಂಥ ಸುಖವನು ಕೊಡುತ್ತಯಿದೆಯಾದುದರಿಂದ ಆಅಮೃತದಲ್ಲಿ ಆನಂದಲಕ್ಷಣವಿದೆ. ಹಾಗಾದರೆ ಕಾಲಕೂಟವಿಷದಲ್ಲಿ ದುಃಖಲಕ್ಷಣವಿದೆಯೆ? ಎಂದರೆ, ಇದೆ. ಅದೆಂತೆಂದರೆ– ಕಾಲಕೂಟವಿಷವು ತಾನು

---

ಪಾ— 1. ೬೪ನೆಯ ಪುಟದ ಕೊನೆಯಿಂದ ೫ನೆಯ ಪಙ್ತಿ— "ಆನಂದಕ್ಕೂ" ಎಂಬುದಾದಿಯಾಗಿ, ೬೫ ನೆಯ ಪುಟದ "ದೃಷ್ಟಾಂತ" ಎಂಬುದರವರೆಗೆ, ಒಂದು ಪ್ರತಿಯಲ್ಲಿ– "ಆನಂದಕ್ಕೂ ದುಃಖಕ್ಕೂ ಲಕ್ಷಣವೇನು ಎಂದರೆ, ನಿರುಪಾಧಿಕವಾಗಿ ನಿರತಿಶಯವಾದಂಥ ನಿತ್ಯಸುಖಸ್ವರೂಪವು ಆನಂದಲಕ್ಷಣವು; ತಾಪತ್ರಯಾತ್ಮಕತ್ವವು ದುಃಖಲಕ್ಷಣವು. ಇದಕ್ಕೆ ದೃಷ್ಟಾಂತವೇನೆಂದರೆ ಅಮೃತವು ಕಾಲಕೂಟವಿಷವು" ಎಂದು ಪಾಠಾಂತರವಿದೆ.

ತಾಪಾತ್ಮಕವಾಗಿದ್ದುಕೊಂಡು ತನ್ನ ಸಮೀಪವನು ಹೊಂದಿದಂಥವರಿಗೆ ದುಃಖರೂಪವಾಗಿದ್ದುಕೊಂಡು ಪ್ರಾಣಹಾನಿಯನು ಮಾಡುತ್ತ ಇದೆಯಾ ದುದಱಿಂದ ಕಾಲಕೂಟವಿಷದಲ್ಲಿ ದುಃಖಲಕ್ಷಣವೇ ಇದೆ. ಅಮೃತಲಕ್ಷಣವು ಕಾಲಕೂಟದಲ್ಲಿ ಇಲ್ಲವಾಗಲಾಗಿಯೂ ಕಾಲಕೂಟಲಕ್ಷಣವು ಅಮೃತದಲ್ಲಿ ಇಲ್ಲವಾಗಲಾಗಿಯೂ ಆಅಮೃತಕ್ಕೂ ಕಾಲಕೂಟವಿಷಕ್ಕೂ ಶಬ್ದದಿಂದಲೂ ಅರ್ಥದಿಂದಲೂ ಪ್ರತೀತಿಯಿಂದಲೂ ಅನ್ಯೋನ್ಯವೈಲಕ್ಷಣ್ಯವು ಹೇಗೆ ಇದೆ ಯೋ, ಜಲಲಕ್ಷಣವು ಅಗ್ನಿಯಲ್ಲಿ ಇಲ್ಲವಾಗಲಾಗಿಯೂ ಅಗ್ನಿಲಕ್ಷಣವು ಜಲದಲ್ಲಿ ಇಲ್ಲವಾಗಲಾಗಿಯೂ ಆ ಜಲಕ್ಕೂ ಅಗ್ನಿಗೂ ಶಬ್ದದಿಂದಲೂ ಅರ್ಥದಿಂದಲೂ ಲಕ್ಷಣದಿಂದಲೂ ಪ್ರತೀತಿಯಿಂದಲೂ ವ್ಯವಹಾರದಿಂದಲೂ ಅನ್ಯೋನ್ಯವೈಲಕ್ಷಣ್ಯವು ಹೇಗ ಇದೆಯೋ, ಹಾಗೆ ಆನಂದಲಕ್ಷಣವು ದುಃ ಖಾತ್ಮಕವಾದಂಥ ದೇಹೇಂದ್ರಿಯಾದಿಪ್ರಪಂಚದಲ್ಲಿ ಇಲ್ಲವಾಗಲಾಗಿಯೂ, ದೇಹೇಂದ್ರಿಯಾದಿ ನಿಷ್ಠವಾದಂಥ ದುಃಖಲಕ್ಷಣವು ಸುಖಸ್ವರೂಪನಾದಂಥ ಆತ್ಮನಲ್ಲಿ ಇಲ್ಲವಾಗಲಾಗಿಯೂ, ಆ ಆನಂದಕ್ಕೂ ದುಃಖಕ್ಕೂ ಶಬ್ದದಿಂ ದಲೂ ಅರ್ಥದಿಂದಲೂ ಪ್ರತೀತಿಯಿಂದಲೂ ವ್ಯವಹಾರದಿಂದಲೂ ಅನ್ಯೋ ನ್ಯವೈಲಕ್ಷಣ್ಯವಿದೆ. ಇದಱಿಂದ ಏನು ಹೇಳಪಟ್ಟಿತೆಂದರೆ– ಕಾಲಕೂಟವಿ ಷನಿಷ್ಠವಾದ ತಾಪಾದಿಗಳು ಆ ಅಮೃತವನು ಹೇಗೆ ಸ್ಪರ್ಶನವ ಮಾಡ ಲಾಱದೋ, ಅಗ್ನಿನಿಷ್ಠವಾದಂಥ ತಾಪಾದಿಗಳು ಆ ಜಲವನು ಹೇಗೆ ಸ್ಪ ರ್ಶನವ ಮಾಡಲಾಱವೋ, ಹಾಗೆಯೇ ದೇಹೇಂದ್ರಿಯಾದಿಪ್ರಪಂಚನಿಷ್ಠ ವಾದಂಥ ತಾಪತ್ರಯಗಳು ಸುಖಸ್ವರೂಪನಾದಂಥ ಆತ್ಮನ ಸ್ಪರ್ಶನವ ಮಾಡಲಾಱವೆಂಬುದು ಸಿದ್ಧಿಸಿತು.

ಹಾಗಾದರೆ ಈ ವಿಚಾರಕ್ಕೆ ಫಲವೇನೆಂದರೆ, ರಜ್ಜುವಿನೋಪಾದಿ ಯಲ್ಲಿ ಸದ್ರೂಪನಾಗಿ, ಆದಿತ್ಯನೋಪಾದಿಯಲ್ಲಿ ಚಿದ್ರೂಪನಾಗಿ, ಜಲಾ ಮೃತಗಳೋಪಾದಿಯಲ್ಲಿ ಆನಂದರೂಪನಾದಂಥ ತಾನು ಸರ್ಪದೋಪಾದಿ ಯಲ್ಲಿಯೇ ಅನೃತವಾಗಿ, ಘಟದೋಪಾದಿಯಲ್ಲಿಯೇ ಜಡವಾಗಿ ಅಗ್ನಿಕಾಲ ಕೂಟವಿಷಗಳೋಪಾದಿಯಲ್ಲಿಯೇ ದುಃಖರೂಪವಾದಂಥ ದೇಹೇಂದ್ರಿಯಾ ದಿಪ್ರಪಂಚಕ್ಕಿಂತಲೂ ವಿಲಕ್ಷಣನೆಂದು ತಿಳಿವಂಥದೇ ಈ ವಿಚಾರಕ್ಕೆ ಫಲವೆನಿಸುವುದು.

ಹೀಗೆ ಆವನ ತಿಳಿಯುತ್ತ ಇದ್ದಾನೆಯೋ, ಆತನೇ ಜೀವನ್ಮುಕ್ತ ನೆಂದು ವೇದಾಂತರಹಸ್ಯವು.

ಶ್ಲೋ ॥ ಅನೇಕಾವಯುವಸ್ಥೂಲಶುಕ್ಲಶೋಣಿತಸಂಭವಃ ।
ದೇಹ ಸ್ಸೂಕ್ಷ್ಮಸ್ತಥಾ ಸಪ್ತದಶಾವಯುವಲಕ್ಷಣಃ ॥೧॥

ಕಾರಣಂ ಚಾಜ್ಞಾನಸಂಜ್ಞಾನೃತದುಃಖಾತ್ಮಕಾ ಅವಿಾ ।
ಏಭ್ಯೋ ವಿಲಕ್ಷಣಸ್ತ್ವಾತ್ಮಾ ಸತ್ಯಜ್ಞಾನಾದಿಲಕ್ಷಣಃ ॥ ೨॥

ಆತ್ಮಲಕ್ಷಣಸತ್ಯಾದಿ ಸ್ತಥಾಭಿನ್ನೋಽನೃತಾದಿತಃ ॥
ಪೀಯೂಷವಿಷವದ್ಭಾನುಭಾಂಡವದ್ರಜ್ಜುಸರ್ಪವತ್ ॥೩॥

ಇತಿ ಯುಸ್ತು ವಿವಿಚ್ಯೈವಂ ವಿಜಾನಾತಿ ಪುನಃ ಪುನಃ ॥
ಸಸಂಸಾರಾದ್ವಿಮುಕ್ತಸ್ಸ್ಯಾನ್ನಾನ್ಯಥಾ ಕರ್ಮಕೋಟಿಭಿಃ ॥

ಇಂತೀಕನ್ನಡಭಾಷೆಯೊಳ್ ವಿರಚಿಸಿದ

ವಾ ಸು ದೇ ವ ಯ ತೀಂ ದ್ರ ಪ್ರೋ ಕ್ತ ಮ ಪ್ಪ

ವಿವೇಕಸಾರವೆಂಬ ಗ್ರಂಥದಲ್ಲಿ

ಶರೀರತ್ರಯವಿಲಕ್ಷಣತ್ವವಂ ಪೇಳ್ದುದು

ಅಷ್ಟಮಪ್ರಕರಣಂ.

# ಒಂಬತ್ತನೆಯ ಪ್ರಕರಣಂ.

—ಅವಸ್ಥಾತ್ರಯಸಾಕ್ಷಿತ್ವ—

**ಶ್ಲೋಕ ॥ ಜಾಗ್ರತ್ಸ್ವಪ್ನಸುಷುಪ್ತ್ಯಾಖ್ಯಾಸ್ವವಸ್ಥಾಸು ಶಿವಾತ್ಮನಃ ।**
**ಸಾಕ್ಷಿತ್ವಮಾಸಾಕ್ಷಿತೇತತ್ಸದೃಷ್ಟಾಂತಂ ವಿಚಾರ್ಯತೇ ॥**

ಆತ್ಮನಿಗೆ ಅವಸ್ಥಾತ್ರಯಸಾಕ್ಷಿತ್ವವಾವುದೆಂದು ವಿಚಾರಿಸುತ್ತ ಇದ್ದೇವೆ.

ಆತ್ಮನಿಗೆ ಅವಸ್ಥಾತ್ರಯಸಾಕ್ಷಿತ್ವವು ಶ್ರುತಿಗಳಲ್ಲಿ ಹೇಳಪಟ್ಟಿತು. ಆ ಅವಸ್ಥಾತ್ರಯವನಱಿಯದೆ ಅವಸ್ಥಾತ್ರಯಸಾಕ್ಷಿತ್ವವನಱಿಯಕೂಡದಾಗಿ, ಮೊದಲು ಆ ಅವಸ್ಥಾತ್ರಯವೇನೆಂದು ವಿಚಾರಿಸುತ್ತಿದ್ದೇವೆ.

ಅವಸ್ಥಾತ್ರಯವೆಂದರೇನೆಂದರೆ ? ಜಾಗ್ರದವಸ್ಥೆಯೆನುತಲೂ, ಸ್ವಪ್ನಾವಸ್ಥೆಯೆನುತಲೂ, ಸುಷುಪ್ತ್ಯವಸ್ಥೆಯೆನುತಲೂ ಮೂಱು ವಿಧಗಳು. ಆ ಮೂಱು ವಿಧಗಳೊಳಗೆ ಜಾಗ್ರದವಸ್ಥೆಯೆಂದರೇನೆಂದರೆ ? ಸಕಲೇಂದ್ರಿಯಗಳಿಂದಲೂ ಬಾಹ್ಯಾರ್ಥಜ್ಞಾನವು ಎಷ್ಟು ಪರ್ಯಂತವಿದೆಯೋ, ಅಷ್ಟು ಪರ್ಯಂತ ಜಾಗ್ರದವಸ್ಥೆಯೆನಿಸುವುದು. ಸ್ವಪ್ನಾವಸ್ಥೆಯೆಂದರೇನೆಂದರೆ ? ಇಂದ್ರಿಯಗಳಿಂದ ಬಾಹ್ಯಪದಾರ್ಥಜ್ಞಾನವು ಬಾರದೆ ಮನಸ್ಸೇ ಕರ್ತ್ರಾದ್ಯಾಕರವಾಗಿ ಪರಿಣಮಿಸಿ ಎಷ್ಟು ಪರ್ಯಂತ ವಿಷಯಾದ್ಯಾಕಾರವಾಗಿ ತೋಱುತ್ತಿದೆಯೋ ಅಷ್ಟು ಪರ್ಯಂತವೂ ಸ್ವಪ್ನಾವಸ್ಥೆಯೆನಿಸುವುದು. ಸುಷುಪ್ತ್ಯವಸ್ಥೆಯೆಂದರೇನೆಂದರೆ ? ಇಂದ್ರಿಯಗಳಿಂದ ಬಾಹ್ಯಪದಾರ್ಥಜ್ಞಾನವು ಬಾರದೆ ಮನಸ್ಸು ಕರ್ತ್ರಾದ್ಯಾಕಾರವಾಗಿ ಪರಿಣಮಿಸಿ ವಿಷಯಾದ್ಯಾಕಾರವಾಗಿ ತೋಱದೆ ಬುದ್ಧಿಯು ಕಾರಣಾತ್ಮಕವಾಗಿ ಎಷ್ಟು ಪರ್ಯಂತವಿದೆಯೋ ಅಷ್ಟುಪರ್ಯಂತವೂ ಸುಷುಪ್ತ್ಯವಸ್ಥೆಯೆನಿಸುವುದು.

ಆತ್ಮನಿಗೆ ಅವಸ್ಥಾತ್ರಯಸಾಕ್ಷಿತ್ವ ಹೇಗೆಂದರೆ? ಅವಸ್ಥಾತ್ರಯದೊಡನೆ ಕೂಡಿದ ಹಾಗೂ ಇದ್ದುಕೊಂಡು ಅವಸ್ಥಾತ್ರಯದೊಡನೆ ಕೂಡದೆ ಇದ್ದಹಾಗೂ ಇದ್ದುಕೊಂಡು ಅವಸ್ಥಾತ್ರಯವನೂ ಅವಸ್ಥಾತ್ರಯವ್ಯಾಪಾರವನೂ ಅವಸ್ಥಾವಂತನನೂ ತಿಳಿವಂಥದೇ ಆತ್ಮನಿಗೆ ಅವಸ್ಥಾತ್ರಯ

ಸಾಕ್ಷಿತ್ವವೆನಿಸುವುದು. ಈ ಸಾಕ್ಷಿತ್ವಕ್ಕೆ ಈ] ವ್ಯಾಪಾರತ್ರಯವಿಶೇಷಣ ಗಳು ಬೇಕೇ ?– ಎಂದರೆ, ಬೇಕು. ಅದೆಲ್ಲಿ ಕಂಡಿರೆಂದರೆ ?– ದೃಷ್ಟಾಂತದಲ್ಲಿ ಕಂಡಿದ್ದೇವೆ. ಆ ದೃಷ್ಟಾಂತವೇನೆಂದರೆ, ಹೇಳೇವು. ತುತಾಧಿಸ್ಥಳವಿಶೇಷಗಳಲ್ಲಿ ಜಪವ ಮಾಡಿಕೊಂಡು ಇರುವಂಥ ಒಬ್ಬ ಪುರುಷನ ಸನ್ನಿಧಿಯಲ್ಲಿ ಸಾಲನ ಕೊಟ್ಟು ತೆಗೆದುಕೊಂಡಂಥವರಿಬ್ಬರು ಪುರುಷರು ಬಂದು ಬಂದು ಮುಹೂರ್ತ ಜಪವನು ಮಾಡಿಕೊಂಡು ಇದ್ದ ತಱುವಾಯದಲ್ಲಿ ಆ ಇಬ್ಬರೊಳಗೆ ಸಾಲಕೊಟ್ಟಂಥವನು ಸಾಲತೆಗೆದುಕೊಂಡವನ ಸಾಲ ಕೊಡಹೇಳಿ ಕೇಳಲಾಗಿ ಅವನು "ಕಾಲಾಂತರದಲ್ಲಿ ಕೊಟ್ಟೇನು" ಎಂದು ಹೇಳಿದುದಱಿಂದ ಹೀಗೆ ಬಂದು ಮುಹೂರ್ತ ಮಾತ್ರ ಅನ್ಯೋನ್ಯಸಂವಾದ ನಡೆದ ತಱುವಾಯದಲ್ಲಿ, ಸಾಲಕೊಟ್ಟಂಥವನು ಸಾಲತೆಗೆದುಕೊಂಡವನ ತಿರಿಗಿ ಸಾಲವ ಕೊಡಹೇಳಿ ಕೇಳಲಾಗಿ, ಅವನು "ಕಾಲಾಂತರದಲ್ಲಿ ಕೊಟ್ಟೇನು" ಎಂದು ಹೇಳಿದುದಱಿಂದ, ಮತ್ತು ಕಠಿನವಾಗಿ ಕೇಳಿದುದಱಿಂದ ಇವ "ಇಲ್ಲ" ವೆಂದು ಹೇಳಲು; ಹೀಗೆ ಮುಹೂರ್ತಮಾತ್ರವು ಅನ್ಯೋನ್ಯಕಲಹವನು ಮಾಡಿಕೊಂಡು ಇದ್ದ ತಱುವಾಯದಲ್ಲಿ ಅವರಿಬ್ಬರು ಅರಮನೆಗೆ ಹೋಗಿ, ಅರಮನೆಯವರ ಸಂಗಡ ಸಾಲನ ಕೇಳಿದರೆ ಕೊಡನೆಂದು ಸಾಲ ಕೊಟ್ಟಂಥವ ಹೇಳಿದುದಱಿಂದ ಸಾಲ ತೆಗೆದುಕೊಂಡಂಥವನು "ನಾನು ಅವನ ಕೊಳ್ಳಲಿಲ್ಲ, ಅವನೆನ್ನ ಕೊಂದನು" ಎಂದು ಹೇಳಿದುದ ಹೇಳಿದುದಱಿಂದ ಅನ್ಯೋನ್ಯವಿರುದ್ಧವಾದಂಥ ಅವರಿಬ್ಬರ ವ್ಯವಹಾರವನು ಕೇಳಿ, ಅರಮನೆಯವರು "ಇದಕ್ಕೆ ಸಾಕ್ಷಿಯುಂಟೇ? ಎಂದು ಕೇಳಲಾಗಿ; ಅವರು ಸಾಕ್ಷಿ ಉಂಟೆಂದು ಹೇಳಿದುದಱಿಂದ, ಆಬಳಿಕ ಯಾವ ಸಾಕ್ಷಿಯಿಂದ ಇಬ್ಬರ ಸಂವಾದವು ಬಯಲಾಗುತಿದೆಯೋ, ಆ ಸಾಕ್ಷಿಯಲ್ಲಿ ಪೂರ್ವವೆ ಹೇಳಪಟ್ಟಂಥ ಸಾಕ್ಷಿಲಕ್ಷಣವಿದೆ. ಅದೆಂತೆಂದರೆ? ಆ ಸಂವಾದಿಗಳಿಬ್ಬರು ಎಷ್ಟು ಪರ್ಯಂತ ಮೌನವಾಗಿ ಇದ್ದರೋ ಅಷ್ಟು ಪರ್ಯಂತವು ಸುಷುಪ್ತಾವಸ್ಥೆಗೆ ದೃಷ್ಟಾಂತ. ಆ ಅವಸ್ಥೆಯಲ್ಲಿ ವ್ಯಾಪಾರತ್ರಯವು ಇಲ್ಲ. ಆ ಮೌನಿಗಳಾಗಿ ಇದ್ದ ಇಬ್ಬರು ಅನಸ್ಥಾವಂತರು ಎಷ್ಟು ಪರ್ಯಂತವು ಸೌಜನ್ಯದ ಮಾತನಾಡಿಕೊಂಡು ಇದ್ದರೋ, ಅಷ್ಟುಪರ್ಯಂತವು ಸ್ವಪ್ನಾವಸ್ಥೆಗೆ ದೃಷ್ಟಾಂತ. ಆ ಸ್ವಪ್ನಾವಸ್ಥೆಯಲ್ಲಿ

ವ್ಯಾಪಾರತ್ರಯವು ಉಂಟು. ಆ ವ್ಯಾಪಾರತ್ರಯಗಳಾವುವೆಂದರೆ– ಹಸ್ತ ಚಲನಾದಿಗಳು ಕಾಯಿಕವ್ಯಾಪಾರವೆನಿಸುವುದು; ಅನ್ಯೋನ್ಯಸಂಭಾಷಣವು ವಾಚಿಕವ್ಯಾಪಾರವೆನಿಸುವುದು; ಉತ್ತರಪ್ರತ್ಯುತ್ತರವ ಚಿಂತಿಸುವಂಥದು ಮನಸ್ಸಿನ ವ್ಯಾಪಾರವೆನಿಸುವುದು. ಮೃದುಭಾಷಿತರಾದಂಥವರಿಬ್ಬರು ಅವಸ್ಥಾವಂತರು ಎಷ್ಟು ಪರ್ಯಂತ ಕಲಹವ ಮಾಡಿಕೊಂಡಿದ್ದರೋ ಅಷ್ಟು ಪರ್ಯಂತ ಜಾಗ್ರದವಸ್ಥೆಗೆ ದೃಷ್ಟಾಂತ. ಆ ಅವಸ್ಥೆಯಲ್ಲಿ ವ್ಯಾಪಾರತ್ರಯವು ಉಂಟು. ಅದೆಂತೆಂದರೆ– ಅನ್ಯೋನ್ಯತಾಡನಾದಿಗಳು ಕಾಯಿಕವ್ಯಾಪಾರವೆನಿಸುವುದು ಅನ್ಯೋನ್ಯಪಾರುಷ್ಯವಚನಗಳು ವಾಚಿಕವ್ಯಾಪಾರವೆನಿಸುವುದು; ಅನ್ಯೋನ್ಯಮರ್ಮಚಿಂತೆಯು ಮಾನಸಿಕವ್ಯಾಪಾರವೆನಿಸುವುದು; ಕಲಹವ ಮಾಡಿಕೊಂಡಂಥವರಿಬ್ಬರ ಅವಸ್ಥಾವಂತರ ಮಧ್ಯಸ್ಥನಾದ ದೇವದತ್ತನು ಇವರುಗಳ ಕಲಹವ ನೋಡಿಕೊಂಡಿದ್ದುಕೊಂಡು ಆಯವಸ್ಥಾತ್ರಯಗಳ ಸಂಗಡ ಕೂಡಿಕೊಂಡಿರುವವರಿಗೆ ಸಹಾಯವಾಗಿ ಬಂದು ಮಾತನು ಹೇಳದೆ, ಅವಸ್ಥಾತ್ರಯದ ಸಂಗಡಲು ಕೂಡಿಕೊಂಡು ಅವಸ್ಥಾತ್ರಯವನು ಅವಸ್ಥಾತ್ರಯವ್ಯಾಪಾರವನು ಅವಸ್ಥಾವಂತರನು ತಿಳಿಯುತ್ತ ಇದ್ದಾನೆಯಾದಕಾರಣ ಆಮಧ್ಯಸ್ಥನಾದ ದೇವದತ್ತನಲ್ಲಿ ಆ ಸಾಕ್ಷಿಲಕ್ಷಣವು ಇದೆ. ಅದುಕಾರಣ ಸಾಕ್ಷಿತ್ವದಲ್ಲಿ ಇಷ್ಟು ವಿಶೇಷಣಗಳು ಬೇಕೇಸರಿ. ಹಾಗಾದರೆ ದಾರ್ಷ್ಟಾಂತದಲ್ಲಿ ಸಾಕ್ಷಿಯಾದ ಆತ್ಮನಲ್ಲಿ ಇಷ್ಟು ವಿಶೇಷಣಗಳು ಇವೆಯೇ ಎಂದರೆ, ಇವೆ. ಅದೆಂತೆಂದರೆ– ಅವಸ್ಥಾತ್ರಯದ ಸಂಗಡ ಕೂಡಿಕೊಂಡಿರುವಂಥ ಬಗೆಯು ಅವಸ್ಥಾತ್ರಯದ ಸಂಗಡ ಕೂಡದೆ ಇರುವಂಥ ಬಗೆಯು ಅವಸ್ಥಾತ್ರಯವನು ಅವಸ್ಥಾತ್ರಯವ್ಯಾಪಾರವನು ತಿಳಿದಂಥ ಬಗೆಯು ಈ ನಾಲ್ಕು ವಿಶೇಷಗಣಗಳು ಸಾಕ್ಷಿಯಾದ ಆತ್ಮನಲ್ಲಿ ಇವೆ. ದಾರ್ಷ್ಟಾಂತಿಕದಲ್ಲಿ ಅವಸ್ಥಾತ್ರಯವೇನೆಂದರೆ ?–ಜಾಗ್ರತ್ಸ್ವಪ್ನಸುಷುಪ್ತಿಗಳೆಂಬುದು ಅವಸ್ಥಾತ್ರಯಗಳು. ಜಾಗ್ರತ್ತೇನೆಂದರೆ ? ನಿದ್ರೆಯಿಂದ ಎದ್ದ ಆರಭ್ಯದಿಂದ ಪುನಃ ನಿದ್ರೆ ಬರುವ ಪರ್ಯಂತಕ್ಕೆ ಜಾಗ್ರತ್ತೆಂದು ಹೇಳಪಡುವುದು. ಇದಕ್ಕೆ ದೃಷ್ಟಾಂತವುಂಟೇ ಎಂದರೆ, ಉಂಟು. ಅದೆಂತೆಂದರೆ?– ವಿಶಾಲವಾದ ಪಟ್ಟಣದ ಹಾಗೆ ಈ ಜಾಗ್ರದವಸ್ಥೆ, ಆ ಪಟ್ಟಣದಲ್ಲಿ ಬ್ರಾಹ್ಮಣ ಕ್ಷತ್ರಿಯ

ವೈಶ್ಯ ಶೂದ್ರರ ವೀಧಿಗಳ ಹಾಗೆ ಜಾಗ್ರದವಸ್ಥೆಯಲ್ಲಿ ಕಾಯಿಕವಾಚಿಕ ಮಾನಸಿಕವ್ಯಾಪಾರಗಳು ಇವೆ. ಆ ಪಟ್ಟಣದಲ್ಲಿ ಹಾನಿವೃದ್ಧಿಗಳಿಗೆ ಅಭಿಮಾನಿಯಾದ ಪ್ರಭುವಿನ ಹಾಗೆ ಜಾಗ್ರದವಸ್ಥೆಯಲ್ಲಿ ಬರುವ ಸುಖದುಃಖಗಳಿಂದ ತಪಿಸಿಕೊಂಡು ಇರುವಂಥ ವಿಶ್ವನು ಅವಸ್ಥಾವಂತನು. ಸ್ವಪ್ನಾವಸ್ಥೆ ಯೇನು ಎಂದರೆ?– ನಿದ್ರಾಕಾಲದಲ್ಲಿ ಜಾಗ್ರದ್ವಾಸನಾಮಯವಾದ ಮನಸ್ಸಿನಿಂದ ಕಲ್ಪಿಸಪಟ್ಟಂಥ ಪ್ರಪಂಚದಲ್ಲಿ ಪ್ರಾತಿಭಾಸಿಕಜೀವನು ಎಷ್ಟು ಪರ್ಯಂತ ವ್ಯವಹರಿಸುತ್ತಿದ್ದಾನೋ ಅಷ್ಟುಪರ್ಯಂತವು ಸ್ವಪ್ನಾವಸ್ಥೆಯೆಂದು ಹೇಳಪಡುವುದು. ಇದಕ್ಕೆ ದೃಷ್ಟಾಂತವು ಏನೆಂದರೆ?— ಪಟ್ಟಣದೊಳಗೆ ಇರುವಂಥ ಕೋಟೆಯು ಹಾಗೆ ಸ್ವಪ್ನಾವಸ್ಥೆ; ಅದರಲ್ಲಿ ಇರುವಂಥ ಬ್ರಾಹ್ಮಣಕ್ಷತ್ರಿಯವೈಶ್ಯಶೂದ್ರರ ಬೀದಿಗಳ ಹಾಗೆ ಈಸ್ವಪ್ನಾವಸ್ಥೆಯಲ್ಲಿ ಕಾಯಿಕವಾಚಿಕಮಾನಸಿಕವ್ಯಾಪಾರಗಳು ಇವೆ. ಆಕೋಟೆಯಲ್ಲಿ ಬರುವಂಥ ಹಾನಿವೃದ್ಧಿಗಳಿಗೆ ಅಭಿಮಾನಿಯಾದ ಪ್ರಭುವಿನಹಾಗೆ ಈಸ್ವಪ್ನಾವಸ್ಥೆಯಲ್ಲಿ ಬರುವ ಸುಖದುಃಖಗಳಿಂದ ತಪಿಸಿಕೊಂಡಿರುವಂಥ ತೈಜಸನು ಸ್ವಪ್ನಾವಸ್ಥಾವಂತನು. ಸುಷುಪ್ತ್ಯವಸ್ಥೆಯೇನೆಂದರೆ?– ಬಾಹ್ಯವ್ಯಾಪಾರಗಳು ಇಲ್ಲದೆ ಅಂತರವ್ಯಾಪಾರವು ಇಲ್ಲದೆ ದೇಹೇಂದ್ರಿಯಾದಿ ಸ್ಮರಣೆಯು ಇಲ್ಲದೆ ಜೀವನು ನಿಶ್ಚೇಷ್ಟನಾಗಿ ಎಷ್ಟು ಪರ್ಯಂತ ನಿದ್ರೆಯು ಮಾಡುತ್ತಿದ್ದಾನೋ ಅಷ್ಟು ಪರ್ಯಂತವು ಸುಷುಪ್ತ್ಯವಸ್ಥೆಯೆಂದು ಹೇಳಪಡುವುದು. ಇದಕ್ಕೆ ದೃಷ್ಟಾಂತ ಹೇಗೆ ಎಂದರೆ ?— ಆಕೋಟೆಯಲ್ಲಿ ಇರುವ ಅರಮನೆಯು ಹಾಗೆ ಸುಷುಪ್ತ್ಯವಸ್ಥೆ; ಅರಮನೆಯಲ್ಲಿ ಬ್ರಾಹ್ಮಣಕ್ಷತ್ರಿಯವೈಶ್ಯರ ವೀಧಿಗಳು ಹೇಗೆ ಇಲ್ಲವೋ ಹಾಗೆ ಸುಷುಪ್ತ್ಯವಸ್ಥೆಯಲ್ಲಿ ಕಾಯಿಕವಾಚಿಕಮಾನಸಿಕವ್ಯಾಪಾರಗಳು ಇಲ್ಲ. ಆ ಅರಮನೆಯಲ್ಲಿ ಬರುವಂಥ ಹಾನಿಲಾಭಗಳಿಗೆ ಅಭಿಮಾನಿಯಾದ ಪ್ರಭುವಿನ ಹಾಗೆ ಸುಷುಪ್ತ್ಯವಸ್ಥೆಯಲ್ಲಿ ನಿಜಾನಂದವನು ಅನುಭವಿಸಿ ಕೊಂಡಿರುವ ಪ್ರಾಜ್ಞನು ಸುಷುಪ್ತ್ಯವಸ್ಥಾವಂತನು.

ಆ ಆತ್ಮನಿಗೆ ಅವಸ್ಥಾತ್ರಯವ ಕುರಿತು ಸಾಕ್ಷಿತ್ವವು ಹೇಗೆ ? ಎಂದರೆ ಹೇಳೇವು. ನಿನ್ನೆಯ ಜಾಗ್ರದವಸ್ಥೆಯು ಆಜಾಗ್ರದವಸ್ಥೆಯಲ್ಲಿರುವಂಥ ಕಾಯಿಕವಾಚಿಕಮಾನಸಿಕವ್ಯಾಪಾರಗಳು, ಆಯವಸ್ಥ

ವಂತನು, ನಿನ್ನೆಯು ಸ್ವಪ್ನಾವಸ್ಥೆಯು, ಆ ಅವಸ್ಥೆಯಲ್ಲಿ ಮಾಡ ಪಟ್ಟಂಥ ಕಾಯಿಕಮಾನಸಿಕವಾಚಿಕವ್ಯಾಪಾರಗಳು, ಆಯವಸ್ಥಾವಂತ ನು, ನಿನ್ನೆಯು ಸುಷುಪ್ತ್ಯವಸ್ಥೆಯು, ಆ ಸುಷುಪ್ತ್ಯವಸ್ಥೆಯಲ್ಲಿ ಸರ್ವಾ ತ್ಮನಾ ಬಂದು ವ್ಯಾಪಾರವು ಮಾಡಪಡಲಿಲ್ಲವೆಂಬಂಥ ಬಗೆಯು, ಆ ಅವ ಸ್ಥಾವಂತನು, ಇಷ್ಟುಕೂಡ ಇಂದು ನಮಗೆ ತೋರುತ್ತದೆಯಷ್ಟೆ, ಇದು ಸ್ಮರಣೆಯೋ, ಅನುಭವವೋ ಎಂದರೆ,— ಸ್ಮರಣೆಯೆಂತಲೇ ಹೇಳ ಬೇಕು. ಅನುಭವವೆಂದು ಹೇಳುವಣವೆಂದರೆ— ಈಗ ಆವಿಷಯಸನ್ನಿಕ ರ್ಷವು ಇಲ್ಲವಾದುದಱಿಂದ ಅನುಭವವೆಂದು ಹೇಳಕೂಡದು, ಸ್ಮರಣೆ ಯುಂತಲೇ ಹೇಳಬೇಕು, ಹಾಗಾದರೆ ಈ ಸ್ಮರಣೆಯು ಅನುಭೂತವಸ್ತು ವಿಷಯವಾಗಿ ಬರುತ್ತಿದೆಯೋ, ಅನನುಭೂತವಸ್ತು ವಿಷಯವಾಗಿ ಬರು ತ್ತಿದೆಯೋ ಎಂದರೆ, ಅನುಭೂತವಸ್ತುವಿಷಯವಾಗಿ ಬರುತ್ತಿದೆ. ಅನನು ಭೂತವಸ್ತು ವಿಷಯವಾಗಿ ಬರುತ್ತಿದೆಯೆಂದು ಹೇಳುವಣವೆಂದರೆ ಪ್ರ ಪಂಚದ ವ್ಯಾಪಾರವೆಲ್ಲವು ನಮ್ಮಿಂದ ಸ್ಮರಿಸಪಡಬೇಕು. ಸ್ಮರಿಸಪಡಲಿಲ್ಲ. ಅದಱಿಂದ ಸ್ಮರಣೆಯೆಲ್ಲವು ಅನುಭೂತವಸ್ತುವಿಷಯವೆಂದೇ ಹೇಳಬೇಕು. ಹಾಗಾದರೆ ಆರಿಂದ ಅನುಭವಿಸಪಟ್ಟಿದೆ ಎಂದರೆ ನಮ್ಮಿಂದಲೆ ಅನುಭವಿಸಪ ಟ್ಟಿದೆ. ಹಾಗಾದರೆ ನಾವು ಕೂಡಿ ಇದ್ದುಕೊಂಡೇ ಅನುಭವಿಸಿದೆವೋ ಕೂ ಡಿಕೊಂಡು ಇರದೆ ಅನುಭವಿಸಿದೆವೋ ಎಂದರೆ, ಕೂಡ ಇದ್ದುಕೊಂಡು ಅನು ಭವಿಸಿದೆವು. ಕೂಡದೆ ಇದ್ದುಕೊಂಡು ಅನುಭವಿಸಿದೆವೆಂದು ಹೇಳುವಣ ವೆಂದರೆ— ಸ್ವರ್ಗಾದಿಗಳಲ್ಲಿ ಇರುವ ವಿಷಯಗಳನು ನಾವು ಈಗ ಅನುಭವಿ ಸಬೇಕು. ಹಾಗೆ ಅನುಭವಿಸಲಿಲ್ಲವಾದಕಾರಣ ಕೂಡದೆ ಇದ್ದುಕೊಂಡು ವಿಷ ಯಗಳ ಅನುಭವಿಸಿದೆವೆಂದು ಹೇಳಕೂಡದು. ಕೂಡಿಕೊಂಡು ಇದ್ದುಕೊಂ ಡೇಆ ಅವಸ್ಥೆಗಳನು, ಆ ಅವಸ್ಥಾವ್ಯಾಪಾರಗಳನು, ಅವಸ್ಥಾವಂತನನು ಅನುಭವಿಸುತ್ತೇವೆಂದೇ ಹೇಳಬೇಕು. ಹಾಗಾದರೆ ಕೂಡದೆ ಇರುವುದು ಹೇಗೆ ಎಂದರೆ ನಿನ್ನೆಯು ಜಾಗರಾವಸ್ಥೆಯು, ಸ್ವಪ್ನಾವಸ್ಥೆಯು, ಸುಷು ಪ್ತ್ಯವಸ್ಥೆಯು, ಅವಸ್ಥಾವ್ಯಾಪಾರಗಳು ನಾಶವಾಗಿಹೋಗಿ ನಾವುಮಾತ್ರ ಇದ್ದೇವೆಯಾದಕಾರಣ ನಾವು ಆಯವಸ್ಥಾದಿಗಳ ಸಂಗಡ ಕೂಡಿ ಇಲ್ಲ. ನಾವು ಆಅವಸ್ಥಾದಿಗಳ ಸಂಗಡ ಕೂಡಿದೆವಾದರೆ ಆ ಅವಸ್ಥಾದಿಗಳು ನಾಶ

ವಾಗಿ ಹೋದೋಪಾದಿಯಲ್ಲೇ ನಾವೂ ನಾಶಿಸಿಹೋಗುವೆವು. ಕೂಡಿಕೊಂಡಿದ್ದರೆ ನಾಶವಾಗಿ ಹೋಗಬೇಕೆಂಬ ನಿಯಮವುಂಟೇ ಎಂದರೆ, ಉಂಟು. ಅದೆಂತೆಂದರೆ ಹೇಳೇವು. ವಸ್ತ್ರಾದಿಗಳ ಸಂಗಡ ಕೂಡಿಕೊಂಡಿರುವಂಥ ಚಿತ್ರಾದಿಗಳು ಆ ವಸ್ತ್ರ ನಾಶವಾಗಿ ಹೋದರೆ ಆ ಚಿತ್ರಗಳು ನಾಶವಾಗಿ ಹೇಗೆ ಹೋಗುತ್ತಿದೆಯೋ ಹಾಗೆ ನಾವು ಆಯಾವಸ್ಥಾದಿಗಳ ಸಂಗಡ ಕೂಡಿಕೊಂಡು ಇದ್ದರೇ ನಾವು ನಾಶವಾಗಿ ಹೋಗುವೆವು. ಅದಱಿಂದ ಅವಸ್ಥಾತ್ರಯಗಳ ಸಂಗಡ ನಾವು ಕೂಡದೇ ಇದ್ದುಕೊಂಡು, ಆ ಅವಸ್ಥೆಗಳನ್ನು ಅವಸ್ಥಾವ್ಯಾಪಾರಗಳನು ಅವಸ್ಥಾವಂತರನು ತಿಳಿಯುತ್ತ ಇದ್ದೇವೆ. ಅದಱಿಂದ ನಾವೇ ಅವಸ್ಥಾತ್ರಯಾದಿಗಳಿಗು ಸಾಕ್ಷಿ. ಹಾಗಾದರೆ ನೀವು ಹೇಳಿದ ಪ್ರಕಾರವು ಅವಸ್ಥಾದಿಗಳ ತಿಳಿವಂಥವನು ಸಾಕ್ಷಿಯೆಂದು ಹೇಳಿದಿರಿ. ಅವಸ್ಥಾವಂತನಷ್ಟು ಆ ಅವಸ್ಥೆಗಳನು ಅವಸ್ಥಾವ್ಯಾಪಾರಗಳನು ತಿಳಿಯುತ್ತ ಇದ್ದಾನೆಯಾದಕಾರಣ, ಆ ಅವಸ್ಥಾವಂತನಿಗೆ ಸಾಕ್ಷಿತ್ವವು ಸಿದ್ಧಿಸಿ ಇದೆ. ಅದಱಿಂದ ಹೀಗೆ ಇರುವಲ್ಲಿ ಈ ಅವಸ್ಥಾವಂತನಿಗೆ ಸಾಕ್ಷಿತ್ವವು ಇಲ್ಲ. ಇವನಿಂದಲು ವ್ಯತಿರಿಕ್ತನಾದಂಥವನಿಗೆ ಸಾಕ್ಷಿತ್ವವೆಂದು ಹೇಗೆ ಹೇಳುವಣವೆಂದರೆ— ಅವಸ್ಥಾವಂತನಿಗೆ ಸಾಕ್ಷಿತ್ವ ಇಲ್ಲವೆಂಬುದು ಅವಸ್ಥಾವಂತನಿಗಿಂತಲು ವ್ಯತಿರಿಕ್ತನಾದವನಿಗೆ ಸಾಕ್ಷಿತ್ವವುಂಟೆಂಬುದು ಕೂಡೀತಲ್ಲ. ಅದೆಂತೆಂದರೆ, ಹೇಳೇವು. ಈ ಅವಸ್ಥಾವಂತನು ಬಾಹ್ಯಗಳಾದ ವೃಕ್ಷಗಳ ಹಾಗೂ, ಆಂತರವಾದ ದೇಹಾದಿಗಳ ಹಾಗೂ, ವಿಕಾರಿಯಾಗಿ ಇದ್ದಾನೆಯಾದಕಾರಣ ಆ ವೃಕ್ಷಾದಿಗಳಿಗೂ ಆ ದೇಹಾದಿಗಳಿಗೂ ಅನ್ಯಪದಾರ್ಥಾವಭಾಸಕವಾದ ಸಾಕ್ಷಿತ್ವವು ಹೇಗೆ ಇಲ್ಲವೋ, ಹಾಗೆ ವಿಕಾರಿಯಾದ ಅವಸ್ಥಾವಂತನಿಗೂ ಅವಸ್ಥೆಗಳಿಗೂ ಅವಸ್ಥಾವ್ಯಾಪಾರಾದಿಗಳಿಗೂ ಅನ್ಯಪದಾರ್ಥಾವಭಾಸಕವಾದ ಸಾಕ್ಷಿತ್ವವು ಇಲ್ಲ, ಹಾಗಾದರೆ, ಇವನು ವಿಕಾರಿಯಾಗಿ ಇದ್ದಾನೆಯೇ ಎಂದರೆ, ಇದ್ದಾನೆ. ಅದು ಹೇಗೆ ಎಂದರೆ, ನಿನ್ನೆ ಎಂಥ ಸುಖದುಃಖಗಳಿಂದ ತಪಿಸಿಕೊಂಡಿದ್ದನೋ ಹಾಗೆ ಇಂದು ಇರದೆ ಅದಕ್ಕಿಂತಲೂ ಅಧಿಕವಾಗಿಯಾದರೂ ಕೊಂಚವಾಗಿಯಾದರೂ ಇರುವಂಥ ಸುಖದುಃಖದಿಂದ ತಪಿಸಿಕೊಂಡಿದ್ದಾನೆಯಾದಕಾರಣ ಇವನು ವಿಕಾರಿಯಾಗಿ ಇದ್ದಾನೆ. ಅದಱಿಂದ ಇವನಿಗೆ ಸಾಕ್ಷಿತ್ವವು ಕೂಡದು. ಹಾಗಾದರೆ ಇ

ವನಿಗಿಂತಲೂ ವ್ಯತಿರಿಕ್ತವಾಗಿದ್ದಂಥ ಸಾಕ್ಷಿಯೊಬ್ಬನುಂಟೆಂದು ಕಾಣೆವಲ್ಲಾ, ಹೇಗೆ ತಿಳಿಯ ಬೇಕೆಂದರೆ ತಿಳಿಯಬಹುದು. ಅದೆಂತೆಂದರೆ, ಹೇಳೇವು. ಈ ಅವಸ್ಥಾವಂತನು ನಿನ್ನೆ ಎಂಥ ಸುಖದುಃಖಗಳ ಸಂಗಡ ಕೂಡಿಕೊಂಡಿದ್ದನೋ ಅಂಥ ಸುಖಗಳೊಡನೆ ಇಂದು ಕೂಡಿಕೊಂಡು ಇರಲಿಲ್ಲ. ಅದ ಱಿಂದಲು ನ್ಯೂನಾಧಿಕವಾದಂಥ ಸುಖದುಃಖಗಳೊಡನೆ ಕೂಡಿಕೊಂಡು ಇದ್ದಾನೆ ಎಂದು ಯಾವನ ಈ ಅವಸ್ಥಾವಂತನ ವಿಕಾರಗಳನು ತಿಳಿಯುತ್ತ ಇದ್ದಾನೆಯೋ ಅವನು ಈಯವಸ್ಥಾವಂತನಿಗಿಂತಲೂ ವ್ಯತಿರಿಕ್ತವಾದಂಥ ಸಾಕ್ಷಿಯೆಂದು ತಿಳಿಯಬಹುದು. ಹಾಗಾದರೆ, ನಿರ್ವಿಕಾರನಾದಂಥ ಆತ್ಮನು ನಾನು ಸಾಕ್ಷಿಯೆಂದು ತಿಳಿಯಲಿಲ್ಲವಲ್ಲ, ವಿಕಾರಿಯಾದಂಥ ಅವಸ್ಥಾವಂತನ ಪ್ಟೆ, ನಾನು ಸಾಕ್ಷಿಯೆಂದು ತಿಳಿಯುತ್ತ ಇದ್ದಾನೆ. ಅದಱಿಂದ ನಿರ್ವಿಕಾರನಾದಂಥ ಆತ್ಮನು ಸಾಕ್ಷಿಯೆಂದು ಹೇಗೆ ಹೇಳುವಣವೆಂದರೆ, ಹೇಳಬಹುದು. ಅದು ಹೇಗೆ ಎಂದರೆ ದೃಷ್ಟಾಂತಪೂರ್ವಕವಾಗಿ ನಿರೂಪಿಸುತ್ತ ಇದ್ದೇವೆ. ಆ ದೃಷ್ಟಾಂತವೇನೆಂದರೆ ಹೇಳೇವು. ದರ್ಪಣಾವಲೋಕನದಲ್ಲಿ ಗ್ರೀವಾಸ್ಥವಾದಂಥ ಮುಖವು ದರ್ಪಣದಲ್ಲಿ ಪ್ರತಿಬಿಂಬಿಸಿ ಆ ಪ್ರತಿಬಿಂಬದ್ವಾರಾ ತನ್ನ ಸೌಂದರ್ಯತ್ವಕ್ಕು ರೂಪತ್ವಾದಿಗಳನು ಹೇಗೆ ತಿಳಿಯುತ್ತ ಇದ್ದಾನೆಯೋ, ಹಾಗೆ ನಿರ್ವಿಕಾರನಾದಂಥ ಆತ್ಮನು ಅಂತಃಕರಣದಲ್ಲಿ ಪ್ರತಿಬಿಂಬಿಸಿ ಆ ಪ್ರತಿಬಿಂಬರೂಪವಾಗಿ ಕರ್ತೃವಾಗಿ ಇದ್ದುಕೊಂಡು ಶ್ರುತ್ಯರ್ಥವಿಚಾರವ ಮಾಡಿ ಈವಿಕಾರಿಯಾದಂಥ ಪ್ರತಿಬಿಂಬರೂಪವು ತಾನು ಅಲ್ಲವೆಂದು ನಿಶ್ಚಯಿಸಿ ಆ ಪ್ರತಿಬಿಂಬದ್ವಾರಾ ತಾನು ನಿರ್ವಿಕಾರನು, ತಾನು ಪರಿಪೂರ್ಣನಾದ ಬ್ರಹ್ಮನು, ತಾನು ಸಾಕ್ಷಿಯೆಂದು ತಿಳಿಯುತ್ತ ಇದ್ದಾನೆ. ಆ ದೃಷ್ಟಾಂತದಲ್ಲಿಯೇ ದೃಶ್ಯವಾದಂಥ ದರ್ಪಣವು ಆ ದರ್ಪಣದಲ್ಲಿ ದೃಶ್ಯವಾಗಿ ತೋಱುವಂಥ ಆಭಾಸಮುಖವು ಗ್ರೀವಾಸ್ಥಮುಖದಲ್ಲಿ ಇರುವಂಥ ಸೌಂದರ್ಯತ್ವಕ್ಕು ರೂಪತ್ವಾದಿಗಳನು ಹೇಗೆ ತಿಳಿಯಲಿಲ್ಲವೋ, ಹಾಗೆ ದೃಶ್ಯವಾದ ವಿಕಾರಿಯಾದಂಥ ಅಂತಃಕರಣವು ಆಯಂತಃಕರಣದಲ್ಲಿ ದೃಶ್ಯವಾಗಿ ಪ್ರತಿಬಿಂಬಿಸಿ ವಿಕಾರಿಯಾಗಿ ತೋಱುವಂಥ ಚಿದಾಭಾಸನು ತನಗೆ ಪಾರಮಾರ್ಥಿಕಸ್ವರೂಪವಾದ ಅಧಿಷ್ಠಾನಾತ್ಮನಿಷ್ಠವಾದಂಥ ಸಾಕ್ಷಿತ್ವನಿರ್ವಿಕಾರತ್ವ ಪರಿಪೂರ್ಣತ್ವಾದಿಗಳನು ತಿಳಿಯಲಿಲ್ಲವಲ್ಲ. ಅದಱಿಂದ ನಿರ್ವಿಕಾರನಾ

ದಂಥ ಆತ್ಮನು ಸ್ವತಃ ತಾನು ಸಾಕ್ಷಿಯೆಂದು ತಿಳಿಯದೇ ಇದ್ದ ಹೊತ್ತಿಗೂ, ವಿಕಾರಿಯಾದಂಥ ಅವಸ್ಥಾವಂತನು ತಾನು ಸಾಕ್ಷಿಯೆಂದು ತಿಳಿದೋಪಾದಿಯಲ್ಲಿಯೇ ಇದ್ದ ಹೊತ್ತಿಗೂ ವಿಕಾರಿಯಾದಂಥ ಅವಸ್ಥಾವಂತನಿಗೆ ಸಾಕ್ಷಿತ್ವವ ಹೇಳಕೂಡದು; ಅನಿರ್ವಿಕಾರನಾದಂಥ ಆತ್ಮನಿಗೆ ಸಾಕ್ಷಿತ್ವವ ಹೇಳಬೇಕು ಆ ಸಾಕ್ಷಿಲಕ್ಷಣವು ನಮ್ಮಲ್ಲಿ ಇದೆಯಾಗಲಾಗಿ ನಾವೇ ಸಾಕ್ಷಿ, ಸಂದೇಹವಿಲ್ಲ. ಹಾಗಾದರೆ ನಮ್ಮಲ್ಲಿ ಈ ಸಾಕ್ಷಿಲಕ್ಷಣವು ಪೂರ್ವವೇ ಸಿದ್ಧಿಸಿ ಇದೆಯೋ, ಈಗ ಸಾಧನಗಳಿಂದ ಸಿದ್ಧಿಸಿವೆಯೋ— ಎಂದರ, ವಿವಾದಕರ್ತೃಸಾಕ್ಷಿಯಲ್ಲಿ ಇರುವಂಥ ಸಾಕ್ಷಿತ್ವವು ಸಾಧನಗಳಿಂದ ಸಿದ್ಧಿಸದೆ ಪೂರ್ವವೇ ಹೇಗೆ ಸಿದ್ಧಿಸಿ ಇದೆಯೋ, ಹಾಗೆ ನಮ್ಮಲ್ಲಿ ಇರುವಂಥ ಸಾಕ್ಷಿತ್ವವು ಸಾಧನಗಳಿಂದ ಸಿದ್ಧಿಸದೆ ಪೂರ್ವವೇ ಸಿದ್ಧಿಸಿ ಇದೆ. ಹಾಗಾದರೆ ಏಕೆ ತೋಱಲಿಲ್ಲವೆಂದರೆ, ವಿಚಾರವಿಲ್ಲದ ಕಾರಣ ತೋಱಲಿಲ್ಲ. ವಿಚಾರಿಸುವಲ್ಲಿ ನಮಗೆ ಸಾಕ್ಷಿತ್ವವು ನಿತ್ಯಸಿದ್ಧವಾಗಿ ಇದೆ. ಹಾಗಾದರೆ ಈ ವಿಚಾರಕ್ಕೆ ಫಲವೇನೆಂದರೆ,— ಅವಿವಾದಕರ್ತೃಸಾಕ್ಷಿಯಾದ ದೇವದತ್ತನಿಗಿಂತಲು ಅನ್ಯವಾದಂಥವರ ಸಂವಾದಿಗಳ ಅವಸ್ಥೆಗಳು, ಅವಸ್ಥಾವ್ಯಾಪಾರಗಳು ಅವಸ್ಥಾವತ್ವವು ಆ ವಿವಾದಕರ್ತೃಸಾಕ್ಷಿಯಾದ ದೇವದತ್ತನಿಗೆ ಇಲ್ಲವಾದಕಾರಣ ಈ ಅವಸ್ಥಾವಿಕಾರಗಳು ಅವನನು ಹೇಗೆ ಸ್ಪರ್ಶನವ ಮಾಡಲಾಱವೋ, ಅವನು ಈ ಅವಸ್ಥಾದಿಗಳನೆಲ್ಲವನು ಉದಾಸೀನವಾಗಿ ನೋಡಿಕೊಂಡಿದ್ದನಾದುದಱಿಂದ ಈಅವಸ್ಥಾದಿಗಳಿಗೆ ಸಾಕ್ಷಿಯಾಗಿ ಹೇಗೆ ಇದ್ದಾನೆಯೋ, ಹಾಗೆ ನಮಗಿಂತಲು ಅನ್ಯವಾದ ಸಾಭಾಸಾಹಂಕಾರದ ಅವಸ್ಥಾತ್ರಯವು ಅವಸ್ಥಾತ್ರಯ ವ್ಯಾಪಾರವು ಅವಸ್ಥಾವತ್ವವು ನಮಗೆ ಇಲ್ಲವಾಗಲಾಗಿ ಈ ಅವಸ್ಥಾದಿವಿಕಾರಗಳು ಸಾಕ್ಷಿಯಾದಂಥ ನಮ್ಮನು ಸ್ಪರ್ಶಿಸಲಾಱವು. ನಾವು ಈ ಅವಸ್ಥಾದಿಗಳನೆಲ್ಲವನು ಉದಾಸೀನವಾಗಿ ನೋಡಿಕೊಂಡಿದ್ದೇವೆಯಾದಕಾರಣ ಅವಸ್ಥಾದಿಗಳಿಗೆಲ್ಲವಕ್ಕು ಕಾಲತ್ರಯದಲ್ಲು ಸಾಕ್ಷಿಯಾಗಿ ಇದ್ದೇವೆಯಲ್ಲಾ, ಎಂಬುದು ಈ ವಿಚಾರಕ್ಕೆ ಫಲವೆನಿಸುವುದು.

ಹೀಗೆ ಚೆನ್ನಾಗಿ ವಿಚಾರಿಸಿ, ತಾನೇ ಸಾಕ್ಷಿಯೆಂದು ಯಾವನ ತಿಳಿಯುತ್ತ ಇದ್ದಾನೆಯೋ, ಅವನೇ ಕೃತಾರ್ಥನು, ಅವನೇ ಜೀವನ್ಮುಕ್ತನು

ಎಂದು ವೇದಾಂತದಲ್ಲೆಲ್ಲಾ ಹೇಳುತ್ತ ಇದೆ. ಈಯರ್ಥದಲ್ಲಿ ಸಂಶಯವಿಲ್ಲ, ಸಿದ್ಧ.

ಶ್ಲೋ ॥ ಇಂದ್ರಿಯೈರುಪಲಬ್ಧಿಸ್ಸ್ಯಾದರ್ಥಾನಾಂ ಜಾಗ್ರದಾತ್ಮನಃ ।
ನಿದ್ರಾಯಾಂ ಮನಸೈವಾರ್ಥೋಪಲಬ್ಧಿಃ ಸ್ವಪ್ನ ಉಚ್ಯತೇ ॥೧॥

ಸರ್ವವಿಜ್ಞಾನರಹಿತಾ ಸುಷುಪ್ತಿಃ ಸ್ಯಾತ್ಸುಖಾತ್ಮಿಕಾ ।
ತದ್ವ್ಯಾಪಾರಾಃ ಕಾಯಿಕಾದ್ಯಾಸ್ತದ್ವಿಶ್ವಾದಿನಾಮಕಃ ॥೨॥

ಅವಸ್ಥಾದ್ವಯಸ್ತು ಸಂಯುಕ್ತ[1]ಸ್ತದ್ಭಾಜ್ಞಾತೃತ್ವಾತ್ಸ್ವಯಂ ಭವೇತ್ ।
ಅವಸ್ಥಾದ್ವೈಸ್ತು ಸಂಯುಕ್ತಸ್ತನ್ನಾಶೇಪ್ಯಸ್ಯ ಸಂಸ್ಥಿತಿಃ[1] ॥೩॥

ಯಥಾ ವಿವಾದಕರ್ತೄಣಾಂ ಸಾಕ್ಷೀ ಚೈತ್ರಾದಯಸ್ಸದಾ ।
ಅವಸ್ಥಾದಿವಿಕಾರಾಣಾಂ [2]ಸಾಕ್ಷೀ ದೃಕ್ತ್ವಾ[2] ಸ್ವಯಂ ತಥಾ॥೪॥

ಅಹಂ ಸಾಕ್ಷೀತಿ ಯೋ ವಿದ್ಯಾದ್ವಿವಿಚ್ಯೈವಂ ಪುನಃಪುನಃ ।
ಸ ಏವ ವಿದ್ವಾನ್ಮುಕ್ತಃ ಸ್ಯಾದಿತಿ ವೇದಾಂತಡಿಂಡಿಮಃ ॥೫॥

ಇಂತೀಕನ್ನಡಭಾಷೆಯೊಳ್ ವಿರಚಿಸಿದ

ವಾ ಸು ದೇ ವ ಯ ತೀಂ ದ್ರ ಪ್ರೋ ಕ್ತ ಮ ಪ್ಪ

## ವೇದಾಂತವಿವೇಕಸಾರವೆಂಬ ಗ್ರಂಥದಲ್ಲಿ

ಅವಸ್ಥಾತ್ರಯಸಾಕ್ಷಿತ್ವಮಂ ಪೇಳ್ದುದು

ನವಮಪ್ರಕರಣಂ.

---

ಪಾ.—1. ಸಜ್ಞಾತೃತ್ವಾಲಯಂಭವೇತ್ ॥ ಅವಸ್ಥಾದ್ವೈರಯಶ್ವರಂ ನಾಶಿಷ್ಯಸ್ಯಸಂಸ್ಥಿತೇ ॥ 2. ಸಾಕ್ಷಿದೃಕ್ತ್ವಾ.

# ಹತ್ತನೆಯ ಪ್ರಕರಣಂ.

—ಪಂಚಕೋಶವಿಚಾರ—

ಶ್ಲೋ ॥ ಕಿಂ ರೂಪಾಃ ಪಂಚಕೋಶಾಸ್ಯುಃ ಕಾವಾ ತದ್ವ್ಯತಿರಿಕ್ತತಾ ।
ಆತ್ಮನಶ್ಚೇತಿ ತತ್ಸರ್ವಂ ಸದೃಷ್ಟಾಂತಂ ವಿಚಾರ್ಯತೇ ॥

ಆತ್ಮನಿಗೆ ಪಂಚಕೋಶಗಳಿಗಿಂತಲು ವ್ಯತಿರಿಕ್ತತ್ವವು ಹೇಗೆ ಎಂದು ವಿಚಾರಿಸುತ್ತ ಇದ್ದೇವೆ.

ಪಂಚಕೋಶಗಳನು ತಿಳಿಯದೆ ಆತ್ಮನಿಗೆ ಪಂಚಕೋಶವ್ಯತಿರಿಕ್ತತ್ವವನು ತಿಳಿಯಕೂಡದಾದ ಕಾರಣ ಮುಂಚಿತವಾಗಿ ಪಂಚಕೋಶಗಳ ಸ್ವರೂಪವನು ನಿರೂಪಿಸುತ್ತ ಇದ್ದೇವೆ. ಅದೇತೆಂದರೆ— ಅನ್ನಮಯ ಕೋಶವೆನುತಲೂ, ಪ್ರಾಣಮಯಕೋಶವೆನುತಲೂ, ಮನೋಮಯಕೋಶವೆನುತಲೂ, ವಿಜ್ಞಾನಮಯಕೋಶವೆನುತಲೂ, ಆನಂದಮಯಕೋಶವೆನುತಲೂ, ಈಪ್ರಕಾರವಾಗಿ ಪಂಚಕೋಶಗಳು. ಇವರಲ್ಲಿ ಅನ್ನಮಯಕೋಶವೇನೆಂದರೆ— ಅನ್ನಜನ್ಯವಾಗಿ ಸ್ತಂಭದೋಪಾದಿಯಲ್ಲಿ ಸ್ಥೂಲವಾಗಿ ಕರಚರಣಾದ್ಯಾಕಾರವಾಗಿ, ಷಡ್ಭಾವವಿಕಾರವತ್ತಾಗಿ, ಷಟ್ಕೋಶಾತ್ಮಕವಾಗಿ ತೋರುವಂಥ ಸ್ಥೂಲಶರೀರವು ಅನ್ನಮಯಕೋಶವೆಂದು ಹೇಳಪಡುವುದು. ಪ್ರಾಣಮಯಕೋಶವೇನೆಂದರೆ— ಹತ್ತು ಅವಯವಗಳ ಸಂಗಡ ಕೂಡಿಕೊಂಡಿರುವುದೇ ಪ್ರಾಣಮಯಕೋಶವೆನಿಸುವುದು. ಹತ್ತು ಅವಯುವಗಳಾವುವೆಂದರೆ—ಪಂಚಕರ್ಮೇಂದ್ರಿಯಗಳು, ಪಂಚಪ್ರಾಣಗಳು, ಈ ಹತ್ತು ಕೂಡಿ ಪ್ರಾಣಮಯಕೋಶವೆಂದು ಹೇಳಪಡುವುದು. ಮನೋಮಯಕೋಶವೆಂದರೇನೆಂದರೆ— ಆರು ಅವಯವದ ಸಂಗಡ ಕೂಡಿಕೊಂಡಿರುವುದು. ಆ ಆರವಯವಗಳಾವುವೆಂದರೆ- ಮನಸ್ಸು, ಜ್ಞಾನೇಂದ್ರಿಯಗಳು, ಈ ಆರು ಕೂಡಿ ಮನೋಮಯ ಕೋಶವೆಂದು ಹೇಳಪಡುವುದು. ವಿಜ್ಞಾನಮಯಕೋಶವೇನೆಂದರೆ— ಅದು ಆರವಯವದ ಸಂಗಡ ಕೂಡಿಕೊಂಡಿರುವುದು. ಆ ಆರವಯವುಗಳಾವುವೆಂದರೆ— ಬುದ್ಧಿಯು, ಜ್ಞಾನೇಂದ್ರಿಯಗಳು: ಈ ಆರು ಕೂಡಿ

ವಿಜ್ಞಾನಮಯಕೋಶವೆನಿಸುವುದು. ಆನಂದಮಯಕೋಶವೇನೆಂದರೆ— [1]ಪ್ರಿಯ ಮೋದ ಪ್ರಮೋದ— ಈವೃತ್ತಿಮತ್ತಾಗಿ ಅಜ್ಞಾನಪ್ರಧಾನವಾದ ಅಂತಃಕರಣವು,[1] ಆನಂದಮಯಕೋಶವೆಂದು ಹೇಳಪಡುವುದು. ಪ್ರಿಯ ಮೋದಾದಿಗಳೇನೆಂದರೆ— ಇಷ್ಟವಾದಂಥ ವಸ್ತುವನು ನೋಡಿದ ಮಾತ್ರದಲ್ಲೇ ಬರುವ ಸಂತೋಷಕ್ಕೆ ಪ್ರಿಯವೆಂದು ಹೆಸರು; ಆ ವಸ್ತುವು ಲಭಿಸಿದ ತಱುವಾಯದಲ್ಲಿ ಬರುವ ಸಂತೋಷಕ್ಕೆ ಮೋದವೆಂದು ಹೆಸರು; ಆ ವಸ್ತುವ ಅನುಭವಿಸಿದ ತಱುವಾಯದಲ್ಲಿ ಬರುವ ಸಂತೋಷಕ್ಕೆ ಪ್ರಮೋದವೆಂದು ಹೆಸರು. ಇವಕ್ಕೆ ಕೋಶಗಳೆಂದು ಹೆಸರು ಏಕೆ ಬಂದಿತೆಂದರೆ- ಕೋಶದೋಪಾದಿಯಲ್ಲಿ ಆತ್ಮನ ತಿಳಿಯದ ಹಾಗೆ ಮಾಡುತ್ತಿದೆಯಾದ ಕಾರಣ ಇವಕ್ಕೆ ಕೋಶಗಳೆಂದು ಹೆಸರು ಬಂದಿತು. ಅದು ಹೇಗೆಂದರೆ- ದೃಷ್ಟಾಂತಪೂರ್ವಕವಾಗಿ ನಿರೂಪಿಸುತ್ತ ಇದ್ದೇವೆ. ಆ ದೃಷ್ಟಾಂತವೇನೆಂದರೆ, ಹೇಳೇವು. ಒರೆಯು ಖಡ್ಗವನು ಹೇಗೆ ಮುಚ್ಚಿಸುತ್ತ ಇದೆಯೋ, ಗವಸಣಿಗೆಯು ತಂಬೂರಿಯ ಹೇಗೆ ಮುಚ್ಚಿಸುತ್ತ ಇದೆಯೋ, ಹುಣಸೆಯ ಹಣ್ಣಿನ ಗೊಳಲೆಯು ಹುಣಸೆಯ ಹಣ್ಣ ಹೇಗೆ ಮುಚ್ಚಿಸುತ್ತ ಇದೆಯೋ, [2]ಅಂಗಿಯು[2] ಪುರುಷನ ಹೇಗೆ ಮುಚ್ಚಿಸುತ್ತ ಇದೆಯೋ, ಹಾಗೆ ಪಂಚಕೋಶಗಳು ಆತ್ಮನ ಮುಚ್ಚಿಸುತ್ತಿದೆಯಾಗಲಾಗಿ, ಇವಕ್ಕೆ ಕೋಶಗಳೆಂದು ಹೆಸರು ಬಂದಿತು. ಆದರೆ ದೃಷ್ಟಾಂತದಲ್ಲಿ ಒರೆಯು ಖಡ್ಗವು, ಗವಸಣಿಗೆಯು ತಂಬೂರಿಯು, ಹುಣಸೆಯ ಹಣ್ಣಿನ ಗೊಳಲೆಯು ಹುಣಸೆಯ ಹಣ್ಣು, ಅಂಗಿಯು ಪುರುಷನು— ಇವು ಪರಿಚ್ಛಿನ್ನಗಳಾಗಿಯೂ ಸಮಾನಸತ್ತಾಕಗಳಾಗಿಯೂ ಒಂದನು ಒಂದು ಉಪಜೀವಿಸಿಕೊಂಡು ಇರಲಿಲ್ಲವಾಗಿ ಆ ಒರೆ ಮೊದಲಾದ ಪದಾರ್ಥಗಳು ಆ ಖಡ್ಗಾದಿ ಪದಾರ್ಥಗಳ ಮುಚ್ಚಿಸುವುದಕ್ಕೆ ಸಮರ್ಥಗಳಹುದಲ್ಲ. ದೃಷ್ಟಾಂತಿಕದಲ್ಲಾದರೆ ಪಂಚಕೋಶಗಳು ಸಮಾನಸತ್ತಾಕಗಳಲ್ಲವಾಗಿ, ಆತ್ಮಸತ್ತನು ಉಪಜೀವಿಸಿಕೊಂಡು ತೋಱುವ ಪಂಚಕೋಶಗಳು ಆಯಾತ್ಮನ ಮುಚ್ಚಿಸಿಕೊಂಬುದಱಲ್ಲಿ ಹೇಗೆ ಸಮರ್ಥಗಳಾದೀತೆಂದರೆ, ಸಮರ್ಥಗಳಾದೀತೇ ಸರಿ.

---

ಪಾ.—1. ಪ್ರಿಯಮೋದಪ್ರಮೋದಾದಿ ವೃತ್ತಿಗಳೊಡನೆ ಕೂಡಿಕೊಂಡಿದ್ದಂಥ ಅಜ್ಞಾನವು. 2. ಅರಚಟ್ಟೆ.

ಅದು ಹೇಗೆ ಎಂದರೆ:— ಆದಿತ್ಯಕಿರಣಪರಿಣಾಮವಿಶೇಷವಾದ ಮೋಘಗಳು ಆದಿತ್ಯಸತ್ತನು ಉಪಜೀವಿಸಿಕೊಂಡು ತೋಉತ್ತಿದ್ದಹೊತ್ತಿಗೂ, ಆ ಆದಿತ್ಯನ ಹೇಗೆ ಮುಚ್ಚಿಸುತ್ತಿದೆಯೋ, ಅಗ್ನಿಯ ಸತ್ತನು ಉಪಜೀವಿಸಿಕೊಂಡು ತೋಉವಂಥ ಧೂಮವು ಅಗ್ನಿಯ ಹೇಗೆ ಮುಚ್ಚಿಸುತ್ತಿದೆಯೋ, ರಜ್ಜುಸತ್ತನು ಉಪಜೀವಿಸಿಕೊಂಡು ತೋಉವ ಸರ್ಪವು ಆ ರಜ್ಜುವ ಹೇಗೆ ಮುಚ್ಚಿಸುತ್ತಿದೆಯೋ, ಮೃತ್ಸತ್ತನು ಉಪಜೀವಿಸಿಕೊಂಡು ತೋಉವಂಥ ಘಟವು ಆ ಮಣ್ಣನು ಹೇಗೆ ಮುಚ್ಚಿಸುತ್ತಿದೆಯೋ, ಸ್ವರ್ಣಸತ್ತನು ಉಪಜೀವಿಸಿಕೊಂಡು ತೋಉವಂಥ ಕುಂಡಲವು ಆ ಸ್ವರ್ಣವ ಹೇಗೆ ಮುಚ್ಚಿಸುತ್ತಿದೆಯೋ, ಹಾಗೆ ಆತ್ಮಸತ್ತನು ಉಪಜೀವಿಸಿಕೊಂಡು ತೋಉವ ಪಂಚಕೋಶಗಳು ಆತ್ಮನ ಮುಚ್ಚಿಸುವುದರಲ್ಲಿ ಸಮರ್ಥಗಳಾದೀತು. ಹೀಗೆ ಪಂಚಕೋಶಗಳು ಆತ್ಮನ ಮುಚ್ಚಿಸಿದಕಾರಣ ಇವಕ್ಕೆ ಕೋಶಗಳೆಂದು ಹೆಸರು ಬಂದಿತು.

ಆತ್ಮನಿಗೆ ಪಂಚಕೋಶವ್ಯತಿರಿಕ್ತತ್ವ ಹೇಗೆಂದರೆ, ಹೇಳೇವು. ದೃಷ್ಟಾಂತದಲ್ಲಿ ಖಡ್ಗವು ಒರೆಯು, ತಂಬೂರಿಯು ಗವಸಣಿಗೆಯು, ಹುಣಸೆಯ ಹಣ್ಣು ಹುಣಸೆ ಹಣ್ಣಿನ ಗೊಳಲೆಯು, ಅಂಗಿಯು ಪುರುಷನು, ಏಕವಾಗಿ ವ್ಯವಹರಿಸಲ್ಪಟ್ಟು ತೋಉದ ಹೊತ್ತಿಗೂ ಆ ಖಡ್ಗಾದಿಗಳು ಒರೆಗಳಿಗಿಂತಲು ವ್ಯತಿರಿಕ್ತವಾಗಿ ಭಿನ್ನವಾಗಿ ಹೇಗೆ ತೋಉತ್ತಿವೆಯೋ, ಹಾಗೆ ಆತ್ಮನು ಈ ಪಂಚಕೋಶಗಳು ಏಕವಾಗಿ ವ್ಯವಹರಿಸಲ್ಪಟ್ಟ ಹೊತ್ತಿಗೂ ಆತ್ಮನು ಈ ಪಂಚಕೋಶಗಳಿಗಿಂತಲು ಕಾಲತ್ರಯದಲ್ಲೂ ವ್ಯತಿರಿಕ್ತನಾಗಿ ತೋಉವಂಥದೇ ಆತ್ಮನಿಗೆ ಪಂಚಕೋಶವ್ಯತಿರಿಕ್ತತ್ವವೆನಿಸುವುದು. ಪಂಚಕೋಶಗಳ ಸಂಗಡ ಕೂಡಿಕೊಂಡಿರುವ ಆತ್ಮನಿಗಷ್ಟೆ ವ್ಯತಿರಿಕ್ತತ್ವವ ಹೇಳಬೇಕು. ಆತ್ಮನಿಗೆ ಪಂಚಕೋಶಗಳ ಸಂಗಡ ಕೂಟವುಂಟೇ, ಎಂದರೆ, ಉಂಟು. ಆ ಕೂಟವೇತರಿಂದ ಬಂದುದೆಂದರೆ, ಅನ್ಯೋನ್ಯಾಧ್ಯಾಸದಿಂದ ಬಂದಂಥದು. ಅನ್ಯೋನ್ಯಾಧ್ಯಾಸವೇನೆಂದರೆ, ಹೇಳೇವು. ಈ ವಸ್ತುವಿನ ಧರ್ಮಗಳು ಆ ವಸ್ತುವಿನಲ್ಲು, ಆ ವಸ್ತುವಿನ ಧರ್ಮಗಳು ಈ ವಸ್ತುವಿನಲ್ಲು ತೋಉವಂಥದೇ ಅನ್ಯೋನ್ಯಾಧ್ಯಾಸವೆಂದು ಹೇಳಪಡುವುದು. ಇಂಥ ಅನ್ಯೋನ್ಯಾಧ್ಯಾಸದ್ವಾರಾ

ಪಂಚಕೋಶಗಳಿಗೂ ಆತ್ಮನಿಗೂ ಕೂಟವುಂಟೇ, ಎಂದರೆ, ಉಂಟು. ಅದೆಂತೆಂದರೆ, ಹೇಳೇವು. ಅನ್ನಮಯಕೋಶಕ್ಕೂ ಆತ್ಮನಿಗೂ ಅಧ್ಯಾಸದ್ವಾರಾ ಕೂಟವು ಬಂದ ಪ್ರಕಾರವನು ಸಂಕ್ಷೇಪವಾಗಿ ನಿರೂಪಿಸುತ್ತಇದ್ದೇವೆ. ಅದೆಂತೆಂದರೆ — ಅನ್ನಮಯಕೋಶಕ್ಕೂ ಆತ್ಮನಿಗೂ ಜೀವದ್ವಾರಾ, ಸಾಮಾನ್ಯಜಾತಿದ್ವಾರಾ, ಲಿಂಗದ್ವಾರಾ, ವರ್ಣದ್ವಾರಾ, ವಿಶೇಷ ಜಾತಿದ್ವಾರಾ, ಆಶ್ರಮದ್ವಾರಾ, ನಾಮರೂಪದ್ವಾರಾ, ಸಂಸಾರದ್ವಾರಾ, ವೇಷದ್ವಾರಾ, ಕ್ರಿಯಾದಿದ್ವಾರಾ ಕೂಟ ಬಂದಿತು. ಅದೆಂತೆಂದರೆ— ನಾನು ಜೀವನು, ನಾನು ಮನುಷ್ಯನು ಎಂಬುದು ಸಾಮಾನ್ಯದ್ವಾರಾ ಸಾಮಾನ್ಯಾಧ್ಯಾಸವೆನಿಸುವುದು. ನಾನು ಹುಟ್ಟಿದೆನು, ನಾನು ಹುಟ್ಟಿ ಇದ್ದೇನೆ, ನಾನು ಬೆಳೆದೆನು, ನಾನು ಇಷ್ಟು ಉದ್ದವಾದೆನು, ನಾನು ಕ್ಷೀಣಿಸಿ ಹೋದೆನು, ನಾನು ನಾಶವಾಗಿ ಹೋಗುತ್ತಿದ್ದೇನೆ ಎಂಬುದು ವಿಕಾರದ್ವಾರಾ ವಿಶೇಷಾಧ್ಯಾಸವೆನಿಸುವುದು. ನಾನು ಪುರುಷನು, ನಾನು ಸ್ತ್ರೀ ಎಂಬುದು ಲಿಂಗದ್ವಾರಾ ಅಧ್ಯಾಸವೆನಿಸುವುದು. ನಾನು ಬ್ರಾಹ್ಮಣನು, ನಾನು ಕ್ಷತ್ರಿಯನು, ನಾನು ವೈಶ್ಯನು, ನಾನು ಶೂದ್ರನು ಎಂಬುದು ವರ್ಣದ್ವಾರಾ ಅಧ್ಯಾಸವೆನಿಸುವುದು. ನಾನು ತೆಲುಗನು, ನಾನು ತಿಗುಳನು, ನಾನು ಕನ್ನಡಿಗನು, ನಾನು ತಮಿಳನು, ನಾನು ಸಿರನಾಡವನು, ನಾನು ಬಡಗನಾಡವನು, ನಾನು ಉತ್ತರದವನು, ನಾನು ಗುಜರಾತಿಯವನು, ನಾನು ಮಹಾರಾಷ್ಟ್ರದವನು, ನಾನು ನಿಯೋಗಿ, ನಾನು ಕಾಶ್ಯಪಗೋತ್ರದವನು, ನಾನು ಭಾರದ್ವಾಜಗೋತ್ರದವನು, ಆಶ್ವಲಾಯನ ಸೂತ್ರದವನು, ಆಪಸ್ತಂಬಸೂತ್ರದವನು, ಬೋಧಾಯನಸೂತ್ರದವನು, ಕಾತ್ಯಾಯನಸೂತ್ರದವನು ಎಂಬುದು ವಿಶೇಷಜಾತಿದ್ವಾರಾ ಅಧ್ಯಾಸವೆನಿಸುವುದು. ನಾನು ಬ್ರಹ್ಮಚಾರಿ, ಗೃಹಸ್ಥ, ವಾನಪ್ರಸ್ಥ, ಸನ್ಯಾಸಿ ಎಂಬುದು ಆಶ್ರಮದ್ವಾರಾ ಅಧ್ಯಾಸವೆನಿಸುವುದು. ನಾನು ಕೃಷ್ಣನು, ನಾನು ರಾಮನು, ಎಲ್ಲಂಭಟ್ಟ, ತಿಪ್ಪಾಭಟ್ಟ, ಕಪ್ಪನೆಯವನು, ಕೆಂಪನೆಯವನು ಎಂಬುದು ನಾಮರೂಪದ್ವಾರಾ ಅಧ್ಯಾಸವೆನಿಸುವುದು. ನಾನು ದೀಕ್ಷಿತನು, ನಾನು ಸೋಮಯಾಜಿ, ನಾನು ಪ್ರತಿಭವಸಂತಯಾಜಿ, ಮಹಾವ್ರತಯಾಜಿ, ಸತ್ರಯಾಜಿ, ಪೌಂಡ್ರಕಯಾಜಿ

ಎಂಬುದು ಸಂಸ್ಕಾರದ್ವಾರಾ ಅಧ್ಯಾಸವೆನಿಸುವುದು. ನಾನು ಮಾಯಾವಾದಿ, ನಾನು ತತ್ವವಾದಿ, ನಾನು ವೈಷ್ಣವನು, ಶೈವನು, ಭಾಗವತನು, ಯೋಗೇಶ್ವರನು, ನಾನು ಗಂಗೆಯಾಡಿ ಎಂಬುದು ವೇಷದ್ವಾರಾ ಅಧ್ಯಾಸವೆನಿಸುವುದು. ನಾನು ಉಪಾಧ್ಯಾಯನು, ನಾನು ಶಿಷ್ಯನು, ನಾನು ಕರ್ಮಿ, ನಾನು ಭಕ್ತನು, ನಾನು ಶ್ರೋತ್ರಿಯನು, ನಾನು ಯಾಜ್ಞಿಕನು, ನಾನು ಮದವಣಿಗನು, ನಾನು ಕವಮ್ಮಾರನು, ನಾನು ಕಂಚಗಾರನು, ನಾನು ಅಕ್ಕಸಾಲೆ, ನಾನು ಕುಂಬಾರನು, ನಾನು ನಾಯಿಂದನು, ಅಗಸನು, ಕೂಲಿಕಾರನು, ಧನಗಾರನು, ನಾನು ಕುದುರೆರಾವುತನು, ನಾನು ಆನೆಮಾವಟಿಗನು, ನಾನು ಮಣಿಹಗಾರನು, ನಾನು ಕರಣಿಕನು ಎಂಬುದು ಕ್ರಿಯಾದ್ವಾರಾ ಅಧ್ಯಾಸವೆನಿಸುವುದು ಇವು ಮೊದಲಾದಂಥ ಅನ್ನಮಯಕೋಶನಿಷ್ಠಧರ್ಮಗಳು ಆತ್ಮನಲ್ಲೂ, ಆತ್ಮಧರ್ಮಗಳಾದಂಥ ಸಚ್ಚಿದಾನಂದಗಳು ಆ ನನ್ನ ಸ್ಥೂಲಶರೀರ ಚೆನ್ನಾಗಿ ತೋರುತಿದೆ ಎಂದು ಅನ್ನಮಯಕೋಶದಲ್ಲೂ ತೋರುತ್ತಿದೆಯಾದಕಾರಣ ಈ ಅನ್ಯೋನ್ಯಾಧ್ಯಾಸದಿಂದ ಅನ್ನಮಯಕೋಶಕ್ಕೂ ಆತ್ಮನಿಗೂ ಕೂಟ ಬಂದಿತು. ಪ್ರಾಣಮಯಕೋಶಕ್ಕೂ ಆತ್ಮನಿಗೂ ಕೂಟವು ಹೇಗೆಂದರೆ— ಅಧ್ಯಾಸಪೂರ್ವಕವಾಗಿ ನಿರೂಪಿಸುತ್ತ ಇದ್ದೇವೆ. ಅದೆಂತೆಂದರೆ— ನಾನು ಕ್ಷುಧಾವಂತನು, ನಾನು ಪಿಪಾಸಿತನು, ನಾನು ಶಕ್ತಿವಂತನು, ನಾನು ವೀರ್ಯವಂತನು, ನಾನು ಬಲವಂತನು, ನಾನು ಕ್ರಿಯಾವಂತನು, ನಾನು ವಕ್ತನು, ದಾತನು, ಗಂತನು, ವಿಸ್ರಜಕನು, ಆನಂದಯಿತನು, ನಾನು ಪುರುಷನು, ವಿಹಸ್ತನು, ಪಂಗು, ಕೂನನು, ಷಂಡನು, ಎಂದು ಇವು ಮೊದಲಾದಂಥ ಪ್ರಾಣಮಯಕೋಶನಿಷ್ಠವಾದ ಕ್ಷುತ್ಪಿಪಾಸಾದಿಧರ್ಮಗಳು ಆತ್ಮನಿಷ್ಠವಾಗಿಯೂ, ಆತ್ಮಧರ್ಮಗಳಾದಂಥ ಸಚ್ಚಿದಾನಂದಗಳು ನನ್ನ ಪ್ರಾಣ ಚೆನ್ನಾಗಿ ತೋರುತ್ತದೆ ಎಂದು ಪ್ರಾಣಮಯಕೋಶನಿಷ್ಠವಾಗಿಯೂ ತೋರುತ್ತಿದೆಯಾದಕಾರಣ ಪ್ರಾಣಮಯಕೋಶಕ್ಕೂ ಆತ್ಮನಿಗೂ ಅನ್ಯೋನ್ಯಾಧ್ಯಾಸದಿಂದ ಕೂಟವು ಬಂದುದು. ಮನೋಮಯಕೋಶಕ್ಕೂ ಆತ್ಮನಿಗೂ ಅನ್ಯೋನ್ಯಾಧ್ಯಾಸದಿಂದ ಕೂಟವು ಹೇಗೆ ?, ಎಂದರೆ— ನಾನು ಸಂಕಲ್ಪವಂತನು, ನಾನು ವಿಕಲ್ಪವಂತನು, ನಾನು ಶೋಕಿ, ನಾನು ಮೋಹಿ, ನಾನು ರಾಗಿ, ಕಾಮಿ,

ಕ್ರೋಧಿ, ದ್ವೇಷಿ, ನಾನು ಇಚ್ಛಾವಂತನು, ನಾನು ಶ್ರೋತನು, ಪ್ರಷ್ಟ ನು, ರಸಯಿತನು, ನಾನು ಘಾತಕನು, ನಾನು ಬಧಿರನು, ಅಂಧನು, ಕಾ ಣನು, ಅಜಿಹ್ವನು, ವಿಗತನಾಸಿಕನು ಎಂದು ಮನೋಮಯಕೋಶನಿಷ್ಠ ವಾದ ಸಂಕಲ್ಪಾದಿಧರ್ಮಗಳು ಆತ್ಮನಲ್ಲು, ಆತ್ಮಧರ್ಮವಾದ ಸಚ್ಚಿದಾನಂದಗ ಳು ನನ್ನ ಮನಸ್ಸು ಚೆನ್ನಾಗಿ ತೋರುತ್ತದೆ ಎಂದು ಮನೋಮಯಕೋ ಶನಿಷ್ಠವಾಗಿಯೂ ತೋರುತ್ತಿದೆಯಾದಕಾರಣ ಮನೋಮಯಕೋಶ ಕ್ಕೂ ಆತ್ಮನಿಗೂ ಅನ್ಯೋನ್ಯಾಧ್ಯಾಸದಿಂದ ಕೂಟವು ಬಂದಿತು. ವಿಜ್ಞಾನ ಮಯಕೋಶಕ್ಕೂ ಆತ್ಮನಿಗೂ ಅನ್ಯೋನ್ಯಾಧ್ಯಾಸದಿಂದ ಕೂಟವು ಹೇಗೆ? ಎಂದರೆ— ನಾನು ಕರ್ತನು, ನಾನು ನಿಶ್ಚಯವಂತನು, ಬುದ್ಧಿವಂತನು, ವಿವೇಕಿ, ಊಹಾಪೋಹಚತುರನು, ಏಕಸಂಧಿಗ್ರಾಹಿ, ನಾನು ಶ್ರೋತ್ರಿ ಯನು, ವಿರಕ್ತನು, ಪಂಡಿತನು, ಲೋಕಾಂತರಕ್ಕೆ ಹೋಗುವಂಥವನು ಎಂದು ವಿಜ್ಞಾನಮಯಕೋಶನಿಷ್ಠವಾದ ಧರ್ಮಗಳು ಆತ್ಮನಲ್ಲಿಯೂ, ಆತ್ಮಧರ್ಮಗಳಾದಂಥ ಸಚ್ಚಿದಾನಂದಗಳೂ ನನ್ನ ಬುದ್ಧಿ ಚೆನ್ನಾಗಿ ತೋ ರುತ್ತದೆ ಎಂದು ವಿಜ್ಞಾನಮಯಕೋಶನಿಷ್ಠವಾಗಿಯೂ ತೋರುತ್ತದೆಯಾ ಗಲಾಗಿ ವಿಜ್ಞಾನಮಯಕೋಶಕ್ಕೂ ಆತ್ಮನಿಗೂ ಅನ್ಯೋನ್ಯಾಧ್ಯಾಸದಿಂದ ಕೂಟವು ಬಂದಿತು. ಆನಂದಮಯಕೋಶಕ್ಕೂ ಆತ್ಮನಿಗೂ ಅನ್ಯೋನ್ಯಾ ಧ್ಯಾಸದಿಂದ ಕೂಟವು ಹೇಗೆಂದರೆ- ನಾನು ಭೋಕ್ತನು, ನಾನು ಸಂತುಷ್ಟ ನು, ನಾನು ಸುಖಿ, ನಾನು ಸಾತ್ವಿಕನು, ನಾನು ರಾಜಸನು, ನಾನು ತಾ ಮಸನು, ಆನ್ಯತನು, ಜಡನು, ಅಜ್ಞನು, ಮೂಢನು, ಅಸತ್ತನು, ತ್ಯಾ ಷ್ಟನು, ಶುಂಠನು, ಮೋಹಿತನು, ಅವಿವೇಕಿ, ಭ್ರಾಂತನು ಎಂದು ಇವು ಮೊದಲಾದಂಥ ಅಜ್ಞಾನಧರ್ಮವು ಆತ್ಮನಲ್ಲೂ, ಆತ್ಮಧರ್ಮವಾದಂಥ ಸಚ್ಚಿದಾನಂದಗಳು ಆ ನನ್ನ ಅಜ್ಞಾನವು ಚೆನ್ನಾಗಿ ತೋರುತ್ತಿದೆ ಎಂದು ಆನಂದಮಯಕೋಶದಲ್ಲೂ ತೋರುತ್ತಿದೆಯಾದಕಾರಣ ಆನಂದಮಯ ಕೋಶಕ್ಕೂ ಆತ್ಮನಿಗೂ ಅನ್ಯೋನ್ಯಾಧ್ಯಾಸದಿಂದ ಕೂಟ ಬಂದಿತು. ಈ ಅಧ್ಯಾಸದಿಂದ ಆತ್ಮನಿಗೆ ಪಂಚಕೋಶಗಳ ಸಂಗಡ ಕೂಟವು ಬಂದಿತಾದ ಕಾರಣ ಪಂಚಕೋಶಗಳಿಂದಲು ಆತ್ಮನ ಪೃಥಕ್ಕರಿಸಿ ತಿಳಿಯಬೇಕಾಯಿತು. ಹಾಗಾದರೆ ಪಂಚುವ ಪ್ರಕಾರ ಹೇಗೆ?, ಎಂದರೆ— ದೃಷ್ಟಾಂತಪೂರ್ವಕ

ವಾಗಿ ಹೇಳುತ್ತ ಇದ್ದೇವೆ. ಆ ದೃಷ್ಟಾಂತವೇನೆಂದರೆ ಹೇಳೇವು. ನನ್ನ ಹಸು, ನನ್ನ ಕರು, ನನ್ನ ಮಗನು, ನನ್ನ ಮಗಳು, ನನ್ನ ಹೆಂಡತಿ ಯೆಂದು ತನ್ನನು ಸಂಬಂಧಿಸಿಕೊಂಡು ತೋರುವ ಪಶ್ವಾದಿಗಳು ತಾನು ಹೇಗೆ ಅಲ್ಲವೋ, ಹಾಗೆ ದಾರ್ಷ್ಟಾಂತದಲ್ಲೂ ನನ್ನ ಶರೀರ, ನನ್ನ ಪ್ರಾಣ, ನನ್ನ ಮನಸ್ಸು, ನನ್ನ ಬುದ್ಧಿ, ನನ್ನ ಅಜ್ಞಾನವೆಂದು ತನ್ನನು ಸಂಬಂಧಿ ಸಿಕೊಂಡು ತೋರುವ ಪಂಚಕೋಶಗಳು ತಾನು ಅಲ್ಲ, ತಾನು ಪಂಚ ಕೋಶಗಳಿಗಿಂತಲು ವ್ಯತಿರಿಕ್ತನೆಂದು ತಿಳಿಯಬಹುದಲ್ಲ. ದೃಷ್ಟಾಂತದಲ್ಲಿ ನನ್ನ ಹಸುವು ಪಿಂಡಾಯುತವಾಗಿ ಇದೆ, ಹಸು ಬಡವಾಯಿತು, ಕರುವು ತಪಿಸುತ್ತಿದೆ, ಕರುವು ಬದುಕಲಾರದು, ಕುಮಾರನು ದುರ್ಜನನಾಗಿ ಇದ್ದಾನೆ, ಕುಮಾರನು ಹೇಳಿದಹಾಗೆ ಕೇಳಲಿಲ್ಲ, ಕುಮಾರಿಯು ಅತ್ಯಂತ ಮೂಢೆ ಯಾಗಿ ಇದ್ದಾಳೆ, ಶಿಕ್ಷಿಸಿದರೆ ಕೋಪಿಸಿಕೊಂಡು ನೆರಮನೆಗೆ ಹೋಗುತ್ತಿ ದ್ದಾಳೆ, ನನ್ನ ಹೆಂಡತಿಯು ಮನೆಗೆ ಸ್ವತಂತ್ರಯಾಗಿ ನನ್ನ ಮಕ್ಕಳನ್ನೂ ನನ್ನ ಮಣಿಗಳನ್ನೂ ಅರ್ಥವನ್ನೂ ಯಾರಿಗೂ ವೆಚ್ಚ ಮಾಡಬಾರ ದೆಂದು ತನಗೆ ಹಿತವಾದ ಒಂದು ಕಾರ್ಯವ ಮಾಡಲಿಲ್ಲ, ಹೇಳಿದ ಮಾತು ಕೇಳಲೊಲ್ಲೆನೆಂದು ಹೇಳುತ್ತಿದ್ದಾಳೆ— ಎಂದು ಈರೀತಿಯಾದ ಪಶ್ವಾದಿನಿ ಷ್ಠವಿಕಾರಗಳು ಪ್ರಾಣಮಯಕೋಶನಿಷ್ಠವಾದಂಥ ಕ್ಷುತ್ಪಿಪಾಸಾದಿವಿ ಕಾರಗಳು, ಮನೋಮಯಕೋಶನಿಷ್ಠವಾದಂಥ ಕರ್ತೃತ್ವಾದಿವಿಕಾರಗ ಳು, ಆನಂದಮಯಕೋಶನಿಷ್ಠವಾದಂಥ ಭೋಕ್ತೃತ್ವಾದಿವಿಕಾರಗಳು ವಿಜ್ಞಾನಮಯಕೋಶಗಳಿಗಿಂತಲು ವ್ಯತಿರಿಕ್ತನಾಗಿ ಸಾಕ್ಷಿಯಾದಂಥ ತನ್ನನು ಸ್ಪರ್ಶನವ ಮಾಡಲಾರವು. ಹೀಗೆ ಪ್ರತ್ಯೇಕವಾಗಿ ತಿಳಿದಂಥದೇ ಪಂಚ ಕೋಶವ್ಯತಿರಿಕ್ತಜ್ಞಾನವೆನಿಸುವುದು. ಅದಂತಿರಲಿ. ದೃಷ್ಟಾಂತದಲ್ಲಿ ಪಶ್ವಾ ದಿಗಳು ತನ್ನೊಡನೆ ಕೂಡದೆ ತನಗಿಂತಲೂ ಬಾಹ್ಯಗಳಾಗಿ ಇದೆಯಾದ ಕಾರಣ ಆ ಪಶ್ವಾದಿಗಳಿಗಿಂತಲೂ ತನಗೆ ವ್ಯತಿರಿಕ್ತಜ್ಞಾನ ಬರಬಹುದು. ದಾರ್ಷ್ಟಾಂತದಲ್ಲಾದರೆ ಪಂಚಕೋಶಗಳು ತನ್ನೊಡನೆ ಕೂಡಿಕೊಂಡು ಇದೆಯಾದುದರಿಂದ ಪಂಚಕೋಶಗಳಿಗಿಂತಲು ವ್ಯತಿರಿಕ್ತಜ್ಞಾನವು ಹೇಗೆ ಬಂದೀತು ? ಎಂದರೆ ಬರಬಹುದಲ್ಲ. ಅದೆಂತೆಂದರೆ— ದೃಷ್ಟಾಂತಪೂರ್ವ ಕವಾಗಿ ನಿರೂಪಿಸುತ್ತ ಇದ್ದೇವೆ. ಆ ದೃಷ್ಟಾಂತವೇನೆಂದರೆ, ಹೇಳೇವು.

ಅಧ್ಯಯನ ಕಾಲದಲ್ಲಿ ಅಧ್ಯಯನ ಮಾಡುವಂಥ ಪುರುಷನಿಂದ ಉಚ್ಚರಿಸಲ್ಪಟ್ಟು ಕೂಡಿಕೊಂಡಿರುವ ಶಬ್ದಗಳನು ಕೈಯಿಂದ ಹಂಚಕೂಡದೇ ಇದ್ದ ಹೊತ್ತಿಗೂ ವಿಚಾರಿಸಿ ವಿವೇಕಯುಕ್ತನಾಗಿ ಅದು ಇದಱ ಶಬ್ದ, ಇದು ಅದಱ ಶಬ್ದವೆಂದು ಪ್ರತ್ಯೇಕವಾಗಿ ಹೇಗೆ ತಿಳಿಯುತ್ತಿದ್ದಾನೋ, ಮತ್ತು ಜಲದೊಡನೆ ಕೂಡಿದ ಉಷ್ಣವು ಕೈಯಿಂದ ಹಂಚಲು ಶಕ್ಯವಲ್ಲದೆ ಇದ್ದ ಹೊತ್ತಿಗೂ ತ್ವಗಿಂದ್ರಿಯದಿಂದ ಸ್ಪರ್ಶನವ ಮಾಡಿ ವಿವೇಕಯುಕ್ತವಾದಂಥ ಬುದ್ಧಿಯಿಂದ ಜಲವನು ಉಷ್ಣವನು ಪ್ರತ್ಯೇಕವಾಗಿ ಹೇಗೆ ತಿಳಿಯುತ್ತಿದ್ದಾನೋ, ಮತ್ತು ಗೋಡೆಯಲ್ಲಿ ಚಿತ್ರವಾಗಿ ಬರೆಯಪಟ್ಟಂಥ ನೀಲಪೀತಾದಿ ರೂಪಗಳನು ಕೈಯಿಂದ ಹಂಚಕೂಡದಿದ್ದ ಹೊತ್ತಿಗೂ ಚಕ್ಷುರಿಂದ್ರಿಯದಿಂದ ನೋಡಿ ವಿವೇಕಯುಕ್ತವಾದ ಬುದ್ಧಿಯಿಂದ ಇದು ಗೋಡೆ ಇದು ನೀಲಪೀತಾದಿಗಳೆಂದು ಹೇಗೆ ಪ್ರತ್ಯೇಕವಾಗಿ ತಿಳಿಯುತ್ತ ಇದ್ದಾನೆಯೋ, ಮತ್ತು ಜಲದೊಡನೆ ಕೂಡಿಕೊಂಡು ಇರುವಂಥ ಉಪ್ಪು ಹುಳಿ ಸಿಹಿ ಮೊದಲಾದ ರಸಗಳನು ಕೈಯಿಂದ ಹಂಚಕೂಡದಿದ್ದ ಹೊತ್ತಿಗೂ ರಸನೇಂದ್ರಿಯದಿಂದ ಅನುಭವಿಸಿ ವಿವೇಕಯುಕ್ತವಾದ ಬುದ್ಧಿಯಿಂದ ಇದು ಉಪ್ಪು ಇದು ಹುಳಿ ಇದು ಸಿಹಿ ಇದು ಕಹಿ ಇದು ಕಾರ ಇದು ಒಗರೆಂದು ಪ್ರತ್ಯೇಕವಾಗಿ ಹೇಗೆ ತಿಳಿಯುತ್ತ ಇದ್ದಾನೋ, ವಸ್ತ್ರವನು ಆಶ್ರಯಿಸಿಕೊಂಡಿರುವಂಥ ಗಂಧವಿಶೇಷಗಳನು ಕೈಯಿಂದ ಹಂಚಕೂಡದಿದ್ದ ಹೊತ್ತಿಗೂ ಘ್ರಾಣೇಂದ್ರಿಯದಿಂದ ಆಘ್ರಾಣವ ಮಾಡಿ ವಿವೇಕಯುಕ್ತವಾದ ಬುದ್ಧಿಯಿಂದ ಇದು ಸುಗಂಧ ಇದು ದುರ್ಗಂಧ ಇದು ಮಿಶ್ರಗಂಧವೆಂದು ಗಂಧವಿಶೇಷಗಳನು ಪ್ರತ್ಯೇಕವಾಗಿ ಹೇಗೆ ತಿಳಿಯುತ್ತ ಇದ್ದಾನೋ, ಹಾಗೆ ದಾರ್ಷ್ಟಾಂತಿಕದಲ್ಲೂ ಪಂಚಕೋಶಗಳೊಡನೆ ಕೂಡಿಕೊಂಡು ಇರುವಂಥ ಆತ್ಮಗಳ ಕೈಯಿಂದ ಹಂಚಕೂಡದಿದ್ದ ಹೊತ್ತಿಗೂ ವಿಚಾರಿಸಿ ವಿವೇಕಯುಕ್ತವಾದ ಬುದ್ಧಿಯಿಂದ ಪಂಚಕೋಶಗಳ ಸ್ವರೂಪವಿಂಥದು ಆತ್ಮಸ್ವರೂಪವಿಂಥದು ಪಂಚಕೋಶಗಳೊಡನೆ ಆತ್ಮನಿಗೆ ಕಾಲತ್ರಯದಲ್ಲೂ ಸಂಬಂಧವಿಲ್ಲವೆಂದು ಪ್ರತ್ಯೇಕವಾಗಿ ಹಂಚಿ ತಿಳಿಯಬಹುದಲ್ಲಾ. ಇಷ್ಟು ಪರ್ಯಂತವೂ ವ್ಯವಹಾರಕಾಲದಲ್ಲಿ ಪಂಚಕೋಶಗಳನು ಒಂದು ವಸ್ತುವಾಗಿ ಮಾಡಿಕೊಂಡು ಆತ್ಮನು ಪಂಚಕೋಶಗಳಿಗಿಂತಲೂ ವ್ಯತಿರಿಕ್ತನೆಂದು ವಿವೇ

ಕಿಸಿ ತಿಳಿವ ಪ್ರಕಾರವ ಹೇಳಿದೆವು. ಪರಮಾರ್ಥವಾಗಿ ವಿಚಾರಿಸುವಾಗ ರಜ್ಜ್ವಾದಿಗಳಲ್ಲಿ ಆರೋಪಿಸಪಟ್ಟಂಥ ಸರ್ಪಾದಿಗಳು ಆ ರಜ್ಜ್ವಾದಿವ್ಯತಿರಿಕ್ತವಾಗಿ ಹೇಗೆ ಇಲ್ಲವೋ ಹಾಗೆ ಆತ್ಮನಲ್ಲಿಯೂ ಆರೋಪಿಸಪಟ್ಟಂಥ ಪಂಚಕೋಶಗಳು ಅಧಿಷ್ಠಾನವಾದಂಥ ಆತ್ಮವ್ಯತಿರಿಕ್ತವಾಗಿ ಇಲ್ಲವೇ ಸರಿ. ಆದಂತಿರಲಿ. ಆ ದೃಷ್ಟಾಂತದಲ್ಲಿ ರಜ್ಜ್ವಾದಿಜ್ಞಾನವು ಬಂದ ತರುವಾಯದಲ್ಲಿ ಸರ್ಪಾದಿಪ್ರತೀತಿಯು ಹೇಗೆ ಇಲ್ಲವೋ ಹಾಗೆ ದಾರ್ಷ್ಟಾಂತಿಕದಲ್ಲೂ ಆತ್ಮಜ್ಞಾನ ಬಂದ ತರುವಾಯದಲ್ಲಿ ಪಂಚಕೋಶಗಳ ಪ್ರತೀತಿ ಬಾರದೇ ಹೋಗಬೇಕು. ಹಾಗೆ ಬಾರದೆ ಹೋಗಲಿಲ್ಲವಲ್ಲ, ಬರುತ್ತಿದೆಯಾದುದರಿಂದ ಆರೋಪಿತವಾದಂಥ ಪಂಚಕೋಶಗಳು ಅಧಿಷ್ಠಾನವಾದಂಥ ಆತ್ಮನಿಗಿಂತಲೂ ಇಲ್ಲವೆಂಬಂಥದು ಬುದ್ಧಿಯಲ್ಲಿ ಹೇಗೆ ತೋರುತ್ತೇನೆಂದರೆ, ತೋರುವುದು. ಹೇಗೆಂದರೆ ದೃಷ್ಟಾಂತಪೂರ್ವಕವಾಗಿ ನಿರೂಪಿಸುತ್ತ ಇದ್ದೇವೆ. ಆ ದೃಷ್ಟಾಂತವೇನೆಂದರೆ ಹೇಳೇವು. ಮರುಮರೀಚಿಕೆಯಲ್ಲಿ ಜಲಭ್ರಾಂತಿ ಬಂದ ತರುವಾಯದಲ್ಲಿ ಆ ಜಲದಲ್ಲಿ ಸ್ನಾನಪಾನಾದಿಕ್ರಿಯೆಗಳನು ಮಾಡಬೇಕೆಂದು ಪ್ರವರ್ತಿಸುವಂಥ ಪುರುಷನು ವಿಚಾರಿಸಿ ಇದು ಜಲವಲ್ಲ ಮರುಮರೀಚಿಕೆಯು ಎಂದೂ ತಿಳಿಯದೆ ಭ್ರಮೆಗೊಂಡೆನು ಎಂದೂ ಮರುಮರೀಚಿಕೆಯು ಜ್ಞಾನವು ಬಂದ ತರುವಾಯದಲ್ಲಿ ಜಲಪ್ರತೀತಿಯು ಹೇಗೆ ಬರುತ್ತಿದೆಯೋ, ಹಾಗೆ ಆತ್ಮನಲ್ಲಿ ಆರೋಪಿಸಲ್ಪಟ್ಟ ಪಂಚಕೋಶಗಳು ಅಧಿಷ್ಠಾನವಾದಂಥ ಮರುಮರೀಚಿಕೆಯಲ್ಲಿ ಜಲಪ್ರತೀತಿ ಮಾತ್ರ ಹೊರತಾಗಿ ಸ್ನಾನಪಾನಾದಿಕ್ರಿಯೆಗಳನು ಕಾಣೆವಲ್ಲ. ದಾರ್ಷ್ಟಾಂತದಲ್ಲಾದರೆ ಅಧಿಷ್ಠಾನವಾದಂಥ ಆತ್ಮನಿಗಿಂತಲು ಪಂಚಕೋಶಗಳು ಇಲ್ಲವೆಂಬ ಜ್ಞಾನವು ಬುದ್ಧಿಯಲ್ಲಿ ಹೇಗೆ ತೋರುತ್ತೆಂದರೆ ಈಯರ್ಥದಲ್ಲಿ ದೃಷ್ಟಾಂತವ ಹೇಳೇವು. ಅದೆಂತೆಂದರೆ-ಮೃತ್ತಿನಲ್ಲಿ ಆರೋಪಿಸಪಟ್ಟ ಘಟಾದಿಗಳು ಮೃದ್ವ್ಯತಿರಿಕ್ತವಾಗಿ ಇಲ್ಲವೆಂದು ತಿಳಿವ ಹೊತ್ತಿಗೂ ಆ ಘಟಾದಿಗಳ ಪ್ರತೀತಿಯು ಅದರ ವ್ಯವಹಾರವು ಹೇಗೆ ಬರುತ್ತಿದೆಯೋ, ಮತ್ತು ಸ್ವರ್ಣದಲ್ಲಿ ಆರೋಪಿಸಪಟ್ಟಂಥ ಕಟಕಮುಕುಟಾದಿಗಳು ಸ್ವರ್ಣವ್ಯತಿರಿಕ್ತವಾಗಿ ಇಲ್ಲವೆಂದು ತಿಳಿವ ಹೊತ್ತಿಗೂ ಆ ಕಟಕಮುಕುಟಾದಿಗಳ ಪ್ರತೀತಿಯು ಅದರ ವ್ಯವಹಾರವು ಹೇಗೆ ಬರುತ್ತಿದೆಯೋ ಹಾಗೆ ಆತ್ಮನಲ್ಲಿಯೂ ಆರೋಪಿಸಪಟ್ಟಂಥ ಪಂಚ

ಕೋಶಗಳು ಅಧಿಷ್ಠಾನವಾದಂಥ ಆತ್ಮನಿಗಿಂತಲೂ ಬೇರೆ ಇಲ್ಲವೆಂದು ತಿಳಿದ ಹೊತ್ತಿಗೂ ಪಂಚಕೋಶಗಳ ಪ್ರತೀತಿಯೂ ಅವರ ವ್ಯವಹಾರವೂ ಬರಬಹುದಲ್ಲಾ. ಅದಂತಿರಲಿ. ದೃಷ್ಟಾಂತವಲ್ಲಿ ಘಟಾದಿಗಳು ತೋರುತ್ತ ಇದ್ದುಕೊಂಡು ವ್ಯವಹಾರಕ್ಕೆ ಬಂದ ಹೊತ್ತಿಗೂ ಸೂಕ್ಷ್ಮಬುದ್ಧಿಯುಳ್ಳಂಥವನಿಗೆ ಮೃದಾದಿವ್ಯತಿರಿಕ್ತವಾಗಿ ಘಟಾದಿಗಳು ಇಲ್ಲವೆಂದು ಹೇಗೆ ತೋರುತ್ತ ಇದೆಯೋ, ಹಾಗೆ ದಾರ್ಷ್ಟಾಂತಿಕದಲ್ಲೂ ಪಂಚಕೋಶಗಳು ತೋರುತ್ತ ಇದ್ದುಕೊಂಡು ವ್ಯವಹಾರಕ್ಕೆ ಬಂದ ಹೊತ್ತಿಗೂ ಸೂಕ್ಷ್ಮಬುದ್ಧಿಯುಳ್ಳಂಥವನಿಗೆ ಈ ಪಂಚಕೋಶಗಳು ವ್ಯತಿರಿಕ್ತವಾಗಿ ಇಲ್ಲವೆಂದು ತಿಳಿಯಬಹುದಲ್ಲಾ. ಹೀಗೆ ತಿಳಿದಂಥದೇ ಪಂಚಕೋಶವ್ಯತಿರಿಕ್ತಜ್ಞಾನವೆನಿಸುವುದು.

ಈ ವಿಚಾರಕ್ಕೆ ಫಲವೇನೆಂದರೆ ಆತ್ಮನು ಅವಸ್ಥಾತ್ರಯದಲ್ಲು ಅನುಸ್ಯೂತನಾಗಿ ಇದ್ದಾನೆ; ಈ ಪಂಚಕೋಶಗಳು ಅವಸ್ಥಾತ್ರಯದಲ್ಲು ಅನುಸ್ಯೂತಗಳಾಗಿ ಇರಲಿಲ್ಲ; ವ್ಯಾವರ್ತಕಗಳಾಗಿ ಪಂಚಕೋಶಗಳು ತೋರುತ್ತ ಇದ್ದುಕೊಂಡು ವ್ಯವಹಾರಕ್ಕೆ ಬಂದ ಹೊತ್ತಿಗೂ ಈ ಪಂಚಕೋಶಗಳು ಆತ್ಮವ್ಯತಿರಿಕ್ತವಾಗಿ ಇಲ್ಲವೆಂದು ತಿಳಿವಂಥದೆ ಈ ವಿಚಾರಕ್ಕೆ ಫಲವೆನಿಸುವುದು.

ಈಪ್ರಕಾರವಾಗಿ ಪಂಚಕೋಶಗಳನು ಆತ್ಮನನು ಭಿನ್ನವಾಗಿ ವಿಚಾರಿಸಿ, ಪಂಚಕೋಶಗಳು ತೋರಿದ ಹೊತ್ತಿಗೂ ಆತ್ಮವ್ಯತಿರಿಕ್ತವಾಗಿ ಇಲ್ಲವೆಂದು ಯಾವವ ತಿಳಿಯುತ್ತ ಇದ್ದಾನೋ ಆತನೇ ಕೃತಾರ್ಥನು, ಆತನೇ ವಿದ್ವಾಂಸನು, ಆತನೇ ಜೀವನ್ಮುಕ್ತನು, ಆತನೇ ಬ್ರಹ್ಮನು, ಎಂದು ಸಕಲಶಾಸ್ತ್ರಸಿದ್ಧಾಂತ. ಈಯರ್ಥದಲ್ಲಿ ಸಂಶಯವಿಲ್ಲ. ಸಿದ್ಧ.

ಶ್ಲೋ ॥ ಶುಕ್ಲಶೋಣಿತಸಂಭೂತದೇಹೋನ್ನಮಯ ಉಚ್ಯತೇ ।
ಪ್ರಾಣಾದಿಪಂಚಕಂ ಪ್ರಾಣಮಯಃ ಕರ್ಮೇಂದ್ರಿಯೈರ್ಯುತಂ ॥೧॥
ಜ್ಞಾನೇಂದ್ರಿಯೈರ್ಮನೋಯುಕ್ತಂ ಮನೋಮಯ ಇತೀರಿತಃ ।
ಬುದ್ಧಿರ್ಜ್ಞಾನೇಂದ್ರಿಯೈರ್ಯುಕ್ತಂ ವಿಜ್ಞಾನಮಯಶಬ್ದಭಾಕ್ ॥೨॥
ಕ್ರಿಯಾದಿಯುಕ್ತಮಜ್ಞಾನಮಾನಂದಮಯಉಚ್ಯತೇ ।
ಏತೇಭ್ಯೋ ವ್ಯತಿರಿಕ್ತೋಯಮಾತ್ಮಾ ಸರ್ವಾಂತರಸ್ತ್ವತಃ ॥೩॥

ಕೋಶಾಶ್ಚೈತೇಹ್ಯನಾತ್ಮಾನೋ ಮಮತಾವಿಷಯತ್ವತಃ ।
ಧೇನುತದ್ವತ್ಸಪುತ್ರಸ್ತ್ರೀಕನ್ಯಾದಯ ಇವಾನಿಶಂ ॥೪॥
ಮೃದಾರೋಪಿತಕುಂಭಾದ್ಯಭಾತಾ ಅಪಿ ನ ತೇಪೃಥಕ್ ।
ಆತ್ಮನ್ಯಾರೋಪಿತಾಃ ಕೋಶಾ ಭಾತಾ ಅಪಿ ಪೃಥಙ್ನ ಹಿ ॥೫॥
ಏವಂ ಕೋಶಾತಿರಿಕ್ತತ್ವಂ ಸ್ವಾತ್ಮನೋ ಯೋ ವಿವೇಚಯೇತ್ ।
ಸ ಸಂಸಾರೀವ ಭಾತೋಪಿ ಪರಬ್ರಹ್ಮೈವ ನಾನ್ಯಥಾ ॥

ಇಂತೀಕನ್ನಡಭಾಷೆಯೊಳ್ ವಿರಚಿಸಿದ

ವಾ ಸು ದೇ ವ ಯ ತೀಂ ದ್ರ ಪ್ರೋ ಕ್ತ ಮ ಪ್ಪ

ವೇದಾಂತವಿವೇಕಸಾರವೆಂಬ ಗ್ರಂಥದಲ್ಲಿ

ಪಂಚಕೋಶವಿಚಾರವಂ ಪೇಳ್ವುದು

ದಶಮಪ್ರಕರಣಂ.

## ಹನ್ನೊಂದನೆಯ ಪ್ರಕರಣಂ.

— ಸಚ್ಚಿದಾನಂದಪ್ರಕರಣಂ —

ಶ್ಲೋ ॥ ಕಿಮಸ್ಯ ಸತ್ಸ್ವರೂಪತ್ವಂ ಚಿದ್ರೂಪತ್ವಂ ಕಿಮಾತ್ಮನಃ ।
ಕಿಂ ವಾನಂದಸ್ವರೂಪತ್ವ ಮಿತ್ಯೇತಚ್ಚಿಂತ್ಯತೇ ಸ್ಫುಟಂ ॥

ಆತ್ಮನಿಗೆ ಸದ್ರೂಪತ್ವವು ಚಿದ್ರೂಪತ್ವವು ಆನಂದರೂಪತ್ವವು ವಿಚಾರಿಸಪಡುತ್ತ ಇದೆ.

ಸದ್ರೂಪತ್ವವೇನೆಂದರೆ— ಯಾವ ವಸ್ತುವು ಒಂದಱಿಂದಲು ಬಾಧಿಸಪಡದೆ ಕಾಲತ್ರಯದಲ್ಲು ಏಕರೂಪವಾಗಿ ಇದೆಯೋ, ಆ ವಸ್ತುವು ಸದ್ರೂಪವೆನಿಸುವುದು. ಈ ಸದ್ರೂಪತ್ವವು ಆತ್ಮನಲ್ಲಿ ಇದೆಯೇ ?— ಎಂದರೆ, ಆತ್ಮನು ಕಾಲತ್ರಯದಲ್ಲು ಒಂದಱಿಂದಲು ಬಾಧಿಸಪಡದೆ ಇದ್ದಾನೆ ಯಾದುದಱಿಂದ, ಆತ್ಮನಿಗೆ ಸದ್ರೂಪತ್ವವು ಇದೆ. ಆತ್ಮನು ಕಾಲತ್ರಯ

ದಲ್ಲೂ ಇದ್ದಾನೆ ಎಂಬುವಲ್ಲಿ ಪ್ರಮಾಣವೇನು, ಎಂದರೆ- ಸರ್ವಜನರ ಅನುಭವವೇ ಪ್ರಮಾಣವೆನಿಸುವುದು. ಸರ್ವಜನರೆಂಬುವರಾರೆಂದರೆ- ದರಿದ್ರನು, ಆಢ್ಯನು, ಕರ್ಮಠನು, ಭಕ್ತನು ಮುಮುಕ್ಷುವು- ಈ ಐದು ಮಂದಿಯಲ್ಲೇ ಸಮಸ್ತರಾದವರು ಅಂತರ್ಭೂತಗಳಾದುದರಿಂದ ಇವರ ಅನುಭವ ಹೇಗೆ ಎಂದು ವಿಚಾರಿಸುತ್ತ ಇದ್ದೇವೆ. ದರಿದ್ರನ ಅನುಭವ ಹೇಗೆಂದರೆ ಹೇಳೇವು. "ಜನ್ಮಾಂತರದಲ್ಲಿ ತಾನು ಒಬ್ಬರಿಗೂ ಒಂದು ಕಾಸನು ಕೊಟ್ಟವನಲ್ಲವಾದುದರಿಂದ ಈ ಜನ್ಮದಲ್ಲಿ ದಾರಿದ್ರ್ಯವನೇ ಅನುಭವಿಸುತ್ತಿದ್ದೇನೆ. ಈ ಜನ್ಮದಲ್ಲೂ ಕೊಡುವುದಕ್ಕೆ ಏನು ಇಲ್ಲವಾದುದರಿಂದ ಬರುವ ಜನ್ಮಕ್ಕೂ ತಾನು ದರಿದ್ರನಾಗಿಯೇ ಹುಟ್ಟುತ ಇದ್ದೇನೆ" ಎಂಬ ದರಿದ್ರನ ವಾರ್ತೆಯಿಂದಲು, ಆಯೋಪಾದಿಯಲ್ಲೇ ಆಢ್ಯನು- "ತಾನು ಜನ್ಮಾಂತರದಲ್ಲಿ ಏನನಾದರು ಕೊಟ್ಟಂಥವನಾದ ಕಾರಣ ಈ ಜನ್ಮದಲ್ಲು ಐಶ್ವರ್ಯವನು ಅನುಭವಿಸುತ್ತ ಇದ್ದೇನೆ. ಈ ಜನ್ಮದಲ್ಲು ಕೊಟ್ಟರಷ್ಟೆ ತನಗೆ ಮುಂದಕ್ಕೂ ಉಂಟು" ಎಂಬಂಥ ಆಢ್ಯನ ವಾರ್ತೆಯಿಂದಲು, ಆಯೋಪಾದಿಯಲ್ಲೇ ಕರ್ಮಠನು- "ತಾನು ಅನೇಕ ಜನ್ಮಗಳಲ್ಲಿ ಸತ್ಕರ್ಮವನು ಉಪಾಸನೆಮಾಡಿದಂಥವನಾಗಲಾಗಿ ಆ ಉಪಾಸನಾಮಹಿಮೆಯಿಂದ ಈ ಜನ್ಮದಲ್ಲು [ಮುಂದಣ ಜನ್ಮದಲ್ಲು] ತನಗೆ ನಿರತಿಶಯವಾದಂಥ ಭಕ್ತಿಯುಂಟು." ಎಂಬಂಥ ಭಕ್ತನ ವಾರ್ತೆಯಿಂದಲೂ, ಆಯೋಪಾದಿಯಲ್ಲಿ ಮುಮುಕ್ಷುವಾದವನು- "ತಾನು ಅನೇಕ ಜನ್ಮಸಂಸಿದ್ಧನು, ಈಶ್ವರಾರ್ಪಣವಾಗಿಯೆ ಕರ್ಮವನು ಮಾಡಿದಂಥವನಾಗಲಾಗಿ ತನಗೆ ಈ ಜನ್ಮದಲ್ಲೂ ಚಿತ್ತಶುದ್ಧಿಯು ಸದ್ಗುರುಲಾಭವೂ ಶ್ರವಣಾದಿಗಳೂ ಉಂಟಾಯಿತು. ತಾನು ಕೃತಾರ್ಥನು. ತನಗೆ ಇನ್ನು ಮೇಲೆ ಜನ್ಮವು ಇಲ್ಲ" ಎಂಬ ಮುಮುಕ್ಷುವಿನ ವಾರ್ತೆಯಿಂದಲು, ತಟಸ್ಥನಾದ ವಿವೇಕಿಗೆ- "ಆತ್ಮನು ಕಾಲತ್ರಯದಲ್ಲು ಇದ್ದಾನೆ" ಎಂದು ಅನುಭವ ಸಿದ್ಧಿಸಿತು. ಸಮಸ್ತ ಜನರು ಈ ಐದು ಮಂದಿಯೊಳಗೆ ಅಂತರ್ಭೂತಗಳಾದ ಕಾರಣ ಈ ಐದು ಮಂದಿಯ ಅನುಭವದಿಂದ ನಮಗೂ ಸದ್ರೂಪತ್ವವು ಸಿದ್ಧಿಸಿತು. ಅದಂತಿರಲಿ. ಅನುಭವದಿಂದ ನಮಗೂ ಸದ್ರೂಪತ್ವವು ಸಿದ್ಧಿಸಿತಲ್ಲದೆ ಯುಕ್ತಿಯಿಂದ ಸದ್ರೂಪತ್ವವು ಸಿದ್ಧಿಸಲಿಲ್ಲವಲ್ಲ- ಎಂದರೆ, ನಾನು

ಕಾಲತ್ರಯದಲ್ಲು ಇದ್ದೇನೆಯಾದಕಾರಣ ಯುಕ್ತಿಯಿಂದ ನಮಗೂ ಸದ್ರೂಪತ್ವ ಸಿದ್ಧಿಸಿತಲ್ಲ: ಆಯುಕ್ತಿಯಾವುದೆಂದರೆ ಹೇಳೇವು. ನಾವು ಈಗ ಇದ್ದೇವೋ ಇಲ್ಲವೋ ?– ಎಂದರೆ ಇದ್ದೇವೆಯಲ್ಲ. ಶರೀರಿಗಳಾಗಿ ಇದ್ದೇವೆಯೋ, ಅಶರೀರಿಗಳಾಗಿ ಇದ್ದೇವೆಯೊ ? ಎಂದರೆ– ಅಶರೀರಿಯಾದಂಥವನಿಗೆ ವ್ಯವಹಾರವು ಕೂಡದು. ನಾವು ಈಗ ವ್ಯವಹರಿಸಿಕೊಂಡು ಇದ್ದೇವೆಯಾಗಲಾಗಿ ಶರೀರಿಗಳಾಗಿಯೇ ಇದ್ದೇವೆ. ನಮಗೆ ಈ ಶರೀರವೇತಱಿಂದ ಬಂದಿತೆಂದರೆ, ಕರ್ಮದಿಂದ ಬಂದಿತು. ಆರು ಮಾಡಿದ ಕರ್ಮದಿಂದ ಬಂದಿತೆಂದರೆ, ನಾವು ಮಾಡಿದ ಕರ್ಮದಿಂದಲೇ ಬಂದಿತು. ಅನ್ಯನಾದವ ಮಾಡಿದ ಕರ್ಮದಿಂದ ಬಂದಿತೆಂದು ಹೇಳುವಣವೆಂದರೆ– ಅನ್ಯನು ಮಾಡಿದ ಜ್ಯೋತಿಷ್ಟೋಮಾದಿಗಳ ಫಲವು ನಮಗೆ ಬರಬೇಕು, ಬರಲಿಲ್ಲವಲ್ಲ; ಅದಱಿಂದ ಅನ್ಯನು ಮಾಡಿದ ಕರ್ಮದಿಂದ ನಮಗೆ ಶರೀರವು ಬಂದಿತೆಂದು ಹೇಳಕೂಡದು. ನಾವು ಮಾಡಿದ ಕರ್ಮದಿಂದಲೇ ನಮಗೆ ಶರೀರವು ಬಂದಿತೆಂದು ಹೇಳಬೇಕು. ಹಾಗಾದರೆ ಈ ಜನ್ಮದಲ್ಲಿ ಮಾಡಿದ ಕರ್ಮದಿಂದ ಶರೀರ ಬಂದಿತೊ? ಜನ್ಮಾಂತರದಲ್ಲಿ ಮಾಡಿದ ಕರ್ಮದಿಂದ ಶರೀರ ಬಂದಿತೊ ? ಎಂದರೆ– ಜನ್ಮಾಂತರದಲ್ಲಿ ಮಾಡಿದ ಕರ್ಮದಿಂದಲೇ ಶರೀರ ಬಂದಿತು. ಈ ಜನ್ಮದಲ್ಲಿ ಮಾಡಿದ ಕರ್ಮದಿಂದಲೇ ಶರೀರವು ಬಂದಿತೆಂದು ಹೇಳುವಣವೆಂದರೆ ಹೇಳಕೂಡದು. ಅದು ಹೇಗೆಂದರೆ, ದೃಷ್ಟಾಂತಪೂರ್ವಕವಾಗಿ ನಿರೂಪಿಸುತ್ತ ಇದ್ದೇವೆ. ವೃಕ್ಷನಿಷ್ಠವಾದ ಬೀಜವು ತನಗೆ ಕಾರಣವಾದಂಥ ವೃಕ್ಷವನು ಹೇಗೆ ಹುಟ್ಟಿಸಲಾಱದೋ, ಹಾಗೆ ಈ ಶರೀರದಿಂದ ಮಾಡಪಟ್ಟ ಕರ್ಮವು ಪಶ್ಚಾದ್ಭಾವಿಯಾಗಿ ಇದೆಯಾದಕಾರಣ ತನಗೆ ಆಶ್ರಯವಾಗಿ ಪೂರ್ವಭಾವಿಯಾದಂಥ ಶರೀರವನು ಹುಟ್ಟಿಸಲಾಱದು. ಆದುದಱಿಂದ ಈ ಜನ್ಮದಲ್ಲಿ ಮಾಡಿದ ಕರ್ಮದಿಂದ ಶರೀರವು ಬಂದಿತೆಂದು ಹೇಳಕೂಡದು. ಮತ್ತು ಹೇಗೆ ಹೇಳಬೇಕು ? ಎಂದರೆ– ಜನ್ಮಾಂತರದಲ್ಲಿ ನಾವು ಮಾಡಿದ ಕರ್ಮದಿಂದಲೇ ನಮಗೆ ಈ ಶರೀರ ಬಂದಿತೆಂದು ಹೇಳಬೇಕು. ಹಾಗಾದರೆ ನಾವು ಜನ್ಮಾಂತರದಲ್ಲಿ ಶರೀರಿಗಳಾಗಿ ಇದ್ದುಕೊಂಡು ಕರ್ಮವ ಮಾಡಿದೆವೋ ಅಶರೀರಿಗಳಾಗಿ ಇದ್ದುಕೊಂಡು ಕರ್ಮವ ಮಾಡಿದೆವೋ ? ಎಂದರೆ– ಅಶರೀರಿಗಳಾಗಿ ಇದ್ದುಕೊಂಡು ಕರ್ಮವ ಮಾಡಕೂಡದಾದಕಾರಣ ಶರೀರಿಗಳಾಗಿ ಇದ್ದುಕೊಂಡೇ

ಕರ್ಮವ ಮಾಡಿದೆವು. ಆ ಶರೀರವೇತಱಿಂದ ಬಂದಿತೆಂದರೆ, ಅದಕಿಂತಲೂ ಪೂರ್ವಜನ್ಮದಲ್ಲಿ ಮಾಡಿದ ಕರ್ಮದಿಂದ ಬಂದಿತು. ಆ ಶರೀರವೇತಱಿಂದ ಬಂದಿತೆಂದರೆ, ಅದಕಿಂತಲೂ ಪೂರ್ವಜನ್ಮದಲ್ಲಿ ಮಾಡಿದ ಕರ್ಮದಿಂದ ಬಂದಂಥದು- ಎಂಬಂಥ ಈ ಯುಕ್ತಿಯಿಂದ ನಾವು ಅನೇಕಕೋಟಿ ಕಲ್ಪಗಳಲ್ಲಿ ಶರೀರಿಗಳಾಗಿ ಇದ್ದುಕೊಂಡು ಅನೇಕ ಕರ್ಮಗಳನು ಮಾಡಿಕೊಂಡು ಆಯಾಕರ್ಮಗಳಿಂದ ಬಂದ ಅನೇಕ ಶರೀರಗಳನು ಪರಿಗ್ರಹಿಸಿಕೊಂಡು, ಆಯಾ ಶರೀರನಿಷ್ಠವಾದ ಸುಖದುಃಖಗಳನನುಭವಿಸಿಕೊಂಡು, ಅನೇಕ ಕೋಟಿ ಕಲ್ಪಗಳಲ್ಲಿ ಇದ್ದವರಾಗಿ ಊಹಿಸಪಡುತ್ತಿದ್ದೇವೆ. ಅದುಕಾರಣ ಯುಕ್ತಿಯಿಂದ ನಾವು ಭೂತಕಾಲದಲ್ಲು ವರ್ತಮಾನಕಾಲದಲ್ಲು ಇದ್ದೇವೆ ಎಂಬಂಥದು ಸಿದ್ಧಿಸುವುದು. ಹಾಗಾದರೆ ಯುಕ್ತಿಯಿಂದ ಭವಿಷ್ಯತ್ಕಾಲದಲ್ಲು ವಿದ್ಯಮಾನತ್ವ ಹೇಗೆಂದರೆ, ಹೇಳೇವು. ನಾವು ಈಗ ಶ್ರವಣಮನನನಿಧಿಧ್ಯಾಸಗಳ ಮಾಡಿ ಜ್ಞಾನವನ್ನು ಸಂಪಾದಿಸದೆ ಹೋದೆವಾದರೆ ಪೂರ್ವಜನ್ಮದಲ್ಲಿ ಮಾಡಿದ ಕರ್ಮಗಳಿಗೆ ಫಲಭೂತವಾಗಿ ಈ ಶರೀರವು ನಮಗೆ ಹೇಗೆ ಬಂದಿತೋ ಹಾಗೆ ಈ ಶರೀರದಿಂದ ಮಾಡಪಟ್ಟಂಥ ಕರ್ಮಗಳಿಗೂ ಫಲಭೂತಗಳಾದ ಅನೇಕ ಶರೀರಗಳು ಇನ್ನುಮೇಲೆ ಬರುವುವು. ಈ ಶರೀರವನು ಪರಿಗ್ರಹಿಸಿಕೊಂಡು ಹೇಗೆ ಅನೇಕ ವಿಧಗಳಾದ ಕರ್ಮಗಳನು ಮಾಡುತ್ತ ಇದ್ದೇವೆಯೋ ಹಾಗೆ ಆ ಶರೀರಗಳನು ಪರಿಗ್ರಹಿಸಿಕೊಂಡು ಅನೇಕ ವಿಧಗಳಿಂದ ಕರ್ಮಗಳನು ಮಾಡಹೋಗುತ್ತಿದ್ದೇವೆ. ಆ ಕರ್ಮಗಳಿಗೆ ಫಲಭೂತಗಳಾದ ಅನೇಕ ಶರೀರಗಳು ನಮಗೆ ಬರಹೋಗುತ್ತಿದೆ. ಆ ಶರೀರಗಳನು ಪರಿಗ್ರಹಿಸಿಕೊಂಡು ಅನೇಕ ವಿಧಗಳಾದ ಕರ್ಮಗಳನು ಮಾಡಿಕೊಂಡು ಆ ಕರ್ಮಕ್ಕೆ ಫಲಗಳಾದ ಸುಖದುಃಖಗಳನು ಅನುಭವಿಸಿಕೊಂಡು ಅನೇಕ ಕೋಟಿ ಕಲ್ಪಗಳು ಇರಹೋಗುತ್ತಿದ್ದೇವೆ-ಎಂಬುದು ಯುಕ್ತಿಯಿಂದ [1]ಸಿದ್ಧಿಸಿತು.[1] ಪ್ರಳಯುಗಳಲ್ಲಿ ಜಗತ್ತು ಬಾಧಿಸಪಟ್ಟಹೊತ್ತಿಗೂ ನಾವು ಬಾಧಿಸಪಡಲಿಲ್ಲವಾಗಿ ನಮಗೆ ಬಂದಱಿಂದಲೂ ಬಾಧಿಸಪಡದೆ ಇರುವುದು ಸಿದ್ಧಿಸಿತು. ನಮಗೆ ಉತ್ಪತ್ತ್ಯಾದಿವಿಕಾರಗಳು ಇಲ್ಲವಾಗಲಾಗಿ ನಮಗೆ

---

ಪಾ— 1. ಸಿದ್ಧಿಸಿತಾಗಲಾಗಿ ಕಾಲತ್ರಯದಲ್ಲಿಯೂ ನಾವು ಇದ್ದೇವೆ ಎಂಬುದು ಯುಕ್ತಿಯಿಂದ ಸಿದ್ಧಿಸಿತು.

ಏಕರೂಪತ್ವವು ಸಿದ್ಧಿಸಿತು. ಈ ಹೇಳಪಟ್ಟಂಥ ಸಲ್ಲಕ್ಷಣಗಳು ನಮ್ಮಲ್ಲಿ ಇದೆಯಾದಕಾರಣ ನಮಗೆ ಸದ್ರೂಪತ್ವವು ಸಿದ್ಧಿಸಿತು. ಸಿದ್ಧ.

ಆತ್ಮನಿಗೆ ಚಿದ್ರೂಪತ್ವ ಹೇಗೆಂದರೆ, ಹೇಳೇವು. †ಯಾವ ವಸ್ತು ಸಾಧನಾಂತರವ ಅಪೇಕ್ಷಿಸದೆ ತಾನು ತೋರಿಕೊಂಡು ತನ್ನಲ್ಲಿ ಆರೋಪಿಸಪಟ್ಟ ಸರ್ವಪದಾರ್ಥಗಳನು ತೋರಿಸುತ್ತಿದೆಯೋ ಅದು ಚಿತ್ತೆಂದು ಹೇಳಪಡುವುದು. ಚಿದ್ರೂಪತ್ವವು ಆತ್ಮನಲ್ಲಿ ಇದೆಯೋ ಎಂದರೆ ಇದೆ. ಅದು ಹೇಗೆಂದರೆ ಹೇಳೇವು. ನಮ್ಮಿಂದ ಬಾಲ್ಯಾರಭ್ಯ ಏತಾವತ್ಪರ್ಯಂತವು ಏನೇನು ವ್ಯಾಪಾರಗಳು ಮಾಡಪಟ್ಟವೋ ಆಯಾ ವ್ಯಾಪಾರಗಳೊಳಗೆ ಕೆಲವು ತೋರದೆ ಹೋದಹೊತ್ತಿಗೂ ಕಡಮೆ ವ್ಯಾಪಾರಗಳೆಲ್ಲವೂ ಪ್ರಕಾಶಸಾಧನಗಳಾದ ಆದಿತ್ಯಚಂದ್ರನಕ್ಷತ್ರಾಗ್ನಿವಿದ್ಯುಚ್ಚಕ್ಷುಸ್ಸುಗಳೊಳಗೆ ಒಂದು ಸಾಧನವನೂ ಅಪೇಕ್ಷಿಸದೆ ಗಾಢಾಂಧಕಾರದಲ್ಲಿ ಮುಸುಕುಹಾಕಿಕೊಂಡು ನಾವು ಮಲಗಿಕೊಂಡಿದ್ದಹೊತ್ತಿಗೂ ನಮಗೆ ಅಷ್ಟುಮಂದಿಗೂ ತೋರುತ್ತಇದೆಯಾದಕಾರಣ ಆತ್ಮಸ್ವರೂಪಗಳಾದಂಥ ನಮ್ಮಲ್ಲಿ ಆರೋಪಿಸಪಟ್ಟಂಥ ಸರ್ವಪದಾರ್ಥಗಳೊಳಗೆ ಕೆಲವು ಪದಾರ್ಥಗಳಷ್ಟೇ ತೋರುತ್ತಿದೆ. ನಮ್ಮಲ್ಲಿ ಆರೋಪಿಸಪಟ್ಟಂಥ ಸಮಸ್ತ ಪ್ರಪಂಚವು ತೋರಲಿಲ್ಲವಾಗಿ ಸರ್ವಪದಾರ್ಥಾವಭಾಸಕವಾದಂಥ ಚಿದ್ರೂಪತ್ವವು ನಮಗೆ ಹೇಗೆ ಕೂಡಿತೆಂದರೆ ಕೂಡೀತಲ್ಲಾ. ಅದೆಂತೆಂದರೆ ಹೇಳೇವು. ಅಂತರಪ್ರಪಂಚವು ಬಾಹ್ಯಪ್ರಂಚವು ಸರ್ವಪದಾರ್ಥಗಳೆಂದು ಹೇಳಪಡುವುದು. ಈ ಪ್ರಪಂಚದ್ವಯವು ನಮ್ಮಿಂದ ತೋರಿಸಪಡುತ್ತಿದೆ. ಇವೆರಡರ ಒಳಗೂ ಬಾಹ್ಯಪ್ರಂಪಂಚವು ನಮ್ಮಿಂದ ಹೇಗೆ ತೋರುತ್ತಿದೆ? ಎಂದರೆ, ಪೃಥಿವಿಯೆನುತಲೂ, ಅಪ್ಪು ಎನುತಲೂ, ತೇಜಸ್ಸೆನುತಲೂ, ವಾಯುವೆನುತಲೂ, ಆಕಾಶವೆನುತಲೂ, ಶಬ್ದಸ್ಪರ್ಶರೂಪರಸಗಂಧಗಳೆನುತಲೂ, ಪಂಚೀಕೃತಭೂತಗಳೆನುತಲೂ, ಅಪಂಚೀಕೃತಭೂತಗಳೆನುತಲೂ, ಬ್ರಹ್ಮಾಂಡವೆನುತಲೂ, ಚತುರ್ದಶಭುವನಗಳೆನುತಲೂ, ಚತುರ್ವಿಧಭೂತಗ್ರಾಮಗಳೆನುತಲೂ,

---

2. "ಸಾಧನಾಂತರನಿರಪೇಕ್ಷೇಣ ಸ್ವಯಂ ಪ್ರಕಾಶಮಾನತ್ವೇ ಸತಿ ಸ್ವೇನಾರೋಪಿತಸರ್ವಪದಾರ್ಥಾವಭಾಸಕತ್ವಂ ಚಿತ್ತ್ವಂ" ಇದಕ್ಕೆ ಅರ್ಥ— ಎಂದು ಈಕಡೆ ಒಂದು ಪ್ರತಿಯಲ್ಲಿ ಮಾತ್ರ ಇದೆ.

ಇವಕ್ಕೆ ಕಾರಣವಾದ ಮಾಯೆಯೆನುತಲೂ, ವಿವಿಧನಾಮರೂಪಗುಣಧರ್ಮವಿಕಾರಶಕ್ತ್ಯಾಶ್ರಯವಾದಂಥ ಸಮಸ್ತಬಾಹ್ಯಪ್ರಪಂಚವು ತಾನು ನಮ್ಮಿಂದ ತಿಳಿಯಪಡುತ್ತದೆಯೋ, ಆಬಾಹ್ಯಪ್ರಪಂಚದಿಂದ ನಾವು ತಿಳಿಯಪಡುತ್ತಿದ್ದೇವೆಯೋ, ಎಂದರೆ-- ಬಾಹ್ಯಪ್ರಪಂಚದಿಂದ ನಾವು ತಿಳಿಯಪಡಲಿಲ್ಲವಾದ ಕಾರಣ ನಮ್ಮಿಂದಲೇ ಬಾಹ್ಯವಾದ ಸಮಸ್ತ ಪ್ರಪಂಚವು ತಿಳಿಯಪಡುತ್ತಿದೆ. ಬಾಹ್ಯಪ್ರಪಂಚವ ತಿಳಿದಂಥ ನಮಗೆ ಬಾಹ್ಯವಾದಂಥ ಸರ್ವಪದಾರ್ಥಾವಭಾಸಕತ್ವವು ನಮ್ಮಲ್ಲಿ ಸಿದ್ಧಿಸಿಯಿದೆ. ಅಂತರಪದಾರ್ಥಾವಭಾಸಕತ್ವವು ನಮಗೆ ಹೇಗೆ? ಎಂದರೆ— ಅನ್ನಮಯಕೋಶವೆನುತಲೂ, ಪ್ರಾಣಮಯಕೋಶವೆನುತಲೂ, ಮನೋಮಯಕೋಶವೆನುತಲೂ, ವಿಜ್ಞಾನಮಯಕೋಶವೆನುತಲೂ, ಆನಂದಮಯಕೋಶವೆನುತಲೂ, ಸ್ಥೂಲಸೂಕ್ಷ್ಮಕಾರಣಶರೀರವೆನುತಲೂ, ಷಡ್ಭಾವಗಳೆನುತಲೂ, ಷಡೂರ್ಮಿಗಳೆನುತಲೂ, ಷಟ್ಕೋಶಗಳೆನುತಲೂ, ಜ್ಞಾನೇಂದ್ರಿಯಗಳೆನುತಲೂ, ಕರ್ಮೇಂದ್ರಿಯಗಳೆನುತಲೂ, ಪ್ರಾಣಾದಿಸಂಚಕೋಶವೆನುತಲೂ, ಅಂತಃಕರಣಚತುಷ್ಟಯವೆನುತಲೂ, ಸಂಕಲ್ಪಾಧ್ಯವಸಾಯಾಭಿಮಾನಾವಧಾರಣೆಗಳೆನುತಲೂ, ಜಾಗ್ರತ್ಸ್ವಪ್ನಸುಷುಪ್ತ್ಯವಸ್ಥೆಗಳೆನುತಲೂ, ಅವಸ್ಥಾವ್ಯಾಪಾರಗಳೆನುತಲೂ, ಅವಸ್ಥಾವಂತರೆನುತಲೂ, ಸಮಾಧಿಮೂರ್ಛೆಯೆನುತಲೂ, ಮನೋವಾಕ್ಕಾಯಗಳೆನುತಲೂ, ಕಾಮಕ್ರೋಧಮದಮೋಹಲೋಭಮಾತ್ಸರ್ಯಗಳೆನುತಲೂ, ನಿತ್ಯಾನಿತ್ಯವಸ್ತುವಿವೇಕವೆನುತಲೂ, ಇಹಾಮುತ್ರಾರ್ಥಫಲಭೋಗವಿರಾಗವೆನುತಲೂ, ಶಮಾದಿಷಟ್ಕಸಂಪತ್ತಿಯೆನುತಲೂ, ಮುಮುಕ್ಷುವೆನುತಲೂ, ಸಾತ್ವಿಕರಾಜಸತಾಮಸಗುಣಗಳೆನುತಲೂ, ಸುಖದುಃಖಗಳೆನುತಲೂ, ಜ್ಞಾನಾಜ್ಞಾನಗಳೆನುತಲೂ, ಪಂಚಕ್ಲೇಶಗಳೆನುತಲೂ, ಮೈತ್ರೀಕರುಣಾಮುದಿತೋಪೇಕ್ಷೆಗಳೆನುತಲೂ, ಯಮನಿಯಮಾಸನಪ್ರಾಣಾಯಾಮಪ್ರತ್ಯಾಹಾರಧ್ಯಾನಧಾರಣಸಮಾಧ್ಯಷ್ಟಾಂಗ[1]ಗಗಳೆನುತಲೂ, ಪ್ರತ್ಯಕ್ಷಾನುಮಾನೋಪಮಾನಶಬ್ದಾದ್ಯುಪಲಬ್ಧಿಗಳೆನುತಲೂ, ಆರೋಗ್ಯಗಳೆನುತಲೂ, ವಿವಿಧನಾಮರೂಪಗುಣಧರ್ಮವಿಕಾರಶಕ್ತ್ಯಾಶ್ರಯವಾದ ಅಂತರಪ್ರಪಂಚವೆಲ್ಲವು ನಮ್ಮಿಂದ ತಿಳಿಯಪಡುತ್ತಿದೆಯೋ ಆಯಂತರಪ್ರಪಂ

---

ಪಾ — 1. ಷ್ಟಾಂಗಯೋಗವೆನುತಲೂ

ಆದಿಂದ ನಾವು ತಿಳಿಯಲ್ಪಡುತ್ತ ಇದ್ದೇವೆಯೋ? ಎಂದರೆ– ಅಭ್ಯಂತರಪ್ರ ಪಂಚದಿಂದ ನಾವು ತಿಳಿಯಲ್ಪಡಲಿಲ್ಲವಾದುದರಿಂದ ನಮ್ಮಿಂದಲೇ ಅಭ್ಯಂತರವಾದ ಸಮಸ್ತಪ್ರಪಂಚವು ತಿಳಿಯಲ್ಪಡುತ್ತ ಇದೆಯಾಗಲಾಗಿ, ಅಭ್ಯಂತರಪ್ರಪಂಚ ವ ತಿಳಿದಂಥ ನಮಗೆ ಆಂತರವಾದಂಥ ಸರ್ವಪದಾರ್ಥಾವಭಾಸಕತ್ವವು ಸಿದ್ಧಿಸಿ ಇದೆಯಾಗಲಾಗಿ, ನಮ್ಮಲ್ಲಿ ಆರೋಪಿಸಲ್ಪಟ್ಟಂಥ ಸರ್ವಪದಾರ್ಥಾ ವಭಾಸಕತ್ವವು ಸಾಧನಾಂತರವನು ಅಪೇಕ್ಷಿಸದೆ ನಮಗೆ ಸಿದ್ಧಿಸಿ ಇದೆ. ಅದಂತಿರಲಿ. ಮನಸ್ಸಿನಿಂದಲಷ್ಟೆ ಸರ್ವವು ತಿಳಿಯಲ್ಪಡುತ್ತಿದೆ, ನಾವೂ ಮನಸ್ಸಿನಿಂದಲಷ್ಟೆ ತಿಳಿಯಲ್ಪಡುತ್ತಿದ್ದೇವೆಯಾಗಲಾಗಿ ಸಾಧನಾಂತರನಿರ ಪೇಕ್ಷವಾದ ಸ್ವಪ್ರಕಾಶತ್ವವು ಸರ್ವಪದಾರ್ಥಾವಭಾಸಕತ್ವವು ನಮಗೆ ಹೇಗೆ ಕೂಡುವುದೆಂದರೆ, ಕೂಡುತ್ತದು. ಅದು ಹೇಗೆ ಕೂಡುವುದೆಂದರೆ ಹೇಳೇವು. ಮನಸ್ಸು ಉತ್ಪತ್ತಿನಾಶವತ್ತಾಗಿ ಸಾವಯವವಾಗಿ ಪರಿಚ್ಛಿನ್ನ ವಾಗಿ ದೃಶ್ಯವಾಗಿ ಘಟದೋಪಾದಿಯಲ್ಲಿ ಭೂತ[1]ಕಾರಣ[1]ವಾಗಿದೆಯಾದಕಾ ರಣ ಮನಸ್ಸಿಗೆ ಜಡತ್ವವೇ ಅಲ್ಲದೇ ಚೇತನತ್ವವು ಕೂಡದು. ಅದರಿಂದ ಜಡವಾದಂಥ ಮನಸ್ಸು ಒಂದು ಪದಾರ್ಥವನು ತೋರಿಸಲಾರದು. ಆತ್ಮ ನಿಂದ [2]ತೋರಿಸಲ್ಪಟ್ಟ[2]ಮನಸ್ಸು ಆತ್ಮನ ತೋರಿಸಲಾರದೆಂಬುದ ಹೇಳ ಬೇಕೆ? ಹಾಗಾದರೆ, ಮತ್ತೆ ಹೇಗೆಂದರೆ– ಆತ್ಮನೇ ಮನಸ್ಸಿನಿಂದಲು ಸರ್ವಪದಾರ್ಥಗಳಲ್ಲು ತೋರುತ್ತ ಇದ್ದಾನೆ. [3]ಹೀಗೆ ತೋರುವಲ್ಲಿ[3] ಮ ನಸ್ಸು ಉಪಾಧಿಮಾತ್ರವೇ ಸರಿ. ಅದು ಹೇಗೆಂದರೆ, ದೃಷ್ಟಾಂತಪೂರ್ವ ಕವಾಗಿ ನಿರೂಪಿಸುತ್ತ ಇದ್ದೇವೆ. ಆದೃಷ್ಟಾಂತವೇನೆಂದರೆ- ಸ್ಥಾಲಿಯಲಿ ತೈಲದಿಂದ ತಡವರಿಸಲ್ಪಟ್ಟಂಥ ಬತ್ತಿಯು ತಾನು ಒಳಗೆ ಇದ್ದುಕೊಂಡು ಆತೈಲಾದಿಗಳ ಹೇಗೆ ತೋರಿಸಲಿಲ್ಲವೋ, ಅಗ್ನಿತೇಜಸ್ಸಾದರೆ ಆ ಬತ್ತಿ ಯೆಂಬ ಉಪಾಧಿಯ ಸಂಗಡ ಕೂಡಿಕೊಂಡು ತಾನು ಸಾಧನಾಂತರವ ಅಪೇಕ್ಷಿಸದೆ ವಿಶೇಷವಾಗಿ ತೋರಿಕೊಂಡು ಆ ಬತ್ತಿಯನು ತೈಲವನು ಸ್ಥಾಲಿಯನು ಸಮೀಪದ ಪದಾರ್ಥಗಳನು ಹೇಗೆ ತೋರಿಸುತ್ತಿದೆಯೋ, ಹಾಗೆ ಸ್ಥಾಲಿಸ್ಥಾನವಾದಂಥ ಸ್ಥೂಲಶರೀರದಲ್ಲಿ ತೈಲಸ್ಥಾನವಾದಂಥ ಕರ್ಮದಿಂ

---

ಪಾ— 1. ಕಾರ್ಯ. 2. ಕೂಡುವಂಥ. 3. ಆತ್ಮನೇ ಮನಸ್ಸನ್ನು ಸರ್ವಪದಾ ರ್ಥಗಳನ್ನು ತೋರಿಸುತ ಇದ್ದಾನೆ. ಹೀಗೆ ತೋರಿಸುವನು.

ದ ಉದ್ದೀಪಿತವಾಗಿ ಬತ್ತಿಯು ಸ್ಥಾನವಾದ ಮನಸ್ಸು ತಾನು ತೋಱಲಾಱದೆ ಇದ್ದುಕೊಂಡು ಅನ್ಯಪದಾರ್ಥಗಳನು ತೋಱಲಾಱದೆ ಇದೆ. ಆತ್ಮನಾದರೆ ಆ ಮನಸ್ಸಿನ ಸಂಗಡ ಕೂಡಿಕೊಂಡು ತಾನು ಸಾಧನಾಂತರವ ಅಪೇಕ್ಷಿಸದೆ ವಿಶೇಷವಾಗಿ ತೋಱುಕೊಂಡು ಆ ಮನಸ್ಸನು ಆ ದೇಹೇಂದ್ರಿಯಾದಿಗಳನು ಅಂತರಂಬಾಹ್ಯಗಳಾದ ಸರ್ವಪದಾರ್ಥಗಳನು ತೋಱಿಸಿಕೊಂಡು ಇದ್ದಾನೆ. ಆಂತರವಾದ ಅಂತಃಕರಣಗಳನು ಅಂತಃಕರಣವೃತ್ತಿಗಳನು ತಿಳಿಯುವಲ್ಲಿ ಆತ್ಮ ನಿರುಪಾಧಿಕನಾಗಿಯೇ ತಿಳಿಯುತ್ತಿದ್ದಾನೆ. ಆ ಆತ್ಮನ ಸ್ವರೂಪವೇ ನಾವು ಆಗಲಾಗಿ ಸಾಧನಾಂತರನಿರಪೇಕ್ಷನಾಗಿ ಸ್ವಯಂಪ್ರಕಾಶಮಾನವಾದಂಥ ಸರ್ವಪದಾರ್ಥಾವಭಾಸಕತ್ವವು ನಮಗೆ ಸಿದ್ಧಿಸಿತು.

ಆತ್ಮನಿಗೆ ಆನಂದಸ್ವರೂಪತ್ವವು ಹೇಗೆ ? ಎಂದರೆ, ಹೇಳೇವು. [1]ನಿತ್ಯವಾಗಿ ನಿರುಪಾಧಿಕವಾದಂಥ ನಿರತಿಶಯವಾದಂಥ ಸುಖವೇ ಆನಂದವೆನಿಸುವದು. ಇದಕ್ಕೆ ಅರ್ಥ— ಸ್ರಕ್ಚಂದನಾಗಳಿಂದ ಹುಟ್ಟದೆ ಸರ್ವೋತ್ಕೃಷ್ಟವಾಗಿ ಸರ್ವದುಃಖನಿವರ್ತಕವಾದ ನಿತ್ಯವಾದ ಸುಖವು ಆನಂದವೆನಿಸುವುದು. ಯಾವ ಆನಂದವು ಸಮಸ್ತವಾದಂಥವರಿಂದಲು ಸುಷುಪ್ತಿಕಾಲದಲ್ಲಿ ಅನುಭವಿಸಪಡುತ್ತಿದೆಯೋ ಆ ಆನಂದದಲ್ಲಿ ಈ ಲಕ್ಷಣವು ಇದೆ. ಅದಂತಿರಲಿ. ಸುಷುಪ್ತಿಕಾಲದಲ್ಲ ಆನಂದವುಂಟಾಯಿತಾದರೆ, ಆ ಆನಂದದಲ್ಲಿ ಈ ಲಕ್ಷಣವುಂಟೆಂದು ಹೇಳಬಹುದು. ದುಃಖಾಭಾವಮಾತ್ರ ಹೊರತಾಗಿ ಆನಂದವು ಇಲ್ಲನಲ್ಲಾ. ಅಂಥ ಆನಂದಕ್ಕೆ ನಿರೂಪಾಧಿಕತ್ವವು ನಿರತಿಶಯಸುಖರೂಪತ್ವವು ಎಲ್ಲಿ ಬಂದಿತು ?— ಎಂದರೆ ಒರಬಹುದಲ್ಲಾ. ಅದೆಂತೆಂದರೆ ಹೇಳೇವು. ಸುಪ್ತಪ್ರರುಷನು ಆ ಸುಷುಪ್ತ್ಯವಸ್ಥೆಯಲ್ಲಿ ಸುಖವನು ಅನುಭವಿಸದೆ ಹೋದನಾದರೆ ಆಯವಸ್ಥೆಯಿಂದ ಎದ್ದ ತರುವಾಯದಲ್ಲಿ ತಾನು ಸುಖವಾಗಿ ನಿದ್ರೆ ಮಾಡಿದೆನೆಂದು ಹೇಳದೆ ಇರಬೇಕು, ದುಃಖ[2]ರಹಿತವಾಗಿ[2]ಇದ್ದೇನೆಂದು ಹೇಳಬೇಕು. ಹಾಗೆ ಹೇಳಲಿಲ್ಲವಲ್ಲಾ. ಅದಱಿಂದ ಸುಷುಪ್ತ್ಯವಸ್ಥೆಯಲ್ಲಿ ಸಮಸ್ತವಾದಂಥವರಿಗೂ ಬಂದು ಆನಂದವು ಅನುಭವಿಸಪಡುತ್ತಿದೆ. ಆ ಆನಂದದಲ್ಲಿ ನಿತ್ಯವಾಗಿ ನಿರುಪಾಧಿಕವಾಗಿ

---

ಪಾ— 1. ನಿತ್ಯನಿರುಪಾಧಿಕನಿರತಿಶಯಸುಖಸ್ವರೂಪತ್ವವು ಆನಂದಸ್ವರೂಪತ್ವವು. 2. ಸಹಿತವಾಗಿ.

ನಿರತಿಶಯವಾದ ಸುಖಸ್ವರೂಪತ್ವಕ್ಕೆ ಲಕ್ಷಣವು ಇದೆ. ಆ ಸುಖಕ್ಕೆ ನಿರು ಪಾಧಿಕತ್ವವು ಹೇಗೆ ?— ಎಂದರೆ, ಸುಖಜನಕಗಳಾದ ಸ್ರಕ್ಚಂದನಾದಿವಿಷಯಗಳು ಆ ಸುಷುಪ್ತ್ಯವಸ್ಥೆಯಲ್ಲಿ ಇಲ್ಲದೆ ಇದ್ದಹೊತ್ತಿಗೂ ಸಮಸ್ತವಾದಂಥವರಿಂದಲು ಆ ಸುಖವು ಅನುಭವಿಸಪಡುತ್ತಿದೆಯಾಗಲಾಗಿ ಆ ಸುಖಕ್ಕೆ ನಿರೂಪಾಧಿಕತ್ವವಿದೆಯಲ್ಲಾ. ಆ ಸುಖಕ್ಕೆ ನಿರತಿಶಯತ್ವ ಹೇಗೆ ? ಎಂದರೆ- ಸಮಸ್ತ ವಿಷಯಜನ್ಯಗಳಾದಂಥ ಸುಖಗಳೊಳಗೆ ಉತ್ಕೃಷ್ಟವಾದ ಸ್ತ್ರೀಸಂಭೋಗದಲ್ಲಿ ವಿರಸ ಹುಟ್ಟಿ ಸಮಸ್ತ ಪ್ರಾಣಿಗಳು ಆ ಸುಖವನು ತ್ಯಜಿಸಿ ಪ್ರತಿದಿನವು ಆ ಸುಷುಪ್ತಿಸುಖವನು ಅಪೇಕ್ಷಿಸುತ್ತಿದ್ದಾರಾಗಲಾಗಿ ಆ ಸುಖಕ್ಕೆ ವಿಘ್ನಮಾಡಿದಂಥವರನು ಶಿಕ್ಷಿಸುತ್ತಿದ್ದಾರೆಯಾಗಲಾಗಿಯು ಆ ಸುಷುಪ್ತಿಸುಖಕ್ಕೆ ನಿರತಿಶಯವು ಇದೆ. ಇಷ್ಟುಮಾತ್ರವಲ್ಲಾ. ಜಾಗ್ರತ್ಸ್ವಪ್ನಗಳಲ್ಲಿ ತೋಉವಂಥ ಆಧ್ಯಾತ್ಮಿಕ ಆಧಿಭೌತಿಕ ಆಧಿದೈವಿಕಗಳಾದ ಸಮಸ್ತ ದುಃಖಗಳನು ಹೋಗಿಸುತ್ತಿದೆಯಾದುದಱಿಂದಲು ಆ ಸುಷುಪ್ತಿಸುಖಕ್ಕೆ ನಿರತಿಶಯತ್ವವಿದೆಯಲ್ಲಾ. ಆ ಸುಷುಪ್ತಿಸುಖಕ್ಕೆ ನಿತ್ಯತ್ವವು ಹೇಗೆ?—ಎಂದರೆ, ಜಾಗ್ರತ್ಸ್ವಪ್ನಗಳಲ್ಲಿ ಅನುಭವಿಸಪಟ್ಟಂಥ ಸಮಸ್ತ ವಿಷಯದುಃಖಗಳನು ಹೇಗೆ ಅನೇಕರೂಪಗಳಾಗಿ ಅನುಭವಿಸಪಡುತ್ತಿದೆಯೋ ಹಾಗೆ ಈ ಸುಷುಪ್ತಿಸುಖಗಳನು ಅನೇಕರೂಪವಾಗಿ ಅನುಭವಿಸಪಡದೆ ಪ್ರತಿ ಸುಷುಪ್ತಿಯಲ್ಲೂ ಏಕರೂಪವಾಗಿ ಅನುಭವಿಸಪಡುತ್ತಿದೆಯಾದ ಕಾರಣ ಆಸುಷುಪ್ತಿಸುಖಕ್ಕೆ ನಿತ್ಯತ್ವವು ಇದೆ. ಅದಂತಿರಲಿ. ಈ ಸುಷುಪ್ತಿಸುಖವು ನಿತ್ಯವಾದರೆ ಜಾಗ್ರತ್ಸ್ವಪ್ನಗಳಲ್ಲು ತೋಱಬೇಕು, ತೋಱಲಿಲ್ಲವಾಗಿ ಆ ಸುಷುಪ್ತಿಸುಖಕ್ಕೆ ನಿತ್ಯತ್ವವನ್ನು ಹೇಗೆ ಹೇಳದಿರಿ ? ಎಂದರೆ- ಹೇಳಬಹುದು. ಅದೆಂತೆಂದರೆ- ಆ ಸುಷುಪ್ತಿಸುಖವು ನಿತ್ಯವಾಗಿ ಇದ್ದಹೊತ್ತಿಗೂ ದುಃಖರೂಪವಾದ ದೇಹೇಂದ್ರಿಯಾದಿಸಂಪರ್ಕದಿಂದ ಆ ಸುಷುಪ್ತಿಸುಖವು ಜಾಗ್ರತ್ಸ್ವಪ್ನಗಳಲ್ಲಿ ತಿರೋಧಾನವಾಗಿ ಇದೆಯಾಗಲಾಗಿ ತೋಱಲಿಲ್ಲವಲ್ಲಾ. ಅದಂತಿರಲಿ. ಆತ್ಮಕಾರ್ಯಗಳಾದಂಥ ದೇಹೇಂದ್ರಿಯಾದಿಗಳಿಂದ ಕಾರಣಭೂತವಾದಂಥ, ಆತ್ಮಸುಖಕ್ಕೆ ತಿರೋಧಾನ ಹೇಗೆ ಕೂಡುವುದೆಂದರೆ ಕೂಡುವುದು. ಅದೆಂತೆಂದರೆ- ಅಗ್ನಿಗೆ ಪ್ರಕಾಶರೂಪತ್ವವು ಸ್ವತಸ್ಸಿದ್ಧವಾಗಿ ಇದ್ದಹೊತ್ತಿಗು ಸ್ವಕಾರ್ಯವಾದಂಥ ಧೂಮದಿಂದ

ಆದಿತ್ಯಪ್ರಕಾಶಕ್ಕೆ ತಿರೋಧಾನವು ಹೇಗೆ ಬರುತ್ತಿದೆಯೋ ಹಾಗೆ ಆತ್ಮನಿನಿಗೂ ಸರ್ವಥಾ ಸುಖಸ್ವರೂಪತ್ವವು ಸ್ವತಸ್ಸಿದ್ಧವಾದ ಹೊತ್ತಿಗು ಆತ್ಮಕಾರ್ಯಗಳಾದಂಥ ದೇಹೇಂದ್ರಿಯಾದಿಸಂಪರ್ಕದಿಂದ ಜಾಗ್ರತ್ಸ್ವಪ್ನಗಳಲ್ಲಿ ಆ ಸುಖಕ್ಕೆ ತಿರೋಧಾನವು ಕೂಡೀತಲ್ಲಾ. ಬಹಿರ್ಮುಖನಾದವಗೆ ಈ ಸುಷುಪ್ತಿಸುಖವು ಜಾಗ್ರತ್ಸ್ವಪ್ನಗಳಲ್ಲಿ ತೋಱದಿದ್ದಹೊತ್ತಿಗೂ, ಅಂತರ್ಮುಖನಾದವನಿಗೆ ಸರ್ವದಾ ತೋಱುವುದಲ್ಲಾ; ಅದಱಿಂದ ಈ ಸುಷುಪ್ತಿಸುಖವು ಕಾಲತ್ರಯದಲ್ಲು ಇದೆಯಾದಕಾರಣ ಈ ಸುಖಕ್ಕೆ ನಿತ್ಯತ್ವವೂ ನಿರುಪಾಧಿಕತ್ವವೂ ನಿರತಿಶಯಸುಖಸ್ವರೂಪತ್ವವೂ ಸರ್ವದಾ ಸಿದ್ಧಿಸಿ ಇದೆ.

ಆದರೆ ಈ ವಿಚಾರಕ್ಕೆ ಫಲವೇನೆಂದರೆ, ಈ ಹೇಳಪಟ್ಟಂಥ ಸದ್ರೂಪತ್ವವೂ ಚಿದ್ರೂಪತ್ವವೂ ಆನಂದರೂಪತ್ವವೂ ನಮ್ಮಲ್ಲೇ ಸಿದ್ಧಿಸಿ ಇದೆಯಾಗಲಾಗಿ ಆ ಸಚ್ಚಿದಾನಂದಸ್ವರೂಪನಾದ ಆತ್ಮ ನಾನೇ ಎಂದು ದೃಢನಿಶ್ಚಯ ಬರುವುದೇ ಈ ವಿಚಾರಕ್ಕೆ ಫಲವು.

ಶ್ಲೋ॥ ಕೇನಾಪ್ಯಬಾಧಿತತ್ವೇನ ತ್ರಿಕಾಲೇಷ್ವೇಕರೂಪತಃ ।
ವಿದ್ಯಮಾನತ್ವಮಸ್ತ್ಯೇತತ್ಸದ್ರೂಪತ್ವಂ ಸ್ವಮಾತ್ಮನಃ ॥೧॥
ಸ್ವಾರೋಪಿತಾಶೇಷಪದಾರ್ಥ- ಭಾಸಕತ್ವಮಾತ್ಮನಸ್ಸಾಧನಮಂತರೇಣ ಯತ್ ।
ವದಂತಿ ವೇದಾಂತವಿದೋ ಹಿ ತಾಂ ಸ್ವಯಂಪ್ರಕಾಶಮಾನಸ್ಯ ತು ಚಿತ್ಸ್ವರೂಪತಾಂ॥೨॥
ನಿರುಪಾಧಿಶ್ಚ ನಿತ್ಯಂ ಯಾ ಸುಷುಪ್ತಸರ್ವಸುಖಾತ್ಪರಂ ।
ಸುಖಸ್ವರೂಪತ್ವಮಸ್ತ್ಯೇತದಾನಂದತ್ವಮಾತ್ಮನಃ ॥೩॥
ಏವಂ ವಿವಿಚ್ಯ ಯೋ ವಿದ್ಯಾತ್ಸಚ್ಚಿದಾನಂದರೂಪತಾಂ ।
ಸ ಏವ ವೇತ್ತಿ ಸೋ ವಿದ್ವಾನ್ ಸಮುಕ್ತಃ ಸಚ ಪಂಡಿತಃ ॥

ಇಂತೀ ಕನ್ನಡಭಾಷೆಯೊಳ್ ವಿರಚಿಸಿದ

ವಾ ಸು ದೇ ವ ಯ ತೀ ೦ ದ್ರ ಪ್ರೋ ಕ್ತ ವ ಪ್ಪ

ವೇದಾಂತವಿವೇಕಸಾರವೆಂಬ ಗ್ರಂಥದಲ್ಲಿ

ಸಚ್ಚಿದಾನಂದಪ್ರಕರಣವೆಂಬುದಂ ಪೇಳ್ವುದು

ಏಕಾದಶಪ್ರಕರಣಂ.

# ಹನ್ನೆರಡನೆಯ ಪ್ರಕರಣಂ.

॥ ಖಂಡತ್ವವಿಚಾರ ॥

ಶ್ಲೋ ॥ ಅಖಂಡತ್ವಂ ಸದಾಸಚ್ಚಿದಾನಂದಾನಾಂ ಯಥಾಭವೇತ್ ।
ಭಿನ್ನವದ್ಗುಣವದ್ಭಿಸವಸಾನಾನಾಂ [1]ಮನ್ಯತೇ[1] ತಥಾ ॥

ಪೂರ್ವದಲ್ಲಿ ಆತ್ಮನಿಗೆ ಸಚ್ಚಿದಾನಂದಗಳನ್ನು ನಿರೂಪಿಸಿಯಾಯಿತು. ಈಗ ಆ ಸಚ್ಚಿದಾನಂದಸ್ವರೂಪನಾದ ಆತ್ಮನಿಗೆ ಅಖಂಡತ್ವವನು ನಿರೂಪಿಸುತ್ತ ಇದ್ದೇವೆ.

ಅಖಂಡತ್ವವೆಂದರೇನೆಂದರೆ— ದೇಶದಿಂದಲೂ, ಕಾಲದಿಂದಲೂ, ವಸ್ತುವಿನಿಂದಲೂ ಅಪರಿಚ್ಛಿನ್ನತ್ವವು ಅಖಂಡತ್ವವೆನಿಸುವುದು. ಆ ಅಖಂಡತ್ವಕ್ಕೆ ಈ ಮೂರು ವಿಶೇಷಣಗಳನ್ನು ಏತಕ್ಕೆ ಹೇಳಬೇಕು ? ಒಂದು ವಿಶೇಷಣವಾದರೂ ಎರಡು ವಿಶೇಷಣವಾದರೂ ಸಾಲದೇ? ಎಂದರೆ ಸಾಲದು. ಅದೆಂತೆಂದರೆ ಹೇಳೇವು. ಆತ್ಮನಿಗೆ ದೇಶದಿಂದ ಅಪರಿಚ್ಛಿನ್ನತ್ವವೇ ಅಖಂಡತ್ವವೆಂದು ಹೇಳುವಣವೆಂದರೆ, ಆಕಾಶವುವ್ಯಾಪಕವಾಗಿದೆಯಾದಕಾರಣ, ಆಕಾಶಕ್ಕೆ ದೇಶದಿಂದ ಅಪರಿಚ್ಛಿನ್ನತ್ವವು ಇದೆ. ಅದಱಿಂದ ಅದಕ್ಕೂ ಅಖಂಡತ್ವವಿರುವುದು. ಆ ಆಕಾಶಕ್ಕೆ ಅಖಂಡತ್ವವನು ನಿರಾಕರಿಸುವುದಕೋಸ್ಕರವಾಗಿ, ಕಾಲದಿಂದಲು ಅಪರಿಚ್ಛಿನ್ನತ್ವವು ಅಖಂಡತ್ವವೆಂದು ಹೇಳಿದೆವು. ಆ ಆಕಾಶಕ್ಕೆ ಕಾಲದಿಂದ ಅಪರಿಚ್ಛಿನ್ನತ್ವವು ಇಲ್ಲವೆ ? ಎಂದರೆ, ಆಕಾಶವು ಉತ್ಪತ್ತಿನಾಶವತ್ತಾಗಿ ಇದೆಯಾಗಲಾಗಿ ಅದಕ್ಕೆ ಕಾಲದಿಂದ ಅಪರಿಚ್ಛಿನ್ನತ್ವವ ಹೇಳಕೂಡದು. ಅದಱಿಂದ ಕಾಲದಿಂದಲೂ ಅಪರಿಚ್ಛಿನ್ನವೆಂಬ ಎರಡು ವಿಶೇಷಣವು ಬೇಕು. ಆದರೆ ಈ ಯೆರಡು ವಿಶೇಷಣಗಳೇ ಸಾಕೆಂದು ಹೇಳುವಣವೆಂದರೆ, ಕಾಲವು ವಿಭುವಾಗಿ ಇದೆಯಾದಕಾರಣ ದೇಶದಿಂದ ಅಪರಿಚ್ಛಿನ್ನವಾಗಿ ಇರುವುದಱಿಂದಲೂ ತನ್ನಿಂದ ತನಗೆ ಪರಿಚ್ಛೇದವು ಕೂಡದಿರುವುದಱಿಂದಲೂ ಕಾಲವು ಆ ಕಾಲದಿಂದ ಅಪರಿಚ್ಛಿನ್ನವಾಗಿ ಇದೆಯಾಗಲಾಗಿ ಅದಕ್ಕೂ ಅಖಂಡತ್ವವು ಬರುವುದು. ಅದಱಿಂದ ಕಾಲಕ್ಕೆ ಅಖಂಡತ್ವವನು ತಳ್ಳುವುದಕೋಸ್ಕರವಾಗಿ ವಸ್ತು

ಪಾ— 1. ವರ್ಣ್ಯತೆ.

ವಿನಿಂದಲೂ ಅಪರಿಚ್ಛಿನ್ನತ್ವವೆಂಬಂಥ ಮೂಱನೆಯ ವಿಶೇಷಣವು ಬೇಕಾಯಿತು. ಕಾಲಕ್ಕೆ ವಸ್ತುವಿನಿಂದ ಅಪರಿಚ್ಛಿನ್ನತ್ವವಿಲ್ಲವೆ? ಎಂದರೆ, ಕಾಲವು ಆಕಾಶಾದಿಗಳಲ್ಲವಾದಕಾರಣ ಕಾಲಕ್ಕೆ ವಸ್ತುವಿನಿಂದ ಅಪರಿಚ್ಛಿನ್ನತ್ವವು ಇಲ್ಲವಾದುದಱಿಂದ ಆತ್ಮನಿಗೆ ಹೊಱತಾಗಿ ಕಾಲಾಕಾಶಾದಿಗಳಗೆ ತ್ರಿವಿಧಪರಿಚ್ಛೇದಶೂನ್ಯವಾದಂಥ ಅಖಂಡತ್ವವು ಕೂಡದೇ ಸರಿ. ಅದಂತಿರಲಿ. "ನಾನು ಈ ದೇಶದಲ್ಲಿದ್ದೇನೆ, ಆ ದೇಶದಲ್ಲಿ ಇರಲಿಲ್ಲ" ವೆಂದು ದೇಶದಿಂದಲೂ, "ನಾನು ಪ್ರಭವಸಂವತ್ಸರದಲ್ಲಿ ಹುಟ್ಟಿದೆನು. ಕೆಲವು ಕಾಲದ ಮೇಲೆ ನಾನು ಇಲ್ಲದೆ ಹೋಗುತ್ತಿದ್ದೇನೆ" ಯೆಂದು ಕಾಲದಿಂದಲೂ, "ನಾನು ಪೃಥ್ವ್ಯಾದಿಗಳು ಅಲ್ಲ" ವೆಂದು ವಸ್ತುವಿನಿಂದಲೂ ಪರಿಚ್ಛಿನ್ನನಾಗಿ ತೋಱುವ ಆತ್ಮನಿಗೆ ತ್ರಿವಿಧಪರಿಚ್ಛೇದಶೂನ್ಯತ್ವವು ಹೇಗೆ ಕೂಡುವುದು? ಎಂದರೆ— "ನಾನು ಈ ದೇಶದಲ್ಲಿದ್ದೇನೆ; ನಾನು ಈ ಕಾಲದಲ್ಲಿ ಹುಟ್ಟಿದ್ದೇನೆ, ಈ ವಸ್ತುವು ನಾನು ಅಲ್ಲ" ವೆಂದು ಈ ತ್ರಿವಿಧಪರಿಚ್ಛೇದವು ಅಧ್ಯಾಸದಿಂದ ದೇಹವನು ಅಪೇಕ್ಷಿಸಿ ಬರುತ್ತಿದೆಯಾದಕಾರಣ ದೇಹವ್ಯತಿರಿಕ್ತನಾದಂಥ ಆತ್ಮನಿಗೆ ದೇಶಕಾಲವಸ್ತುಗಳಿಂದ ಅಪರಿಚ್ಛಿನ್ನತ್ವವು ಕೂಡಿತು. ಹಾಗಾದರೆ ಆತ್ಮನಿಗೆ ದೇಶದಿಂದ ಅಪರಿಚ್ಛಿನ್ನತ್ವವು ಹೇಗೆ? ಎಂದರೆ–ಘಟಸ್ಸನ್, ಪಟಸ್ಸನ್ ಕುಡ್ಯಸ್ಸನ್, ಕುಸೂಲಸ್ಸನ್, ಪೃಥ್ವೀಸತೀ, ಆಪಃಸತ್ಯಃ, ತೇಜಃಸತ್, ವಾಯುಸ್ಸನ್, ಆಕಾಶಸ್ಸನ್ ಆಗಿ, ಭೂತಭೌತಿಕವಾದಂಥ ಸಮಸ್ತ ಪ್ರಪಂಚದಲ್ಲೂ ಸದ್ರೂಪನಾದಂಥ ಆತ್ಮನಿಗೆ ಅನಿವೃತ್ತಿ ಇದೆಯಾದಕಾರಣ ಆತ್ಮನು ವ್ಯಾಪಕನಾಗಿ ಇದ್ದಾನೆ. ಅದಱಿಂದ †ಈ ವ್ಯಾಪಕನಾಗಿ ತೋಱುವಂಥ ಆತ್ಮನಿಗೆ ಭ್ರಾಂತಿಯಿಂದದು ಪ್ರಸಕ್ತ

† ಇಲ್ಲಿಂದ ೧೦೧ ನೆಯ ಪುಟದವರೆಗೆ ಬಂದು ಪ್ರತಿಯಲ್ಲಿ ಈ ರೀತಿ ಪಾಠವಿದೆ:— ಈ ವ್ಯಾಪಕನಾಗಿದ್ದಂಥ ಆತ್ಮಗೆ ದೇಶದಿಂದ ಅಪರಿಚ್ಛಿನ್ನವದೆ. ಆದರೆ ಕಾಲದಿಂದ ಅಪರಿಚ್ಛಿನ್ನತ್ವಹೇಗೆ, ಎಂದರೆ– ಆತ್ಮ ಅನಾದಿಯಿಂದ ಇದ್ದಾನಾಗಿ ಭೂತಕಾಲದಿಂದಲೂ ಆ ಆತ್ಮನಿಗೆ ಪರಿಚ್ಛಿನ್ನತ್ವವು ಇಲ್ಲ, ನಿತ್ಯನಾಗಿ ಇದ್ದಾನಾಗಿ ಭವಿಷತ್ಕಾಲದಿಂದಲೂ ಆತ್ಮನಿಗೆ ಪರಿಚ್ಛೇದವು ಇಲ್ಲ. ದೇಹಾದಿವ್ಯತಿರಿಕ್ತನಾಗಿ ಇದ್ದಾನಾಗಿ ವರ್ತಮಾನಕಾಲದಿಂದಲೂ ಆತ್ಮನಿಗೆ ಪರಿಚ್ಛೇದತ್ವವು ಇಲ್ಲ. ಆದರೆ ಆತ್ಮನಿಗೆ ವಸ್ತುವಿನಿಂದ ಅಪರಿಚ್ಛಿನ್ನತ್ವವು ಹೇಗೆ? ಎಂದರೆ, ಆತ್ಮಾಸರ್ವಾತ್ಮನಾಗಿ ಇದ್ದಾನಾಗಿ ವಸ್ತುವಿನಿಂದ

ವಾಯಿತು. ಅದೆಂತೆಂದರೆ, ಹೇಳೇವು. "ಈ ದೇಶದಲ್ಲಿ ಇದ್ದೆನು, ಆ ದೇಶದಲ್ಲಿ ಇರಲಿಲ್ಲ" ಎಂದು ದೇಶದಿಂದಲೂ, "ನಾನು ಈ ಸಂವತ್ಸರದಲ್ಲಿ ಹುಟ್ಟಿದೆನು. ಇನ್ನುಮೇಲೆ ನಾನು ಇಲ್ಲದೆ ಹೋಗುತ್ತಿದ್ದೇನೆ" ಎಂದು ಕಾಲದಿಂದಲೂ, "ಈ ವಸ್ತುವು ನಾನಲ್ಲ ಆವಸ್ತುವು ನಾನು ಅಲ್ಲ" ಎಂದು ವಸ್ತುವಿನಿಂದಲೂ, ಆತ್ಮನು ಪರಿಚ್ಛಿನ್ನನಾಗಿ ತೋರುತ್ತ ಇದ್ದಾನೆ. ಭ್ರಾಂತಿಯಿಂದ ತೋರುವಂಥ ಈ ಪರಿಚ್ಛಿನ್ನತ್ವವು ವಿಚಾರಿಸಿದರೆ ಇಲ್ಲದೆ ಹೋಗುತ್ತಿದೆ. ಅದೆಂತೆಂದರೆ ಹೇಳೇವು. ಆತ್ಮನು ವ್ಯಾಪಕನಾಗಿ ಇದ್ದಾನೆಯಾದಕಾರಣ ಆತ್ಮನಿಗೆ ದೇಶದಿಂದ ಪರಿಚ್ಛಿನ್ನತ್ವವು ಇಲ್ಲ. ಆತ್ಮನು ನಿತ್ಯನಾಗಿ ಇದ್ದಾನೆಯಾಗಲಾಗಿ ಆತ್ಮನಿಗೆ ಕಾಲದಿಂದ ಪರಿಚ್ಛಿನ್ನತ್ವವು ಇಲ್ಲ. ಆತ್ಮನು ಸರ್ವಾತ್ಮನಾಗಿ ಇದ್ದಾನೆಯಾಗಲಾಗಿ ಆತ್ಮನಿಗೆ ವಸ್ತುವಿನಿಂದಲೂ ಪರಿಚ್ಛಿನ್ನತ್ವವಿಲ್ಲ. ಅದಂತಿರಲಿ. ಆತ್ಮನಿಗೆ ತ್ರಿವಿಧ ಪರಿಚ್ಛೇದಶೂನ್ಯತ್ವವು ಅಪರಿಚ್ಛಿನ್ನತ್ವವೆಂದು ಏತಕ್ಕೆ ಹೇಳಬೇಕು ? ದೇಶದಿಂದ ಪರಿಚ್ಛೇದರಾಹಿತ್ಯವೇ ಅಪರಿಚ್ಛಿನ್ನತ್ವವೆಂದು ಹೇಳುವಣವೆಂದರೆ— ದೇಶದಿಂದ ಪರಿಚ್ಛೇದರಾಹಿತ್ಯವು ಆಕಾಶಕ್ಕೂ ಇದೆಯಾದ ಕಾರಣ ಅದಕ್ಕೆ ಅಪರಿಚ್ಛಿನ್ನತ್ವ ಬರುವುದು. ಅದಕ್ಕೆ ಅಪರಿಚ್ಛಿನ್ನತ್ವವ ತಳ್ಳುವುದಕೋಸ್ಕರವಾಗಿ ಆತ್ಮನು ಕಾಲದಿಂದಲೂ ಪರಿಚ್ಛೇದರಹಿತನೆಂದು ಅಂಗೀಕರಿಸಬೇಕು. ಆದರೆ ಆಕಾಶಕ್ಕೆ ಕಾಲದಿಂದ ಪರಿಚ್ಛಿನ್ನತ್ವವುಂಟೆ ? ಎಂದರೆ— ಆಕಾಶಕ್ಕೆ ಉತ್ಪತ್ತಿನಾಶಗಳು ಶ್ರುತಿಯಲ್ಲಿ ಹೇಳಪಟ್ಟಿದೆಯಾ

---

ಲೂ ಆತ್ಮನಿಗೆ ಪರಿಚ್ಛೇದತ್ವವು ಇಲ್ಲ. ವಸ್ತುವು ಏನು? ಎಂದರೆ—ಸಜಾತೀಯುವೆನುತಲೂ, ವಿಜಾತೀಯುವೆನುತಲೂ, ಸ್ವಗತವೆನುತಲೂ ಮೂರು ವಿಧವಾಗಿರುವುದು. ಈ ಮೂರುವಿಧವಾದ ಸಜಾತೀಯ ವಿಜಾತೀಯ ಸ್ವಗತಗಳೇನು? ಎಂದರೆ— ದೃಷ್ಟಾಂತಪೂರ್ವಕವಾಗಿ ನಿರೂಪಿಸುತ್ತೇವೆ. ವೃಕ್ಷಕ್ಕೆ ವೃಕ್ಷಾಂತರವು ಸಜಾತೀಯುವು, ಶಿಲಾದಿಗಳು ವಿಜಾತೀಯುವು, ಪತ್ರ ಪುಷ್ಪ ಫಲಾದಿಗಳು ಸ್ವಗತವು. ಹಾಗೆ ಆತ್ಮಗೆ ಸಜಾತೀಯುವು ವಿಜಾತೀಯುವು ಸ್ವಗತಭೇದವು ಇಲ್ಲ. ಈ ಮೂರು ಇಲ್ಲದೆ ಇದ್ದುದರಿಂದ ಆತ್ಮಗೆ ಸಜಾತೀಯ ವಿಜಾತೀಯ ಸ್ವಗತಭೇದವು ಇಲ್ಲ. ಹಾಗೆ ಹೇಳಕೂಡದು. ಘಟಸೃಷ್ಟಿ, ಪಟಸೃಷ್ಟಿ ಕುಡ್ಯಸೃಷ್ಟಿ, ಕುಸೂಲಸೃಷ್ಟಿ, ದೇವದತ್ತಾತ್ಮ, ಯಜ್ಞದತ್ತಾತ್ಮ, ಚೈತ್ರಾತ್ಮ, ಮೈತ್ರಾತ್ಮ ಎಂದು ಸಜಾತೀಯುವು, ವಿಜಾತೀಯುಭೇದವು; ಪೃಥ್ವಿಯೆನುತಲು, ಅಪ್ಪು ಎನುತಲು, ತೇಜಸ್ಸುಎನುತಲು, ವಾಯುವೆನುತಲು, ಆಕಾಶವೆನುತಲು, ಘಟಪಟ

ಗಲಾಗಿ ಕಾಲದಿಂದ ಆಕಾಶಕ್ಕೆ ಪರಿಚ್ಛಿನ್ನತ್ವವುಂಟು. ಹಾಗಾದರೆ ದೇಶದಿಂದಲೂ ಕಾಲದಿಂದಲೂ ಪರಿಚ್ಛೇದರಾಹಿತ್ಯವೇ ಅಪರಿಚ್ಛಿನ್ನತ್ವವೆಂದು ಹೇಳುವಣವೆಂದರೆ– ಕಾಲಕ್ಕೆ ದೇಶದಿಂದಲೂ ತನ್ನಿಂದಲೂ ಪರಿಚೇದರಾಹಿತ್ಯವು ಇದೆಯಾದಕಾರಣ ಅದಕ್ಕೂ ಅಪರಿಚ್ಛಿನ್ನತ್ವ ಬರುವುದು. ಅದಕ್ಕೆ ಅಪರಿಚ್ಛಿನ್ನತ್ವವ ತಳ್ಳುವುದಕೋಸ್ಕರ ವಸ್ತುವಿನಿಂದಲೂ ಪರಿಚ್ಛೇದರಾಹಿತ್ಯವೇ ಅಪರಿಚ್ಛಿನ್ನತ್ವವೆಂದು ಅಂಗೀಕರಿಸಬೇಕು. ಹಾಗಾದರೆ ಕಾಲಕ್ಕೆ ವಸ್ತುವಿನಿಂದ ಪರಿಚ್ಛಿನ್ನತ್ವವುಂಟೆ? ಎಂದರೆ, ಕಾಲವು ಆಕಾಶಾದಿವಸ್ತುವಲ್ಲವಾದಕಾರಣ ಕಾಲಕ್ಕೆ ವಸ್ತುವಿನಿಂದ ಪರಿಚ್ಛಿನ್ನತ್ವವುಂಟು. ಹಾಗೆ ಹೇಳಿದ್ದಾದರೆ ಆತ್ಮನಿಗೂ ವಸ್ತುವಿನಿಂದ ಪರಿಚ್ಛಿನ್ನತ್ವವು ತೋರುತ್ತಿದೆ. ಅದೆಂತೆಂದರೆ ಹೇಳೇವು. ಆತ್ಮನು ವ್ಯಾಪಕನಾಗಿ ಇದ್ದಾನೆಯಾಗಲಾಗಿ ಆತ್ಮನಿಗೆ ದೇಶದಿಂದ ಪರಿಚ್ಛೇದರಾಹಿತ್ಯವಿದ್ದರೊತ್ತಿಗೂ ಆತ್ಮನು ಆಕಾಶಾದಿವಸ್ತುವಲ್ಲವಾಗಲಾಗಿ ಆತ್ಮನಿಗೆ ವಸ್ತುವಿನಿಂದ ಪರಿಚ್ಛಿನ್ನತ್ವವು ತೋರುತ್ತಿದೆ ಎಂದು ಹೇಳಿಕೆಯಾದರೆ ಅದಱಿಂದ ಆತ್ಮನಿಗ ಪರಿಚ್ಛಿನ್ನತ್ವವಿಲ್ಲ. ಅದೆಂತೆಂದರೆ ಹೇಳೇವು. ಆಕಾಶವು ಕಾಲವೇ ಎನುತಲೂ, ವಾಯುವು ಕಾಲವೇ ಎನುತಲೂ, ತೇಜಸ್ಸು ಕಾಲವೇ ಎನುತಲೂ, ಅಪ್ಪು ಕಾಲವೇಎನುತಲೂ, ಪೃಥಿವಿಯು ಕಾಲವೆ ಎನುತಲೂ ವ್ಯವಹಾರವಿಲ್ಲವಾಗಲಾಗಿಯೂ, ಕಾಲವನು ಉಪಜೀವಿಸಿಕೊಂಡು ಆಕಾಶಾದಿಗಳು ಇರಲಿಲ್ಲವಾಗಿಯೂ, ಆಕಾಶದೋಪಾದಿಯಲ್ಲಿ ಕಾಲವು ಅವಿದ್ಯಾ

---

ಕುಡ್ಯಕುಸೂಲಾದಿಗಳು ಎಂದೂ ವಿಜಾತೀಯ ಸಜಾತೀಯುವು, ಈ ಭೇದವು,–ಇಚ್ಛಾದ್ವೇಷ ಸುಖದುಃಖ ಸತ್ವರಜತಮವೆಂಬ ಸ್ವಗತಗಳು ಸ್ವಗತಭೇದಗಳು ಆತ್ಮಗೆ ಇದ್ದೀತಾಗಿ ಸಜಾತೀಯ ವಿಜಾತೀಯ ಸ್ವಗತಭೇದವು ಇಲ್ಲಾ, ಎಂದು ಹೇಗೆ ಹೇಳಿದಿರಿ? ಎಂದರೆ–ಆತ್ಮಗೆ ಸಜಾತೀಯಭೇದಗಳು ಉಪಾಧಿಯಿಂದ ಬಂದವೆಯಾಗಿ ಪರಮಾರ್ಥತಃ ಸಜಾತೀಯ ವಿಜಾತೀಯ ಸ್ವಗತಭೇದವು ಇಲ್ಲವೆಂದು ಹೇಳಹುದು. ಸಜಾತೀಯ ಭೇದವು ಹೇಗೆ ಇಲ್ಲವೆಂದರೆ– ಒಂದು ಆಕಾಶವೇ ಘಟಪಟಕುಡ್ಯಕುಸೂಲವನವೃಕ್ಷಾದ್ಯುಪಾಧಿಗಳಿಂದ ಘಟಾಕಾಶವೆನುತಲೂ, ಪಟಾಕಾಶವೆನುತಲೂ, ಕುಡ್ಯಾಕಾಶವೆನುತಲೂ, ಕುಸೂಲಾಕಾಶವೆನುತಲೂ, ವನಾಕಾಶವೆನುತಲೂ, ವೃಕ್ಷಾಕಾಶವೆನುತಲೂ ಅನೇಕವಾಗಿ ಹೇಗೆ ವ್ಯವಹರಿಸಲ್ಪಡುತ್ತದೆಯೋ ಹಾಗೆ ಆತ್ಮ ಉಚ್ಚಾವಚವಾದ ಶರೀರೋಪಾಧಿಗಳಿಂದ ಅನೇಕಾತ್ಮವಾಗ ದೇವದತ್ತನೆನುತಲೂ, ಯಜ್ಞದತ್ತನೆನುತಲೂ, ವಿಷ್ಣುವೆ

ಪರಿಣಾಮವಾಗಲಾಗಿಯೂ, ವ್ಯವಹಾರದಲ್ಲಿ ಆಕಾಶಾದಿಗಳೂ ಕಾಲವೂ ಭಿನ್ನಸತ್ತಾಕಗಳಾಗಿಯೇ ತೋರುತ್ತವೆ. ಅದರಿಂದ ಘಟಾದಿಗಳಿಂದ ಘಟಗಳಿಗೆ ಪರಿಚ್ಛಿನ್ನತ್ವವು ಹೇಗೆ ಪ್ರತ್ಯಕ್ಷವೋ, ಹಾಗೆ ಆಕಾಶಾದಿಗಳಿಂದ ಕಾಲಕ್ಕೆ ಪರಿಚ್ಛಿನ್ನತ್ವವು ಪ್ರತ್ಯಕ್ಷವಾಗಿ ತೋರುತ್ತಿದೆ. ಆದುದರಿಂದ ವಸ್ತುವಿನಿಂದ ಕಾಲಕ್ಕೆ ಪರಿಚ್ಛಿನ್ನತ್ವವು ಆಗುತ್ತಿದೆ. ಪರಮಾರ್ಥವಾಗಿ ವಿಚಾರಿಸುವಲ್ಲಿ ಆ ಆಕಾಶದೋಪಾದಿಯಲ್ಲಿ ಆತ್ಮನಿಗೆ ಸಜಾತೀಯಭೇದವೂ ಇಲ್ಲ, ಸ್ವಗತಭೇದವೂ ಇಲ್ಲ, ವಿಜಾತೀಯಭೇದವೂ ಇಲ್ಲ. ವಿಜಾತೀಯಭೇದವು ಹೇಗೆ ಇಲ್ಲವೆಂದರೆ, ಸದ್ರೂಪನಾದಂಥ ಆತ್ಮನಿಗೆ ವಿಜಾತೀಯವಾದಂಥ ಅಸತ್ಪ್ರಪಂಚವು ತಾನು ಅಸತ್ತಾಗಿ ಇದೆಯಾದಕಾರಣ ಆ ಅಸತ್ತಾದಂಥ ಪ್ರಪಂಚದಿಂದ ಆ ಆತ್ಮನಿಗೆ ಶಶವಿಷಾಣವಂಧ್ಯಾಪುತ್ರಗಗನಾರವಿಂದಗಳೋಪಾದಿಯಲ್ಲಿ ವಿಜಾತೀಯಭೇದವು ಇಲ್ಲ. ಸ್ವಗತಭೇದವು ಹೇಗೆ ಇಲ್ಲವೆಂದರೆ– ಇಚ್ಛಾದ್ವೇಷಸುಖದುಃಖಗಳೆಲ್ಲವೂ ಅಂತಃಕರಣನಿಷ್ಠವಾಗಿ ತೋರುತ್ತಿದೆಯಾದಕಾರಣ ಆತ್ಮನಿಗೆ ಗುಣವಲ್ಲ. ಆದುದರಿಂದ ಇಚ್ಛಾದ್ವೇಷಾದಿಗುಣಗಳಿಂದ ಸಚ್ಚಿದಾನಂದಮಾತ್ರಸ್ವರೂಪನಾದಂಥ ಆತ್ಮನಿಗೆ ಸ್ವಗತಭೇದವು ಇಲ್ಲ. ಅದಂತಿರಲಿ. ಭಿನ್ನಗಳಾದ ಸಚ್ಚಿದಾನಂದಗಳಿಂದ ಆತ್ಮನಿಗೆ ಭೇದವಿಲ್ಲವೇ? ಎಂದರೆ, ಸಚ್ಚಿದಾನಂದಗಳು ಅನ್ಯೋನ್ಯಭಿನ್ನಗಳಾಯಿತಾದರೆ ಭೇದವುಂಟು; ಭಿನ್ನಗಳಲ್ಲವಾಗಲಾಗಿ ಆ ಸಚ್ಚಿದಾನಂದನಾದ ಆತ್ಮನಿಗೆ ಭೇದವು ಇಲ್ಲ.†

---

ಮುತಲೂ, ರಾಮನೆಂದೂ ತೋರುತ್ತಾನೆ. ಪರಮಾರ್ಥವ ವಿಚಾರಿಸುವಾಗ ಆ ಆಕಾಶದಹಾಗೆ ಸಜಾತೀಯ ಭೇದವು ಇಲ್ಲ. ವಿಜಾತೀಯ ಭೇದವು ಹೇಗೆ? ಎಂದರೆ, ಸದ್ರೂಪನಾಗಿರುವಂಥ ಆತ್ಮಗೆ ವಿಜಾತೀಯನಾಗಿರುವಂಥ ಅಸತ್ಪ್ರಪಂಚವು ತಾನು ಅಸತ್ತಾಗಿದ್ದೀತಾಗಿ ಅಸತ್ತಾಗಿರುವಂಥ ಪ್ರಪಂಚದಿಂದ ಆತ್ಮಗೆ ಶಶವಿಷಾಣವಂಧ್ಯಾಪುತ್ರ ಗಗನಾರವಿಂದಗಳ ಹಾಗೆ ವಿಜಾತೀಯಭೇದವಿಲ್ಲ. ಸ್ವಗತ ಭೇದವು ಹೇಗೆ? ಎಂದರೆ– ಇಚ್ಛಾದ್ವೇಷ ಸುಖದುಃಖಗಳೆಲ್ಲಾ ಅಂತಃಕರಣನಿಷ್ಠನಾಗಿ ತೋರುತ್ತದೆಯಾಗಿ ಆತ್ಮ ಗುಣಗಳು ಅಲ್ಲವಾಗಿ ಆ ಇಚ್ಛಾದಿಗುಣಗಳಿಂದ ಸಚ್ಚಿದಾನಂದಮಾತ್ರ ಸ್ವರೂಪನಾದಂಥ ಆತ್ಮಗೆ ಸ್ವಗತಭೇದವು ಇಲ್ಲ. ಹಾಗಾದರೆ ಭಿನ್ನವಾಗಿರುವಂಥ ಸಚ್ಚಿದಾನಂದಗಳಿಂದ ಆತ್ಮಗೆ ಭೇದವಿಲ್ಲವೆ ? ಎಂದರೆ, ಸಚ್ಚಿದಾನಂದಗಳು ಅನ್ಯೋನ್ಯ ಭೇದವಾದರೆ ಭೇದವುಂಟು; ಭಿನ್ನವಿಲ್ಲವಾಗಿ ಆಸಚ್ಚಿದಾನಂದಗಳಿಂದ ಆತ್ಮಗೆ ಭೇದವಿಲ್ಲ.

ಅದಂತಿರಲಿ. ಸತ್ತುಯೆನುತಲೂ ಚಿತ್ತುಯೆನುತಲೂ ಆನಂದವೆನುತಲೂ ಅರ್ಥಭೇದವು ಇದೆಯಾಗಲಾಗಿಯೂ ಹಸ್ತಕರಪಾಣಿಶಬ್ದಗಳಹಾಗೆ ಪರ್ಯಾಯಶಬ್ದಗಳಲ್ಲವಾಗಲಾಗಿಯೂ, ಸಚ್ಚಿದಾನಂದಗಳಿಗೆ ಏಕಾರ್ಥತ್ವವು ಹೇಗೆ ಕೂಡುವುದು ? ಎಂದರೆ, ಕೂಡೀತು. ಅದು ಹೇಗೆ ಕೂಡುವುದೆಂದರೆ, ದೃಷ್ಟಾಂತಪೂರ್ವಕವಾಗಿ ನಿರೂಪಿಸುತ್ತ ಇದ್ದೇವೆ. ಆ ದೃಷ್ಟಾಂತವೇನೆಂದರೆ— ರೋಹಿತವೆನುತಲೂ ಉಷ್ಣವೆನುತಲೂ ಪ್ರಕಾಶವೆನುತಲೂ ಶಬ್ದದಿಂದಲೂ ಅರ್ಥದಿಂದಲೂ ಬಿನ್ನಗಳ ಹಾಗೆ ವ್ಯವಹರಿಸಲ್ಪಟ್ಟ ಹೊತ್ತಿಗೂ ಹಸ್ತಕರ ಪಾಣಿಶಬ್ದಗಳ ಹಾಗೆ ಪರ್ಯಾಯಶಬ್ದಗಳು ಅಲ್ಲವಾಗಲಾಗಿಯೂ ಈರೋಹಿತೋಷ್ಣಪ್ರಕಾಶಗಳು ದೀಪಗಳಿಗೆ ಸ್ವರೂಪವಾಗಿದೆಯಾಗಲಾಗಿಯೂ ಈ ರೋಹಿತಾದಿಗಳು ಹೇಗೆ ಪರಸ್ಪರಭಿನ್ನಗಳು ಅಲ್ಲವೋ, ಹಾಗೆ ಸಚ್ಚಿದಾನಂದಗಳು ಶಬ್ದದಿಂದಲೂ ಅರ್ಥದಿಂದಲೂ ಭಿನ್ನಗಳೋಪಾದಿಯಲ್ಲೇ ವ್ಯವಹರಿಸಪಟ್ಟಹೊತ್ತಿಗೂ ಹಸ್ತಕರಪಾಣಿಶಬ್ದಗಳಹಾಗೆ ಪರ್ಯಾಯಶಬ್ದಗಳಲ್ಲದೆ ಇದ್ದಹೊತ್ತಿಗೂ ಆತ್ಮನಿಗೆ ಸ್ವರೂಪವಾಗಿ ಇದೆಯಾದ ಕಾರಣ ಈ ಸಚ್ಚಿದಾನಂದಗಳಿಗೆ ಪರಸ್ಪರಭೇದವು ಇಲ್ಲ. ಅದಂತಿರಲಿ. ಸಚ್ಚಿದಾನಂದಗಳಿಗೆ ಭೇದವು ಇಲ್ಲದೆ ಇತ್ತಾದರೆ ಶ್ರುತಿಯು— ಆತ್ಮನು ಸದ್ರೂಪನೆಂದು ಇಷ್ಟುಮಾತ್ರವನೆ ಹೇಳಬೇಕು. ಹಾಗೆ ಹೇಳದೆ ಚಿದ್ರೂಪನೆನುತಲೂ ಆನಂದರೂಪನೆನುತಲೂ ಏತಕ್ಕೆ ಪೇಳಿತು ? ಭೇದವು ಇಲ್ಲದಿದ್ದರೆ ಹೀಗೆ ಹೇಳುವುದೇ ? ಎಂದರೆ ಹೇಳುವುದು. ಅದು ಹೇಗೆ ಹೇಳುವುದು ? ಎಂದರೆ— ಶ್ರುತಿಗೆ ಸಚ್ಚಿದಾನಂದಗಳಿಗೆ ಭೇದವನು ಹೇಳುವಲ್ಲಿ ತಾತ್ಪರ್ಯವಿಲ್ಲ. ಮತ್ತೆಲ್ಲಿ ತಾತ್ಪರ್ಯವೆಂದರೆ, ಆತ್ಮನಿಷ್ಠವಾದಂಥ[1] ಸತ್ತ್ವವು[1] ಅಸತ್ತಾದಂಥ ಜಗನ್ನಿಷ್ಠವಾಗಿಯೂ, ಆತ್ಮನಿಷ್ಠವಾದಂಥ ಬುದ್ಧಿಚಿತ್ತೂ ಜಡವಾದಂಥ ಬುದ್ಧಿನಿಷ್ಠವಾಗಿಯೂ, ಆತ್ಮನಿಷ್ಠವಾದಂಥ ಆನಂದವು ದುಃಖರೂಪವಾದಂಥ ಪುತ್ರಭಾರ್ಯಾದಿನಿಷ್ಠವಾಗಿಯೂ ತೋಱು ಜಗನ್ನಿಷ್ಠವಾದಂಥ ಅಸದ್ರೂಪತ್ವವು ಬುಧ್ಯಾದಿನಿಷ್ಠವಾದಂಥ ಜಡರೂಪತ್ವವು ಪುತ್ರಭಾರ್ಯಾದಿನಿಷ್ಠವಾದಂಥ ದುಃಖರೂಪತ್ವವು 'ನಾನು ಸತ್ತುಹೋಗುತ್ತಿದ್ದೇನೆ, ನಾನು ಜಡನು, ನಾನು ದುಃಖಿ'' ಎಂದು ಆತ್ಮನಿಷ್ಠವಾಗಿ ತೋ

---

ಪಾ— 1. ನಿತ್ಯವು.

ರುತ್ತ ಇದೆ. ಅದಱಿಂದ ಈ ವಿಪರೀತಭ್ರಾಂತಿಯನು ತಳ್ಳುವುದಕೋಸ್ಕರ ಆತ್ಮನು ಸದ್ರೂಪನು ಚಿದ್ರೂಪನು ಆನಂದರೂಪನೆಂದು ಶ್ರುತಿ ಹೇಳುತ್ತಿದೆಯೋ ಹೊಱತಾಗಿ, ಆತ್ಮಸ್ವರೂಪವಾದಂಥ ಸಚ್ಚಿದಾನಂದಗಳಿಗೆ ಅನ್ಯೋನ್ಯಭೇದವನ್ನು ಹೇಳುವಲ್ಲಿ ಶ್ರುತಿಗೆ ತಾತ್ಪರ್ಯವು ಇಲ್ಲ. ಇಷ್ಟುಮಾತ್ರವಲ್ಲ. ವಾದಿಗಳೆಲ್ಲರೂ ಆತ್ಮನು ಜಡಸ್ವರೂಪನೆಂದು ಅಂಗೀಕರಿಸಿ ಆತ್ಮನಿಗೆ ಸತ್ತು ಧರ್ಮವೆನುತಲೂ ಚಿತ್ತು ಗುಣಗಳೆನುತಲೂ ಹೇಳಿ ಇದ್ದಾರೆ. ಅವರುಗಳ ಮತವನ್ನು ತಳ್ಳುವುದಕೋಸ್ಕರ ಆತ್ಮನು ಸಚ್ಚಿದಾನಂದಸ್ವರೂಪನೆಂದು ಶ್ರುತಿ ಹೇಳುತ್ತ ಇದೆಯೋ ಹೊಱತಾಗಿ ಇದಕ್ಕೆ ಅನ್ಯೋನ್ಯಭೇದವನು ಹೇಳುವಲ್ಲಿ ಶ್ರುತಿಗೆ ತಾತ್ಪರ್ಯವು ಇಲ್ಲ. ಅದಱಿಂದ ಸತ್ತೇ ಚಿತ್ತು, ಚಿತ್ತೇ ಆನಂದವೆಂದು ಶ್ರುತಿತಾತ್ಪರ್ಯಪರ್ಯಾಲೋಚನದಿಂದ ಸಿದ್ಧಿಸಿತು. ಅದಂತಿರಲಿ. ಶ್ರುತಿಮಾತ್ರದಿಂದಲಷ್ಟೆ ಸತ್ತೇ ಚಿತ್ತು, ಚಿತ್ತೇ ಆನಂದವೆಂದು ಸಿದ್ಧಿಸಿತು; ಯುಕ್ತಿಯಿಂದ ಸಿದ್ಧಿಸಲಿಲ್ಲವಲ್ಲ? ಎಂದರೆ ಯುಕ್ತಿಯಿಂದಲೂ ಸತ್ತೇ ಚಿತ್ತು, ಚಿತ್ತೇ ಆನಂದವೆಂದು ಸಿದ್ಧಿಸಿ ಇದೆ. ಅದು ಹೇಗೆಂದರೆ ಹೇಳೇವು. ಸತ್ತು ತಾನೇ ತೋಱುತಿದೆಯೋ ಮತ್ತೊಂದಱಿಂದ ತೋಱಿಸಪಟ್ಟು ತೋಱುತಿದೆಯೋ ಎಂದರೆ- ತಾನೇ ತೋಱುತ್ತಿದೆಯೆಂದು ಹೇಳಬೇಕು. ಹಾಗೆ ಹೇಳಿದರೆ ಸತ್ತೇ ಚಿತ್ತೆಂದು ಸಿದ್ಧಿಸುತ್ತದೆ. ಅನ್ಯದಿಂದ ತೋಱಿಸಿಪಟ್ಟು ತೋಱುತ್ತಿದೆ ಎಂದು ಹೇಳುವಣವೆಂದರೆ- ಆದರೆ ಸದ್ವಿಲಕ್ಷಣದಿಂದ ತೋಱಿಸಪಟ್ಟು ತೋಱುತ್ತಿದೆಯೋ ಸದಂತರದಿಂದ ತೋಱಿಸಪಟ್ಟು ತೋಱುತ್ತಿದೆಯೋ ? ಎಂದು ಶಂಕೆ ಬರಲಾಗಿ ಸದ್ವಿಲಕ್ಷಣದಿಂದಲೇ ತೋಱಿಸಪಟ್ಟು ತೋಱುತ್ತಿದೆ ಎಂದು ಹೇಳುವಣವೆಂದರೆ, ಹಾಗೆ ಹೇಳಕೂಡದು. ಹಾಗೆ ಹೇಳಿದ್ದಾದರೆ ಸದ್ವಿಲಕ್ಷಣವೆಂಬುದು ಅಸತ್ತಾದಕಾರಣ ಆ ಅಸತ್ತಾದ ಸದ್ವಿಲಕ್ಷಣದಿಂದ ಸತ್ತು ತೋಱಿಸಪಟ್ಟು ತೋಱುತ್ತಿದೆ ಎಂದು ಹೇಳಕೂಡದು. ಹೀಗೆ ಹೇಳಿದ್ದಾದರೆ ಅಸತ್ತಾದಂಥ ಶಶವಿಷಾಣಗಳಿಂದಲೂ ಸತ್ತಾದಂಥ ಘಟಾದಿಗಳು ತೋಱಿಸಪಟ್ಟು ತೋಱಬೇಕು; ಹಾಗೆ ತೋಱಿಸಪಟ್ಟು ತೋಱಲಿಲ್ಲವಲ್ಲ. ಅದಱಿಂದ ಸದ್ವಿಲಕ್ಷಣವಾದ ಅಸತ್ತಿನಿಂದ ಸತ್ತು ತೋಱಿಸಪಟ್ಟು ತೋಱುತ್ತಿದೆ ಯೆಂದು ಹೇಳಕೂಡದು. ಹಾಗಾದರೆ ಸದಂತರದಿಂದ ಸತ್ತು ತೋ

ಬಿಸಪಟ್ಟು ತೋಱುತ್ತಿದೆಯೋ ಎಂದು ಹೇಳುವಣವೆಂದರೆ, ಆ ಸದಂತರವು ತಾನು ತೋಱುತ್ತ ಇದ್ದು ಕೊಂಡು ಆ ಸತ್ತನು ತೋಱುಸುತ್ತ ಇದೆಯೋ ತಾನು ತೋಱದೆ ಆ ಸತ್ತನು ತೋಱುಸುತ್ತದೆಯೋ ? ಎಂದರೆ, ತಾನು ತೋಱದೆ ಆ ಸತ್ತನು ತೋಱುಸಲಾಱದು. ಅದುಕಾರಣ ತಾನು ತೋಱು ಕೊಂಡೇ ಆ ಸತ್ತನು ತೋಱುಸುತ್ತಿದೆ ಎಂದು ಹೇಳಬೇಕು. ಹಾಗಾದರೆ ಆ ಸದಂತರವು ತಾನು ಸ್ವತಃ ತೋಱುಕೊಂಡಿದ್ದು ಆ ಸತ್ತನು ತೋಱುಸುತ್ತಿದೆಯೋ, ತಾನು ಬೇಱೆ ಸದಂತರದಿಂದ ತೋಱುಸಪಟ್ಟಿದ್ದು ಕೊಂಡು ಆ ಸತ್ತನು ತೋಱುಸುತ್ತಿದೆಯೋ ? ಎಂದರೆ– ತಾನು ಬೇಱೆ ಸದಂತರದಿಂದ ತೋಱುಸಪಟ್ಟು ಆ ಸತ್ತನು ತೋಱುಸುತ್ತಿದೆ ಎಂದು ಹೇಳಿದ್ದಾದರೆ ಆ ಸತ್ತು ಏತಱಿಂದ ತೋಱುಸಪಡುತ್ತಿದೆ, ಆಸತ್ತು ಏತಱಿಂದ ತೋಱುಸಪಡುತ್ತಿದೆ, ಎಂದು ಅನವಸ್ಥಾದೋಷವು ಬರುವುದು. ಅದಱಿಂದ ಆ ಸದಂತರವು ತಾನು ಸ್ವತಃ ತೋಱುಕೊಂಡಿದ್ದುಕೊಂಡೇ ಆ ಸತ್ತನು ತೋಱುಸುತ್ತಿದೆ ಎಂದು ಹೇಳಬೇಕು. ಅದಱಿಂದ ವೇದಾಂತದಲ್ಲಿ ಸತ್ತಾದ್ವಯವಿಲ್ಲವಾದಕಾರಣ ಯಾವ ಸತ್ತು ತಾನು ಸ್ವತಃ ತೋಱುದೆಯೋ ಆ ಸತ್ತಿಗೆ ಚಿತ್ತ್ವವು ಸಿದ್ಧಿಸಿತು. ಆ ಚಿತ್ತಾದಂಥ ಸತ್ತಿಗೆ ಆನಂದರೂಪವು ಸಿದ್ಧಿಸಲಿಲ್ಲವಲ್ಲಾ ? ಎಂದರೆ ಸಿದ್ಧಿಸಿಯಿದೆ. ಅದು ಹೇಗೆ ಸಿದ್ಧಿಸಿದೆ? ಎಂದರೆ, ಹೇಳೇವು. ಆ ಚಿತ್ತಾದಂಥ ಸತ್ತಿಗೆ ಸದ್ವ್ಯತಿರೇಕತ್ವ ಬಂದಿತೆಂದು ಹೇಳಕೂಡದು. ಹಾಗಾದರೆ ಸದ್ವಿಸತ್ತಿಗೆ ಉಪಾಧಿ ಹೊಱತಾಗಿ ಸ್ವತಃ ಸದಂತರವು ಇಲ್ಲವಾದಕಾರಣ ಸದಂತರದಿಂದ ಸದ್ವ್ಯತಿರೇಕತ್ವವು ಬಂದಿತೆಂದು ಹೇಳಕೂಡದು. ಹಾಗಾದರೆ ಸದ್ವಿಲಕ್ಷಣದಿಂದ ಸದ್ವ್ಯತಿರೇಕತ್ವವು ಬಂದಿತೆಂದು ಹೇಳುವಣವೆಂದರೆ, ಸದ್ವಿಲಕ್ಷಣವೆಂಬುದು ರಜ್ಜುಸರ್ಪದೋಷಾದಿಯಲ್ಲಿ ಅಸತ್ತಾದಕಾರಣ ಅದಱಿಂದ ಚಿತ್ತಾದಂಥ ಸತ್ತಿಗೆ ಸದ್ವ್ಯತಿರೇಕತ್ವವ ಹೇಳಲೇಕೂಡದು. ಅದಱಿಂದ ಅಚಿತ್ತಾದಂಥ ಸತ್ತಿಗೆ ಸದಂತರವು ಸದ್ವಿಲಕ್ಷಣವು ಹೊಱತಾಗಿ ಸದ್ವ್ಯತಿರೇಕತ್ವವನು ಸಂಪಾದಿಸುವಂಥ ಪದಾರ್ಥಾಂತರವು ಇಲ್ಲವಾದಕಾರಣ ಆ ಚಿತ್ತಾದಂಥ ಸತ್ತಿಗೆ ಅದ್ವಿತೀಯತ್ವವು ಸಿದ್ಧಿಸಿತೇ ಸರಿ. ಈ ಪ್ರಕಾರವಾಗಿ ಯುಕ್ತಿಯಿಂದಲು ಸತ್ತೇ ಚಿತ್ತು ಚಿತ್ತೇ ಆನಂದವೆಂದು ಸಿದ್ಧಿಸಿತು. ಅದಂತಿರಲಿ. ಶ್ರುತಿ

ಯುಕ್ತಿಗಳಿಂದಲಷ್ಟೇ ಸತ್ತೇ ಚಿತ್ತು, ಚಿತ್ತೇ ಆನಂದವೆಂದು ಸಿದ್ಧಿಸಿತು. ಅನುಭವದಿಂದ ಸಿದ್ಧಿಸಲಿಲ್ಲವಲ್ಲಾ ? ಎಂದರೆ ಅನುಭವದಿಂದಲೂ ಸತ್ತೇ ಚಿತ್ತು, ಚಿತ್ತೇ ಆನಂದವೆಂದು ಸಿದ್ಧಿಸಿ ಇದೆಯಲ್ಲಾ. ಅದು ಹೇಗೆಂದರೆ ಹೇಳೇವು. ಸುಷುಪ್ತಿಯಲ್ಲಿ ಸರ್ವಪ್ರಾಣಿಗಳಿಂದಲೂ ಒಂದು ಸುಖವು ಅನುಭವಿಸಪಟ್ಟದಾಗಿ ತೋರುತ್ತಿದೆ ಆ ಸುಖವು ಜಾಗ್ರತ್ಸ್ವಪ್ನಗಳಲ್ಲಿ ತೋರುವ ವಿಷಯಸುಖಗಳ ಹಾಗೇ ನಾನಾರೂಪಗಳಾಗಿರದೆ ಸರ್ವಸುಷುಪ್ತಿಗಳಲ್ಲೂ ಏಕರೂಪವಾಗಿ ಇದೆಯಾದಕಾರಣ ಆ ಸುಷುಪ್ತಿಸುಖವೇ ಸತ್ತುಯಿತು. ಆ ಸತ್ತಾದಂಥ ಸುಷುಪ್ತಿಸುಖಕ್ಕೆ, ಚಿದ್ರೂಪತ್ವವು ಇದೆ. ಅದೆಂತೆಂದರೆ:— ತಾನು ತೋರಿಕೊಂಡು ತನ್ನಲ್ಲಿ ಆರೋಪಿಸಪಟ್ಟಂಥ ಸರ್ವಪದಾರ್ಥಗಳನು ತೋರಿಸುತ್ತದೆಯಾಗಲಾಗಿ, ಆ ಸುಷುಪ್ತಿಸುಖಕ್ಕೆ ಚಿದ್ರೂಪತ್ವವಿದೆ ಅದೆಂತೆಂದರೆ-ಸುಷುಪ್ತಿಯಿಂದ ಎದ್ದಂಥ ಪುರುಷನಿಂದ "ನಾನು ಸುಖವಾಗಿ ನಿದ್ರೆಯ ಮಾಡಿದೆನು, ಏನೇನೂ ಅರಿಯದೆ ಇದ್ದೆನು" ಎಂದು ಒಂದು ಸುಖವು ಅಜ್ಞಾನವು ಸ್ಮರಿಸಪಡುತ್ತಿದೆ. ಈ ಸ್ಮರಣವು ಅನುಭವವಿಲ್ಲದೆ ಬರಲಾರದಾಗಿ ಸುಖವು ಅಜ್ಞಾನವು ಸುಷುಪ್ತಿಕಾಲದಲ್ಲಿ ಅನುಭವಿಸಪಟ್ಟದಾಗಿ ತೋರುತ್ತಿದೆ. ಆ ಸುಖವು ಸ್ವರೂಪವಾದುದರಿಂದ ಸುಖವು ಅನುಭವಿಸಪಡುತಿದೆ ಯೆಂಬುದರಲ್ಲಿ ಮೋಹದಿಂದ ಅಜ್ಞಾನಮಾತ್ರವೇ ಅನುಭವಿಸಪಡುತಿದೆ. ಈ ಅನುಭವಿಸಪಟ್ಟಂಥ ಅಜ್ಞಾನವು ಏತರಿಂದ ತೋರುತ್ತಿದೆ ? ಎಂದರೆ ಸುಷುಪ್ತ್ಯವಸ್ಥೆಯಲ್ಲಿ ಪ್ರಕಾಶಸಾಧಕಗಳಾದ ಆದಿತ್ಯಚಂದ್ರನಕ್ಷತ್ರವಿದ್ಯುದ್ವಹ್ನಿಚಕ್ಷುರಾದಿಗಳಿಲ್ಲದೆ ಸುಖಮಾತ್ರವೇ ಇದೆಯಾದುದರಿಂದ ಆ ಸುಖದಿಂದಲೇ ಅಜ್ಞಾನವು ತೋರಿಸಪಡುತ್ತಿದೆ ಎಂದು ಹೇಳಬೇಕು. ಆಯಜ್ಞಾನದಿಂದಲೇ ಸುಖವು ತೋರಿಸಪಡುತ್ತಿದೆ ಎಂದು ಹೇಳುವಣವೆಂದರೆ- ಆಯಜ್ಞಾನವು ಜಡವಾದ ಕಾರಣ ಅದರಿಂದ ಸುಖವು ತೋರಿಸಪಡುತ್ತಿದೆ ಎಂದು ಹೇಳಕೂಡದು. ಹಾಗಾದರೆ ಆ ಸುಖವು ತಾನು ತೋರುತ್ತ ಇದ್ದುಕೊಂಡು ಅಜ್ಞಾನವನ್ನು ತೋರಿಸುತ್ತ ಇದೆಯೋ ತಾನು ತೋರದೆ ಅಜ್ಞಾನವನು ತೋರಿಸುತ್ತಿದೆಯೋ? ಎಂದರೆ ತಾನು ತೋರದೆ ಅಜ್ಞಾನವನು ತೋರಿಸಲಾರದಾದುದರಿಂದ ತಾನು ತೋರಿಕೊಂಡೇ ಆಯಜ್ಞಾನವನು ತೋರಿಸುತ್ತ ಇದೆ.

ಆಯಜ್ಞಾನದಲ್ಲಿ ಸಮಸ್ತ ಪ್ರಪಂಚವೂ ಲೀನವಾಗಿ ಇದೆಯಾದುದರಿಂದ ಆ ಯಜ್ಞಾನವ ತೋರಿಸುವ್ರದರಿ ದ ಆ ಸುಷುಪ್ತಿಸುಖಕ್ಕೆ ಸರ್ವಪದಾರ್ಥಾವಭಾಸಕತ್ವವು ಸಿದ್ಧಿಸಿತು. ಇದೇ ಆತ್ಮನಿಗೆ ಸರ್ವಜ್ಞತ್ವವಾಗಲಾಗಿ ಸುಷುಪ್ತ್ಯವಸ್ಥೆಯಲ್ಲಿ ಸತ್ತಾದಂಥ ಸುಖಕ್ಕೆ ಚಿದ್ರೂಪತ್ವವು ಸಿದ್ಧಿಸಿತಾದುದರಿಂದ, ಇದಕ್ಕೆ ಆನಂದರೂಪತ್ವ ಹೇಗೆಂದರೆ–ನಿರುಪಾಧಿಕನಿರತಿಶಯಸುಖಸ್ವರೂಪತ್ವವು ಈ ಸುಷುಪ್ತಿಸುಖಕ್ಕೆ ಇದೆಯಾದಕಾರಣ ಇದಕ್ಕೆ ಆನಂದರೂಪತ್ವವು ಸಿದ್ಧಿಸಿತು. ಅದರಿಂದ ಅನುಭವದಿಂದಲೂ ಸತ್ತೇ ಚಿತ್ತು, ಚಿತ್ತೇ ಆನಂದವೆಂದು ಸಿದ್ಧಿಸಿತಾಗಲಾಗಿ ಸಚ್ಚಿದಾನಂದಗಳು ಆತ್ಮನಿಗೆ ಸ್ವರೂಪವಾಯಿತು. ಆ ಸ್ವರೂಪವಾದಂಥ ಸಚ್ಚಿದಾನಂದಗಳಿಂದ ಆತ್ಮನಿಗೆ ಸ್ವಗತಭೇದವು ಇಲ್ಲ. ಆತ್ಮನು ಸರ್ವಾತ್ಮಕನಾಗಿ ಇದ್ದಾನೆಯಾದಕಾರಣ ಆತ್ಮನಿಗೆ ವಿಜಾತೀಯವಾದಂಥ ಅನಾತ್ಮವು ಅಸತ್ತಾದಕಾರಣ ಆ ಅನಾತ್ಮನಿಂದ ಆತ್ಮನಿಗೆ ವಿಜಾತೀಯಭೇದವು ಇಲ್ಲ. ಆತ್ಮನಿಗೆ ಆತ್ಮಾಂತರವು ಇಲ್ಲವಾದಕಾರಣ ಸಜಾತೀಯಭೇದವು ಇಲ್ಲ. ಈ ಪ್ರಕಾರವಾಗಿ ಈ ಮೂರರಿಂದಲೂ ಆತ್ಮನಿಗೆ ಭೇದವು ಇಲ್ಲ. ಆತ್ಮನು ಸರ್ವಾತ್ಮಕನಾಗಿ ಇದ್ದಾನೆಯಾಗಲಾಗಿ ಸಜಾತೀಯವಿಜಾತೀಯಸ್ವಗತರೂಪವಾದಂಥ ವಸ್ತುವಿನಿಂದ ಆತ್ಮನಿಗೆ ಪರಿಚ್ಛೇದವು ಇಲ್ಲ. ಆತ್ಮ ವಿಭುವಾಗಿ ಇದ್ದಾನೆಯಾದುದರಿಂದ ದೇಶದಿಂದಲೂ ಆತ್ಮನಿಗೆ ಪರಿಚ್ಛೇದವು ಇಲ್ಲ. ಆತ್ಮನು ನಿತ್ಯವಾಗಿ ಇದ್ದಾನೆಯಾದಕಾರಣ ಕಾಲದಿಂದಲೂ ಆತ್ಮನಿಗೆ ಪರಿಚ್ಛೇದವಿಲ್ಲ. ಈ ಪ್ರಕಾರವಾಗಿ ಆತ್ಮನು ದೇಶದಿಂದಲೂ ಕಾಲದಿಂದಲೂ ವಸ್ತುವಿನಿಂದಲೂ ತ್ರಿವಿಧಪರಿಚ್ಛೇದಶೂನ್ಯನಾಗಿ ಇದ್ದಾನೆಯಾದಕಾರಣ ಸಚ್ಚಿದಾನಂದಸ್ವರೂಪನಾದ ಆತ್ಮನಿಗೆ ಅಖಂಡತ್ವವು ಸಿದ್ಧಿಸಿತೇ ಸರಿ.

ಹಾಗಾದರೆ ಈ ವಿಚಾರಕ್ಕೆ ಫಲವೇನೆಂದರೆ, ಸಮಸ್ತ ಪ್ರಾಣಿಗಳಿಗೂ ದೇಹವೇ ನಾನೆಂದು ದೇಹದಲ್ಲಿ ಆತ್ಮತ್ವಬುದ್ಧಿ ಬಾರದೆ ಅಖಂಡಸಚ್ಚಿದಾನಂದಸ್ವರೂಪನಾದಂಥ ಆತ್ಮನು ನಾನೆಂದು ದೃಢನಿಶ್ಚಯು ಬರುವುದೇ ಈ ವಿಚಾರಕ್ಕೆ ಫಲವೆನಿಸುವುದು.

ಈ ಪ್ರಕಾರ ವಿಚಾರಿಸಿ ಅಖಂಡಸಚ್ಚಿದಾನಂದಸ್ವರೂಪನಾದ ಆತ್ಮನು ನಾನೆಂದು ಯಾವನು ತಿಳಿಯುತ್ತಿದ್ದಾನೆಯೋ ಅವನೇ ಸರ್ವಸಂಸಾರ

ದಿಂದಲೂ ಬಿಡಲುಪಟ್ಟಂಥವನು, ಅವನೇ ಕೃತಕೃತ್ಯನು, ಅವನೇ ಪರಿಪೂರ್ಣವಾದ ಬ್ರಹ್ಮವೆಂದು ಸಕಲಶ್ರುತಿಸ್ಮೃತೀತಿಹಾಸಪುರಾಣಾಗಮಾಭಿಯುಕ್ತಚೋದ್ಯವಚನಗಳು ಘೋಷಿಸುತ್ತಿವೆ. ಈಸುರ್ಥದಲ್ಲಿ ಸಂಶಯುವಿಲ್ಲ. ಸಿದ್ಧ.

ಶ್ಲೋಕ ॥ ಭೂತಭೌತಿಕಭಾವೇಷು ಸ್ವಕಾರ್ಯೇಷು ಸದಾತ್ಮನಃ ।
ವ್ಯಾಪ್ತಿರ್ದೃಷ್ಟಾಸ್ತಿರೋಹ್ಯಾತ್ಮಾದೇಶಾನ್ನಾಸ್ಯಪರಿಚ್ಛಿತಿಃ ॥೧॥

ಅದೇಹಿತ್ವಾದನಾದಿತ್ವಾದಬಾಧತ್ವಾನ್ನ ವಿದ್ಯತೇ ।
ವರ್ತಮಾನಗತಾಗಾಮಿಕಾಲೇಭ್ಯೋಽಸ್ಯ ಪರಿಚ್ಛಿತಿಃ ॥೨॥

ಸರ್ವಾಭಿನ್ನಸ್ವರೂಪೇಣ ಸರ್ವಗತ್ವಾತ್ಸದಾತ್ಮನಃ ।
ಸರ್ವೇಭ್ಯೋವಸ್ತುಜಾತೇಭ್ಯಃ ಪರಿಚ್ಛಿತ್ತಿರ್ನವಿದ್ಯತೇ ॥೩॥

ನವ್ಯಾಪಿತ್ವಾದ್ದೇಶತೋಽಪಿನಿತ್ಯತ್ವಾನ್ನಾಪಿಕಾಲತಃ ।
ನವಸ್ತುತೋಽಪಿ ಸರ್ವಾತ್ಮ್ಯಾದಾನಂತ್ಯಂ ಬ್ರಹ್ಮಣಿತ್ರಿಧಾ ॥೪॥

ಅಖಂಡಾತ್ಮಕಮೇವಾಯಮಿತ್ಯೇವಂಯೋವಿಜಜ್ಞಿವಾನ್ ।
ಸಸರ್ವಸಂಸೃತೇರ್ಮುಕ್ತೋಬ್ರಹ್ಮಾನಂದಂ ಸಮಶ್ನುತೇ ॥೫॥

ಕಿಮ ನೇನ ಬಹೂಕ್ತೇನ ನಿರ್ಣೀತೌ ದ್ವೌ ಮಹಾತ್ಮನಃ ।
ಅವಿಚಾರಾತ್ಸಂಸಾರೋ ವಿಚಾರಾನ್ಮೋಕ್ಷಇತ್ಯಪಿ ॥೬॥

ಪ್ರಮಾದಾದಪ್ರಮಾದಾದ್ವಾಯುಗಜ್ಞಾನ್ನಯೋರಿತಂ ।
ತತ್ಸರ್ವಂತು ಸಮಾಲೋಕ್ಯ ಪಂಡಿತಾಃ ಸಮದರ್ಶಿನಃ ॥೭॥

ಇಂತೀಕನ್ನಡಭಾಷೆಯೊಳ್ ವಿರಚಿಸಿದ ವಾಸುದೇವಮುನೀಂದ್ರಪ್ರೋಕ್ತಮಪ್ಪ

ವೇದಾಂತವಿವೇಕಸಾರದಲ್ಲಿ

ಅಖಂಡತ್ವನಿರೂಪಣಮಂ ಪೇಳ್ದುದು

ದ್ವಾದಶಪ್ರಕರಣಂ.

# ಹದಿಮೂಱನೆಯ ಪ್ರಕರಣಂ†

— ಅಜ್ಞಾನಪ್ರಕರಣಂ —

ಶ್ಲೋ॥ ಯದಜ್ಞಾನ[1]ಪ್ರಭಾತೇನ ದೃಶ್ಯತೇ ಸಕಲಂ ಜಗತ್ ॥
ಯದ್ಘನಾಜ್ಞೇಯ ಆಪ್ನೋತಿ ತಸ್ಮೈಜ್ಞಾನಾತ್ಮನೇ ನಮಃ ॥

ಯಾವ ಅಜ್ಞಾನದಿಂದ ಸಮಸ್ತ ಪ್ರಾಣಿಗಳು ಜನ್ಮಮರಣಾದಿಪರಂಪರೆಯನ್ನು ಹೊಂದುತ್ತಿದ್ದಾರೆಯೋ ಆ ಅಜ್ಞಾನಸ್ವರೂಪವನ್ನು ನಿರೂಪಿಸುತ್ತ ಇದ್ದೇವೆ.

ಅಜ್ಞಾನವೇನು ? ಎಂದರೆ— ತನ್ನ ತಾನಱಿಯದೆ ಇರುವಂಥದೇ ಅಜ್ಞಾನವೆನಿಸುತ್ತದು. ತನ್ನ ತಾನಱಿಯನೆ ? ಎಂದರೆ, ಅಱಿಯನು. ಯಾರೂ ತಮ್ಮ ತಾವಱಿಯರೆ ? ಎಂದರೆ ಅಱಿಯರು. ಯಾರೂ ತಮ್ಮ ತಾವಱಿಯರು ಎಂದು ಹೇಳಬಹುದೆ ? ಎಂದರೆ, ಅಱಿಯದೆ ಇದ್ದಾರೆಯಾದಕಾರಣ ತಮ್ಮ ತಾವಱಿಯರೆಂದು ಹೇಳಬಹುವಲ್ಲ. ಆದರೆ ಮತ್ತೆ ಹೇಗೆ ಬಲ್ಲರು ? ಎಂದರೆ— ಈಪ್ರಕಾರವಾಗಿ ಬಲ್ಲರು ಯಾವ ಪ್ರಕಾರವೆಂದರೆ— ನಾನು ಮನುಷ್ಯನು ನಾನು ಸ್ತ್ರೀ. ನಾನು ಪುರುಷನು, ನಾನು ಬ್ರಾಹ್ಮಣನು, ನಾನು ಕ್ಷತ್ರಿಯನು, ನಾನು ವೈಶ್ಯ. ನಾನು ಶೂದ್ರನೆನುತಲೂ; ನಾನು ಬ್ರಹ್ಮಚಾರಿ, ನಾನು ಗೃಹಸ್ಥ, ನಾನು ವಾನಪ್ರಸ್ಥ, ನಾನು ಸನ್ಯಾಸಿ ಯೆನುತಲೂ; ನಾನು ತತ್ವವಾದಿ. ನಾನು ವೈಷ್ಣವನು, ಭಾಗವತನು, ಪೌರಾಣಿಕನು, ಶಾಸ್ತ್ರಿಯೆನುತಲೂ; ನಾನು ಕೃಷ್ಣನು, ರಾಮನು, ನಾರಾಯಣನು, ಇವರ ತಂದೆ, ಇವರ ಮಗನೆನುತಲೂ, ಈಪ್ರಕಾರವಾಗಿಬಲ್ಲರು. ಅದಂತಿರಲಿ.

ಮೊದಲು ಯಾರೂ ತಮ್ಮ ತಾವಱಿಯರೆಂದು ಹೇಳಿದೆ. ಈಗ ಈ ಪ್ರಕಾರವಾಗಿ ಬಲ್ಲರು ಎಂದು ಹೇಳುತ್ತ ಇದೆ. ಅವಱಿಂದ ಪೂರ್ವದಲ್ಲಿ

---

ಪಾ— 1. ಪ್ರಭಾವೇನ......ಯದಜ್ಞಾನಾಲ್ಲಯಮಾಪ್ನೋತಿ.

† ಇದು ಬಂದು ಪ್ರತಿಯಲ್ಲಿ ೧೪ ನೆಯ ಪ್ರಕರಣವಾಗಿ ಕೊಟ್ಟಿದೆ.

ಹೇಳಿದುದಕೂ ಈಗ ಹೇಳಿದುದಕೂ ವಿರೋಧವು ತೋರುತ್ತಿದೆ ಎಂದು ಹೇಳಿದೆಯಾದರೆ ವಿರೋಧವು ಇಲ್ಲ. ಅದು ಹೇಗೆಂದರೆ ಹೇಳೇವು. ತಾನು ಮನುಷ್ಯನು ಅಲ್ಲವಾಗಲಾಗಿ ತನ್ನನು ಬ್ರಾಹ್ಮಣನೆಂದು ತಿಳಿವಂಥದು ತಿಳುವಳಿಕೆಯಲ್ಲ. ತಾನು ಪುರುಷನಲ್ಲವಾದುದರಿಂದ ತನ್ನನು ಪುರುಷನೆಂದು ತಿಳಿವಂಥದು ತಿಳುವಳಿಕೆಯಲ್ಲ. ಅದರಿಂದ ಯಾರೂ ತನ್ನ ತಾವರಿಯರೆಂದು ಹೇಳಬಹುದಲ್ಲ. ಅದಂತಿರಲಿ. ಹಾಗೆ ಹೇಳಕೂಡದು. ಅದೆಂತೆಂದರೆ- ಮನುಷ್ಯನಾದಂಥ ತನ್ನನು ಮನುಷ್ಯನಾಗಿಯಷ್ಟೆ ತಿಳಿಯುತ್ತ ಇದ್ದಾನೆ; ಎತ್ತೆಂದು ತಿಳಿಯಲಿಲ್ಲನಲ್ಲ; ಪಿಶಾಚನೆಂದು ತಿಳಿಯಲಿಲ್ಲನಲ್ಲ; ಸ್ತ್ರೀಯಾದಂಥ ತನ್ನನು ಸ್ತ್ರೀಯೆಂದಷ್ಟೇ ತಿಳಿಯುತ್ತಿದ್ದಾಳೆ. ಪುರುಷನೆಂದು ತಿಳಿಯಲಿಲ್ಲನಲ್ಲ. ಪುರುಷನಾದಂಥ ತನ್ನನು ಪುರುಷನೆಂದಷ್ಟೆ ತಿಳಿಯುತ್ತಿದ್ದಾನೆ, ಪಿಶಾಚನೆಂದು ತಿಳಿಯಲಿಲ್ಲನಲ್ಲ. ಬ್ರಾಹ್ಮಣನಾದಂಥ ತನ್ನನು ಬ್ರಾಹ್ಮಣನೆಂದಷ್ಟೆ ತಿಳಿಯುತ್ತಿದ್ದಾನೆ; ಶೂದ್ರನೆಂದು ತಿಳಿಯಲಿಲ್ಲನಲ್ಲ. ಈ ಪ್ರಕಾರವಾಗಿ ಸಮಸ್ತವಾದಂಥವರು ತನ್ನ ತಾವು ಯಥಾರ್ಥವಾಗಿ ಅರಿತಿದ್ದರೆ ಯಾರೂ ತನ್ನ ತಾವರಿಯರೆಂದು ಹೇಗೆ ಹೇಳುವಣವೆಂದರೆ- ತಾನು ಮನುಷ್ಯನೆಂಬುದು ಸಿದ್ಧವಾಯಿತಾದರೆ, ಹೋದ ಜನ್ಮದಲ್ಲೂ ಮನುಷ್ಯನಾಗಿರಬೇಕು; ಬರುವ ಜನ್ಮದಲ್ಲೂ ಮನುಷ್ಯನಾಗಿಯೇ ಇರಬೇಕು. ಹೋದ ಜನ್ಮದಲ್ಲಿ ತಾನು ದೇವನೋ, ಯಕ್ಷನೋ, ಕಿನ್ನರನೋ, ಕಿಂಪುರುಷನೋ, ಗಂಧರ್ವನೋ, ಮನುಷ್ಯನೋ ಸ್ಥಾವರನೋ, ಜಂಗಮನೋ, ಪಿಶಾಚನೋ, ಎತ್ತೊ, ಎಮ್ಮೆಯೋ, ಕೋಣನೋ ನಾಯಿಯೋ, ನರಿಯೋ, ಎಂದು ತಿಳಿಯಪಡಲಿಲ್ಲವಾಗಲಾಗಿಯೂ ತನಗೆ ಮನುಷ್ಯತ್ವವು ಸಿದ್ಧವಾಯಿತಾದರೆ ಮೇಲೆ ದೇವಾದಿಶರೀರಗಳು ಬರಬೇಕೆಂದು ಈ ಜನ್ಮದಲ್ಲಿ ಯಾರೂ ಯಾಗೋಪಾಸನಾದಿಕ್ರಿಯೆಗಳನು ಮಾಡದೆ ಇರಬೇಕು. ಮಾಡುತಿದ್ದಾರೆಯಷ್ಟೆ; ಆದುದರಿಂದ ತನ್ನನು ಮನುಷ್ಯನೆಂದು ತಿಳಿವಂಥದು ತಿಳುವಳಿಕೆಯಲ್ಲದಷ್ಟೆ. ಈಪ್ರಕಾರವಾಗಿಯೇ ಬ್ರಾಹ್ಮಣಕ್ಷತ್ರಿಯವೈಶ್ಯಶೂದ್ರಾದಿಗಳು ತಾನು ಎಂದು ತಿಳಿವಂಥದು ತಿಳುವಳಿಕೆಯಲ್ಲವೆಂದು ತಿಳಿದುಕೊಳ್ಳತಕ್ಕದು.

ಅದಂತಿರಲಿ. ಎಲ್ಲರೂ ಈಪ್ರಕಾರವಾಗಿಯೆ ಬಲ್ಲರೇ ? ಎಂದರೆ– ಕೆಲವರು ಪಾರಲೌಕಿಕರಾದವರು ತನ್ನನು ಜೀವನೆಂದು ಬಲ್ಲರು. ಆ ಜೀವನಸ್ವರೂಪವೇನೆಂದು ಕೇಳಿದರೆ ಮತ್ತೆ ಹೇಳಲರಿಯರು. ಈಪ್ರಕಾರವಾಗಿ ತಿಳಿದವರು ತಮ್ಮ ತಾವರಿತವರಲ್ಲ. ಅದೆಂತೆಂದರೆ-- ಮನುಷ್ಯನಲ್ಲದಿರುವಂಥವ ತನ್ನನು ಮನುಷ್ಯನೆಂದು ತಿಳಿದಂಥವ ಹೇಗೆ ತಿಳಿದಂಥವನಲ್ಲವೋ, ಹಾಗೆ ಜೀವನಲ್ಲದೆ ಇರುವಂಥ ತನ್ನನು ಜೀವನೆಂದು ತಿಳಿವಂಥವನು ತಿಳಿದವನಲ್ಲ. ಅದಂತಿರಲಿ.

ಹಾಗಾದರೆ ಶಾಸ್ತ್ರಜ್ಞರಾದವರು ತಮ್ಮ ತಾವರಿಯರೆ? ಎಂದರೆ– ಅವರೂ ತಮ್ಮ ತಾವರಿಯರು. ಅದಂತಿರಲಿ.

ಶಾಸ್ತ್ರಜ್ಞರಾದವರು ಆತ್ಮಸ್ವರೂಪ ಇಂಥದೆಂದು ನಿಶ್ಚಯಿಸಿಕೊಂಡಿದ್ದಾರೆ; ಅರಿಯರೆಂದು ಹೇಗೆ ಹೇಳುವಣವೆಂದರೆ ಹೇಳಬಹುದು. ಅದೆಂತೆಂದರೆ ಹೇಳೇವು. ಶಾಸ್ತ್ರಜ್ಞರೊಳಗೆ ಚಾರ್ವಾಕನಾದಂಥವನು ಅನಾತ್ಮಸ್ವರೂಪವಾದ ಸ್ಥೂಲದೇಹವನೇ ಆತ್ಮನೆಂದು ತಿಳಿದಿದ್ದಾನಾದಕಾರಣ ಅವನು ಶಾಸ್ತ್ರಜ್ಞನಾದ ಹೊತ್ತಿಗೂ ಆತ್ಮನ ಅರಿತವನಲ್ಲ. ಮತ್ತು ಪ್ರಾಣೋಪಾಸಕರಾದಂಥ ಕೆಲವರು ಶಾಸ್ತ್ರಜ್ಞರು ಅನಾತ್ಮಸ್ವರೂಪವಾದಂಥ ಪ್ರಾಣವನ್ನೇ ಆತ್ಮನೆಂದು ಅರಿತಿದ್ದಾರಾಗಲಾಗಿ ಅವರು ಶಾಸ್ತ್ರಜ್ಞರಾದ ಹೊತ್ತಿಗೂ ಆತ್ಮನ ಅರಿತವರಲ್ಲ. ಮತ್ತೆ ಕೆಲರು ಶಾಸ್ತ್ರಜ್ಞರು ಅನಾತ್ಮವಾದ ಇಂದ್ರಿಯಗಳನೇ ಆತ್ಮನೆಂದು ತಿಳಿದಿದ್ದಾರಾದಕಾರಣ ಅವರು ಆತ್ಮನ ತಿಳಿದವರಲ್ಲ. ಮನೋಪಾಸಕರಾದ ಮತ್ತೆ ಕೆಲಬರು ಶಾಸ್ತ್ರಜ್ಞರು ಅನಾತ್ಮವಾದಂಥ ಮನಸ್ಸೇ ಆತ್ಮವೆಂದು ತಿಳಿದಿದ್ದಾರೆಯಾದಕಾರಣ ಅವರು ಶಾಸ್ತ್ರಜ್ಞರಾದ ಹೊತ್ತಿಗೂ ಆತ್ಮನ ಅರಿತವರಲ್ಲ ಮತ್ತು ಬೌದ್ಧರೊಳಗೆ ಕೆಲವರು ಶಾಸ್ತ್ರಜ್ಞರು ಅನಾತ್ಮವಾಗಿ ಕ್ಷಣಿಕವಾದ ಬುದ್ಧಿಯನೇ ಆತ್ಮನೆಂದು ತಿಳಿದು ಇದ್ದಾರೆಯಾಗಲಾಗಿ ಅವರು ಶಾಸ್ತ್ರಜ್ಞರಾದ ಹೊತ್ತಿಗೂ ಆತ್ಮನ ಅರಿತವರಲ್ಲ. ಮತ್ತು ಬೌದ್ಧರೊಳಗೆ ಶಾಸ್ತ್ರಜ್ಞರೆಂದು ಹೆಸರಿಟ್ಟುಕೊಂಡಿರುವಂಥ ಕೆಲರು ಮೂರ್ಖರು ಶಶವಿಷಾಣತುಲ್ಯವಾದ ಶೂನ್ಯವನು ಆತ್ಮನೆಂದು ತಿಳಿದಿದ್ದಾರೆಯಾಗಲಾಗಿ ಅವರು ಶಾಸ್ತ್ರಜ್ಞರಾದ ಹೊತ್ತಿಗೂ ಆತ್ಮನ ಅರಿತವರಲ್ಲ.

ಹಾಗಾದರೆ ಶಾಸ್ತ್ರಜ್ಞರಾದ ಮೀಮಾಂಸಕರು ಶೈವರು ರಾಮಾನುಜರು ಮಾಧ್ವರು ಆತ್ಮನ ಅಱಿಯುರೆ ಎಂದರೆ ಅಱಿಯುರು. ಅದೇಂತೆಂದರೆ– ಹೇಳೇವು. ಈ ಮೀಮಾಂಸಕಾದಿಗಳು ಪರಿಪೂರ್ಣನಾದ ಆತ್ಮನ ಅಣುಪರಿಮಾಣುವೆಂದು ತಿಳದಿದ್ದರೆಯಾವಕಾರಣ ಅವರು ಶಾಸ್ತ್ರಜ್ಞರಾದಹೊತ್ತಿಗೂ ಆತ್ಮನ ಅಱಿತವರಲ್ಲ.

ಹಾಗಾದರೆ ಶಾಸ್ತ್ರಜ್ಞರಾದಂಥ ತಾರ್ಕಿಕಾದಿಗಳು ಆತ್ಮನಿಗೆ ವಿಭುತ್ವವನು ಅಂಗೀಕರಿಸಿದರಲ್ಲ. ಅವರು ಆತ್ಮನ ಅಱಿಯುರೇ? ಎಂದರೆ ಅಱಿಯರು. ಅವೆಂತೆಂದರೆ ಹೇಳೇವು. ತಾರ್ಕಿಕಾದಿಗಳು ಆತ್ಮನಿಗೆ ವಿಭುತ್ವವನು ಅಂಗೀಕರಿಸಿದ ಹೊತ್ತಿಗೂ ಆತ್ಮನಿಗನೇಕಾತ್ಮವನು ಅಂಗೀಕರಿಸಿ ಇದ್ದಾರೆಯಾಗಲಾಗಿಯೂ (ಆತ್ಮನಿಗೆ ಜಡತ್ವವನು ಅಂಗೀಕರಿಸಿ ಜಡನಾಗಿರುವಂಥ ಆತ್ಮನಿಗೆ ಚಿತ್ತು ಗುಣವಾಗಿ ಅಂಗೀಕರಿಸಿ ಇದ್ದಾರೆಯಾಗಲಾಗಿಯೂ) ನಿರ್ಗುಣನಾದ ಆತ್ಮನಿಗೆ ಇಚ್ಛಾದಿಗುಣಗಳನ್ನು ಅಂಗೀಕರಿಸಿ ಇದ್ದಾರೆಯಾಗಲಾಗಿಯೂ ದೃಕ್ಕಾಗಿರುವಂಥ ಆತ್ಮನಿಗೆ ದೃಶ್ಯತ್ವವ ಅಂಗೀಕರಿಸಿ ಇದ್ದಾರೆಯಾಗಲಾಗಿಯೂ, ಅವರು ಶಾಸ್ತ್ರಜ್ಞರಾದ ಹೊತ್ತಿಗೂ ಆತ್ಮನ ಅಱಿತವರಲ್ಲ.

ಹಾಗಾದರೆ ಸಾಂಖ್ಯಯೋಗಿಗಳು ಆತ್ಮನ ಅಱಿಯುರೆ? ಎಂದರೆ ಅಱಿಯರು. ಅದೆಂತೆಂದರೆ ಹೇಳೇವು. ಸಾಂಖ್ಯಯೋಗಿಗಳು ಆತ್ಮನಿಗೆ ವಿಭುತ್ವವನು (ಸಚ್ಚಿದಾನಂದರೂಪತ್ವವನು ಅಸಂಗತ್ವವನು) ಅಂಗೀಕರಿಸಿ ಇದ್ದಾರೆಯಾಗಲಾಗಿಯೂ (ಆತ್ಮನಿಗೆ ನಾನಾತ್ವವನು ಅಂಗೀಕರಿಸಿ ಇದ್ದಾರಾಗಿಯೂ ಜಗತ್ತಿಗೆ ಸತ್ಯತ್ವವನು ಅಂಗೀಕರಿಸಿ ಇದ್ದಾರೆಯಾಗಲಾಗಿಯೂ) ಜೀವೇಶ್ವರರಿಗೆ ಭೇದವನು ಅಂಗೀಕರಿಸಿ ಇದ್ದಾರೆಯಾಗಲಾಗಿಯೂ, ಅವರು ಶಾಸ್ತ್ರಜ್ಞರಾದ ಹೊತ್ತಿಗೂ ಆತ್ಮನ ಅಱಿತವರಲ್ಲ.

ಹಾಗಾದರೆ ಇಷ್ಟು ಮಂದಿ ಶಾಸ್ತ್ರಜ್ಞರು ಆತ್ಮನ ಅಱಿಯದೆ ಹೋದರೆ ಹೋಗಲಿ. ವೇದಾಂತಶಾಸ್ತ್ರಜ್ಞರಾದವರು ಆತ್ಮನ ಅಱಿಯುರೇ ಎಂದರೆ ಹೇಳೇವು. ಅದೆಂತೆಂದರೆ– ವೇದಾಂತಶಾಸ್ತ್ರಜ್ಞರು ಅಮುಮುಕ್ಷುಗಳೆನುತಲೂ ಮುಮುಕ್ಷುಗಳೆನುತಲೂ ಎರಡು ವಿಧಗಳು,

ಈಯೆರಡು ವಿಧದವರೊಳಗೆ ಆ ಅನುಮುಕ್ಷುಗಳು ನಾಲ್ಕು ವಿಧವಾಗಿರುವರು. ಆ ನಾಲ್ಕು ವಿಧದವರಾರೆಂದರೆ— ಪ್ರಯೋಜನಕೋಸ್ಕರವಾಗಿ ಓದಿದವರು ಕೆಲವರು, ಪ್ರಸಿದ್ಧಿಗೋಸ್ಕರವಾಗಿ ಓದಿದವರು ಕೆಲವರು, ಇತರ ಮತಪ್ರವಿಷ್ಟರಾಗಿ ಇದ್ದುಕೊಂಡು ವೇದಾಂತಶಾಸ್ತ್ರದ ಮರ್ಮವನು ತಿಳಿದು ದೂಷಿಸಬೇಕೆಂದು ಓದಿದವರು ಕೆಲವರು, ಪೂಜಾರ್ಥವಾಗಿ ಓದಿದವರು ಕೆಲವರು. ಈ ನಾಲ್ಕು ವಿಧದವರು ವೇದಾಂತಶಾಸ್ತ್ರಜ್ಞರಾದ ಹೊತ್ತಿಗೂ ಆತ್ಮನ ಅಱಿತವರಲ್ಲ. ಆದರೆ ಈ ನಾಲ್ಕು ವಿಧದವರಿಗೂ ಫಲವಿಲ್ಲವೇ ಎಂದರೆ, ಉಂಟು. ಅದು ಹೆಗೆ ಉಂಟು ? ಎಂದರೆ ಹೇಳೇವು. ಈ ನಾಲ್ಕುವಿಧದವರೊಳಗೆ ವೇದಾಂತವನು ದೂಷಿಸಬೇಕೆಂದು ಓದಿದವನಿಗೆ ನರಕವೂ ತಿರ್ಯಗಾದಿಯೋನಿಪ್ರಾಪ್ತಿಯೂ ಫಲವೆನಿಸುವುದು. ಕಡಮೆಯ ಮೂಱು ಮಂದಿಗೂ ಸ್ವರ್ಗಾದಿಲೋಕಪ್ರಾಪ್ತಿಫಲವೆನಿಸುವುದು. ಆ ಮುಮುಕ್ಷುಗಳಾಗಿ ಓದಿದವರು ಎರಡು ವಿಧವಾಗಿ ಇರುವರು. ಅವರಾರೆಂದರೆ— ಪ್ರತಿಬಂಧಸಹಿತವಾಗಿ ಓದಿದವರು ಕೆಲಬರು, ಪ್ರತಿಬಂಧರಹಿತವಾಗಿ ಓದಿದವರು ಕೆಲಬರು. ಈ ಎರಡುವಿಧದವರೊಳಗೆ ಪ್ರತಿಬಂಧಸಹಿತವಾಗಿ ವೇದಾಂತಶಾಸ್ತ್ರವನ್ನು ಓದಿದವರು ಕಾಲಾಂತರದಲ್ಲಿ ಪ್ರತಿಬಂಧ ಹೋದ ತಱುವಾಯದಲ್ಲಿ ಆತ್ಮಸ್ವರೂಪವನು ಅಱಿತು ಮುಕ್ತರಾಗಿ ಹೋಗುವರು. (ಪ್ರತಿಬಂಧರಹಿತವಾಗಿ ವೇದಾಂತಶಾಸ್ತ್ರವನು ಓದಿದರು ಸದ್ಯಃ ಆತ್ಮಸ್ವರೂಪವನು ತಿಳಿದು ಮುಕ್ತರಾಗಿ ಹೋಗುವರು )

ಅದಂತಿರಲಿ. ಪೂರ್ವದಲ್ಲಿ ಯಾರೂ ತಮ್ಮ ತಾವಱಿಯರೆಂದು ಹೇಳಿದೆ. ಈಗ ಪ್ರತಿಬಂಧರಹಿತವಾದ ವೇದಾಂತಿಗಳು ಆತ್ಮನ ಬಲ್ಲರೆಂದು ಹೇಳುತ್ತಿದೆ. ಪೂರ್ವದಲ್ಲಿ ಹೇಳಿದುದಕ್ಕೂ ಈಗ ಹೇಳಿದುದಕ್ಕೂ ವಿರೋಧವು ತೋಱುತ್ತಿದೆ, ಎಂದರೆ— ವಿರೋಧವು ಇಲ್ಲ, ಹೇಳೇವು. ಅದೆಂತೆಂದರೆ ಪ್ರತಿಬಂಧರಹಿತವಾಗಿ ಓದಿ ಆತ್ಮನ ಅಱಿತವರು ಆತ್ಮನೇ ಸರಿಯಾಗಲಾಗಿ ಯಾರೂ ಆತ್ಮನ ಅಱಿಯರು ಎಂದು ಹೇಳಿದುದಕ್ಕೆ ವಿರೋಧವು ಇಲ್ಲ.

ಅದಂತಿರಲಿ. ಪೂರ್ವದಲ್ಲಿ ತಮ್ಮ ತಾವಱಿಯರೆಂದು ಹೇಳಿದುದಕೂ,

ಯುಕ್ತಿಗಳಿಂದಲಷ್ಟೇ ಸತ್ತೇ ಚಿತ್ತು ಚಿತ್ತೇ ಆನಂದವೆಂದು ಸಿದ್ಧಿಸಿತು. ಅನುಭವದಿಂದ ಸಿದ್ಧಿಸಲಿಲ್ಲವಲ್ಲಾ ? ಎಂದರೆ ಅನುಭವದಿಂದಲೂ ಸತ್ತೇ ಚಿತ್ತು, ಚಿತ್ತೇ ಆನಂದವೆಂದು ಸಿದ್ಧಿಸಿ ಇದೆಯಲ್ಲಾ. ಅದು ಹೇಗೆಂದರೆ ಹೇಳೇವು. ಸುಷುಪ್ತಿಯಲ್ಲಿ ಸರ್ವಪ್ರಾಣಿಗಳಿಂದಲೂ ಒಂದು ಸುಖವು ಅನುಭವಿಸಪಟ್ಟದಾಗಿ ತೋರುತ್ತಿದೆ ಆ ಸುಖವು ಜಾಗ್ರತ್ಸ್ವಪ್ನಗಳಲ್ಲಿ ತೋರುವ ವಿಷಯಸುಖಗಳ ಹಾಗೇ ನಾನಾರೂಪಗಳಾಗಿರದೆ ಸರ್ವಸುಷುಪ್ತಿಗಳಲ್ಲೂ ಏಕರೂಪವಾಗಿ ಇದೆಯಾದಕಾರಣ ಆ ಸುಷುಪ್ತಿ ಸುಖವೇ ಸತ್ತಾಯಿತು. ಆ ಸತ್ತಾದಂಥ ಸುಷುಪ್ತಿ ಸುಖಕ್ಕೆ, ಚಿದ್ರೂಪತ್ವವು ಇದೆ. ಅದೆಂತೆಂದರೆ:— ತಾನು ತೋರಿಕೊಂಡು ತನ್ನಲ್ಲಿ ಆರೋಪಿಸಪಟ್ಟಂಥ ಸರ್ವಪದಾರ್ಥಗಳನು ತೋರಿಸುತ್ತದೆಯಾಗಲಾಗಿ, ಆ ಸುಷುಪ್ತಿ ಸುಖಕ್ಕೆ ಚಿದ್ರೂಪತ್ವವಿದೆ ಅದೆಂತೆಂದರೆ-ಸುಷುಪ್ತಿಯಿಂದ ಎದ್ದಂಥ ಪುರುಷನಿಂದ "ನಾನು ಸುಖವಾಗಿ ನಿದ್ರೆಯು ಮಾಡಿದೆನು, ಏನೇನೂ ಅರಿಯದೆ ಇದ್ದೆನು" ಎಂದು ಒಂದು ಸುಖವು ಅಜ್ಞಾನವು ಸ್ಮರಿಸಪಡುತ್ತಿದೆ. ಈ ಸ್ಮರಣವು ಅನುಭವವಿಲ್ಲದೆ ಬರಲಾರದಾಗಿ ಸುಖವು ಅಜ್ಞಾನವು ಸುಷುಪ್ತಿಕಾಲದಲ್ಲಿ ಅನುಭವಿಸಪಟ್ಟದಾಗಿ ತೋರುತ್ತಿದೆ. ಆ ಸುಖವು ಸ್ವರೂಪವಾದುದರಿಂದ ಸುಖವು ಅನುಭವಿಸಪಡುತ್ತಿದೆ ಯೆಂಬುದರಲ್ಲಿ ಮೋಹದಿಂದ ಅಜ್ಞಾನವು ಮಾತ್ರವೇ ಅನುಭವಿಸಪಡುತ್ತಿದೆ. ಈ ಅನುಭವಿಸಪಟ್ಟಂಥ ಅಜ್ಞಾನವು ಏತರಿಂದ ತೋರುತ್ತಿದೆ ? ಎಂದರೆ ಸುಷುಪ್ತ್ಯವಸ್ಥೆಯಲ್ಲಿ ಪ್ರಕಾಶಸಾಧನಗಳಾದ ಆದಿತ್ಯಚಂದ್ರನಕ್ಷತ್ರವಿದ್ಯುದ್ವಹ್ನಿಚಕ್ಷುರಾದಿಗಳಿಲ್ಲದೆ ಸುಖಮಾತ್ರವೇ ಇದೆಯಾದುದರಿಂದ ಆ ಸುಖದಿಂದಲೇ ಅಜ್ಞಾನವು ತೋರಿಸಪಡುತ್ತಿದೆ ಎಂದು ಹೇಳಬೇಕು. ಆಯಜ್ಞಾನದಿಂದಲೇ ಸುಖವು ತೋರಿಸಪಡುತ್ತಿದೆ ಎಂದು ಹೇಳುವಣವೆಂದರೆ- ಆಯಜ್ಞಾನವು ಜಡವಾದ ಕಾರಣ ಅದರಿಂದ ಸುಖವು ತೋರಿಸಪಡುತ್ತಿದೆ ಎಂದು ಹೇಳಕೂಡದು. ಹಾಗಾದರೆ ಆ ಸುಖವು ತಾನು ತೋರುತ್ತ ಇದ್ದುಕೊಂಡು ಅಜ್ಞಾನವನ್ನು ತೋರಿಸುತ್ತ ಇದೆಯೋ ತಾನು ತೋರದೆ ಅಜ್ಞಾನವನು ತೋರಿಸುತ್ತಿದೆಯೋ? ಎಂದರೆ ತಾನು ತೋರದೆ ಅಜ್ಞಾನವನು ತೋರಿಸಲಾರದಾದುದರಿಂದ ತಾನು ತೋರಿಕೊಂಡೇ ಆಯಜ್ಞಾನವನು ತೋರಿಸುತ್ತ ಇದೆ.

ಆಯಜ್ಞಾನದಲ್ಲಿ ಸಮಸ್ತ ಪ್ರಪಂಚವೂ ಲೀನವಾಗಿ ಇದೆಯಾದುದರಿಂದ ಆಯಜ್ಞಾನವ ತೋರಿಸುವುದರಿಂದ ಆ ಸುಷುಪ್ತಿಸುಖಕ್ಕೆ ಸರ್ವಪದಾರ್ಥವಭಾಸಕತ್ವವು ಸಿದ್ಧಿಸಿತು. ಇದೇ ಆತ್ಮನಿಗೆ ಸರ್ವಜ್ಞತ್ವವಾಗಲಾಗಿ ಸುಷುಪ್ತ್ಯವಸ್ಥೆಯಲ್ಲಿ ಸತ್ತಾದಂಥ ಸುಖಕ್ಕೆ ಚಿದ್ರೂಪತ್ವವು ಸಿದ್ಧಿಸಿತಾದುದರಿಂದ, ಇದಕ್ಕೆ ಆನಂದರೂಪತ್ವ ಹೇಗೆಂದರೆ–ನಿರುಪಾಧಿಕನಿರತಿಶಯಸುಖಸ್ವರೂಪತ್ವವು ಈ ಸುಷುಪ್ತಿಸುಖಕ್ಕೆ ಇದೆಯಾದಕಾರಣ ಇದಕ್ಕೆ ಆನಂದರೂಪತ್ವವು ಸಿದ್ಧಿಸಿತು. ಅದರಿಂದ ಅನುಭವದಿಂದಲೂ ಸತ್ತೇ ಚಿತ್ತು, ಚಿತ್ತೇ ಆನಂದವೆಂದು ಸಿದ್ಧಿಸಿತಾಗಲಾಗಿ ಸಚ್ಚಿದಾನಂದಗಳು ಆತ್ಮನಿಗೆ ಸ್ವರೂಪವಾಯಿತು. ಆ ಸ್ವರೂಪವಾದಂಥ ಸಚ್ಚಿದಾನಂದಗಳಿಂದ ಆತ್ಮನಿಗೆ ಸ್ವಗತಭೇದವು ಇಲ್ಲ. ಆತ್ಮನು ಸರ್ವಾತ್ಮಕನಾಗಿ ಇದ್ದಾನೆಯಾದಕಾರಣ ಆತ್ಮನಿಗೆ ವಿಜಾತೀಯವಾದಂಥ ಅನಾತ್ಮವು ಅಸತ್ತಾದಕಾರಣ ಅನಾತ್ಮನಿಂದ ಆತ್ಮನಿಗೆ ವಿಜಾತೀಯಭೇದವು ಇಲ್ಲ. ಆತ್ಮನಿಗೆ ಆತ್ಮಾಂತರವು ಇಲ್ಲವಾದಕಾರಣ ಸಜಾತೀಯಭೇದವು ಇಲ್ಲ. ಈ ಪ್ರಕಾರವಾಗಿ ಈ ಮೂರರಿಂದಲೂ ಆತ್ಮನಿಗೆ ಭೇದವು ಇಲ್ಲ. ಆತ್ಮನು ಸರ್ವಾತ್ಮಕನಾಗಿ ಇದ್ದಾನೆಯಾಗಲಾಗಿ ಸಜಾತೀಯವಿಜಾತೀಯಸ್ವಗತರೂಪವಾದಂಥ ವಸ್ತುವಿನಿಂದ ಆತ್ಮನಿಗೆ ಪರಿಚ್ಛೇದವು ಇಲ್ಲ. ಆತ್ಮ ವಿಭುವಾಗಿ ಇದ್ದಾನೆಯಾದುದರಿಂದ ದೇಶದಿಂದಲೂ ಆತ್ಮನಿಗೆ ಪರಿಚ್ಛೇದವು ಇಲ್ಲ. ಆತ್ಮನು ನಿತ್ಯವಾಗಿ ಇದ್ದಾನೆಯಾದಕಾರಣ ಕಾಲದಿಂದಲೂ ಆತ್ಮನಿಗೆ ಪರಿಚ್ಛೇದವಿಲ್ಲ. ಈ ಪ್ರಕಾರವಾಗಿ ಆತ್ಮನು ದೇಶದಿಂದಲೂ ಕಾಲದಿಂದಲೂ ವಸ್ತುವಿನಿಂದಲೂ ತ್ರಿವಿಧಪರಿಚ್ಛೇದಶೂನ್ಯನಾಗಿ ಇದ್ದಾನೆಯಾದಕಾರಣ ಸಚ್ಚಿದಾನಂದಸ್ವರೂಪನಾದ ಆತ್ಮನಿಗೆ ಅಖಂಡತ್ವವು ಸಿದ್ಧಿಸಿತೇ ಸರಿ.

ಹಾಗಾದರೆ ಈ ವಿಚಾರಕ್ಕೆ ಫಲವೇನೆಂದರೆ, ಸಮಸ್ತ ಪ್ರಾಣಿಗಳಿಗೂ ದೇಹವೇ ನಾನೆಂದು ದೇಹದಲ್ಲಿ ಆತ್ಮತ್ವಬುದ್ಧಿ ಬಾರದೆ ಅಖಂಡ ಸಚ್ಚಿದಾನಂದಸ್ವರೂಪನಾದಂಥ ಆತ್ಮನು ನಾನೆಂದು ದೃಢನಿಶ್ಚಯ ಬರುವುದೇ ಈ ವಿಚಾರಕ್ಕೆ ಫಲವೆನಿಸುವುದು.

ಈ ಪ್ರಕಾರ ವಿಚಾರಿಸಿ ಅಖಂಡಸಚ್ಚಿದಾನಂದಸ್ವರೂಪನಾದ ಆತ್ಮನು ನಾನೆಂದು ಯಾವನು ತಿಳಿಯುತ್ತಿದ್ದಾನೆಯೋ ಅವನೇ ಸರ್ವಸಂಸಾರ

ದಿಂದಲೂ ಬಿಡಲ್ಪಟ್ಟಂಥವನು, ಅವನೇ ಕೃತಕೃತ್ಯನು, ಅವನೇ ಪರಿಪೂರ್ಣವಾದ ಬ್ರಹ್ಮವೆಂದು ಸಕಲಶ್ರುತಿಸ್ಮೃತೀತಿಹಾಸಪುರಾಣಾಗಮಾಭಿಯುಕ್ತಚೋದ್ಯವಚನಗಳು ಘೋಷಿಸುತ್ತಿವೆ. ಈಯರ್ಥದಲ್ಲಿ ಸಂಶಯವಿಲ್ಲ. ಸಿದ್ಧ.

ಶ್ಲೋಕ ॥ ಭೂತಭೌತಿಕಭಾವೇಷು ಸ್ವಕಾರ್ಯೇಷು ಸದಾತ್ಮನಃ ।
ವ್ಯಾಪ್ತಿರ್ದೃಷ್ಟಾಸ್ತಿರೋಹಿತ್ವಾತ್ತದ್ದೇಶಾನ್ನಾಸ್ಯಪರಿಚ್ಛಿತಿಃ ॥೧॥

ಅದೇಹಿತ್ವಾದನಾದಿತ್ವಾದಬಾಧತ್ವಾನ್ನ ವಿದ್ಯತೇ ।
ವರ್ತಮಾನಗತಾಗಾಮಿಕಾಲೇಭ್ಯೋಽಸ್ಯ ಪರಿಚ್ಛಿತಿಃ ॥೨॥

ಸರ್ವಾಭಿನ್ನಸ್ವರೂಪೇಣ ಸರ್ವಾತ್ಮತ್ವಾತ್ಸದಾತ್ಮನಃ ।
ಸರ್ವೇಭ್ಯೋವಸ್ತುಜಾತೇಭ್ಯಃ ಪರಿಚ್ಛಿತ್ತಿರ್ನವಿದ್ಯತೇ ॥೩॥

ನವ್ಯಾಪಿತ್ವಾದ್ದೇಶತೋಽಪಿನಿತ್ಯತ್ವಾನ್ನಾಪಿಕಾಲತಃ ।
ನವಸ್ತುತೋಽಪಿ ಸರ್ವಾತ್ಮತ್ವಾದಾನಂತ್ಯಂ ಬ್ರಹ್ಮಣಿತ್ರಿಧಾ ॥೪॥

ಅಖಂಡಾತ್ಮಾಹಮೇವಾಯಮಿತ್ಯೇವಂಯೋವಿಜಜ್ಞಿವಾನ್ ।
ಸಸರ್ವಸಂಸೃತೇರ್ಮುಕ್ತೋಬ್ರಹ್ಮಾನಂದಂ ಸಮಶ್ನುತೇ ॥೫॥

ಕಿಮ ನೇನ ಬಹೂಕ್ತೇನ ನಿರ್ಣೀತೌ ದ್ವೌ ಮಹಾತ್ಮನಃ ।
ಅವಿಚಾರಾತ್ತುಸಂಸಾರೋ ವಿಚಾರಾನ್ಮೋಕ್ಷಇಷ್ಯಪಿ ॥೬॥

ಪ್ರಮಾದಾತಪ್ರಮಾದಾದ್ವಾಯದಜ್ಞಾನಾನ್ಮಯೇರಿತಂ ।
ತತ್ಕ್ಷಮ್ಯಂತು ಸಮಾಲೋಕ್ಯ ಪಂಡಿತಾಃ ಸಮದರ್ಶಿನಃ ॥೭॥

ಇಂತೀ ಕನ್ನಡಭಾಷೆಯೊಳ್ ವಿರಚಿಸಿದ ವಾಸುದೇವಯತೀಂದ್ರಪ್ರೋಕ್ತಮಪ್ಪ

ವೇದಾಂತವಿವೇಕಸಾರದಲ್ಲಿ

ಅಖಂಡತ್ವನಿರೂಪಣಮಂ ಪೇಳ್ವುದು

ದ್ವಾದಶಪ್ರಕರಣಂ.

# ಹದಿಮೂರನೆಯ ಪ್ರಕರಣಂ†

— ಅಜ್ಞಾನಪ್ರಕರಣಂ —

ಶ್ಲೋ॥ ಯದಜ್ಞಾನ[1]ಪ್ರಭಾತೇನ ದೃಶ್ಯತೇ ಸಕಲಂ ಜಗತ್ ॥
ಯದ್ಭಾನಾಚ್ಛೈತ್ರ್ಯಮಾಪ್ನೋತಿ ತಸ್ಮೈ ಜ್ಞಾನಾತ್ಮನೇ ನಮಃ ॥

ಯಾವ ಅಜ್ಞಾನದಿಂದ ಸಮಸ್ತ ಪ್ರಾಣಿಗಳು ಜನ್ಮಮರಣಾದಿಗಳ ಪರಂಪರೆಯನ್ನು ಹೊಂದುತ್ತಿದ್ದಾರೆಯೋ ಆ ಅಜ್ಞಾನಸ್ವರೂಪವನ್ನು ನಿರೂಪಿಸುತ್ತ ಇದ್ದೇವೆ.

ಆ ಅಜ್ಞಾನವೇನು ? ಎಂದರೆ— ತನ್ನ ತಾನರಿಯದೆ ಇರುವಂಥದೇ ಅಜ್ಞಾನವೆನಿಸುವುದು. ತನ್ನ ತಾನರಿವನೆ ? ಎಂದರೆ, ಅರಿಯನು. ಯಾರೂ ತಮ್ಮ ತಾವರಿಯರೆ ? ಎಂದರೆ ಅರಿಯರು ಯಾರೂ ತಮ್ಮ ತಾವರಿಯರು ಎಂದು ಹೇಳಬಹುದೆ ? ಎಂದರೆ, ಅರಿಯದೆ ಇದ್ದಾರೆಯಾದಕಾರಣ ತಮ್ಮ ತಾವರಿಯರೆಂದು ಹೇಳಬಹುದಲ್ಲ. ಅವರೆ ಮತ್ತೆ ಹೇಗೆ ಬಲ್ಲರು ? ಎಂದರೆ— ಈ ಪ್ರಕಾರವಾಗಿ ಬಲ್ಲರು ಯಾವ ಪ್ರಕಾರವೆಂದರೆ— ನಾನು ಮನುಷ್ಯನು ನಾನು ಸ್ತ್ರೀ ನಾನು ಪುರುಷನು, ನಾನು ಬ್ರಾಹ್ಮಣನು, ನಾನು ಕ್ಷತ್ರಿಯನು, ನಾನು ವೈಶ್ಯ ನಾನು ಶೂದ್ರನೆನುತಲೂ; ನಾನು ಬ್ರಹ್ಮಚಾರಿ, ನಾನು ಗೃಹಸ್ಥ, ನಾನು ವಾನಪ್ರಸ್ಥ, ನಾನು ಸನ್ಯಾಸಿ ಯೆನುತಲೂ; ನಾನು ತತ್ವವಾದಿ ನಾನು ವೈಷ್ಣವನು, ಭಾಗವತನು, ಪೌರಾಣಿಕನು, ಶಾಸ್ತ್ರಿಯೆನುತಲೂ; ನಾನು ಕೃಷ್ಣನು, ರಾಮನು, ನಾರಾಯಣನು, ಇವರ ತಂದೆ, ಇವರ ಮಗನೆನುತಲೂ, ಈ ಪ್ರಕಾರವಾಗಿ ಬಲ್ಲರು. ಅದಂತಿರಲಿ.

ಮೊದಲು ಯಾರೂ ತಮ್ಮ ತಾವರಿಯರೆಂದು ಹೇಳಿದೆ. ಈಗ ಈ ಪ್ರಕಾರವಾಗಿ ಬಲ್ಲರು ಎಂದು ಹೇಳುತ್ತ ಇದೆ. ಅವರಿಂದ ಪೂರ್ವದಲ್ಲಿ

---

ಪಾ— 1. ಪ್ರಭಾವೇನ......ಯದ್ಜ್ಞಾನಾಲ್ಲಯಮಾಪ್ನೋತಿ.

† ಇದು ಬಾದು ಪ್ರತಿಯಲ್ಲಿ ೧೪ ನೆಯ ಪ್ರಕರಣವಾಗಿ ಕೊಟ್ಟಿದೆ.

ಹೇಳಿದುದಕೂ ಈಗ ಹೇಳುವುದಕೂ ವಿರೋಧವು ತೋರುತ್ತಿದೆ ಎಂದು ಹೇಳಿದೆಯಾದರೆ ವಿರೋಧವು ಇಲ್ಲ. ಅದು ಹೇಗೆಂದರೆ ಹೇಳೇವು. ತಾನು ಮನುಷ್ಯನು ಅಲ್ಲವಾಗಲಾಗಿ ತನ್ನನು ಬ್ರಾಹ್ಮಣನೆಂದು ತಿಳಿವಂಥದು ತಿಳುವಳಿಕೆಯುಲ್ಲ. ತಾನು ಪುರುಷನಲ್ಲವಾದುದಱಿಂದ ತನ್ನನು ಪುರುಷ ನೆಂದು ತಿಳಿವಂಥವು ತಿಳುವಳಿಕೆಯುಲ್ಲ. ಅದಱಿಂದ ಯಾರೂ ತನ್ನ ತಾ ವಱಿಯರೆಂದು ಹೇಳಬಹುದಲ್ಲ. ಅದಂತಿರಲಿ. ಹಾಗೆ ಹೇಳಕೂಡದು. ಅದೆಂತೆಂದರೆ– ಮನುಷ್ಯನಾದಂಥ ತನ್ನನು ಮನುಷ್ಯನಾಗಿಯುಷ್ಟ್ಯೆ ತಿಳಿ ಯುತ್ತ ಇದ್ದಾನೆ; ಎತ್ತೆಂದು ತಿಳಿಯಲಿಲ್ಲನಲ್ಲ; ಪಿಶಾಚನೆಂದು ತಿಳಿಯ ಲಿಲ್ಲನಲ್ಲ; ಸ್ತ್ರೀಯಾದಂಥ ತನ್ನನು ಸ್ತ್ರೀಯೆಂದಷ್ಟೇ ತಿಳಿಯುತ್ತಿ ದ್ದಾಳೆ ಪುರುಷನೆಂದು ತಿಳಿಯಲಿಲ್ಲನಲ್ಲ. ಪುರುಷನಾದಂಥ ತನ್ನನು ಪುರುಷನೆಂದಷ್ಟ್ಯೆ ತಿಳಿಯುತ್ತಿದ್ದಾನೆ, ಪಿಶಾಚನೆಂದು ತಿಳಿಯಲಿಲ್ಲನಲ್ಲ. ಬ್ರಾಹ್ಮಣನಾದಂಥ ತನ್ನನು ಬ್ರಾಹ್ಮಣನೆಂದಷ್ಟ್ಯೇ ತಿಳಿಯುತ್ತಿದ್ದಾನೆ; ಶೂದ್ರನೆಂದು ತಿಳಿಯಲಿಲ್ಲನಲ್ಲ ಈ ಪ್ರಕಾರವಾಗಿ ಸಮಸ್ತವಾದವರು ತನ್ನ ತಾವು ಯಥಾರ್ಥವಾಗಿ ಅಱಿತಿದ್ದರೆ ಯಾರೂ ತನ್ನ ತಾನಱಿ ಯರೆಂದು ಹೇಗೆ ಹೇಳುವಣೆಂದರೆ– ತಾನು ಮನುಷ್ಯನೆಂಬುದು ಸಿದ್ಧ ವಾಯಿತಾದರೆ, ಹೋದ ಜನ್ಮದಲ್ಲೂ ಮನುಷ್ಯನಾಗಿರಬೇಕು; ಬರುವ ಜನ್ಮದಲ್ಲೂ ಮನುಷ್ಯನಾಗಿಯೇ ಇರಬೇಕು. ಹೋದ ಜನ್ಮದಲ್ಲಿ ತಾ ನು ದೇವನೋ, ಯಕ್ಷನೋ, ಕಿನ್ನರನೋ, ಕಿಂಪುರುಷನೋ, ಗಂಧರ್ವ ನೋ, ಮನುಷ್ಯನೋ ಸ್ಥಾವರನೋ, ಜಂಗಮನೋ, ಪಿಶಾಚನೋ, ಎತ್ತೋ, ಎಮ್ಮೆಯೋ, ಕೋಣನೋ ನಾಯೋ, ನರಿಯೋ, ಎಂದು ತಿಳಿಯಪಡಲಿಲ್ಲವಾಗಲಾಗಿಯೂ ತನಗೆ ಮನುಷ್ಯತ್ವವು ಸಿದ್ಧವಾಯಿತಾ ದರೆ ಮೇಲೆ ದೇವಾದಿಶರೀರಗಳು ಬರಬೇಕೆಂದು ಈ ಜನ್ಮದಲ್ಲಿ ಯಾರೂ ಯಾಗೋಪಾಸನಾದಿಕ್ರಿಯೆಗಳನು ಮಾಡದೆ ಇರಬೇಕು. ಮಾಡುತಿದ್ದಾರೆ ಯಷ್ಟ್ಯೆ; ಆದುದಱಿಂದ ತನ್ನನು ಮನುಷ್ಯನೆಂದು ತಿಳಿವಂಥವು ತಿಳು ವಳಿಕೆಯುಲ್ಲದಷ್ಟ್ಯೆ. ಈಪ್ರಕಾರವಾಗಿಯೇ ಬ್ರಾಹ್ಮಣಕ್ಷತ್ರಿಯವೈಶ್ಯ ಶೂದ್ರಾದಿಗಳು ತಾನು ಎಂದು ತಿಳಿವಂಥವು ತಿಳುವಳಿಕೆಯುಲ್ಲವೆಂದು ತಿಳಿದುಕೊಳ್ಳತಕ್ಕುದು.

ಅದಂತಿರಲಿ. ಎಲ್ಲರೂ ಈಪ್ರಕಾರವಾಗಿಯೆ ಬಲ್ಲರೇ ? ಎಂದರೆ– ಕೆಲವರು ಪಾರಲೌಕಿಕರಾದವರು ತನ್ನನು ಜೀವನೆಂದು ಬಲ್ಲರು. ಆ ಜೀವನಸ್ವರೂಪವೇನೆಂದು ಕೇಳಿದರೆ ಮತ್ತೆ ಹೇಳಲರಿಯರು. ಈಪ್ರಕಾರವಾಗಿ ತಿಳಿದವರು ತಮ್ಮ ತಾವರಿತವರಲ್ಲ. ಅದೆಂತೆಂದರೆ– ಮನುಷ್ಯನಲ್ಲದಿರುವಂಥವ ತನ್ನನು ಮನುಷ್ಯನೆಂದು ತಿಳಿದಂಥವ ಹೇಗೆ ತಿಳಿದಂಥವನಲ್ಲವೋ, ಹಾಗೆ ಜೀವನಲ್ಲದೆ ಇರುವಂಥ ತನ್ನನು ಜೀವನೆಂದು ತಿಳಿವಂಥವನು ತಿಳಿದವನಲ್ಲ. ಅದಂತಿರಲಿ.

ಹಾಗಾದರೆ ಶಾಸ್ತ್ರಜ್ಞರಾದವರು ತಮ್ಮ ತಾವರಿಯರೆ? ಎಂದರೆ– ಅವರೂ ತಮ್ಮ ತಾವರಿಯರು. ಅದಂತಿರಲಿ.

ಶಾಸ್ತ್ರಜ್ಞರಾದವರು ಆತ್ಮಸ್ವರೂಪ ಇಂಥದೆಂದು ನಿಶ್ಚಯಿಸಿಕೊಂಡಿದ್ದಾರೆ; ಅರಿಯರೆಂದು ಹೇಗೆ ಹೇಳುವಣವೆಂದರೆ ಹೇಳಬಹುದು. ಅದೆಂತೆಂದರೆ ಹೇಳೇವು. ಶಾಸ್ತ್ರಜ್ಞರೊಳಗೆ ಚಾರ್ವಾಕನಾದಂಥವನು ಅನಾತ್ಮಸ್ವರೂಪವಾದ ಸ್ಥೂಲದೇಹವನೇ ಆತ್ಮನೆಂದು ತಿಳಿದಿದ್ದಾನಾದಕಾರಣ ಅವನು ಶಾಸ್ತ್ರಜ್ಞನಾದ ಹೊತ್ತಿಗೂ ಆತ್ಮನ ಅರಿತವನಲ್ಲ. ಮತ್ತು ಪ್ರಾಣೋಪಾಸಕರಾದಂಥ ಕೆಲವರು ಶಾಸ್ತ್ರಜ್ಞರು ಅನಾತ್ಮಸ್ವರೂಪವಾದಂಥ ಪ್ರಾಣವನ್ನೇ ಆತ್ಮನೆಂದು ಅರಿತಿದ್ದಾರಾಗಲಾಗಿ ಅವರು ಶಾಸ್ತ್ರಜ್ಞರಾದ ಹೊತ್ತಿಗೂ ಆತ್ಮನ ಅರಿತವರಲ್ಲ. ಮತ್ತೆ ಕೆಲರು ಶಾಸ್ತ್ರಜ್ಞರು ಅನಾತ್ಮವಾದ ಇಂದ್ರಿಯಂಗಳನೇ ಆತ್ಮನೆಂದು ತಿಳಿದಿದ್ದಾರಾದಕಾರಣ ಅವರು ಆತ್ಮನ ತಿಳಿದವರಲ್ಲ. ಮನೋಪಾಸಕರಾದ ಮತ್ತೆ ಕೆಲಬರು ಶಾಸ್ತ್ರಜ್ಞರು ಅನಾತ್ಮವಾದಂಥ ಮನಸ್ಸೇ ಆತ್ಮವೆಂದು ತಿಳಿದಿದ್ದಾರೆಯಾದಕಾರಣ ಅವರು ಶಾಸ್ತ್ರಜ್ಞರಾದ ಹೊತ್ತಿಗೂ ಆತ್ಮನ ಅರಿತವರಲ್ಲ ಮತ್ತು ಬೌದ್ಧರೊಳಗೆ ಕೆಲವರು ಶಾಸ್ತ್ರಜ್ಞರು ಅನಾತ್ಮವಾಗಿ ಕ್ಷಣಿಕವಾದ ಬುದ್ಧಿಯನೇ ಆತ್ಮನೆಂದು ತಿಳಿದು ಇದ್ದಾರೆಯಾಗಲಾಗಿ ಅವರು ಶಾಸ್ತ್ರಜ್ಞರಾದ ಹೊತ್ತಿಗೂ ಆತ್ಮನ ಅರಿತವರಲ್ಲ. ಮತ್ತು ಬೌದ್ಧರೊಳಗೆ ಶಾಸ್ತ್ರಜ್ಞರೆಂದು ಹೆಸರಿಟ್ಟುಕೊಂಡಿರುವಂಥ ಕೆಲರು ಮೂಢರು ಶಶವಿಷಾಣತುಲ್ಯವಾದ ಶೂನ್ಯವನು ಆತ್ಮನೆಂದು ತಿಳಿದಿದ್ದಾರೆಯಾಗಲಾಗಿ ಅವರು ಶಾಸ್ತ್ರಜ್ಞರಾದ ಹೊತ್ತಿಗೂ ಆತ್ಮನ ಅರಿತವರಲ್ಲ.

ಹಾಗಾದರೆ ಶಾಸ್ತ್ರಜ್ಞರಾದ ಮೀಮಾಂಸಕರು ಶೈವರು ರಾಮಾನುಜರು ಮಾಧ್ವರು ಆತ್ಮನ ಅಱಿಯರೆ ಎಂದರೆ ಅಱಿಯರು. ಅದೇಂತೆಂದರೆ– ಹೇಳೇವು. ಈ ಮೀಮಾಂಸಕಾದಿಗಳು ಪರಿಪೂರ್ಣನಾದ ಆತ್ಮನ ಅಣುಪರಮಾಣುವೆಂದು ತಿಳದಿದ್ದರೆಯಾದಕಾರಣ ಅವರು ಶಾಸ್ತ್ರಜ್ಞರಾದಹೊತ್ತಿಗೂ ಆತ್ಮನ ಅಱಿತವರಲ್ಲ.

ಹಾಗಾದರೆ ಶಾಸ್ತ್ರಜ್ಞರಾದಂಥ ತಾರ್ಕಿಕಾದಿಗಳು ಆತ್ಮನಿಗೆ ವಿಭುತ್ವವನು ಅಂಗೀಕರಿಸಿದರಲ್ಲ. ಅವರು ಆತ್ಮನ ಅಱಿಯರೇ ? ಎಂದರೆ ಅಱಿಯರು. ಅದೇಂತೆಂದರೆ ಹೇಳೇವು. ತಾರ್ಕಿಕಾದಿಗಳು ಆತ್ಮನಿಗೆ ವಿಭುತ್ವವನು ಅಂಗೀಕರಿಸಿದ ಹೊತ್ತಿಗೂ ಆತ್ಮನಿಗನೇಕಾತ್ಮವನು ಅಂಗೀಕರಿಸಿ ಇದ್ದಾರೆಯಾಗಲಾಗಿಯೂ (ಆತ್ಮನಿಗೆ ಜಡತ್ವವನು ಅಂಗೀಕರಿಸಿ ಜಡನಾಗಿರುವಂಥ ಆತ್ಮನಿಗೆ ಚಿತ್ತು ಗುಣವಾಗಿ ಅಂಗೀಕರಿಸಿ ಇದ್ದಾರೆಯಾಗಲಾಗಿಯೂ) ನಿರ್ಗುಣನಾದ ಆತ್ಮನಿಗೆ ಇಚ್ಛಾದಿಗುಣಗಳನ್ನು ಅಂಗೀಕರಿಸಿ ಇದ್ದಾರೆಯಾಗಲಾಗಿಯೂ ದೃಕ್ಕಾಗಿರುವಂಥ ಆತ್ಮನಿಗೆ ದೃಶ್ಯತ್ವವ ಅಂಗೀಕರಿಸಿ ಇದ್ದಾರೆಯಾಗಲಾಗಿಯೂ, ಅವರು ಶಾಸ್ತ್ರಜ್ಞರಾದ ಹೊತ್ತಿಗೂ ಆತ್ಮನ ಅಱಿತವರಲ್ಲ.

ಹಾಗಾದರೆ ಸಾಂಖ್ಯಯೋಗಿಗಳು ಆತ್ಮನ ಅಱಿಯರೆ ? ಎಂದರೆ ಅಱಿಯರು. ಅದೇಂತೆಂದರೆ ಹೇಳೇವು. ಸಾಂಖ್ಯಯೋಗಿಗಳು ಆತ್ಮನಿಗೆ ವಿಭುತ್ವವನು (ಸಚ್ಚಿದಾನಂದರೂಪತ್ವವನು ಅಸಂಗತ್ವವನು) ಅಂಗೀಕರಿಸಿ ಇದ್ದಾರೆಯಾಗಲಾಗಿಯೂ (ಆತ್ಮನಿಗೆ ನಾನಾತ್ವವನು ಅಂಗೀಕರಿಸಿ ಇದ್ದಾರಾಗಿಯೂ ಜಗತ್ತಿಗೆ ಸತ್ಯತ್ವವನು ಅಂಗೀಕರಿಸಿ ಇದ್ದಾರೆಯಾಗಲಾಗಿಯೂ) ಜೀವೇಶ್ವರರಿಗೆ ಭೇದವನು ಅಂಗೀಕರಿಸಿ ಇದ್ದಾರೆಯಾಗಲಾಗಿಯೂ, ಅವರು ಶಾಸ್ತ್ರಜ್ಞರಾದ ಹೊತ್ತಿಗೂ ಆತ್ಮನ ಅಱಿತವರಲ್ಲ.

ಹಾಗಾದರೆ ಇಷ್ಟು ಮಂದಿ ಶಾಸ್ತ್ರಜ್ಞರು ಆತ್ಮನ ಅಱಿಯದೆ ಹೋದರೆ ಹೋಗಲಿ. ವೇದಾಂತಶಾಸ್ತ್ರಜ್ಞರಾದವರು ಆತ್ಮನ ಅಱಿಯರೇ ಎಂದರೆ ಹೇಳೇವು. ಅದೇಂತೆಂದರೆ– ವೇದಾಂತಶಾಸ್ತ್ರಜ್ಞರು ಅಮುಮುಕ್ಷುಗಳೆನುತಲೂ ಮುಮುಕ್ಷುಗಳೆನುತಲೂ ಎರಡು ವಿಧಗಳು,

ಈಯೆರಡು ವಿಧದವರೊಳಗೆ ಆ ಅನುಮುಕ್ಷುಗಳು ನಾಲ್ಕು ವಿಧವಾಗಿರುವರು. ಆ ನಾಲ್ಕು ವಿಧದವರಾರೆಂದರೆ— ಪ್ರಯೋಜನಕೋಸ್ಕರವಾಗಿ ಓದಿದವರು ಕೆಲವರು, ಪ್ರಸಿದ್ಧಿಗೋಸ್ಕರವಾಗಿ ಓದಿದವರು ಕೆಲವರು, ಇತರ ಮತಪ್ರವಿಷ್ಟರಾಗಿ ಇದ್ದುಕೊಂಡು ವೇದಾಂತಶಾಸ್ತ್ರದ ಮರ್ಮವನು ತಿಳಿದು ದೂಷಿಸಬೇಕೆಂದು ಓದಿದವರು ಕೆಲವರು, ಪೂಜಾರ್ಥವಾಗಿ ಓದಿದವರು ಕೆಲವರು. ಈ ನಾಲ್ಕು ವಿಧದವರು ವೇದಾಂತಶಾಸ್ತ್ರಜ್ಞರಾದ ಹೊತ್ತಿಗೂ ಆತ್ಮನ ಅಱಿತವರಲ್ಲ. ಆದರೆ ಈ ನಾಲ್ಕು ವಿಧದವರಿಗೂ ಫಲವಿಲ್ಲವೇ ಎಂದರೆ, ಉಂಟು. ಅದು ಹೆಗೆ ಉಂಟು? ಎಂದರೆ ಹೇಳೇವು. ಈ ನಾಲ್ಕು ವಿಧದವರೊಳಗೆ ವೇದಾಂತವನು ದೂಷಿಸಬೇಕೆಂದು ಓದಿದವನಿಗೆ ನರಕವೂ ತಿರ್ಯಗಾದಿಯೋನಿಪ್ರಾಪ್ತಿಯೂ ಫಲವೆನಿಸುವುದು. ಕಡಮೆಯ ಮೂಱು ಮಂದಿಗೂ ಸ್ವರ್ಗಾದಿಲೋಕಪ್ರಾಪ್ತಿ ಫಲವೆನಿಸುವುದು. ಆ ಮುಮುಕ್ಷುಗಳಾಗಿ ಓದಿದವರು ಎರಡು ವಿಧವಾಗಿ ಇರುವರು. ಅವರಾರೆಂದರೆ— ಪ್ರತಿಬಂಧಸಹಿತವಾಗಿ ಓದಿದವರು ಕೆಲಬರು, ಪ್ರತಿಬಂಧರಹಿತವಾಗಿ ಓದಿದವರು ಕೆಲಬರು. ಈ ಎರಡುವಿಧದವರೊಳಗೆ ಪ್ರತಿಬಂಧಸಹಿತವಾಗಿ ವೇದಾಂತಶಾಸ್ತ್ರವನ್ನು ಓದಿದವರು ಕಾಲಾಂತರದಲ್ಲಿ ಪ್ರತಿಬಂಧ ಹೋದ ತಱುವಾಯದಲ್ಲಿ ಆತ್ಮಸ್ವರೂಪವನು ಅಱಿತು ಮುಕ್ತರಾಗಿ ಹೋಗುವರು. (ಪ್ರತಿಬಂಧರಹಿತವಾಗಿ ವೇದಾಂತಶಾಸ್ತ್ರವನು ಓದಿದರು ಸದ್ಯಃ ಆತ್ಮಸ್ವರೂಪವನು ತಿಳಿದು ಮುಕ್ತರಾಗಿ ಹೋಗುವರು)

ಅದಂತಿರಲಿ. ಪೂರ್ವದಲ್ಲಿ ಯಾರೂ ತಮ್ಮ ತಾವಱಿಯರೆಂದು ಹೇಳಿದೆ. ಈಗ ಪ್ರತಿಬಂಧರಹಿತವಾದ ವೇದಾಂತಿಗಳು ಆತ್ಮನ ಬಲ್ಲರೆಂದು ಹೇಳುತ್ತಿದೆ. ಪೂರ್ವದಲ್ಲಿ ಹೇಳಿದುದಕ್ಕೂ ಈಗ ಹೇಳಿದುದಕ್ಕೂ ವಿರೋಧವು ತೋಱುತ್ತಿದೆ, ಎಂದರೆ— ವಿರೋಧವು ಇಲ್ಲ, ಹೇಳೇವು. ಅದೆಂತೆಂದರೆ ಪ್ರತಿಬಂಧರಹಿತವಾಗಿ ಓದಿ ಆತ್ಮನ ಅಱಿತವರು ಆತ್ಮನೇ ಸರಿಯಾಗಲಾಗಿ ಯಾರೂ ಆತ್ಮನ ಅಱಿಯರು ಎಂದು ಹೇಳಿದುದಕ್ಕೆ ವಿರೋಧವು ಇಲ್ಲ.

ಅದಂತಿರಲಿ. ಪೂರ್ವದಲ್ಲಿ ತಮ್ಮ ತಾವಱಿಯರೆಂದು ಹೇಳಿದುದಕೂ,

ಯಾರೂ ಆತ್ಮನ ಅಱಿಯರೆಂದು ಹೇಳಿದುದಕೂ, ವಿರೋಧವು ಇಲ್ಲವೆ ? (ಎಂದರೆ ತಾನೇ ಆತನ್ಮನಾದಕಾರಣ ಯಾರೂ ತಮ್ಮ ತಾವು ಅಱಿಯರು ಎಂದು ಹೇಳಿದುದಕೂ ಆತ್ಮನನು ಯಾರು ಅಱಿಯರು ಎಂದು ಹೇಳಿದುದಕ್ಕೂ ವಿರೋಧವು ಇಲ್ಲ.) ಹಾಗಾದರೆ ತನ್ನ ಅಱಿಯದಂಥ ಅಜ್ಞಾನವು ಏತಱಿಂದ ಹೋಗುವುದೆಂದರೆ, ಆತ್ಮಜ್ಞಾನದಿಂದಲೇ ಹೋಗುವುದು; ಮತ್ತೆ ಏತಱಿಂದಲೂ ಹೋಗದು. ಆತ್ಮಜ್ಞಾನದಿಂದ ಹೋಗುವುದೆಂದು ಏತಕ್ಕೆ ಹೇಳಬೇಕು ? ಕರ್ಮದಿಂದಲೂ ಹೋಗುವುದೆಂದು ಹೇಳುವಣವೆಂದರೆ—ಹಾಗೆ ಹೇಳಕೂಡದು. ಅದೇತೆಂದರೆ ಹೇಳೇವು. ಕರ್ಮವು ([1] ಅಜ್ಞಾನಕ್ಕೆ ವಿರೋಧಿಯಲ್ಲವಾಗಿ, ಕರ್ಮವು ಅಜ್ಞಾನವನು ಹೋಗಲಾಡಿಸಲಾಱದಲ್ಲವಾಗಿ, ಕರ್ಮವು ಹೇಗೆ ಆಱದು ? ಎಂದರೆ, ವಿರೋಧಿಯಲ್ಲವಾಗಲಾಗಿ ಅದು ಅಜ್ಞಾನವನು ಹೋಗಲಾಡಿಸಲಾಱದು. ಅದು ಹೇಗೆ ಎಂದರೆ,) ದೃಷ್ಟಾಂತಪೂರ್ವಕವಾಗಿ ನಿರೂಪಿಸುತ್ತ ಇದ್ದೇವೆ. ಆ ದೃಷ್ಟಾಂತವೇನೆಂದರೆ, ಘಟದ್ವಯವು ದೃಷ್ಟಾಂತ. ಅದು ಹೇಗೆಂದರೆ, ಘಟವು ಘಟಾಂತರಕ್ಕೆ ವಿರೋಧಿಯಲ್ಲವಾದಕಾರಣ ಘಟವು ಘಟಾಂತರವ ಹೇಗೆ ಹೋಗಿಸಲಾಱದೋ ಹಾಗೆ ಕರ್ಮವು ಅಜ್ಞಾನಕ್ಕೆ ವಿರೋಧಿಯಲ್ಲ; ಕರ್ಮವು ಅಜ್ಞಾನವ ಹೋಗಿಸಲಾಱದು. ಇಷ್ಟುಮಾತ್ರವಲ್ಲ, ಕರ್ಮವು ಅಜ್ಞಾನಕ್ಕೆ ವೃದ್ಧಿಯನೇ ಮಾಡುವುದು. ಅದೆಂತೆಂದರೆ, ದೃಷ್ಟಾಂತಪೂರ್ವಕವಾಗಿ ನಿರೂಪಿಸುತ್ತ ಇದ್ದೇವೆ. ಆ ದೃಷ್ಟಾಂತವೇನೆಂದರೆ, ಹೇಳೇವು. ಅಮಾವಾಸ್ಯೆಯ ಕತ್ತಲೆಯಲ್ಲಿ ಬಂದಂಥ ಮೇಘಾವರಣವು ಅಮಾವಾಸ್ಯೆಯ ಕತ್ತಲೆಗೆ ವಿರೋಧಿಯಲ್ಲವಾದುದಱಿಂದ, ಆ ಕತ್ತಲೆಯ ಹೇಗೆ ಹೋಗಿಸಲಾಱದೋ ಆ ಕತ್ತಲೆಯ ಹೇಗೆ ಅಭಿವೃದ್ಧಿಯ ಮಾಡುತ್ತಿದೆಯೋ ಹಾಗೆ ಕರ್ಮವು ಅಜ್ಞಾನವನು ಹೋಗಿಸಲಾಱದು, ಅಜ್ಞಾನಕ್ಕೆ ವೃದ್ಧಿಯ ಮಾಡುವುದು. ಅದೆಂತೆಂದರೆ, ಸ್ಪಷ್ಟವಾಗಿ ನಿರೂಪಿಸುತ್ತ ಇದ್ದೇವೆ. ಅಮಾವಾಸ್ಯೆಯ ಕತ್ತಲೆಯಲ್ಲಿ ಮಾರ್ಗದಲ್ಲಿ ಹೋಗುವ ಪುರುಷನಿಗೆ ಮನುಷ್ಯನು ಇದಿರಾಗಿ ಬಂದನಾದರೆ ಅವನು ಬ್ರಾಹ್ಮಣನೆನುತಲೂ ತಿಳಿಯಪಡಲಿಲ್ಲ, ಶೂದ್ರನೆನುತಲೂ ತಿಳಿಯಪಡಲಿಲ್ಲ, ಪುರುಷನೆಂದು ಸಾಮಾನ್ಯವಾಗಿ ತೋಱು

---

ಪಾಠಾಂತರ— 1. ಜ್ಞಾನಕ್ಕೆ.

ತ್ತಿದೆ. ಮತ್ತು ಒಂದು ಹಸುವು ಇದಿರಾಗಿ ಬಂದಹೊತ್ತಿಗೂ ಅದು ವೃಷಭನೆನುತಲೂ ತಿಳಿಯಪಡಲಿಲ್ಲ, ಹಸುವೆನುತಲೂ ತಿಳಿಯಪಡಲಿಲ್ಲ, ದನವೆಂದು ಸಾಮಾನ್ಯವಾಗಿ ತೋರುತ್ತಿದೆ. ಆ ಸಮಯದಲ್ಲಿ ಮೇಘವು ಆವರಿಸಿತೆಯಾದರೆ, ಆ ಆವರಿಸಿದ ಮೇಘವು ಆ ಅಂಧಕಾರಕ್ಕೆ ವೃದ್ಧಿಯನ್ನು ಮಾಡಿ ಸಾಮಾನ್ಯವಾಗಿ ತೋರುವಂಥ ಮನುಷ್ಯಾದಿಗಳನು ಸರ್ವಾತ್ಮನಾ ಹೇಗೆ ತೋರದೋಪಾದಿಯಲ್ಲಿ ಮಾಡಿತೋ, ಹಾಗೆ ಕರ್ಮವು ಅಜ್ಞಾನವನು ವೃದ್ಧಿಯನೆಯ್ದಿಸಿ ಆತ್ಮನ ಸರ್ವಾತ್ಮನಾ ತೋರಬೋಪಾದಿಯಲ್ಲಿ ಮಾಡಿತು. ಅದಂತಿರಲಿ. ದೃಷ್ಟಾಂತದಲ್ಲಿ ಮೇಘಾವರಣವು ಅಂಧಕಾರವನು ವೃದ್ಧಿಯನ್ಯೆದಿಸಿ ಮನುಷ್ಯಾದಿಗಳನು ಸರ್ವಾತ್ಮನಾ ತೋರದೋಪಾದಿಯಲ್ಲಿ ಮಾಡಿದುದನು ಪ್ರತ್ಯಕ್ಷವಾಗಿ ಕಂಡು ಇದ್ದೇವೆ. ದಾರ್ಷ್ಟಾಂತಿಕದಲ್ಲಾದರೆ ಕರ್ಮವು ಅಜ್ಞಾನವೃದ್ಧಿಯನ್ಯೆದಿಸಿ ನಿತ್ಯಲಬ್ಧನಾದಂಥ ಆತ್ಮನ ಹೇಗೆ ತೋರದೋಪಾದಿಯಲ್ಲಿ ಮಾಡಿತು, ಎಂದರೆ ಮಾಡಿತು. ಅದೆಂತೆಂದರೆ ಪೇಳೇವು. ಮೇಘದಿಂದಾವರಿಸಲ್ಪಟ್ಟ ನಿಬಿಡಾಂಧಕಾರದಲ್ಲಿ ಮಣಿ ಪುಸ್ತಕ ಸಾಲಿಗ್ರಾಮ ರುದ್ರಾಕ್ಷ ಮೊದಲಾದ ಪದಾರ್ಥಗಳು ಕೈಗೆ ಲಬ್ಧವಾದ ಹೊತ್ತಿಗೂ ಆಯಂಧಕಾರವು ಮಣಿಯು ಒಳ್ಳೆಯ ಮಣಿಯೋ ಅಲ್ಲದ ಮಣಿಯೋ ಎಂಬಂಥದನು, ಈ ಪುಸ್ತಕವು ವೇದವ್ರೋ ಶಾಸ್ತ್ರವ್ರೋ ಪುರಾಣವ್ರೋ ಜ್ಯೋತಿಷವ್ರೋ ಎಂಬಂಥದನು, ಈ ಸಾಲಿಗ್ರಾಮವು ಸೀತಾರಾಮನೋ ಲಕ್ಷ್ಮೀನಾರಾಯಣನೋ ಎಂಬಂಥದನು, ಈ ರುದ್ರಾಕ್ಷವು ಪಂಚಮುಖವ್ರೋ ಷಣ್ಮುಖವ್ರೋ ಭದ್ರಾಕ್ಷವ್ರೋ ಎಂಬಂಥದನು ಹೇಗೆ ತಿಳಿಯದೋಪಾದಿಯಲ್ಲಿ ಮಾಡಿತೋ, ಹಾಗೆ ಕರ್ಮದಿಂದ ವೃದ್ಧಿಯನ್ಯೆದಪಟ್ಟಂಥ ಅಜ್ಞಾನವು ಆತ್ಮನ ತೋರದೋಪಾದಿಯಲ್ಲಿ ಮಾಡುವುದಕೆ ಸಮರ್ಥವಾದೀತಲ್ಲ. ಹಾಗಾದರೆ ಈ ಅಂಧಕಾರದಲ್ಲಿ ಕೈಗೆ ಲಬ್ಧವಾದಂಥ ಮಣಿ ಪುಸ್ತಕ ಸಾಲಿಗ್ರಾಮ ರುದ್ರಾಕ್ಷಾದಿಗಳ ಯಥಾರ್ಥಜ್ಞಾನವು ಯಾವಾಗ ಬರುವುದೆಂದರೆ, ಸೂರ್ಯೋದಯವಾದ ಬಳಿಕ ಆಯಂಧಕಾರವು ನಾಶವಾಗಿ ಹೋಗುತ್ತಿರಲಾಗಿ ಆಬಳಿಕ ಕೈಗೆ ಲಬ್ಧವಾದಂಥ ಮಣಿಪುಸ್ತಕಾದಿಗಳ ಯಥಾರ್ಥಜ್ಞಾನವು ಹೇಗೆ ಬರುತ್ತಿದೆಯೋ, ಹಾಗೆ ದಾರ್ಷ್ಟಾಂತಿಕದಲ್ಲೂ ಕರ್ಮದಿಂದ ವೃದ್ಧಿಯನ್ಯೆದಪಟ್ಟಂಥ ಆತ್ಮವಾರಕವಾದ ಅಜ್ಞಾ

ನವು ಬ್ರಹ್ಮಾತ್ಮೈಕ್ಯಜ್ಞಾನದಿಂದ ನಾಶವಾಗಿ ಹೋಗುತ್ತಿರಲಾಗಿ, ಆಬಳಿಕ ಆತ್ಮನು ಯಥಾರ್ಥವಾಗಿಯೇ ತೋರುವನು. ಅದಂತಿರಲಿ. ದೃಷ್ಟಾಂತ ದಲ್ಲಿ ಸೂರ್ಯೋದಯದಿಂದ ನಿವೃತ್ತವಾದುದೇನು, ಇರುವಂಥದುದೇನು, ಎಂದು ಶಂಕೆ ಬರಲಾಗಿ, ಸೂರ್ಯೋದಯದಿಂದ ಮಣಿಪುಸ್ತಕಾದಿಗಳ ಸ್ವ ರೂಪವನು ತಿಳಿಯುದೋಪಾದಿಯಲ್ಲಿ ಮಾಡಿದಂಥ ಅಂಧಕಾರ ಮಾತ್ರವೇ ನಾಶವಾಗಿ ಹೋಯಿತು. ಆ ಯಿದ್ದಂಥ ಮೇಘಾವರಣವು ಏನ ಮಾಡಿ ಕೊಂಡಿತ್ತೆಂದರೆ, ಕೆಲವರಿಗೆ ದುಃಖವನು ಮಾಡಿಕೊಂಡಿತ್ತು. ಯಾರಿಗೆ ಸುಖವ ಮಾಡಿಕೊಂಡಿತ್ತೆಂದರೆ, ಮಾರ್ಗದಲ್ಲಿ ನಡೆದು ಹೋಗುವವರಿಗೂ ಕೃಷ್ಯಾದಿಗಳವರಿಗೂ ಸುಖವ ಮಾಡಿಕೊಂಡಿತ್ತು. ಯಾರಿಗೆ ದುಃಖವ ಮಾಡಿಕೊಂಡಿತ್ತೆಂದರೆ ಬತ್ತವ ಬಣಹಾಕುವವರಿಗೂ, ಹುಲ್ಲು ಬಣಹಾಕು ವವರಿಗೂ, ಸ್ನಾನವ ಮಾಡುವವರಿಗೂ, ವಾಯು ಶರೀರದವರಿಗೂ ದುಃಖ ವನೆ ಮಾಡಿಕೊಂಡಿತ್ತು. ಆಯೋಪಾದಿಯಲ್ಲೇ ದಾರ್ಷ್ಟಾಂತಿಕದಲ್ಲಿ ಹೋ ಗುವಂಥದೇನು, ಇರುವಂಥದೇನು ? ಎಂದರೆ– ಜ್ಞಾನದಿಂದ ಅಜ್ಞಾನವೇ ನಾಶವಾಗಿ ಹೋಗುವುದು, ಅಜ್ಞಾನಕಾರ್ಯವಾದಂಥ ದೇಹೇಂದ್ರಿಯಾದಿಗ ಳಾದರೆ ಇರುವುದು. ಈಯಿಂಥ ದೇಹೇಂದ್ರಿಯಾದಿಗಳು ಜ್ಞಾನಿಗಳಿಗೆ ಏನ ಮಾಡಿಕೊಂಡಿತ್ತೆಂದರೆ ಸುಖದುಃಖಗಳನು ಮಾಡಿಕೊಂಡೇ ಇದ್ದಿತು. ಅದಂತಿರಲಿ. ದೃಷ್ಟಾಂತದಲ್ಲಿ ಮೇಘಾವರಣವು ಅಂಧಕಾರದ ಕಾರ್ಯವಲ್ಲ ವಾದುದರಿಂದ ಅಂಧಕಾರವೇ ಹೋಗಿ ಮೇಘಾವರಣವಿರಬಹುದು. ದಾ ರ್ಷ್ಟಾಂತಿಕದಲ್ಲಾದರೆ ದೇಹೇಂದ್ರಿಯಾದಿಗಳು ಜ್ಞಾನದ ಕಾರ್ಯವಲ್ಲವಾದುದ ರಿಂದ ಕಾರಣವು ನಾಶವಾಗಿ ಹೋಗಿ ಕಾರ್ಯಗಳಾದಂಥ ದೇಹೇಂದ್ರಿಯಾದಿ ಗಳು ಹೇಗೆ ಇದ್ದೀತೆಂದರೆ, ಇದ್ದೀತು. ಅದೆಂತೆಂದರೆ ದೃಷ್ಟಾಂತಪೂ ರ್ವಕವಾಗಿ ನಿರೂಪಿಸುತ್ತ ಇದ್ದೇವೆ. ಆ ದೃಷ್ಟಾಂತವೇನೆಂದರೆ [1]ಲೋ ಕಿಸರ, ಧೂಮ, ಬಾಣವೇಗ, ದೃಷ್ಟಾಂತಗಳು. ಅದೆಂತೆಂದರೆ, ಲೋಕಿ ಸರಕ್ಕೆ ಕಾರಣವಾದಂಥ ಮೂಲವು ನಾಶವಾಗಿ ಹೋದ ಹೊತ್ತಿಗೂ ಆ ಲೋಕಿಸರವು ಹೇಗೆ ಇದೆಯೋ, ಧೂಮಕ್ಕೆ ಕಾರಣವಾದ ಅಗ್ನಿಯು ನಾಶವಾಗಿ ಹೋದಹೊತ್ತಿಗೂ ಆ ಧೂಮವು ಹೇಗೆ ಇದೆಯೋ, ಬಾಣ

---

ಪಾ— 1. ಲೋಳಸರ.

ವೇಗಕ್ಕೆ ಕಾರಣವಾದ ಆಕರ್ಷಣಸಂಯುಕ್ತವಾದ ನಾರಿಗೂ ಅದಱಲ್ಲಿ ಪ್ರಯೋಗಿಸಿರುವ ಬಾಣಕ್ಕೂ ಸಂಯೋಗವು ನಾಶವಾಗಿ ಹೋದಹೊತ್ತಿಗೂ ಬಾಣವೇಗವು ಹೇಗೆ ಇದೆಯೋ, ಹಾಗೆ ದಾರ್ಷ್ಟಾಂತಿಕದಲ್ಲೂ ದೇಹೇಂದ್ರಿಯಾದಿಗಳಿಗೆ ಕಾರಣವಾದಂಥ ಅಜ್ಞಾನವು ನಾಶವಾಗಿ ಹೋದ ಹೊತ್ತಿಗೂ ಆ ದೇಹೇಂದ್ರಿಯಾದಿಗಳು ಇರಬಹುದಲ್ಲ. ಆದರೆ ಈ ದೇಹೇಂದ್ರಿಯಾದಿಗಳಿಗೆ ನಾಶವಾವಾಗ ?— ಎಂದರೆ, ಹೇಳೇವು. ದೃಷ್ಟಾಂತದಲ್ಲಿ ಮೇಘಾವರಣದ ನಾಶಕ್ಕೆ ಹೇಗೆ ನಿಯಮವಿಲ್ಲವೋ, ಹಾಗೆ ದೇಹೇಂದ್ರಿಯಾದಿಗಳ ನಾಶಕ್ಕೂ ನಿಯಾಮಕವಿಲ್ಲ. ಪ್ರಾರಬ್ಧ ಯಾವಾಗ ನಾಶವಾಗುತ್ತಿದೆಯೋ ಆಗ ದೇಹೇಂದ್ರಿಯಾದಿಗಳು ನಾಶವಾಗುವವಲ್ಲ. ಅದಂತಿರಲಿ. ದೃಷ್ಟಾಂತದಲ್ಲಿ ಮೇಘಾವರಣವು ಅಂಧಕಾರಕ್ಕೆ ವೃದ್ಧಿಯು ಮಾಡುವುದು ಪ್ರತ್ಯಕ್ಷವಾಗಿ ಕಂಡಿದ್ದೇವೆ. ದಾರ್ಷ್ಟಾಂತಿಕದಲ್ಲಾದರೆ, ಕರ್ಮವು ಅಜ್ಞಾನಕ್ಕೆ ವೃದ್ಧಿಯನು ಮಾಡುವಂಥದ ಕಾಣೆವಲ್ಲ. ಕರ್ಮವು ಅದಱಂತೆ ವೃದ್ಧಿಯು ಮಾಡುತ್ತ ಇದೆ ಎಂಬುದು ಹೇಗೆ ಕೂಡುವುದೆಂದರೆ, ಕೂಡುವುದು. ಅದೆಂತೆಂದರೆ ಹೇಳೇವು. ತ್ರಿವಿಧಕರಣಗಳಿಂದ ಮಾಡಪಟ್ಟ ಕರ್ಮವು ವೃದ್ಧಿಕರ್ತನಾದ ಆತ್ಮನ ಕರ್ತನಾಗಿಯೂ, ಅಭೋಕ್ತನಾದ ಆತ್ಮನ ಭೋಕ್ತನಾಗಿಯೂ, ಸುಖದುಃಖಗಳಿಲ್ಲದಂಥ ಆತ್ಮನ ಸುಖದುಃಖವನುಂಟಾದವನಾಗಿಯೂ ಮಾಡುತ್ತಿದೆಯಾದಕಾರಣ ಹೀಗೆ ಮಾಡುವಂಥದೇ ಅಜ್ಞಾನಕ್ಕೆ ವೃದ್ಧಿ ಮಾಡುವ ಕರ್ಮವು, ಅಜ್ಞಾನನ ಹೋಗಿಸಲಾಱದಲ್ಲ. ಆದರೆ ಈ ಅಜ್ಞಾನವು ಏತಱಿಂದ ಹೋಗುವುದೆಂದರೆ ಆತ್ಮಜ್ಞಾನದಿಂದಲೇ ಹೋಗುವುದು, ಮತ್ತು ಏತಱಿಂದಲೂ ಹೋಗದು. ಆದರೆ ಈ ಆತ್ಮಜ್ಞಾನ ಏತಱಿಂದ ಬರುವುದೆಂದರೆ, ವಿಚಾರದಿಂದಲೇ ಬರಬೇಕು. ಅದಂತಿರಲಿ. ಈ ವಿಚಾರದಿಂದ ಜ್ಞಾನವು ಬರುವುದೆಂದು ಏತಕ್ಕೆ ಹೇಳಬೇಕು, ಕರ್ಮದಿಂದಲೇ ಬರಲಿ. ಅದೆಂತೆಂದರೆ— ದೃಷ್ಟಾಂತಪೂರ್ವಕವಾಗಿ ಹೇಳೇವು. ಅದು ಹೇಗೆಂದರೆ, ಅಗ್ನಿಯು ತಾನು ಕ್ಷುತ್ತನು ಹೋಗಿಸಲಾಱದೇಇದ್ದಹೊತ್ತಿಗೂ ಕ್ಷುತ್ತಿಗೆ ವೃದ್ಧಿಯು ಮಾಡಿದ ಹೊತ್ತಿಗೂ, ತಂಡುಲಗಳನು ಅನ್ನಾಕಾರವಾಗಿ ಪರಿಣಾಮವ ಮಾಡಿಸಿ ಹೇಗೆ ಕ್ಷುತ್ತನು ಹೋಗಿಸುತ್ತ ಇದೆಯೋ, ಹಾಗೆ ದಾರ್ಷ್ಟಾಂತಿ

ಕದಲ್ಲೂ ಕರ್ಮವು ಅಜ್ಞಾನವ ಹೋಗಲಾಡಿಸಲಾಱದಿದ್ದ ಹೊತ್ತಿಗೂ ಆ ಅಜ್ಞಾನಕ್ಕೆ ವೃದ್ಧಿಯ ಮಾಡಿದಹೊತ್ತಿಗೂ ಚಿತ್ತವೃತ್ತಿಯನು ಅಜ್ಞಾನವ ಹೋಗಿಸುವಂಥ ಜ್ಞಾನಾಕಾರವಾಗಿ ಪರಿಣಾಮವ ಮಾಡಿಸಿ ಆ ಅಜ್ಞಾನವನು ಹೋಗಿಸುತ್ತಿದೆ ಎಂದು ಹೇಳುವಣವೆಂದರೆ, ಹಾಗೆ ಹೇಳಕೂಡದು. ಏಕೆ ಹೇಳಕೂಡದು? ಎಂದರೆ ಹೇಳೇವು. ಅದಂತಿರಲಿ. ದೃಷ್ಟಾಂತದಲ್ಲಿ ಅಗ್ನಿ ತಂಡುಲಗಳನು ಅನ್ನಾಕಾರವಾಗಿ ಪರಿಣಾಮವ ಮಾಡಿಸಿ ಕ್ಷುತ್ತನು ಹೋಗಿಸುತ್ತಿದೆ ಎಂಬುದ ಪ್ರತ್ಯಕ್ಷವಾಗಿ ಕಂಡು ಇದ್ದೇವೆ. ಅದಱಿಂದ ದೃಷ್ಟಾಂತದಲ್ಲಿ ಈ ಅರ್ಥ ಕೂಡೀತು. ದಾರ್ಷ್ಟಾಂತಿಕದಲ್ಲಾದರೆ ಈಯರ್ಥವು ಕೂಡದು. ಅದು ಹೇಗೆ ಕೂಡದೆಂದರೆ ಹೇಳೇವು. ಕರ್ಮವು ಅಜ್ಞಾನವ ಹೋಗಲಾಡಿಸುವಂಥ ಜ್ಞಾನವನು ಹುಟ್ಟಿಸಿ ಆ ಜ್ಞಾನದ್ವಾರಾ ಅಜ್ಞಾನವ ಹೋಗಿಸುತ್ತದೆ ಎಂದು ಹೇಳುತ್ತಿದೆ. ಹಾಗೆ ಹೇಳಕೂಡದು. ಮತ್ತೆ ಹೇಗೆಂದರೆ ಹೇಳೇವು. ಅದಂತಿರಲಿ. ಜ್ಞಾನವೆಂದರೇನೆಂದರೆ– ಚಿತ್ತವೃತ್ತಿಗೆ ಅಕರ್ತ್ರಾದ್ಯಾಕಾರವಾಗಿ ಪರಿಣಾಮವಷ್ಟೇ ಜ್ಞಾನವೆನಿಸುವುದು. ಕರ್ಮವಾದರೆ ಚಿತ್ತವೃತ್ತಿಗೆ ಕರ್ತ್ರಾದ್ಯಾಕಾರವಾಗಿಯಷ್ಟೆ ಪರಿಣಮಿಸುತ್ತಿದೆ. ಚಿತ್ತವೃತ್ತಿಯನು ಕರ್ತ್ರಾದ್ಯಾಕಾರವಾಗಿ ಪರಿಣಾಮವ ಮಾಡಿಸಿದ ಕರ್ಮವು ಚಿತ್ತವೃತ್ತಿಯನು ಅಕರ್ತ್ರಾದ್ಯಾಕಾರವಾಗಿ ಪರಿಣಾಮವ ಮಾಡಿಸಿದಕರ್ಮವು ಚಿತ್ತವೃತ್ತಿಯನು ಅಕರ್ತ್ರಾದ್ಯಾಕಾರವಾಗಿ ಪರಿಣಾಮವ ಮಾಡಿ ಅಜ್ಞಾನವನು ಹೇಗೆ ಹೋಗಲಾಡಿಸೀತು ? ಹೋಗಿಸಲಾಱದಾದಕಾರಣ ಕರ್ಮದಿಂದ ಅಜ್ಞಾನವು ಹೋಗಲಾಱದು. ಹಾಗಾದರೆ ಜ್ಞಾನವು ಏತಱಿಂದ ಬರುವುದು ? ಎಂದರೆ ವಿಚಾರದಿಂದಲೇ ಬರಬೇಕು. ಯಾವ ವಿಚಾರದಿಂದ ಬರಬೇಕೆಂದರೆ, ಆತ್ಮಾನಾತ್ಮವಿಚಾರದಿಂದಲೇ ಬರಬೇಕು. ಮತ್ತೆ ಏತಱಿಂದಲೂ ಬಾರದೆಂಬುದಱಲ್ಲಿ ದೃಷ್ಟಾಂತ ಉಂಟೆ ಎಂದರೆ, ಉಂಟು. ಆ ದೃಷ್ಟಾಂತವೇನೆಂದರೆ, ಗಾಯತ್ರಿಯು ದೃಷ್ಟಾಂತ. ಅದೆಂತೆಂದರೆ ಹೇಳೇವು. ಅರ್ಥದ ಸಂಗಡ ಕೂಡಿರುವಂಥ ಗಾಯತ್ರಿಪುರುಷನಿಂದ ಹೊಂದಪಟ್ಟಹೊತ್ತಿಗೂ ಆ ಗಾಯತ್ರಿಯ ಅರ್ಥವು ತಿಳಿಯಪಡಲಿಲ್ಲ. ಏತಕ್ಕೆ ತಿಳಿಯಪಡಲಿಲ್ಲವೆಂದಡೆ, ಗಾಯತ್ರಿಯ ಅರ್ಥವನು ವಿಚಾರಿಸಲಿಲ್ಲವಾದಕಾರಣ ಗಾಯತ್ರಿಯ

ಅರ್ಥವು ತಿಳಿಯಪಡಲಿಲ್ಲ. ಗಾಯತ್ರಿಯ ಅರ್ಥವನು ತಿಳಿಯಬೇಕೆಂದು ವ್ಯತಿಕಾಸ್ನಾನವ ಮಾಡಿದ ಹೊತ್ತಿಗೂ, ಸೇತುಸ್ನಾನವ ಮಾಡಿದ ಹೊತ್ತಿಗೂ, ಗಂಗಾಸಾಗರಸಂಗಮದಲ್ಲಿ ಸಾವಿರ ವರ್ಷ ಅರ್ಧೋದಯಸ್ನಾನವ ಮಾಡಿದ ಹೊತ್ತಿಗೂ, ನೂರು ಸಹಸ್ರ ಭೋಜನಗಳ ಮಾಡಿಸಿದ ಹೊತ್ತಿಗೂ, ಪಂಚಾಗ್ನಿಮಧ್ಯದಲ್ಲಿ ಹತ್ತು ಸಾವಿರ ವರ್ಷ ತಪಸ್ಸ ಮಾಡಿದ ಹೊತ್ತಿಗೂ, ಷೋಡಶಮಹಾದಾನಗಳ ನೂರಾವೃತ್ತಿಯ ಮಾಡಿದಹೊತ್ತಿಗೂ, ಸಪ್ತಕೋಟಿಮಹಾಮಂತ್ರಗಳ ನೂರು ವರ್ಷ ಜಪಿಸಿದ ಹೊತ್ತಿಗೂ, ಅನೇಕ ಶಿವ ವಿಷ್ಣೂಪಾಸನೆಗಳ ಮಾಡಿದ ಹೊತ್ತಿಗೂ, ನೂರು ಅಶ್ವಮೇಧಗಳ ಮಾಡಿದ ಹೊತ್ತಿಗೂ, ಗಾಯತ್ರಿಯ ಅರ್ಥವು ತಿಳಿಯಪಡಲಿಲ್ಲ. ಹಾಗಾದರೆ ಗಾಯತ್ರಿಯ ಅರ್ಥವ ಹೀಗೆ ಎಂದು ಹೇಳಿದ ತರುವಾಯದಲ್ಲಿ ಮನಸ್ಸಿನಿಂದ ವಿಚಾರಿಸಿ ಆ ಗಾಯತ್ರಿಯರ್ಥವನು ಹೇಗೆ ತಿಳಿಯುತ್ತಿದ್ದಾನೆಯೋ, ಹಾಗೆ ದಾರ್ಷ್ಟಾಂತಿಕದಲ್ಲೂ ವ್ಯತಿಕಾಸ್ನಾನವ ಮಾಡಿದುದರಿಂದ ಜ್ಞಾನವು ಬರಲಾರದು; ಆತ್ಮಾನಾತ್ಮವಿಚಾರದಿಂದಲೇ ಆತ್ಮಜ್ಞಾನವು ಬರಬೇಕು. ಈಯರ್ಥದಲ್ಲಿ ಅನುಭವ ಉಂಟೆ ಎಂದರೆ, ಸರ್ವಾನುಭವಸಿದ್ಧವಾದಂಥ ಅನುಭವವು ಉಂಟು, ಹೇಳೇವು. ಅದೆಂತೆಂದರೆ, ಕರ್ಮದ್ವಾರಾ ಹೇಳುತ್ತಿದ್ದೇವೆ. ಕರ್ಮವೆಂದರೇನೆಂದರೆ– ಸ್ನಾನ, ಸಂಧ್ಯಾವಂದನೆ, ಜಪ, ಔಪಾಸನ, ಸ್ವಾಧ್ಯಾಯ, ದೇವತಾರ್ಚನೆ ಅತಿಥಿಪೂಜೆ, ವೈಶ್ವದೇವ, ತೀರ್ಥಾಟನ ಇವು ಮೊದಲಾದುವಷ್ಟೆ ಕರ್ಮಗಳೆಂದು ಹೇಳಪಡುತ್ತಿವೆ. ಈ ಕರ್ಮಗಳನು ನಾವು ಎಷ್ಟುಮಾತ್ರವಾದರೂ ಮಾಡಿಕೊಂಡು ಬಂದೆವಲ್ಲ. ಮಾಡಿಕೊಂಡು ಬಂದುದರಿಂದ ನಮ್ಮ ಸ್ವರೂಪವು ನಮಗೆ ತಿಳಿಯಪಡಲಿಲ್ಲ. ಅದರಿಂದ ಕರ್ಮಗಳ ಮಾಡಿಕೊಂಡು ಬಂದುದರಿಂದ ಯಾರಿಗೂ ಆತ್ಮಜ್ಞಾನವು ಬರಲಾರದು. ವಿಚಾರದಿಂದಲೇ ಆತ್ಮಜ್ಞಾನವು ಬರಬೇಕು. ಮತ್ತು ಈ ವಿಚಾರದಿಂದಲೇ ಆತ್ಮಜ್ಞಾನವು ಬರಬೇಕೆಂಬುದರಲ್ಲಿ ಸರ್ವಾನುಭವಸಿದ್ಧವಾದಂಥ ದೃಷ್ಟಾಂತವ ಹೇಳೇವು. ಅದೆಂತೆಂದರೆ— ಒಬ್ಬ ಪುರುಷನು ಇಂದು ತಿಥಿ ವಾರ ನಕ್ಷತ್ರ ಯೋಗ ಕರಣಗಳು ಆವುವೆಂದು ಕೇಳಿ ವಿಚಾರಿಸಿದನಾದರೆ ಈ ಹೊತ್ತು ತಿಥಿ ಯಿದು, ವಾರವಿದು, ನಕ್ಷತ್ರವಿದು, ಯೋಗ

ಧಿದು, ಕರಣವಿದು, ಎಂದು ಹೇಳುತ್ತ ಇದ್ದಾನೆ. ವಿಚಾರಿಸದೆ ಹೋದನಾದರೆ ನಾನು ವಿಚಾರಿಸಲಿಲ್ಲವಾದುದಱಿಂದ ಅಱಿಯೆನೆಂದು ಹೇಳುತ್ತ ಇದ್ದಾನೆ. ಈ ಹೊತ್ತು ಸ್ನಾನಸಂಧ್ಯಾವಂದನಾದಿಗಳ ಮಾಡಲಿಲ್ಲವಾದುದಱಿಂದ ಅಱಿಯನೆಂದು ಹೇಳುವುದಿಲ್ಲ. ಮತ್ತು ಗುಡಿಯೊಳಗೆ ದೇವರಿಗೆ ಅಭಿಷೇಕ ಪೂಜೆ ನೈವೇದ್ಯಗಳಾಯಿತೇ? ಎಂದು ಕೇಳಿದರೆ, ವಿಚಾರಿಸಿದ್ದನಾದರೆ ಅಯಿತು ಇಲ್ಲ ಎಂದು ಹೇಳುತ್ತಿದ್ದಾನೆ; ವಿಚಾರಿಸದೆ ಇದ್ದರೆ ನಾನು ವಿಚಾರಿಸಲಿಲ್ಲ, ಅದಱಿಂದ ಅಱಿಯೆನೆಂದು ಹೇಳುತ್ತ ಇದ್ದಾನೆ. ನಾನು ಸಂಧ್ಯಾವಂದನಾಗ್ನಿಷ್ಟೋಮಾದಿಗಳ ಮಾಡಲಿಲ್ಲವಾದುದಱಿಂದ ಅಱಿಯೆನೆಂದು ಹೇಳುವುದಿಲ್ಲ. ಈ ಪ್ರಕಾರವಾಗಿ ಲೋಕದಲ್ಲಿ ಸಮಸ್ತ ಪ್ರಾಣಿಗಳಿಂದಲೂ ಯಾವ ವಸ್ತು ವಿಚಾರಪಡುತ್ತಿದೆಯೋ, ಆ ವಸ್ತು ಜ್ಞಾನವು ಯಥಾರ್ಥವಾಗಿ ಬರುತ್ತಿದೆ. ಕರ್ಮಾದಿಗಳಿಂದ ಆ ವಸ್ತುಜ್ಞಾನವು ಬರಲಿಲ್ಲ. ಹಾಗೆ ದಾರ್ಷ್ಟಾಂತಿಕದಲ್ಲೂ ಆತ್ಮಜ್ಞಾನವು ಸಮಸ್ತ ಪ್ರಾಣಿಗಳಿಗೂ ವಿಚಾರದಿಂದಲೇ ಬರಬೇಕು. ಕರ್ಮೋಪಾಸನಾದಿಗಳಿಂದ ಬರಲಾಱದು. ಸಿದ್ಧ. ಅದಂತಿರಲಿ.

ಕರ್ಮದಿಂದ ಜ್ಞಾನವು ಬರುವುದೆಂದು ಶ್ರುತಿಗಳಲ್ಲಿ ಹೇಳಪಟ್ಟದ್ದು ಹಾಗೆ, ಕರ್ಮದಿಂದ ಜ್ಞಾನವು ಬಾರದೆಂದು ಹೇಳಕೂಡದು. ಹಾಗೆ ಹೇಳಿದುದಾದರೆ ಕರ್ಮದಿಂದ ಜ್ಞಾನ ಬರುವುದೆಂದು ಹೇಳುವ ಶ್ರುತಿಗಳಿಗೆ ವೈಯರ್ಥ್ಯ ಬರುವುದೆಂದು ಹೇಳಿತಾದರೆ, ವೈಯರ್ಥ್ಯವು ಬಾರದು, ಅದೆಂತೆಂದರೆ, ಹೇಳೇವು. ಕರ್ಮೈಕದೇಶವು ಜ್ಞಾನಕ್ಕೆ ಪರಂಪರಯಾ ಸಾಧನವೆನಿಸುವುದು. ಅದೆಂತೆಂದರೆ, ಹೇಳೇವು. ಕರ್ಮವು ಎಷ್ಟು ವಿಧಗಳೆಂದು ತಿಳಿದರಷ್ಟೆ. ಕರ್ಮೈಕದೇಶಕ್ಕೆ ಜ್ಞಾನದ ಕುಱಿತು ಪರಂಪರಾ ಸಾಧನತ್ವವ ಹೇಳಬೇಕು. ಕರ್ಮಸ್ವರೂಪವ ಅಱಿಯದೆ ಕರ್ಮೈಕದೇಶಕ್ಕೆ ಪರಂಪರಾಸಾಧನತ್ವವ ಹೇಳಕೂಡದಾದಕಾರಣ ಕರ್ಮವು ಎಷ್ಟು ವಿಧವೆಂದು ವಿಚಾರಿಸುತ್ತ ಇದ್ದೇವೆ. ಆದರೆ ಕರ್ಮವು ಎಷ್ಟು ವಿಧಗಳೆಂದರೆ– ಲೌಕಿಕಕರ್ಮ, ಅಲೌಕಿಕಕರ್ಮ. ಲೌಕಿಕಕರ್ಮವು ಜೀವನದಲ್ಲಿ ಹೇತುವಾಗಿ ಹೋಯಿತು; ಅದಱಿಂದ ಜ್ಞಾನವು ಹುಟ್ಟಲಾಱದು. ಆ ಕಡಮೆಯ ಅರ್ಥವಾದ ವೈದಿಕಕರ್ಮವು ಐದು ವಿಧವಾಗಿ

ಇರುವುದು. ಆ ಐದು ವಿಧಗಳೇನೆಂದರೆ- ನಿತ್ಯವೆನುತಲೂ, ನೈಮಿತ್ತಿಕವೆನುತಲೂ, ಕಾಮ್ಯವೆನುತಲೂ, ನಿಷಿದ್ಧವೆನುತಲೂ, ಪ್ರಾಯಶ್ಚಿತ್ತವೆನುತಲೂ, ಕರ್ಮವು ಐದು ವಿಧಗಳು. ಈ ಐದಱೊಳಗೆ ಆ ಕಾಮ್ಯಕರ್ಮದಿಂದ ಜ್ಞಾನವು ಬರಲಾಱದು, ಸ್ವರ್ಗಾದಿಗಳು ಮಾತ್ರ ಬರುವುದು; ನಿಷಿದ್ಧಕರ್ಮದಿಂದ ಕಾಲಸೂತ್ರಾದಿನರಕವು ಬರುವುದು. ಪ್ರಾಯಶ್ಚಿತ್ತಕರ್ಮವಾದರೆ ಪುರುಷನಿಗೆ ಕರ್ಮದಲ್ಲಿ ಅಧಿಕಾರವ ಸಂಪಾದಿಸಿ ಪ್ರತ್ಯವಾಯವನು ಹೋಗಲಾಡಿಸುವುದು. ಈ ಐದು ಕರ್ಮಗಳೊಳಗೆ ಮೂಱು ಕರ್ಮಗಳು ಜ್ಞಾನಕ್ಕೆ ಸಾಧಕಗಳಲ್ಲದೆ ಹೋಯಿತು. ಕಡೆಯೆರಡು ಕರ್ಮಗಳು ಮೂಱು ವಿಧಗಳಾಗಿರುವುವು. ಆ ಮೂಱು ವಿಧಗಳೇನೆಂದರೆ- ಸಾತ್ತ್ವಿಕವೆನುತಲೂ, ರಾಜಸವೆನುತಲೂ, ತಾಮಸವೆನುತಲೂ, ಮೂಱು ವಿಧಗಳು. ಆ ಮೂಱುವಿಧಗಳೊಳಗೆ ರಾಜತಾಮಸಗಳೆರಡು ಜನ್ಮಗಳನೂ ಸುಖದುಃಖಗಳನೂ ಕೊಟ್ಟುಕೊಂಡೇ ಇರುವುದು; ಅದಱಿಂದ ಜ್ಞಾನವು ಬರಲಾಱದು. ಅಶೇಷವಾದಂಥ ಸಾತ್ತ್ವಿಕಕರ್ಮವಾದರೆ ಜ್ಞಾನಕ್ಕೆ ಚಿತ್ತಶುದ್ಧಿದ್ವಾರಾ ಪರಂಪರಾಸಾಧನವೆಂದು ಹೇಳಪಡುವುದಱಿಂದ ಜ್ಞಾನವು ಬರಲಾಱದು. ಅದೆಂತೆಂದರೆ ಹೇಳೇವು. ಸಾತ್ವಿಕಕರ್ಮದಿಂದ ಚಿತ್ತಶುದ್ಧಿ ಬಂದು, ಚಿತ್ತಶುದ್ಧಿದ್ವಾರಾ ನಿತ್ಯಾನಿತ್ಯವಸ್ತುವಿವೇಕವು ಬಂದು, ನಿತ್ಯಾನಿತ್ಯವಸ್ತುವಿವೇಕದ್ವಾರಾ ಇಹಾಮುತ್ರಫಲಭೋಗವಿರಾಗವು ಬಂದು, ಇಹಾಮುತ್ರಫಲಭೋಗವಿರಾಗದ್ವಾರಾ ಶಮಾದಿಷಟ್ಕಸಂಪತ್ತಿಯು ಬಂದು, ಶಮಾದಿಷಟ್ಕದ್ವಾರಾ ಮುಮುಕ್ಷುತ್ವವು ಬಂದು, ಮೋಕ್ಷದ್ವಾರಾ ಸದ್ಗುರುಲಾಭವುಂಟಾಗಿ, ಸದ್ಗುರುಲಾಭದ್ವಾರಾ ಶ್ರವಣವುಂಟಾಗಿ, ಶ್ರವಣದ್ವಾರಾ ಮನನವುಂಟಾಗಿ, ಮನನದ್ವಾರಾ ನಿದಿಧ್ಯಾಸವುಂಟಾಗಿ, ನಿದಿಧ್ಯಾಸದ್ವಾರಾ ಜ್ಞಾನವು ಬರುವುದು. ಈಪ್ರಕಾರವಾಗಿ ಕರ್ಮೈಕದೇಶವು ಜ್ಞಾನದ ಕುಱಿತು ಪರಂಪರಾ ಸಾಧನವೆನಿಸುವುದು. ಈ ವಿಚಾರವಾದರೆ ಸಾಕ್ಷಾತ್ಸಾಧನವೆನಿಸುವುದು. ಈಯರ್ಥದಲ್ಲಿ ದೃಷ್ಟಾಂತವುಂಟೆ ? ಎಂದರೆ ಉಂಟು, ಹೇಳೇವು. ಅದೆಂತೆಂದರೆ-ಹಸಿವು ಆದವನಿಗೆ ಹಸಿವು ಹೋಗುವಲ್ಲಿ ಪಕ್ವವಾದಂಥ ಅನ್ನವು ಹೇಗೆ ಸಾಕ್ಷಾತ್ಸಾಧನವೋ, ಉತ್ತು ಬಿತ್ತುವುದು ಮೊದಲಾದುದು ಹೇಗೆ ಪರಂಪರಾ ಸಾಧನವೋ, ಹಾಗೆ ಈ ವಿಚಾರವು

ಜ್ಞಾನಕ್ಕೆ ಸಾಕ್ಷಾತ್ಸಾಧನವು; ಕರ್ಮೈಕದೇಶವು ಜ್ಞಾನಕ್ಕೆ ಪರಂಪರಾ ಸಾಧನವೆನಿಸುವುದು. ಈಯರ್ಥದಲ್ಲಿ ಸಂಶಯವಿಲ್ಲ, ಸಿದ್ಧ.

ಯಾವನ ಈಪ್ರಕಾರವಾಗಿ ಅಜ್ಞಾನದ ಸ್ವರೂಪವ ಚೆನ್ನಾಗಿ ವಿಚಾರಿಸಿ, ಆ ಆತ್ಮನೇ ನಾನೆಂದು ತಿಳಿಯುತ್ತಿದ್ದಾನೆಯೋ, ಅವನೇ ಜೀವನ್ಮುಕ್ತನು; ಅವನೇ ವಿದ್ವಾಂಸನು; ಅವನೇ ಯೋಗಿ; ಅವನೇ ಸಚ್ಚಿದಾನಂದಸ್ವರೂಪವಾದ ಬ್ರಹ್ಮವೆಂದು ಶಾಸ್ತ್ರಸಿದ್ಧಾಂತವು.

ಇಂತೀ ಕನ್ನಡಭಾಷೆಯೊಳ್ ವಿರಚಿಸಿದ ವಾಸುದೇವಯತೀಂದ್ರಪ್ರೋಕ್ತವಪ್ಪ
ವೇದಾಂತವಿವೇಕಸಾರದೊಳ್
ಅಜ್ಞಾನಪ್ರಕರಣಮಂ ಪೇಳ್ದುದು.
ತ್ರಯೋದಶಪ್ರಕರಣಂ.

## ಹದಿನಾಲ್ಕನೆಯ ಪ್ರಕರಣಂ.

— ಜ್ಞಾನಾಜ್ಞಾನಪ್ರಕರಣ[1] —

ಶ್ಲೋ॥ ಮಾತಾಮಹಮಹಾಶೈಲಂ ಮಹಸ್ತದಪಿತಾಮಹಂ ॥
ಜಗತಃ ಕಾರಣಂ ವಂದೇ ಕಂಠಾದುಪರಿವಾರಣಂ ॥೧॥
ಜ್ಞಾನಾಜ್ಞಾನೇ ವಿಚಾರ್ಯೇತೇ ಕಾರಣಂ ಬಂಧಮೋಕ್ಷಯೋಃ ॥
ಅನುಗ್ರಹಾರ್ಥಂ ಲೋಕಾನಾಂ ಮಯಾ ಶಾಸ್ತ್ರಪ್ರದರ್ಶನಂ ॥೨॥

ಜ್ಞಾನಸ್ವರೂಪವನು ಅಜ್ಞಾನಸ್ವರೂಪವನು ವಿಚಾರಿಸುತ್ತಿದ್ದೇವೆ.

ಜ್ಞಾನವೆಂದರೇನು, ಅಜ್ಞಾನವೆಂದರೇನು? ಎಂದರೆ— ತನ್ನನು ತಾನು ಯಥಾರ್ಥವಾಗಿ ತಿಳಿವಂಥದೇ ಜ್ಞಾನವೆನಿಸುವುದು; ತನ್ನನು ತಾನು ಯಥಾರ್ಥವಾಗಿ ತಿಳಿಯದೆ ಇರುವಂಥದೇ ಅಜ್ಞಾನವೆನಿಸುವುದು. ಇನ್ನು ಜ್ಞಾನಾಜ್ಞಾನಗಳ ವಿಶೇಷವಾಗಿ ವಿಚಾರಿಸುತ್ತಿದ್ದೇವೆ.

ಮತ್ತು ಜ್ಞಾನವೆಂದರೇನು ಅಜ್ಞಾನವೆಂದರೇನು? ಎಂದರೆ— ನಾನು ಬ್ರಹ್ಮವೆಂದು ತಿಳಿವಂಥದು ಜ್ಞಾನವೆನಿಸುವುದು; ನಾನು ಮನುಷ್ಯನೆಂದು ತಿಳಿವಂಥದು ಅಜ್ಞಾನವೆಂದೆನಿಸುವುದು.

1. ಇದು ೧೯ ನೆಯ ಪ್ರಕರಣವಾಗಿ ಬಂದು ಪ್ರತಿಯಲ್ಲಿದೆ.

ಇನ್ನು ಇನ್ನು ಜ್ಞಾನಾಜ್ಞಾನಗಳ ವಿಶೇಷವಾಗಿ ವಿಚಾರಿಸುತ್ತ ಇದ್ದೇವೆ. ಮತ್ತು ಜ್ಞಾನವೆಂದರೇನು, ಅಜ್ಞಾನವೆಂದರೇನು ? ಎಂದರೆ— ಅದ್ವಿತೀಯನಾದ ಆತ್ಮನ ಸದ್ವಿತೀಯನಾಗಿಯೂ, ಅಪರಿಚ್ಛಿನ್ನನಾದ ಆತ್ಮನ ಪರಿಚ್ಛಿನ್ನನಾಗಿಯೂ, ಅಸಂಗಿಯಾದ ಆತ್ಮನ ಸಂಗಿಯಾಗಿಯೂ, ಅಭೋಕ್ತನಾದಂಥ ಆತ್ಮನ ಭೋಕ್ತನಾಗಿಯೂ, ಅಕರ್ತನಾದಂಥ ಆತ್ಮನ ಕರ್ತನಾಗಿಯೂ ಯಾವುದು ತೋರಿಸುತ್ತಿದೆಯೋ ಅದು ಅಜ್ಞಾನವೆನಿಸುವುದು. ಜ್ಞಾನವೆಂದರೇನು ? ಎಂದರೆ, ಅದ್ವಿತೀಯನಾದ ಆತ್ಮನ ಅದ್ವಿತೀಯನಾಗಿಯೇ ತೋರುವಣ, ಅಪರಿಚ್ಛಿನ್ನನಾದ ಆತ್ಮನ ಅಪರಿಚ್ಛಿನ್ನನಾಗಿಯೇ ತೋರುವಣ, ಅಸಂಗಿಯಾದ ಆತ್ಮನ ಅಸಂಗಿಯಾಗಿಯೇ ತೋರುವಣ, ಅಕರ್ತನಾದ ಆತ್ಮನ ಅಕರ್ತನಾಗಿಯೇ ತೋರುವಣ, ಅಭೋಕ್ತನಾದ ಆತ್ಮನ ಅಭೋಕ್ತನಾಗಿಯೇ ತೋರುವಣ— ಹೀಗೆ ತೋರುವುದು ಯಾವುದುಂಟೋ ಅದೇ ಜ್ಞಾನವೆನಿಸುವುದು.

ಹಾಗಾದರೆ ಅದ್ವಿತೀಯನಾದ ಆತ್ಮನ ಸದ್ವಿತೀಯನಾಗಿ ತೋರುವಂಥದು ಅಜ್ಞಾನವೆಂದು ಹೇಳಿದಿರಿ. ಹಾಗೆ ಸದ್ವಿತೀಯನಾಗಿ ತೋರುತ್ತಿದ್ದಾನೆಯೆ ? ಎಂದರೆ, ತೋರುತ್ತಿದ್ದಾನೆ. ಅದೆಂತೆಂದರೆ— ನೀನೆನುತಲೂ, ನಾನೆನುತಲೂ, ಈತನೆನುತಲೂ, ಆತನೆನುತಲೂ, ಯಜ್ಞದತ್ತನೆನುತಲೂ, ವಿಷ್ಣುಮಿತ್ರನೆನುತಲೂ, ಹೀಗೆ ಅನೇಕವಿಧಗಳಾಗಿ ತೋರುತ್ತ ಇದ್ದಾನೆ. ಹೀಗೆ ತೋರುವಂಥದು ಯಾವುದುಂಟೋ ಅದು ಅಜ್ಞಾನವೆನಿಸುವುದು.

ಹಾಗಾದರೆ ಅಪರಿಚ್ಛಿನ್ನನಾದ ಆತ್ಮನ ಪರಿಚ್ಛಿನ್ನನಾಗಿ ತೋರುವಂಥದು ಅಜ್ಞಾನವೆಂದು ಹೇಳಿದಿರಿ. ಹಾಗೆ ಪರಿಚ್ಛಿನ್ನನಾಗಿ ತೋರುತ್ತಿದ್ದಾನೆಯೆ ? ಎಂದರೆ ತೋರುತ್ತಿದ್ದಾನೆ. ಅದೆಂತೆಂದರೆ ಹೇಳೇವು. ಈ ಮನೆಯೊಳಗೆ ಇದ್ದೆನು, ಆ ಮನೆಯೊಳಗೆ ಇರಲಿಲ್ಲ. ಈ ಊರೊಳಗೆ ಇದ್ದೆನು, ಆ ಊರೊಳಗೆ ಇರಲಿಲ್ಲ. ಈ ದೇಶದೊಳಗೆ ಇದ್ದೆನು, ಆ ದೇಶದೊಳಗೆ ಇರಲಿಲ್ಲವೆಂದು ಹೀಗೆ ಪರಿಚ್ಛಿನ್ನವಾಗಿ ತೋರುವಂಥದು ಯಾವುದುಂಟೋ ಅದು ಅಜ್ಞಾನವೆನಿಸುವುದು.

ಹಾಗಾದರೆ ಅಸಂಗಿಯಾದಂಥ ಆತ್ಮನ ಸಂಗಿಯಾಗಿ ತೋರುವಂ

ಥದು ಅಜ್ಞಾನವೆಂದು ಹೇಳಿದಿರಿ. ಹಾಗೆ ಸಂಗಿಯಾಗಿ ತೋಱುತ್ತಿದ್ದಾನೆಯೆ ? ಎಂದರೆ—ತೋಱುತ್ತಿದ್ದಾನೆ. ಅದೆಂತೆಂದರೆ ಹೇಳೇವು. ಅವರ ಸಂಗಡ ಕೂಡಿಕೊಂಡಿದ್ದೆನು, ಅಣ್ಣನ ಸಂಗಡ ಕೂಡಿಕೊಂಡು ಇದ್ದೆನು, ತಮ್ಮನ ಸಂಗಡ ಕೂಡಿಕೊಂಡು ಇದ್ದೆನು– ಎಂದು ಹೀಗೆ ಸಂಗಿಯಾಗಿ ತೋಱುತ್ತ ಇದ್ದಾನೆ. ಹೀಗೆ ತೋಱುವಂಥದು ಯಾವುದುಂಟೋ ಅದು ಅಜ್ಞಾನವೆನಿಸುವುದು.

ಹಾಗಾದರೆ ಅಕರ್ತನಾದಂಥ ಆತ್ಮನ ಕರ್ತನಾಗಿ ತೋಱುವಂಥದೇ ಅಜ್ಞಾನವೆಂದು ಹೇಳಿದಿರಿ. ಹಾಗೆ ಕರ್ತನಾಗಿ ತೋಱುತ್ತಿದ್ದಾನೆಯೆ ? ಎಂದರೆ ತೋಱುತ್ತಿದ್ದಾನೆ. ಅದೆಂತೆಂದರೆ– ನಾನು ಸ್ನಾನ ಮಾಡಿದೆನು, ಸಂಧ್ಯಾವಂದನೆಯ ಮಾಡಿದೆನು, ನಾನು ಜಪವ ಮಾಡಿದೆನು, ನಾನು ಔಪಾಸನವ ಮಾಡಿದೆನು, ನಾನು ಅಗ್ನಿಹೋತ್ರವ ಮಾಡಿದೆನು, ನಾನು ಅಗ್ನಿಷ್ಟೋಮವ ಮಾಡಿದೆನು– ಎಂದು ಹೀಗೆ ಕರ್ತನಾಗಿ ತೋಱುತ್ತ ಇದ್ದಾನೆ. ಹೀಗೆ ತೋಱುವಂಥದು ಯಾವುದುಂಟೋ ಅದು ಅಜ್ಞಾನವೆನಿಸುವುದು.

ಹಾಗಾದರೆ ಅಭೋಕ್ತನಾದಂಥ ಆತ್ಮನ ಭೋಕ್ತನಾಗಿ ತೋಱುವಂಥದು ಯಾವದುಂಟೋ ಅದು ಅಜ್ಞಾನವೆಂದು ಹೇಳಿದಿರಿ. ಹಾಗೆ ಭೋಕ್ತನಾಗಿ ತೋಱುತ್ತಿದ್ದಾನೆಯೆ? ಎಂದರೆ ತೋಱುತ್ತಿದ್ದಾನೆ. ಅದೆಂತೆಂದರೆ— ನಾನು ಭೋಜನವ ಮಾಡಿದೆನು, ನಾನು ಅಪೂಪಗಳ ಭಕ್ಷಿಸಿದೆನು, ನಾನು ಬಾಳೆಯ ಹಣ್ಣುಗಳ ಭಕ್ಷಿಸಿದೆನು, ನಾನು ಮಾವಿನ ಹಣ್ಣ ಭಕ್ಷಿಸಿದೆನು, ನಾನು ಹಲಸಿನ ಹಣ್ಣ ಭಕ್ಷಿಸಿದೆನು– ಎಂದು ಹೀಗೆ ಭೋಕ್ತನಾಗಿ ತೋಱುತ್ತ ಇದ್ದಾನೆ. ಹೀಗೆ ತೋಱುವಂಥದು ಯಾವುದುಂಟೋ ಅದು ಅಜ್ಞಾನವೆನಿಸುವುದು, ಸಂದೇಹವಿಲ್ಲ ಸಿದ್ಧ.

ಹಾಗಾದರೆ ಅದ್ವಿತೀಯನಾದ ಆತ್ಮನು ಅದ್ವಿತೀಯನಾಗಿ ತೋಱುವಂಥದು ಜ್ಞಾನವೆಂದು ಹೇಳಿದಿರಿ. ಹಾಗೆ ಅದ್ವಿತೀಯನಾಗಿ ತೋಱುತ್ತಿದ್ದಾನೆಯೆ ? ಎಂದರೆ, ತೋಱುತ್ತಿದ್ದಾನೆ. ಅದೆಂತೆಂದರೆ ಹೇಳೇವು. ಆತ್ಮನಿಗೆ ಅದ್ವಿತೀಯತ್ವವ ಅಱಿತಷ್ಟು ಆತ್ಮನು ಅದ್ವಿತೀಯನಾಗಿದ್ದಾನೆಂದು ಹೇಳಬೇಕು. ಆತ್ಮನಿಗೆ ಅದ್ವಿತೀಯತ್ವವೇನೆಂದರೆ—ಸಜಾತೀಯ ವಿಜಾತೀಯ ಸ್ವಗತಭೇದರಹಿತತ್ವವು ಅದ್ವಿತೀಯತ್ವವೆನಿಸುವುದು. ಅದೆಂ

ವಲ್ಲವಾಗಲಾಗಿ ಸತ್ತು ತೋಱುತ್ತಿದೆ ಎಂದು ಹೇಳಬೇಕು. ಆ ತೋಱು ಕೊಂಡಿರುವಂಥ ಸತ್ತು ಮತ್ತೊಂದಱಿಂದ ತೋಱುಕೊಂಡಿದೆಯೋ ತಾನೆ ತ್ತೋಱುತ್ತಿದೆಯೋ ಎಂದು ಹೇಳಿದುದಾದರೆ ಆ ಸತ್ತೇ ಚಿತ್ತಾಗಿ ಸಿದ್ಧಿಸುತ ದೆ. ಅಲ್ಲದೆ ಅನ್ಯದಿಂದ ತೋಱುತ್ತದೆ ಎಂದು ಹೇಳಿದುದಾದರೆ ಆ ಸತ್ತನು ತೋಱಿಸುವ ಅನ್ಯವು ಸದಂತರವೋ ಸದ್ವಿಲಕ್ಷಣವೋ ಎಂದರೆ ಸದಂತರ ವೆನುತಲೇ ಹೇಳಬೇಕು. ಹಾಗೆ ಹೇಳಿದಿದ್ದರೆ ಆ ಸದಂತರವು ತಾನು ನಿ ಕೃಷ್ಟವಾಗಿ ಇದ್ದುಕೊಂಡು ಈ ಸತ್ತನು ತೋಱಿಸುತ್ತಿದೆಯೋ; ಇಲ್ಲದೆ ತಾನು ತೋಱುತ್ತ ಇದ್ದು ಸಮಾನವಾಗಿ ತೋಱಿಸುತ್ತ ಇದ್ದುಕೊಂಡು ಈ ಸತ್ತನು ತೋಱಿಸುತ್ತಿದೆಯೋ; ಇಲ್ಲದೆ ಬಂದಱಿಂದ ಅತಿಶಯುವನು ಹೊಂದಿ ಈ ಸತ್ತನು ತೋಱಿಸುತ್ತಿದೆಯೋ; ಇಲ್ಲದೆ ತಾನು ತೋಱುತ್ತ ಇದ್ದುಕೊಂಡು ಈ ಸತ್ತನು ತೋಱಿಸುತ್ತಿದೆಯೋ ಎಂದು ವಿಚಾರಿಸುತ್ತ ಇದ್ದೇವೆ. ಆ ಆತ್ಮಸ್ವರೂಪವಾದ ಸತ್ತನು ತೋಱಿಕೊಂಡು ಇರು ವಂಥ ಸದಂತರವು ಅದಕಿಂತಲೂ ನಿಕೃಷ್ಟವಾಗಿ ಇದ್ದುಕೊಂಡು ಆ ಸತ್ತ ನು ತೋಱಿಸುತ್ತಿದೆ ಎಂದು ಹೇಳಿದುದಾದರೆ ಸೂರ್ಯನಿಗಿಂತಲೂ ನಿಕೃಷ್ಟ ವಾಗಿರುವಂಥ ದೀಪವು ಸೂರ್ಯನನು ತೋಱಿಸಬೇಕು. ಹಾಗೆ ತೋಱಿ ಸಲಿಲ್ಲವಾದುದಱಿಂದ ಆ ಸದಂತರವು ಸತ್ತಿಗಿಂತಲೂ ನಿಕೃಷ್ಟವಾಗಿ ಇದ್ದು ಕೊಂಡು ಆ ಸತ್ತನು ತೋಱಿಸುತ್ತಿದೆ ಎಂದು ಹೇಳಕೂಡದು. ಹಾಗಾ ದರೆ ಆ ಸದಂತರವು ಸತ್ತಿಗೆ ಸಮಾನವಾಗಿ ಇದ್ದುಕೊಂಡು ಆ ಸತ್ತನು ತೋಱಿಸುತ್ತಿದೆ ಎಂದು ಹೇಳಿದುದಾದರೆ ದೀಪಕ್ಕೆ ಸಮಾನವಾಗಿರುವಂಥ ದೀಪಾಂತರವು ಆ ದೀಪವ ತೋಱಿಸಬೇಕು. ಹಾಗೆ ತೋಱಿಸಲಿಲ್ಲವಾದ ಕಾರಣ ಆ ಸದಂತರವು ಸತ್ತಿಗೆ ಸಮಾನವಾಗಿ ಇದ್ದುಕೊಂಡು ಆ ಸತ್ತನು ತೋಱಿಸುತ್ತಿದೆ ಎಂದು ಹೇಳಕೂಡದು. ಹಾಗಾದರೆ ಆ ಸದಂತರವು ತಾನು ಬಂದಱಿಂದ ಪ್ರಕಾಶಾತಿಶಯುವ ಹೊಂದಿ ಆ ಸತ್ತನು ತೋಱಿಸು ತ್ತಿದೆ ಎಂದು ಹೇಳುವಣವೆಂದರೆ, ಆ ವಸ್ತುವಿಗೆ ಪ್ರಕಾಶಾತಿಶಯುವನು ಸಂಪಾದಿಸುವ ವಸ್ತುವು ಸತ್ತೋ ಅಸತ್ತೋ ಎಂದು ನಿರೂಪಿಸಕೂಡದಾ ಗಲಾಗಿಯೂ; ಅದು ಸತ್ತು ಎಂದುಕೊಳ್ಳೋಣವೆಂದರೆ, ಅದು ಸಪ್ರಕಾ ಶವೋ ಅಪ್ರಕಾಶವೋ ಎಂದು ನಿರೂಪಿಸಕೂಡದಾಗಲಾಗಿಯೂ; ಅದು

ಥದು ಅಜ್ಞಾನವೆಂದು ಹೇಳಿದಿರಿ. ಹಾಗೆ ಸಂಗಿಯಾಗಿ ತೋಱುತ್ತಿದ್ದಾನೆಯೆ ? ಎಂದರೆ—ತೋಱುತ್ತಿದ್ದಾನೆ. ಅದೆಂತೆಂದರೆ ಹೇಳೇವು. ಅವರ ಸಂಗಡ ಕೂಡಿಕೊಂಡಿದ್ದೆನು, ಅಣ್ಣನ ಸಂಗಡ ಕೂಡಿಕೊಂಡು ಇದ್ದೆನು, ತಮ್ಮನ ಸಂಗಡ ಕೂಡಿಕೊಂಡು ಇದ್ದೆನು– ಎಂದು ಹೀಗೆ ಸಂಗಿಯಾಗಿ ತೋಱುತ್ತ ಇದ್ದಾನೆ. ಹೀಗೆ ತೋಱುವಂಥದು ಯಾವುದುಂಟೋ ಅದು ಅಜ್ಞಾನವೆನಿಸುವುದು.

ಹಾಗಾದರೆ ಅಕರ್ತ್ತನಾದಂಥ ಆತ್ಮನ ಕರ್ತ್ತನಾಗಿ ತೋಱುವಂಥದೇ ಅಜ್ಞಾನವೆಂದು ಹೇಳಿದಿರಿ. ಹಾಗೆ ಕರ್ತ್ತನಾಗಿ ತೋಱುತ್ತಿದ್ದಾನೆಯೆ ? ಎಂದರೆ ತೋಱುತ್ತಿದ್ದಾನೆ. ಅದೆಂತೆಂದರೆ– ನಾನು ಸ್ನಾನ ಮಾಡಿದೆನು, ಸಂಧ್ಯಾವಂದನೆಯ ಮಾಡಿದೆನು, ನಾನು ಜಪವ ಮಾಡಿದೆನು, ನಾನು ಔಪಾಸನವ ಮಾಡಿದೆನು, ನಾನು ಅಗ್ನಿಹೋತ್ರವ ಮಾಡಿದೆನು, ನಾನು ಅಗ್ನಿಷ್ಟೋಮವ ಮಾಡಿದೆನು– ಎಂದು ಹೀಗೆ ಕರ್ತ್ತನಾಗಿ ತೋಱುತ್ತ ಇದ್ದಾನೆ. ಹೀಗೆ ತೋಱುವಂಥದು ಯಾವುದುಂಟೋ ಅದು ಅಜ್ಞಾನವೆನಿಸುವುದು.

ಹಾಗಾದರೆ ಅಭೋಕ್ತ್ತನಾದಂಥ ಆತ್ಮನ ಭೋಕ್ತ್ತನಾಗಿ ತೋಱುವಂಥದು ಯಾವದುಂಟೋ ಅದು ಅಜ್ಞಾನವೆಂದು ಹೇಳಿದಿರಿ. ಹಾಗೆ ಭೋಕ್ತ್ತನಾಗಿ ತೋಱುತ್ತಿದ್ದಾನೆಯೆ? ಎಂದರೆ ತೋಱುತ್ತಿದ್ದಾನೆ. ಅದೆಂತೆಂದರೆ— ನಾನು ಭೋಜನವ ಮಾಡಿದೆನು, ನಾನು ಅಪೂಪಗಳ ಭಕ್ಷಿಸಿದೆನು, ನಾನು ಬಾಳೆಯ ಹಣ್ಣುಗಳ ಭಕ್ಷಿಸಿದೆನು, ನಾನು ಮಾವಿನ ಹಣ್ಣ ಭಕ್ಷಿಸಿದೆನು, ನಾನು ಹಲಸಿನ ಹಣ್ಣ ಭಕ್ಷಿಸಿದೆನು– ಎಂದು ಹೀಗೆ ಭೋಕ್ತ್ತನಾಗಿ ತೋಱುತ್ತ ಇದ್ದಾನೆ. ಹೀಗೆ ತೋಱುವಂಥದು ಯಾವುದುಂಟೋ ಅದು ಅಜ್ಞಾನವೆನಿಸುವುದು, ಸಂದೇಹವಿಲ್ಲ ಸಿದ್ಧ.

ಹಾಗಾದರೆ ಅದ್ವಿತೀಯನಾದ ಆತ್ಮನು ಅದ್ವಿತೀಯನಾಗಿ ತೋಱುವಂಥದು ಜ್ಞಾನವೆಂದು ಹೇಳಿದಿರಿ. ಹಾಗೆ ಅದ್ವಿತೀಯನಾಗಿ ತೋಱುತ್ತಿದ್ದಾನೆಯೆ ? ಎಂದರೆ, ತೋಱುತ್ತಿದ್ದಾನೆ. ಅದೆಂತೆಂದರೆ ಹೇಳೇವು. ಆತ್ಮನಿಗೆ ಅದ್ವಿತೀಯತ್ವವ ಅಱಿತಷ್ಟೆ ಆತ್ಮನು ಅದ್ವಿತೀಯನಾಗಿದ್ದಾನೆಂದು ಹೇಳಬೇಕು. ಆತ್ಮನಿಗೆ ಅದ್ವಿತೀಯತ್ವವೇನೆಂದರೆ—ಸಜಾತೀಯ ವಿಜಾತೀಯಸ್ವಗತಭೇದರಹಿತತ್ವವು ಅದ್ವಿತೀಯತ್ವವೆನಿಸುವುದು. ಅದೆಂ

ತೆಂದರೆ, ದೃಷ್ಟಾಂತಪೂರ್ವಕವಾಗಿ ನಿರೂಪಿಸುತ್ತ ಇದ್ದೇವೆ. ಆ ದೃಷ್ಟಾಂತವೇನೆಂದರೆ — ವೃಕ್ಷವು ದೃಷ್ಟಾಂತ. ಆ ದೃಷ್ಟಾಂತವಾದ ವೃಕ್ಷದಲ್ಲಿ ಸಜಾತೀಯವಿಜಾತೀಯಸ್ವಗತವು ಅದಱ ಭೇದವು ಉಂಟೆಂಬುದನು ಹೇಳಿ ತೋಱಿಸಿ ದಾರ್ಷ್ಟಾಂತವಾದ ಆತ್ಮನಲ್ಲಿ ಸಜಾತೀಯವಿಜಾತೀಯಸ್ವಗತವು ಅದಱ ಭೇದವು ಇಲ್ಲವೆಂಬುದ ತೋಱಿಸುತ್ತ ಇದ್ದೇವೆ. ದೃಷ್ಟಾಂತವಾದ ವೃಕ್ಷನಲ್ಲಿ ಸಜಾತೀಯವಿಜಾತೀಯಸ್ವಗತವು ಅದಱ ಭೇದವು ಹೇಗೆಂದರೆ ಹೇಳೇವು. ವೃಕ್ಷಕ್ಕೆ ವೃಕ್ಷಾಂತರವು ಸಜಾತೀಯವೆನಿಸುವುದು; ಶಿಲಾದಿಗಳು ವಿಜಾತೀಯವೆನಿಸುವುದು; ಪತ್ರಪುಷ್ಪಶಾಖಾದಿಗಳು ಸ್ವಗತವೆನಿಸುವುದು. ಈ ಮೂಱು ವಿಧಗಳಾದ ಸಜಾತೀಯವಿಜಾತೀಯಸ್ವಗತವು ಅದಱ ಭೇದವು ಜಗತ್ಸೃಷ್ಟವಾದ ಪದಾರ್ಥಗಳಿಗೆಲ್ಲವಕ್ಕೂ ಉಂಟು. ದಾರ್ಷ್ಟಾಂತಿಕವಾದ ಆತ್ಮನಲ್ಲಾದರೆ ಈ ಸಜಾತೀಯವಿಜಾತೀಯ ಸ್ವಗತವು ಅದಱ ಭೇದವು ಇಲ್ಲವೆಂದು ಶ್ರುತಿ ಹೇಳುತ್ತ ಇದೆ. ಅದಂತಿರಲಿ.

ಆತ್ಮನಲ್ಲಿ ಸಜಾತೀಯವಿಜಾತೀಯಸ್ವಗತವು ಅದಱ ಭೇದವು ಪ್ರಸಕ್ತವಾಗರಷ್ಟೆ ಇಲ್ಲವೆಂದು ಶ್ರುತಿ ಹೇಳಬೇಕು. ಪ್ರಸಕ್ತವಾಯಿತೆ? ಎಂದರೆ, ಪ್ರಸಕ್ತವಾಯಿತು. ಹೇಗೆ ಪ್ರಸಕ್ತವಾಯಿತೆಂದರೆ ಹೇಳೇವು. ವಸ್ತುತ್ವ ಸಾಮಾನ್ಯದಿಂದ ತೋಱುತ್ತ ಇದೆ. ವಸ್ತುತ್ವಸಾಮಾನ್ಯವೆಂದರೇನೆಂದರೆ-- ಆತ್ಮ ಒಂದು ವಸ್ತು, ಅನಾತ್ಮ ಒಂದು ವಸ್ತು; ಆಯನಾತ್ಮವಸ್ತುವಿನಲ್ಲಿ ಸಜಾತೀಯವಿಜಾತೀಯಸ್ವಗತವು ಅದಱ ಭೇದವು ಇದೆಯಾದಕಾರಣ, ಆತ್ಮನು ವಸ್ತುವಾದುದಱಿಂದ ಆತ್ಮನಲ್ಲೂ ಸಜಾತೀಯವಿಜಾತೀಯಸ್ವಗತವು ಅದಱ ಭೇದವು ಪ್ರಸಕ್ತವಾಯಿತು. ಅದುಕಾರಣ ಆತ್ಮನಲ್ಲಿ ಸಜಾತೀಯವಿಜಾತೀಯಸ್ವಗತವು ಅದಱ ಭೇದವು ಇಲ್ಲವೆಂದು ಶ್ರುತಿ ಹೇಳುತ್ತ ಇದೆ.

ಶ್ರುತಿ ಹೇಳಿದ್ದಾದರೆ ಈ ಹೇಳಪಟ್ಟ ಅರ್ಥವು ನಮಗೆ ಬುದ್ಧಿಯಲ್ಲಿ ಹೇಗೆ ತಿಳಿಯಬಹುದು? ಎಂದರೆ, ವಿಚಾರಿಸಿದರೆ ತಿಳಿಯಬಹುದು. ಅದೆಂತೆಂದರೆ ಹೇಳೇವು. ಆತ್ಮನೆಂದರೆ ಸದ್ರೂಪನಷ್ಟೆ. ಸದ್ರೂಪನಾದ ಅತ್ಮನಿಗೆ ಸದಂತರವು ಇಲ್ಲವಾದಕಾರಣ ಸಜಾತೀಯವಿಜಾತೀಯ ಭೇದವು ಇಲ್ಲ. ಹಾಗೆ ಇಲ್ಲವೆಂದು ಹೇಳಕೂಡದು. ಏಕೆ ಹೇಳಕೂ

ಡದು? ಎಂದರೆ, ನೀನು ಇದ್ದೆ; ನಾನು ಇದ್ದೇನೆ, ಈತನು ಇದ್ದಾನೆ, ಆತನು ಇದ್ದಾನೆ, ದೇವದತ್ತನು ಇದ್ದಾನೆ, ಯಜ್ಞದತ್ತನು ಇದ್ದಾನೆ, ಕೃಷ್ಣನು ಇದ್ದಾನೆ, ರಾಮನು ಇದ್ದಾನೆ ಎನುತಲೂ, ಪೃಥಿವೀ ಸತೀ ಆಪಸ್ಸತ್ಯಃ, ತೇಜಸ್ಸತ್, ವಾಯುಸ್ಸನ್, ಆಕಾಶಃ ಸನ್— ಎಂದು ಸತ್ತಿಗೆ ಅನೇಕ ಭೇದವು ಕಾಣಪಡುತ್ತಿದೆಯಾದಕಾರಣ ಆತ್ಮನಿಗೆ ಸಜಾತೀಯವು ವು ವಿಜಾತೀಯವು ಸಜಾತೀಯಭೇದವು ವಿಜಾತೀಯಭೇದವು ಇಲ್ಲವೆಂದು ಹೇಳಬಹುದಲ್ಲ. ಅದಂತಿರಲಿ.

ಹಾಗೆ ಹೇಳಕೂಡದು. ಸತ್ತಿಗೆ ಏಕರೂಪವಾಗಿ ಇದೆಯೆಂದಷ್ಟೇ, ಅದಕ್ಕೆ ಭೇದವಿಲ್ಲವೆಂದಷ್ಟು ಹೇಳಿದಿರಿ. ಹಾಗೆ ಘಟಃ ಪಟಃ ಎಂಬುದ ಬಲ್ಲೂ ಏಕರೂಪತ್ವವಿದೆಯಾಗಲಾಗಿ, ಇಲ್ಲಿಯು ಭೇದವಿಲ್ಲದೆ ಹೋಗ ಬೇಕು. ಭೇದವಿದೆಯಾದಕಾರಣ ಏಕರೂಪತ್ವದಿಂದ ಸತ್ತಿಗೆ ವಿಜಾತೀಯುವು ಸಜಾತೀಯಭೇದವು ಇಲ್ಲವೆಂದು ಹೇಳಿದಿರಾದರೆ, ಆ ಘಟಗಳಲ್ಲಿ ಆಕಾರವೈಲಕ್ಷಣ್ಯವು ಇದೆಯಾಗಲಾಗಿ ಸಜಾತೀಯವಿಜಾತೀಯಸ್ವಗತವು ಅದಲ ಭೇದವು ಇದೆ. ಸತ್ತಿನಲ್ಲಿಯಾದರೆ ಆಕಾರವೈಲಕ್ಷಣ್ಯ ಇಲ್ಲವಾದ ಕಾರಣ ಸಜಾತೀಯವಿಜಾತೀಯವು ಅದಲ ಭೇದವು ಇಲ್ಲ. ಅದಱಿಂದ ಸದ್ರೂಪನಾದ ಆತ್ಮನಿಗೆ ಸಜಾತೀಯಭೇದವು ಇಲ್ಲ.

ಹಾಗಾದರೆ ಸತ್ತಾದಂಥ ಆತ್ಮನಿಗೆ ವಿಜಾತೀಯವು ವಿಜಾತೀಯಭೇದವು ಇದೆ ಎಂದು ಹೇಳಿಕೆಯಾದರೆ, ಉಂಟೋ ಇಲ್ಲವೋ ಎಂದು ವಿಚಾರಿಸುತ್ತ ಇದ್ದೇವೆ. ಆತ್ಮನೆಂದಾದರೆ ಸದ್ರೂಪನಷ್ಟೇ. ಆ ಸದ್ರೂಪನಾದ ಆತ್ಮನಿಗೆ ವಿಜಾತೀಯವೇನೆಂದರೆ — ಅಸತ್ತು ವಿಜಾತೀಯವೆನಿಸುವುದು. ಅಸತ್ತುಯೆಂದರೇನೆಂದರೆ— ಇಲ್ಲದೆ ಇರುವಂಥ ಪ್ರಪಂಚವು ಅಸತ್ತೆನಿಸುವುದು. ಆ ಅಸತ್ತಾದಂಥ ಪ್ರಪಂಚವು ಸತ್ತಾದಂಥ ಆತ್ಮನಿಗೆ ಸದ್ವಿತೀಯತ್ವವ ಸಂಪಾದಿಸಲಾಗದು. ಅದೆಂತೆಂದರೆ, ದೃಷ್ಟಾಂತಪೂರ್ವಕವಾಗಿ ನಿರೂಪಿಸುತ್ತ ಇದ್ದೇವೆ. ಆ ದೃಷ್ಟಾಂತವೇನೆಂದರೆ, ವಂಧ್ಯಾಪುತ್ರನು ದೃಷ್ಟಾಂತ. ಆ ಅಸತ್ತಾದಂಥ ವಂಧ್ಯಾಪುತ್ರನು ತಾಯಿನು ಪುತ್ರವತಿಯಾಗಿ ಹೇಗೆ ಕೂಡಲಿಲ್ಲವೋ ಹಾಗೆ ದಾರ್ಷ್ಟಾಂತಿಕದಲ್ಲೂ ಅಸತ್ತಾದಂಥ ಪ್ರಪಂಚವು ಸತ್ತಾದಂಥ ಆತ್ಮನಿಗೆ ಸದ್ವಿತೀಯತ್ವವನು ಸಂಪಾ

ದಿಸಲಾಗದು. ಅದರಿಂದ ಸತ್ತಾದಂಥ ಆತ್ಮನಿಗೆ ವಿಜಾತೀಯವು ವಿಜಾತೀಯಭೇದವು ಇಲ್ಲ.

ಹಾಗಾದರೆ ಸಚ್ಚಿದಾನಂದಗಳಿಂದ ಆತ್ಮನಿಗೆ ಸ್ವಗತವು ಸ್ವಗತಭೇದವು ತೋರುತ್ತಿದೆಯೆಂದು ಹೇಳಿಕೆಯಾದರೆ, ಅದು ತೋರಲಿಲ್ಲವೆಂಬುದನು ದೃಷ್ಟಾಂತಪೂರ್ವಕವಾಗಿ ಹೇಳೇವು. ಆ ದೃಷ್ಟಾಂತವೇನೆಂದರೆ, ವೃಕ್ಷವು ದೃಷ್ಟಾಂತ. ಆ ದೃಷ್ಟಾಂತವಾದ ವೃಕ್ಷಕ್ಕೆ ಪತ್ರಪುಷ್ಪಫಲಾದಿಗಳಿಂದ ಬಂದಂಥ ಸ್ವಗತವು ಸ್ವಗತಭೇದವು ಇಲ್ಲ. ಹಾಗೆ ಆತ್ಮನಿಗೆ ಸಚ್ಚಿದಾನಂದಗಳಿಗೆ ಸ್ವಗತವು ಸ್ವಗತಭೇದವು ಇಲ್ಲ. ಅದೆಂತೆಂದರೆ ಹೇಳೇವು. ದೃಷ್ಟಾಂತವಾದ ವೃಕ್ಷದಲ್ಲಿ ಪತ್ರಪುಷ್ಪಫಲಾದಿಗಳಿಂದ ಸ್ವಗತವು ಸ್ವಗತಭೇದವು ಪ್ರತ್ಯಕ್ಷವಾಗಿ ತೋರುತ್ತಿದೆಯಾದಕಾರಣ ಆ ವೃಕ್ಷಕ್ಕೆ ಸ್ವಗತವು ಸ್ವಗತಭೇದವು ಉಂಟು. ದಾರ್ಷ್ಟಾಂತವಾದ ಆತ್ಮನಿಗೆ ಆದರೆ ಸಚ್ಚಿದಾನಂದಗಳು ಸ್ವರೂಪವಾಯಿತಾಗಲಾಗಿಯೂ, ಶಬ್ದಮಾತ್ರದಿಂದ ಭೇದವು ತೋರುವಹೊತ್ತಿಗೂ, ಆ ಸಚ್ಚಿದಾನಂದಗಳಿಂದ ಪ್ರತ್ಯಕ್ಷವಾಗಿ ಭೇದವು ತೋರಲಿಲ್ಲವಾಗಲಾಗಿಯೂ. ಸಚ್ಚಿದಾನಂದಗಳಿಂದ ಆತ್ಮನಿಗೆ ಸ್ವಗತವು ಸ್ವಗತಭೇದವು ಇಲ್ಲ. ಅದಂತಿರಲಿ

ಹಾಗೆ ಆತ್ಮನಿಗೆ ಸ್ವಗತಭೇದವು ಇಲ್ಲವೆಂದು ಹೇಳಕೂಡದು. ಏತಕ್ಕೆ ಹೇಳಕೂಡದು ? ಎಂದರೆ, ಶಬ್ದಭೇದವಿದೆಯಾಗಲಾಗಿಯೂ, ಹಸ್ತಕರ ಪಾಣಿಶಬ್ದಗಳೋಪಾದಿಯಲ್ಲಿ ಪರ್ಯಾಯಶಬ್ದಗಳು ಅಲ್ಲವಾಗಲಾಗಿಯೂ, ಶಬ್ದಭೇದವುಂಟಾದಾಗಲೇ ಅರ್ಥಭೇದವುಂಟಾಗಲಾಗಿಯೂ, ಸಚ್ಚಿದಾನಂದಗಳಿಗೆ ಭೇದವುಂಟು. ಅದರಿಂದ ಸಚ್ಚಿದಾನಂದಗಳಿಂದ ಆತ್ಮನಿಗೆ ಸ್ವಗತಭೇದವುಂಟೆಂದು ಹೇಳಿದುದಾದರೆ ಆ ಸ್ವಗತಭೇದವು ಇಲ್ಲ. ಅದೆಂತೆಂದರೆ– ದೃಷ್ಟಾಂತಪೂರ್ವಕವಾಗಿ ನಿರೂಪಿಸುತ್ತ ಇದ್ದೇವೆ ಆ ದೃಷ್ಟಾಂತವೇನೆಂದರೆ, ಅಗ್ನಿಯು ದೃಷ್ಟಾಂತ. ಈ ದೃಷ್ಟಾಂತವಾದ ಅಗ್ನಿಯಲ್ಲಿ ಸ್ವಗತಭೇದವಿಲ್ಲವೆ ? ಎಂದರೆ, ಇಲ್ಲ. ಹೇಗೆ ಇಲ್ಲವೆಂದರೆ, ಹೇಳೇವು. ರೋಹಿತವೆನುತಲೂ, ಉಷ್ಣವೆನುತಲೂ, ಪ್ರಕಾಶವೆನುತಲೂ ಮೂರು ವಿಧಗಳು. ಈ ಮೂರು ವಿಧಗಳಾದ ರೋಹಿತೋಷ್ಣಪ್ರಕಾಶಗಳು ಭಿನ್ನಗಳಾಗಿ ಇದ್ದ ಹೊತ್ತಿಗೂ ಈ ಶಬ್ದಗಳಿಗೆ ಅರ್ಥಭೇದವು ತೋ

ಸಪ್ರಕಾಶವೆಂದು ಹೇಳುವಣವೆಂದರೆ— ಸಪ್ರಕಾಶವಾದಂಥ ಸತ್ತೇ ಚಿತ್ತಾಯಿತಾಗಲಾಗಿಯೂ, ಸತ್ತಿಗೆ ಸಪ್ರಕಾಶತ್ವವನು ಅದ್ವಿತೀಯತ್ವವನು ವೇದಾಂತಗಳಿಂದಲು ಅನ್ಯರಾದವರಿಂದ ಅಂಗೀಕರಿಸಪಡಲಿಲ್ಲವಾಗಲಾಗಿಯೂ ಆ ಆತ್ಮಸ್ವರೂಪವಾದ ಸತ್ತನು ತೋಱಿಸುವಂಥ ಸದಂತರಕೆ ಪ್ರಕಾಶಾತಿಶಯುವ ಸಂಪಾದಿಸುವಂಥ ಸತ್ತೂ ಅಪ್ರಕಾಶವೆನುತಲೆ ಹೇಳಬೇಕು. ಹಾಗೆ ತಿಳಿದುದಾದರೆ ಲೋಕದಲ್ಲಿ ಅಪ್ರಕಾಶವಾದೊಂದು ವಸ್ತುವು ಮತ್ತೊಂದು ವಸ್ತುವಿಗೆ ಪ್ರಕಾಶಾತಿಶಯುವನು ಸಂಪಾದಿಸುವಂಥದ ಕಾಣೆವಾದಕಾರಣ ಅನ್ಯವಸ್ತುವಿನಿಂದ ತಾನು ಅತಿಶಯುವ ಹೊಂದಿ ಆತ್ಮಸ್ವರೂಪವಾದ ಸತ್ತಿಗೆ ಪ್ರಕಾಶಾತಿಶಯುವನು ಸಂಪಾದಿಸುವಂಥ ಸದಂತರಕ್ಕೆ ಪ್ರಕಾಶಾತಿಶಯುವ ಸಂಪಾದಿಸುವಂಥ ಸತ್ತು ಮತ್ತೊಂದ ಹೇಳಬೇಕು. ಹೀಗೆ ಹೇಳಿದುದಾದರೆ ಆ ಸತ್ತಿಗೆ ಪ್ರಕಾಶಾತಿಶಯುವನು ಸಂಪಾದಿಸುವಂಥ ಸತ್ತಿಗೆ ಪ್ರಕಾಶಾತಿಶಯುವ ಸಂಪಾದಿಸುವಂಥ ಸತ್ತು ಮತ್ತೊಂದು, ಅದಕ್ಕೆ ಪ್ರಕಾಶಾತಿಶಯುವ ಸಂಪಾದಿಸುವಂಥ ಸತ್ತು ಮತ್ತೊಂದು, ಅದಕ್ಕೆ ಪ್ರಕಾಶಾತಿಶಯುವ ಸಂಪಾದಿಸುವಂಥ ಸತ್ತು ಮತ್ತೊಂದು ಎಂದು ಈ ಪ್ರಕಾರವಾಗಿ ಅನವಸ್ಥಾದೋಷವನು ಸತ್ತಿಗೆ ಅಪ್ರಕಾಶತ್ವವನು ಹೇಳುವ ವಾದಿಗಳಿಗೆ ಸಿಡಿಲು[1] ಬಿದ್ದೋಪಾದಿಯಲ್ಲೇ,[1] ಅಪರಿಹಾರ್ಯವಾಗುವುದು. ಲೋಕದಲ್ಲಿ ಒಂದಕ್ಕೆ ಅತಿಶಯುವ ಸಂಪಾದಿಸುವಂಥ ವಸ್ತುವು ತಾನು ಅತಿಶಯುವಾಗಿ ಇರದೆ ಇರುವಂಥದುವ ಕಾಣೆವು. ಮತ್ತೆ ಹೇಗೆಂದರೆ? ಆಯಾವಸ್ತುವು ತಾನೆ ಅತಿಶಯುವಾಗಿ ಇದ್ದುಕೊಂಡೆ ಮತ್ತೊಂದು ವಸುವಿಗೆ ಅತಿಶಯುವ ಸಂಪಾದಿಸುತ್ತಿದೆ ಎಂಬಂಥದುದ [2]ಅನ್ಯಾದಿ[2]ಗಳೆಲ್ಲಿ ಕಂಡು ಇದ್ದೇವೆ. ಅದಱಿಂದ ಪಕ್ಷತ್ರಯುವು ಕೂಡದಾಗಲಾಗಿ ಸತ್ತನು ತೋಱಿಸುವಂಥ ಸದಂತರವು ತಾನು ಸಪ್ರಕಾಶವಾಗಿ ಇದ್ದುಕೊಂಡು ಆ ಸತ್ತನು ತೋಱಿಸುತ್ತಿದೆ ಎಂಗು ಹೇಳಬೇಕು. ಹೀಗೆ ಹೇಳಿದುದಾದರೆ ಸಪ್ರಕಾಶವಾದ ಸದಂತರವೆ ಚಿತ್ತನಿಸಿತು. ಅದಂತಿರಲಿ.

---

ಪಾ— 1. ಬಂದು ಬೀಳುವಹಾಗೆ ಬೀಳುವುದು 2. ಆಜ್ಞಾನಿ 3. ದೀಪಾದಿಗಳಿಂದ ಘಟಾದಿಗಳು ಹಾಗೆ ಸತ್ತಿಗೆ ವಿಲಕ್ಷಣವಾದಂಥೀ ಎಂದು ಈಕಡೆ ಅಧಿಕವಾಗಿ ಪಾಠಇದೆ,

ಲೋಕದಲ್ಲಿ ಆಕಾಶದೋಪಾದಿಯಲ್ಲಿ ಉಪಾಧಿ ಹೊಂದಿತಾಗಿ ಸತ್ತಾದ್ವಯುವನು ನಿರೂಪಿಸಕೂಡಲಾಗದಾಗಿಯೂ ಸತ್ತೆ ಅದ್ವಿತೀಯವೆಂದು ಶ್ರುತ್ಯಾದಿಗಳಿಂದ ನಿರೂಪಿಸಸಪಟ್ಟಿದೆಯಾಗಲಾಗಿಯೂ ಆತ್ಮಸ್ವರೂಪವಾದಂಥ ಸತ್ತೇ ಸಪ್ರಕಾಶವಾಗಿ ಇದೆಯಾದಕಾರಣ ಅದೇ ಚಿತ್ತೆಂದು ಸಿದ್ಧಿಸಿತು.

ಹೀಗೆ ವಿತರ್ಕ ಹೇಳಬೇಕು? ಘಟಾದಿಗಳಿಗೆ ವಿಲಕ್ಷಣವಾದಂಥ † ವಸ್ತುವಿನಿಂದ ಸತ್ತೇ ತೋರುತ್ತಿದೆಯೆಂದು ಹೇಳುವನೆಂದರೆ—ಹಾಗೆ ಹೇಳಕೂಡದು. ವಿತರ್ಕ ಹೇಳಕೂಡದೆಂದರೆ, ದೃಷ್ಟಾಂತದಲ್ಲಿ ಘಟಾದಿಗಳು ದೀಪಾದಿಗಳು ಸಮಾನಸತ್ತಾಕಗಳಾಗಿವೆಯಾದಕಾರಣ ಆ ಘಟಾದಿಗಳಿಂದಲೂ ಆ ದೀಪಾದಿಗಳಿಗೆ ಘಟಾದಿಗಳನು ಅಪೇಕ್ಷಿಸಿ ಸಪ್ರಕಾಶತ್ವವು ಪ್ರತ್ಯಕ್ಷವಾಗಿ ಕಾಣಪಡುತಿದೆಯಾದಕಾರಣ ದೀಪಾದಿಗಳಿಂದ ಘಟಾದಿಗಳು ತೋರಬಹುದು. ದೃಷ್ಟಾಂತದಲ್ಲಾದರೆ, ಸತ್ತಿಗೆ ವಿಲಕ್ಷಣವಾದ ವಸ್ತುವು ಅಸತ್ತಾಗಲಾಗಿ ಅದಕ್ಕೆ ವಸ್ತುತ್ವವ ಹೇಳಕೂಡದು. ಅದರಿಂದ ಸದ್ವಿಲಕ್ಷಣವಾದ ಅಸತ್ತಿನಿಂದ ಸತ್ತು ತೋರುತ್ತಿದೆ ಎಂದು ಹೇಳಕೂಡದು. ಲೋಕದಲ್ಲಿ ಅಸನರಕಾದಿಗಳಲ್ಲಿ ಇಲ್ಲದೆ ಇದ್ದಂಥ ದೀಪಾದಿಗಳಿಂದಲಾದರೂ ಭ್ರಾಂತಿಯಿಂದ ತೋರುವಂಥ ಉಪಾಧ್ಯನೇಕದಿಂದಲಾದರೂ ಘಟಾದಿಗಳು ತೋರುತ್ತಲಿದೆ ಎಂದು ಹೇಗೆ ಹೇಳಕೂಡದೋ, ಹಾಗೆ ಸತ್ತಿಗೆ ವಿಲಕ್ಷಣವಾದಂಥ ಅಸತ್ತಿನಿಂದ ಸತ್ತು ತೋರುತ್ತಿದೆಯೆಂದು ಹೇಳಕೂಡದು. ಅದರಿಂದ ಲೋಕದಲ್ಲಿ ಸತ್ತನು ತೋರುವಂಥ ಪದಾರ್ಥವು ಒಂದು ಇಲ್ಲವಾಗಲಾಗಿಯೂ ಸಮಸ್ತವಾದ ಪದಾರ್ಥಗಳನು ಸತ್ತು ಎಂದು ಆರೋಪಿಸಸಪಟ್ಟು ಇದೆಯಾಗಲಾಗಿ ಸತ್ತನು ಉಪಜೀವಿಸಿಕೊಂಡು ತೋರುವುದರಿಂದಲೂ ಸತ್ತು ಸಪ್ರಕಾಶವೇ ಸರಿ. [1]ಸ್ವಪ್ರಕಾಶದಲ್ಲಿರುವಂಥ ಸತ್ತೇ ಚಿತ್ತು, ಚಿತ್ತಾದಂಥ ಚಿತ್ತಿಗೆ ವಿಲಕ್ಷಣವಾಗಿ ಇರುವಂಥ ವಸ್ತುವು ಅಸತ್ತಾಗಿದೆ, ಆ ಸತ್ತು ಚಿತ್ತು, ಚಿತ್ತೇ ಸತ್ತು, † ಆನಂದರೂಪವಾಯಿತು. ಲೋಕದಲ್ಲಿ ಎರಡನೆಯ ವಸ್ತುವುಂಟಾದಲ್ಲದೆ ಹೋದ ವ

†, ಅಸಪ್ರಕಾಶವಾಗಿರುವಂಥ ವಸ್ತುವು ಅಸತ್ತಾಗಿ ಇದ್ದೀತಾಗಿ ಅಸತ್ತೇ ಎರಡನೆಯ ವಸ್ತು ಉಂಟಾದುದು ಆಗದೇ ಹೋಯಿತು. ಆಗಲಾಗಿ ಅಚಿತ್ತಾಗಿರುವಂಥ ಸತ್ತೇ, ಎಂದು ಬಾಧು ಪುಸ್ತಕದಲ್ಲಿ ಅಧಿಕಪಾಠವಿದೆ.

ಕವೇ ಆನಂದವಾಗಿರುವಂಥದಾದ ಕಾಂಡುದುಂಟೆ ಎಂದರೆ, ಉಂಟು. ಅ ದೆಂತೆಂದರೆ ಹೇಳೇವು. ಸುಷುಪ್ತಿಯಲ್ಲಿ ಎರಡನೆಯ ವಸ್ತುವಿಲ್ಲವಾದಕಾರಣ ಅದೇ ಆನಂದವಾಯಿತು. ಜಾಗ್ರತ್ಸ್ವಪ್ನಗಳಲ್ಲಿ ಎರಡನೆಯ ವಸ್ತುವು ಇದೆಯಾಗಲಾಗಿ ದುಃಖವೇ ತೋರುತ್ತಿದೆ. ಜಾಗ್ರತ್ತಿನಲ್ಲೂ ಏಕಾಂತವಾಗಿರುವಂಥ ಸಮಯದಲ್ಲಿ ಎರಡನೆಯ ವಸ್ತುವನು ಅನುಸಂಧಾನಮಾಡ ಲಿಲ್ಲವಾದ ಕಾರಣ ಸಮಸ್ತವಾದವರಿಗು ಆನಂದವೇ ತೋರುತ್ತಿದೆ. ಏಕಾಂತದಲ್ಲಿ ಇರುವಂಥ ಪುರುಷನು ಎರಡನೆಯ ವಸ್ತುವನು ಸ್ಮರಿಸದೆ ಸುಖವಾಗಿ ಇದ್ದ ಹೊತ್ತಿಗೂ ಅವಶ್ಯವಾಗಿ ಎರಡನೆಯ ವಸ್ತುವನು ಸ್ಮರಿಸುವ ಹಾಗೆ ಮಾಡುವಂಥ ಒಂದು ಶಬ್ದಶ್ರವಣವಾದರೂ ಒಂದು ರೂಪದರ್ಶನವಾದರೂ ಬರುತ್ತ ಇರಲಾಗಿ ಭಯರೂಪವಾಗಿರುವಂಥ ದುಃಖವು ತೋರುತ್ತಿದೆ. ಎರಡನೆಯ ವಸ್ತು ತೋರುವಿದರೆ ಭಯವುಂಟೆಂದು ಶ್ರುತಿಯು ಹೇಳುತ್ತ ಇದೆ. ಅದರಿಂದ ಸುಷುಪ್ತಿಯಲ್ಲಿ ಎರಡನೆಯ ವಸ್ತುವು ತೋರಲಿಲ್ಲವಾದಕಾರಣ ಅದೇ ಆನಂದವಾಯಿತು. ಆ ಸುಷುಪ್ತಿಯು ಆ ಆನಂದದಲ್ಲಿ ಕಲ್ಪಿಸಪಟ್ಟದೆಯಾದಕಾರಣ ರಜ್ಜ್ವಾದಿಗಳಲ್ಲಿ ಕಲ್ಪಿಸಪಟ್ಟಂಥ ಸರ್ಪಾದಿಗಳೋಪಾದಿಯಲ್ಲಿ ಆ ಆನಂದವ್ಯತಿರಿಕ್ತವಾಗಿ ಇಲ್ಲವಾದಕಾರಣ ಆತ್ಮನು ಕಾಲತ್ರಯದಲ್ಲು ಇದ್ದಾನೆಯಾಗಲಾಗಿ ಸತ್ತು ಎನುತಲೂ, ಪ್ರಕಾಶವಾಗಿ ಇದ್ದಾನೆಯಾದಕಾರಣ ಚಿತ್ತು ಎನುತಲೂ ಎರಡನೆಯ ವಸ್ತು ಉಂಟಾದವನಲ್ಲದೆ ಇದ್ದಾನೆಯಾದುದರಿಂದ ಆನಂದವೆನುತಲೂ ಹೇಳಪಡುತಿದ್ದಾನೆ. ಅದರಿಂದ ಸದ್ರೂಪನಾದಂಥ ಆತ್ಮನಿಗೆ ಸದಂತರವು ಇಲ್ಲವಾದಕಾರಣ ಸಜಾತೀಯವು ಸಜಾತೀಯಭೇದವು ಇಲ್ಲ. ಈ ಹೇಳಿದಂಥ ಯುಕ್ತಿಗಳಿಂದ ಸತ್ತೇ ಚಿತ್ತು ಚಿತ್ತೇ ಆನಂದವಾಯಿತು ಆಗಲಾಗಿ ಸ್ವಗತವು ಸ್ವಗತಭೇದವು ವಿಜಾತೀಯಭೇದವು ಇಲ್ಲ. ಈ ಹೇಳಿದಂಥ ಯುಕ್ತಿಗಳಿಂದ ಆತ್ಮನಿಗೆ ಸಜಾತೀಯ ವಿಜಾತೀಯ ಸ್ವಗತಭೇದವು ಇಲ್ಲವಾಗಲಾಗಿ ಆತ್ಮನು ಅದ್ವಿತೀಯನೆಂದು ಶ್ರುತಿ ಹೇಳಿದಂಥದುದು ಯುಕ್ತ್ಯನುಭವಸಿದ್ಧವೇ ಸರಿ.

ಆ ಅದ್ವಿತೀಯನಾದ ಆತ್ಮನೇ ನಾನು ಎಂದು ಮುಮುಕ್ಷುವಾದಂಥವ ತಿಳಿಯತಕ್ಕದು. ಅದಂತಿರಲಿ.

ಆತ್ಮನು ಅದ್ವಿತೀಯನೆಂದು ಶ್ರುತಿ ಹೇಗೆ ಹೇಳುತ್ತ ಇದೆಯೋ ಹಾಗೆ ಆತ್ಮನು ಪರಿಪೂರ್ಣನೆನುತಲೂ ಶ್ರುತಿ ಹೇಳುತ್ತಿದೆಯಾಗಲಾಗಿ

[1]ಆತ್ಮನಿಗೆ ಪರಿಪೂರ್ಣತ್ವವೆಂಬಂಥದು ವ್ಯಾಪಕತ್ವವೋ ಇಲ್ಲದೆ ವಿಭುತ್ವವೋ ಇಲ್ಲದೆ ಅಪರಿಚ್ಛಿನ್ನತ್ವವೋ ಎಂದರೆ ಅಪರಿಚ್ಛಿನ್ನತ್ವವೇ ಪರಿಪೂರ್ಣತ್ವವೆಂದು ಹೇಳಬೇಕು.

ಹಾಗೆ ಏತಕ್ಕೆ ಹೇಳಬೇಕು ? ವ್ಯಾಪಕತ್ವವೇ ಪರಿಪೂರ್ಣತ್ವವೆಂದು ಹೇಳುವಣವೆಂದರೆ ಸ್ವಕಾರ್ಯ್ಯಾನುಸ್ಯೂತತ್ವವಷ್ಟು [2]ವ್ಯಾಪಕತ್ವ[2]ವೆಂದು ತಿಳಯುಬೇಕು. ಅದು ಪೃಥ್ವ್ಯಾದಿಗಳಿಗೂ ಇದೆಯಾದ ಕಾರಣ ವ್ಯಾಪಕತ್ವವೇ ಪರಿಪೂರ್ಣತ್ವವೆಂದು ಹೇಳಕೂಡದು. ಹಾಗಾದರೆ ವಿಭುತ್ವವೆಂದು ತಿಳಯುಬೇಕು. ಆ ವಿಭುತ್ವವೇ ಪರಿಪೂರ್ಣತ್ವವೆಂದು ಹೇಳಬೇಕು ಎಂದರೆ, ಸರ್ವಮೂರ್ತದ್ರವ್ಯಸಂಯೋಗಿತ್ವವಷ್ಟು ವಿಭುತ್ವವೆಂದು ತಿಳಿಯುಬೇಕು. ಅದು ಆಕಾಶಕ್ಕೂ ಇದೆಯಾದಕಾರಣ ವಿಭುತ್ವವೇ ಪರಿಪೂರ್ಣತ್ವವೆಂದು ಹೇಳಕೂಡದು. ಅದಱಿಂದ ಅಪರಿಚ್ಛಿನ್ನತ್ವವೇ ಪರಿಪೂರ್ಣತ್ವವೆಂದು ಹೇಳಬೇಕು.

ಈ ಅಪರಿಚ್ಛಿನ್ನತ್ವವು ಪರಿಚ್ಛಿನ್ನವಾದಂಥ ಪೃಥಿವ್ಯಾಕಾಶಗಳಿಗೆಇಲ್ಲ; ಆತ್ಮನಿಗಾದರೆ ವ್ಯಾಪಕತ್ವವು ಅಪರಿಚ್ಛಿನ್ನತ್ವವು ವಿಭುತ್ವವು ಈ ಮೂಱು ಉಂಟು. ಅದೆಂತೆಂದರೆ ಹೇಳೇವು. ಪೃಥಿವ್ಯಾದಿಗಳಿಗೆ ಸ್ವಕಾರ್ಯಗಳಾದಂಥ ಚತುರ್ವಿಧ ಭೂತಗ್ರಾಮಗಳಲ್ಲು ಅನುಸ್ಯೂತತ್ವ ಹೇಗೆ ಇದೆಯೋ ಹಾಗೆ ಆತ್ಮನಿಗೆ ಸ್ವಕಾರ್ಯವಾದಂಥ ಪ್ರಪಂಚದಲ್ಲಿ ಅನುಸ್ಯೂತತ್ವವು ವ್ಯಾಪಕತ್ವವು ಇದೆ. ಅನಂತರದಲ್ಲಿ ಆಕಾಶಾದಿಗಳಿಗೆ ಸರ್ವ ಮೂರ್ತದ್ರವ್ಯಸಂಯೋಗಿತ್ವವು ವಿಭುತ್ವವು ಹೇಗೆ ಇದೆಯೋ ಹಾಗೆ ಆತ್ಮನಿಗೂ ಸರ್ವಮೂರ್ತದ್ರವ್ಯಸಂಯೋಗಿತ್ವವು ವಿಭುತ್ವವು ಇದೆ. ಅದಂತಿರಲಿ.

ಹಾಗಾದರೆ ವ್ಯಾಪಕನಾದಂಥವನೇ ಆತ್ಮ, ವಿಭುವಾದಂಥವನೇ ಆತ್ಮ ಎಂದು ಹೇಳುವಣವೆಂದರೆ–ಹೀಗೆ ಹೇಳಕೆಯಾದರೆ ಆತ್ಮನಿಗೆ ಸದ್ವಿತೀಯತ್ವವು ತೋಱುತ್ತಿದೆಯಾದಕಾರಣ ಅಪರಿಚ್ಛಿನ್ನತ್ವವೇ ಪರಿಪೂರ್ಣತ್ವವೆಂದು ಹೇಳಬೇಕು ಹಾಗಾದರೆ ಪೂರ್ವದಲ್ಲಿ ಹೇಳಪಟ್ಟಂಥ ಅದ್ವಿತೀಯತ್ವವೇ ಪರಿಪೂರ್ಣತ್ವವೆಂದು ಹೇಳಕೆಯಾದರೆ ಅದ್ವಿತೀಯತ್ವವೇ ಅಪರಿಚ್ಛಿನ್ನ

1. ಆತ್ಮನಿಗೆ ಪರಿಪೂರ್ಣತ್ವವು ಹೇಗೆ ಎಂದು ವಿಚಾರಿಸುವ. ಆತ್ಮನಿಗೆಪರಿಪೂರ್ಣತ್ವವೆಂದರೆ ಇಲ್ಲ ವ್ಯಾಪಕತ್ವವೊ. 2. ಪಕಾಶಕ್ಕೆ.

ವಾದ ಹೊತ್ತಿಗೂ ಮತ್ತು ಹೇಗೆ ಎಂದು ವಿಶೇಷವಾಗಿ ವಿಚಾರಿಸುತ್ತ ಇದ್ದೇವೆ. ಅದೆಂತೆಂದರೆ:—ತ್ರಿವಿಧಪರಿಚ್ಛೇದ ಶೂನ್ಯತ್ವವೇ ಅಪರಿಚ್ಛಿನ್ನತ್ವವೆನಿಸುವುದು. ಹಾಗಾದರೆ ಆತ್ಮನಿಗೆ ಪರಿಚ್ಛೇದಕವಾದಂಥ ತ್ರಿವಿಧವೇನೆಂದರೆ?—ದೇಶವು ಕಾಲವು ವಸ್ತುವು. ಈ ಮೂರು ಪರಿಚ್ಛೇದಕಗಳೆನಿಸುವುವು. ಈ ದೇಶಕಾಲವಸ್ತುವಿನಿಂದ ಆತ್ಮನಿಗೆ ಪರಿಚ್ಛಿನ್ನತ್ವವು ಪ್ರಸಕ್ತವಾಯಿತೆ? ಎಂದರೆ—†ಅನಾದಿಯಾಗಿ ಭ್ರಾಂತಿಯಿಂದ ಪ್ರಸಕ್ತವಾಯಿತು. ಹೇಗೆ ಪ್ರಸಕ್ತವಾಯಿತು ? ಎಂದರೆ ಹೇಳೇವು. ಈ ದೇಶದಲ್ಲಿ ಇದ್ದೆ, ಆ ದೇಶದಲ್ಲಿರಲಿಲ್ಲ ಎಂಬ ನೇಮದಿಂದಲೂ, ನಾನು ಈ ಸಂವತ್ಸರ ಹುಟ್ಟಿದೆ, ಇನ್ನು ಮೇಲೆ ಇಲ್ಲದೆ ಹೋಗುತ್ತೇನೆ ಎಂಬ ಕಾಲದಿಂದಲೂ, ಈ ವಸ್ತುವು ನಾನಲ್ಲ ಆ ವಸ್ತು ನಾನಹುದು ಎಂಬ ವಸ್ತುವಿನಿಂದಲೂ, ಆತ್ಮ ಕಾಲತ್ರಯದಲ್ಲಿಯೂ ಪರಿಚ್ಛಿನ್ನನಾಗಿಯೇ ತೋರುತ್ತಾನೆ. ಭ್ರಾಂತಿಯಿಂದ ತೋರುವ ಈ ಪರಿಚ್ಛಿನ್ನತ್ವವು ವಿಚಾರಿಸಿದರೆ ಇಲ್ಲದೆ ಹೋಗುತ್ತದೆ. ಹೇಗೆ ಇಲ್ಲದೆ ಹೋಗುತ್ತದೆ? ಎಂದರೆ ಹೇಳೇವು. ಆತ್ಮ ವ್ಯಾಪಕನಾಗಿದ್ದಾನಾಗಿ ದೇಶದಿಂದಲೂ ಆತ್ಮಗೆ ಪರಿಚ್ಛಿನ್ನತ್ವವು ಇಲ್ಲ. ಆತ್ಮ ಸರ್ವಾತ್ಮಕನಾಗಿದ್ದಾನಾಗಿ ಆತ್ಮಗೆ ವಸ್ತುವಿನಿಂದಲೂ ಪರಿಚ್ಛಿನ್ನತ್ವವು ಇಲ್ಲ. ಆತ್ಮನಿತ್ಯನಾಗಿದ್ದಾನಾಗಿ ಕಾಲದಲ್ಲಿಯೂ ಆತ್ಮಗೆ ಪರಿಚ್ಛಿನ್ನತ್ವವು ಇಲ್ಲ. ಆತ್ಮಗೆ ತ್ರಿವಿಧಪರಿಚ್ಛೇದ ಶೂನ್ಯತ್ವವು ಅಪರಿಚ್ಛಿನ್ನತ್ವವು ಎಂದು ಏಕೆ ಹೇಳಬೇಕು ? ದೇಶದಿಂದ ಪರಿಚ್ಛೇದರಾಹಿತ್ಯವೇ ಅಪರಿಚ್ಛಿನ್ನತ್ವವೆಂದು ಹೇಳುವಣವೆಂದರೆ—ದೇಶದಿಂದ ಪರಿಚ್ಛೇದ ರಾಹಿತ್ಯವು ಆಕಾಶಕ್ಕೂ ಇದ್ದೀತಾಗಿ ಅದಕ್ಕೂ ಪರಿಚ್ಛಿನ್ನತ್ವವು ಬಂದು ಬೀಳುವುದು. ಅದಕ್ಕೆ ಅಪರಿಚ್ಛಿನ್ನತ್ವವ ದಬ್ಬುವುದಕ್ಕೋಸ್ಕರ ಆತ್ಮ ಕಾಲದಿಂದಲೂ ಪರಿಚ್ಛೇದಶೂನ್ಯವೆಂದು ಅಂಗೀಕರಿಸಬೇಕು. ಆದರೆ ಆಕಾಶಾದಿಗಳಿಗೆ ಕಾಲದಿಂದ ಪರಿಚ್ಛಿನ್ನತ್ವವು ಉಂಟೆ? ಎಂದರೆ ಆಕಾಶಾದಿಗಳಿಗೆ ಉತ್ಪತ್ತಿ ನಾಶಗಳು ಶ್ರುತಿಗಳಿಂದ ಹೇಳಪಟ್ಟದುದಾಗಿ ಕಾಲದಿಂದಲೂ ಆಕಾಶಾದಿಗಳಿಗೆ ಪರಿಚ್ಛಿನ್ನತ್ವವು ಉಂಟು. ಹಾಗಾದರೆ ದೇಶದಿಂದಲೂ ಕಾಲದಿಂದಲೂ ಪರಿಚ್ಛೇದರಾಹಿತ್ಯವೇ ಅಪರಿಚ್ಛಿನ್ನತ್ವವೆಂದು ಹೇಳುವಣವೆಂದರೆ ಕಾಲಗಳಿಗೆ ದೇಶದಿಂದಲೂ ತನ್ನಿಂದಲೂ ಪರಿಚ್ಛೇದರಾಹಿತ್ಯವು ಇದ್ದೀತಾಗಿ ಅದಕ್ಕೂ ಪರಿಚ್ಛಿನ್ನತ್ವವು ಬಂದು ಬೀ

ಳುವುದು. ಅದಕ್ಕೆ ಅಪರಿಚ್ಛಿನ್ನತ್ವವು ಹೋಗಲಾಡಿಸುವುದಕ್ಕೋಸ್ಕರ ವಸ್ತುವಿನಿಂದಲೂ ಪರಿಚ್ಛೇದರಾಹಿತ್ಯವೇ ಅಪರಿಚ್ಛಿನ್ನತ್ವವೆಂದು ಅಂಗೀಕರಿಸಬೇಕು. ಹಾಗಾದರೆ ಕಾಲಕ್ಕೆ ವಸ್ತುವಿನಿಂದ ಪರಿಚ್ಛಿನ್ನತ್ವವುಂಟೆ? ಎಂದರೆ—ಕಾಲವು ಆಕಾಶಾದಿವಸ್ತುವು ಅಲ್ಲವಾಗಿ ಕಾಲಕ್ಕು ವಸ್ತುವಿನಿಂದ ಪರಿಚ್ಛಿನ್ನತ್ವವುಂಟು. ಹೀಗೆ ಹೇಳಿದೆವಾದರೆ ಆತ್ಮನಿಗೂ ವಸ್ತುವಿನಿಂದ ಪರಿಚ್ಛಿನ್ನತ್ವವು ತೋರುತ್ತಿದೆಯೆಂದೆಯಾದರೆ ಆದಱಿಂದ ಪರಿಚ್ಛಿನ್ನತ್ವವು ಆತ್ಮಗೆ ಇಲ್ಲ. ಹೇಗೆಂದರೆ ಹೇಳೇವು. ಆಕಾಶ ಕಾಲವೆನುತಲೂ ವಾಯು ಕಾಲವೆನುತಲೂ ತೇಜಸ್ಸು ಕಾಲವೆನುತಲೂ ಅಪ್ಪು ಪೃಥ್ವಿ ಕಾಲವೆನುತಲೂ ವ್ಯವಹಾರವು ಇಲ್ಲವಾಗಿಯೂ ಕಾಲವನು ಉಪಜೀವಿಸಿಕೊಂಡು ಆಕಾಶಾದಿಗಳು ಇರಲಿಲ್ಲವಾಗಿಯೂ ಆಕಾಶಾದಿಗಳೂ ಹಾಗೆಯೇ ಕಾಲವೂ ಅವಿದ್ಯಾಪರಿಣಾಮವಾಗಲೂ ವ್ಯವಹಾರದಲ್ಲಿ ಆಕಾಶಾದಿಗಳೂ ಕಾಲವೂ ಭಿನ್ನಸತ್ತಾಕವಾಗಿಯೇ ತೋರುತ್ತಿದೆಯಾಗಲಾಗಿ ಘಟಾದಿಗಳಿಂದ ಘಟಾದಿಗಳಿಗೆ ಪರಿಚ್ಛಿನ್ನತ್ವವು ಹೇಗೆ ಪ್ರತ್ಯಕ್ಷವೋ ಹಾಗೆ ಆಕಾಶದಿಂದಲೂ ಕಾಲಕ್ಕೆ ಪರಿಚ್ಛಿನ್ನತ್ವವು ಯುಕ್ತವೇ ಸರಿ. ಆತ್ಮನಲ್ಲಿಯಾದರೋ ಹೇಳೇವು. ಆತ್ಮನು ಆಕಾಶಾದಿಗಳು ಅಲ್ಲದವನ ಹಾಗೆ ತೋಱಿದರೂ ಸತ್ತೇ ಆತ್ಮನಾಗಿ ಇದ್ದನಾಗಿ ಆ ಆತ್ಮಸ್ವರೂಪವಾದ ಸತ್ತನು ಉಪಜೀವಿಸಿಕೊಂಡು ಆಕಾಶಾದಿಗಳು ಇದ್ದೀತಾಗಿಯೂ ರಜ್ಜ್ವಾದಿಗಳಲ್ಲಿ ಆರೋಪಿಸಪಟ್ಟಂಥ ಸರ್ಪಾದಿಗಳು ಆ ರಜ್ಜ್ವಾದಿಗಳಿಂದ ಇಲ್ಲವಾಗಿಯೂ ಹ್ಯಾಗೆ ರಜ್ಜ್ವಾಗಳ ಹಾಗೆ ಪರಿಚ್ಛೇದಗಳು ಅಲ್ಲವಾಗಿ ಮೃದಾದಿಗಳಲ್ಲಿ ತೋರುವಂಥ ಘಟಾದಿಗಳು ಮೃದಾದಿಗಳಿಂದ ಇಲ್ಲವಾಗಿ ಮೃದಾದಿಗಳ ಹಾಗೆ ಪರಿಚ್ಛೇದಕಗಳು ಅಲ್ಲವೋ, ಹಾಗೆ ಆತ್ಮಸ್ವರೂಪವಾದ ಸತ್ತಿನಲ್ಲಿ ತೋರುವಂಥ ಆಕಾಶಾದಿಗಳು ಆತ್ಮಸ್ವರೂಪಭೂತವಾದ ಸತ್ತಿನಿಂದ ಇಲ್ಲವಾಗಿ ಆತ್ಮಗೆ ಪರಿಚ್ಛೇದಕಗಳು ಇಲ್ಲವಾಗಲಾಗಿ ಆತ್ಮಗೆ ವಸ್ತುವಿನಿಂದಲೂ ಪರಿಚ್ಛೇದವಿಲ್ಲವೆಂಬುದು ಯುಕ್ತವೇ ಸರಿ.† ಅನಾದಿಯಾಗಿ ದೇಶದಿಂದ ಅಪರಿಚ್ಛಿನ್ನತ್ವವು ಇದೆ. ಹಾಗಾದರೆ ಕಾಲದಿಂದ ಆತ್ಮನಿಗೆ ಅಪರಿಚ್ಛಿನ್ನತ್ವ ಹೇಗೆ? ಎಂದರೆ—

---

† ಇಷ್ಟುಭಾಗವು ಒಂದು ಪ್ರತಿಯಲ್ಲಿ ಇಲ್ಲ.

ಆತ್ಮ ಅನಾದಿಯಾಗಿ ಇದ್ದಾನೆಯಾದಕಾರಣ ಭೂತಕಾಲದಿಂದ ಆತ್ಮನಿಗೆ ಪರಿಚ್ಛಿನ್ನತ್ವವು ಇಲ್ಲವಲ್ಲ. ನಿತ್ಯನಾಗಿ ಇದ್ದಾನೆಯಾಗಲಾಗಿ ಭವಿಷ್ಯತ್ಕಾಲದಿಂದಲೂ ಆತ್ಮನಿಗೆ ಪರಿಚ್ಛೇದವು ಇಲ್ಲವಲ್ಲ. ದೇಹಾದಿವ್ಯತಿರಿಕ್ತನಾಗಿ ಇದ್ದಾನೆಯಾದಕಾರಣ ವರ್ತಮಾನಕಾಲದಿಂದಲೂ ಆತ್ಮನಿಗೆ ಪರಿಚ್ಛೇದವು ಇಲ್ಲವಲ್ಲ, ಹಾಗಾದರೆ ಆತ್ಮನಿಗೆ ವಸ್ತುವಿನಿಂದ ಅಪರಿಚ್ಛಿನ್ನತ್ವ ಹೇಗೆ? ಎಂದರೆ-ಆತ್ಮನು ಸರ್ವಾತ್ಮನಾಗಿ ಇದ್ದಾನೆಯಾದಕಾರಣ ವಸ್ತುವಿನಿಂದಲೂ ಆತ್ಮನಿಗೆ ಪರಿಚ್ಛೇದವು ಇಲ್ಲ. ವಸ್ತುವೆಂದರೇನೆಂದರೆ-ಸಜಾತೀಯವೆನುತಲೂ ವಿಜಾತೀಯವೆನುತಲೂ ಸ್ವಗತವೆನುತಲೂ ವಸ್ತುವು ಮೂರು ವಿಧಗಳಾಗಿ ಇರುವುದು. ಆ ಮೂರು ವಿಧಗಳಾದಂಥ ಸಜಾತೀಯ ವಿಜಾತೀಯ ಸ್ವಗತಗಳಾವುವೆಂದರೆ ದೃಷ್ಟಾಂತಪೂರ್ವಕವಾಗಿ ನಿರೂಪಿಸುತ್ತ ಇದ್ದೇವೆ. ಆ ದೃಷ್ಟಾಂತವೇನೆಂದರೆ ಹೇಳೇವು. ವೃಕ್ಷಕ್ಕೆ ವೃಕ್ಷಾಂತರವು ಸಜಾತೀಯವೆನಿಸುವುದು, ಶಿಲಾದಿಗಳು ವಿಜಾತೀಯವೆನಿಸುವುದು, ಪತ್ರ ಪುಷ್ಪ ಫಲಾದಿಗಳು ಸ್ವಗತವೆನಿಸುವುದು. ಆದುದರಿಂದ ಈಯೋಪಾದಿಯಲ್ಲಿ ಆತ್ಮನಿಗೆ ಸಜಾತೀಯವು ವಿಜಾತೀಯವು ಸ್ವಗತವು ಇಲ್ಲ. ಈ ಮೂರು ಇಲ್ಲದಿರುವುದರಿಂದ ಆತ್ಮನಿಗೆ ಸಜಾತೀಯಭೇದವು ವಿಜಾತೀಯಭೇದವು ಸ್ವಗತಭೇದವು ಇಲ್ಲ. ಅದಂತಿರಲಿ. ಹಾಗೆ ಹೇಳಕೂಡದು. ಅದೆಂತೆಂದರೆ— ಘಟಸ್ಯ ಪಟಸ್ಯ ಕುಡ್ಯಸ್ಯ ಕುಸೂಲಸ್ಯ ದೇವದತ್ತಾತ್ಮ ಯಜ್ಞದತ್ತಾತ್ಮ ಚೈತ್ರಾತ್ಮ ಮೈತ್ರಾತ್ಮ ಎಂದು ಸಜಾತೀಯವು ಸಜಾತೀಯಭೇದವು, ಪೃಥಿವಿಯೆನುತಲೂ ಅಪ್ಪುಯೆನುತಲೂ ತೇಜಸ್ಸೆನುತಲೂ ವಾಯುವೆನುತಲೂ ಘಟವೆನುತಲೂ ಆಕಾಶವೆನುತಲೂ ಕುಡ್ಯವೆನುತಲೂ ಕುಸೂಲವೆನುತಲೂ ವಿಜಾತೀಯವು ವಿಜಾತೀಯಭೇದವು, ಇಚ್ಛಾದ್ವೇಷಸುಖದುಃಖಸತ್ವರಜಸ್ತಮಗಳೆಂದು ಸ್ವಗತವು ಸ್ವಗತಭೇದವು. ಆತ್ಮನಿಗೆ ಇಚ್ಛೆಯಾದಕಾರಣ ಸಜಾತೀಯ ವಿಜಾತೀಯ ಸ್ವಗತಭೇದಗಳು ಇಲ್ಲವೆಂದು ಹೇಗೆ ಹೇಳುವಣವೆಂದರೆ-ಆತ್ಮನಿಗೆ ಸಜಾತೀಯಭೇದಗಳು ಉಪಾಧಿಯಿಂದ ಬಂದಂಥದಾದಕಾರಣ ಪರಮಾರ್ಥವಾಗಿ ಸಜಾತೀಯ ವಿಜಾತೀಯ ಸ್ವಗತಭೇದವು ಇಲ್ಲವೆಂದು ಹೇಳಬಹುದಲ್ಲ. ಹಾಗಾದರೆ ಸಜಾತೀಯ ಭೇದವು ಹೇಗೆ ಇಲ್ಲ? ಎಂದರೆ ದೃಷ್ಟಾಂತಪೂರ್ವಕವಾಗಿ ನಿರೂಪಿಸುತ್ತ ಇದ್ದೇವೆ. ಆ ದೃಷ್ಟಾಂತವೇನೆಂದರೆ ಹೇಳೇವು. ಒಂದು ಆಕಾ

ಶವೇ ಘಟ ಮಠ ಕುಡ್ಯ ಕುಸೂಲ ವನ ವೃಕ್ಷಾದ್ಯುಪಾಧಿಯಿಂದ ಘಟಾಕಾಶವೆನುತಲೂ ಮಠಾಕಾಶವೆನುತಲೂ ಕುಡ್ಯಾಕಾಶವೆನುತಲೂ ಕುಸೂಲಾಕಾಶವೆನುತಲೂ ವೃಕ್ಷಾಕಾಶವೆನುತಲೂ ವನಾಕಾಶವೆನುತಲೂ ಅನೇಕವಿಧವಾಗಿ ಹೇಗೆ ವ್ಯವಹರಿಸಪಡುತ್ತಿದೆಯೋ ಹಾಗೆ ಆತ್ಮನು ಉಚ್ಚಾವಚಾದಿಯಾದಂಥ ಶರೀರೋಪಾಧಿಗಳಿಂದ ದೇವದತ್ತನೆನುತಲೂ ವಿಷ್ಣುಮಿತ್ರನೆನುತಲೂ ಯಜ್ಞದತ್ತನೆನುತಲೂ ಕೃಷ್ಣನೆನುತಲೂ ರಾಮನೆನುತಲೂ ಅನೇಕ ಆತ್ಮನಾಗಿ ತೋಱುವುದು ಯುಕ್ತವೇ ಸರಿ. ಆತ್ಮನಲ್ಲಿಯಾದರೆ ಹೇಳೇವು. ಆತ್ಮನು ಆಕಾಶಾದಿಗಳು ಅಲ್ಲದವರೋಪಾದಿಯಲ್ಲಿ ತೋಱುವ ಹೊತ್ತಿಗೂ ಸತ್ತೇ ಆತ್ಮನಾಗಿ ಇದ್ದಾನೆಯಾವಕಾರಣ ಆ ಆತ್ಮಸ್ವರೂಪವಾದ ಸತ್ತನು ಉಪಜೀವಿಸಿಕೊಂಡು ಆಕಾಶಾದಿಗಳು ಇಲ್ಲವ್ರೋ ಮೃದಾದಿಗಳಲ್ಲಿ ತೋಱುವಂಥ ಘಟಾದಿಗಳು ಮೃದಾದಿಗಳಿಂದಲೂ ಇಲ್ಲವಾದಕಾರಣ ಆ ಮೃದಾದಿಗಳಿಗೆ ಹೇಗೆ ಪರಿಚ್ಛೇದಗಳಲ್ಲವ್ರೋ ಹಾಗೆ ಆತ್ಮಸ್ವರೂಪವಾದ ಸತ್ತಿನಲ್ಲಿ ತೋಱುವಂಥ ಆಕಾಶಾದಿವಸ್ತುಗಳು ಆತ್ಮಸ್ವರೂಪವಾದ ಸತ್ತಿನಿಂದಲೂ ಇಲ್ಲವಾದುದಱಿಂದ ಆತ್ಮನಿಗೆ ಪರಿಚ್ಛೇದಗಳಲ್ಲವೇ ಸರಿ. ಅದುಕಾರಣ ಆತ್ಮನಿಗೆ ವಸ್ತುವಿನಿಂದಲೂ ಪರಿಚ್ಛೇದವಿಲ್ಲವೆಂಬುದು ಯುಕ್ತವೇ ಸರಿ. ಅದಂತಿರಲಿ. ಹಾಗಾದರೆ ದೇಶವು ಕಾಲವು ವಸ್ತುವಾಗಿದೆಯಾಗಲಾಗಿ ವಸ್ತುವಿನಿಂದಲೇ ಪರಿಚ್ಛೇದರಾಹಿತ್ಯವು ಆತ್ಮನಿಗೆ ಅಪರಿಚ್ಛಿನ್ನತ್ವವೆಂದು ಹೇಳಿದರೆ ಸಾಕು. ಆದಹೊತ್ತಿಗೂ ಲೋಕದಲ್ಲಿ ಕಾಲದೇಶಕ್ಕೆ ಆಕಾಶಾದಿಗಳೋಪಾದಿಯಲ್ಲಿ ವಸ್ತುತ್ವ ಪ್ರಸಿದ್ಧವಿಲ್ಲವಾಗಲಾಗಿಯೂ ಆತ್ಮನಿಗೆ ಸ್ವಗತ ಸಿದ್ಧವಾದಂಥ ವ್ಯಾಪಕತ್ವವು ಸ್ವತಃಸಿದ್ಧವಾದ ನಿತ್ಯತ್ವವು ಸ್ವತಃಸಿದ್ಧವಾದ ಸರ್ವಾತ್ಮಕತ್ವವು ಅನಾದಿಯಾಗಿ ಅಜ್ಞಾನದಿಂದ ಬಂದಂಥ ದೇಹೇಂದ್ರಿಯಾದ್ಯಧ್ಯಾಸದ ದೆಸೆಯಿಂದ ತೋಱದೆ ಹೋಯಿತಾದಕಾರಣ ಆ ಭ್ರಾಂತಿಯ ತಳ್ಳುವುದಕೋಸ್ಕರ ಆತ್ಮನಿಗೆ ತ್ರಿವಿಧಪರಿಚ್ಛೇದಶೂನ್ಯತ್ವವೇ ಪರಿಪೂರ್ಣತ್ವ, ಅದೇ ಅಖಂಡತ್ವ, ಅದೇ ಅದ್ವಿತೀಯತ್ವವೆಂದು ಶ್ರುತ್ಯಾದಿಗಳಲ್ಲಿ ಹೇಳಪಟ್ಟಿದೆ. ಈ ಪ್ರಕಾರವಾಗಿ ವಿಚಾರಿಸಿ ಆ ಪರಿಪೂರ್ಣವಾದ ಆತ್ಮನೇ ನಾನುಯೆಂದು ಯಾವನ ತಿಳಿಯುತಿದ್ದಾನೆಯೋ ಆವನೇ ಜೀವನ್ಮುಕ್ತನೆಂದು ಶಾಸ್ತ್ರಸಿದ್ಧಾಂತ.

ಇನ್ನು ಆತ್ಮನಿಗೆ ಅಸಂಗತ್ವ ಹೇಗೆಯೆಂದು ವಿಚಾರಿಸುತ್ತ ಇದ್ದೇವೆ. ಅದಂತಿರಲಿ. ಆತ್ಮನಿಗೆ ಸಂಗಿತ್ವವು ಪ್ರತ್ಯಕ್ಷವಾದರಷ್ಟೆ ಆತ್ಮನಿಗೆ ಅಸಂಗಿತ್ವವು ಹೇಗೆಯೆಂದು ವಿಚಾರಿಸಬೇಕು. ವಿಚಾರದಿಂದ ತಳ್ಳಪಟ್ಟಂಥ ಸಂಗಿತ್ವವು ಆತ್ಮನಿಗೆ ಉಂಟೇ ಎಂದರೆ ಉಂಟು. ಅದೆಂತೆಂದರೆ ಹೇಳೇವು. ಭ್ರಾಂತಿಯಿಂದ ಬಂದಂಥ ದೇಹೇಂದ್ರಿಯಾಧ್ಯಾಸದಿಂದ ಆತ್ಮನಿಗೆ ಸಂಗಿತ್ವವು ತೋರುತ್ತದೆ. ಇಷ್ಟು ಮಾತ್ರವಲ್ಲ. ಅವರ ಸಂಗಡ ಕೂಡಿಕೊಂಡು ಇದ್ದೆನು, ಇವರ ಸಂಗಡ ಕೂಡಿಕೊಂಡು ಇದ್ದೆನು, ಎಂದು ಸಂಗಿತ್ವವು ತೋರುತ್ತಿದೆ. ವಿಚಾರದಿಂದ ಆತ್ಮನು ಅದ್ವಿತೀಯನೆಂದು ಯಾವಾಗ ತಿಳಿಯಪಡುತ್ತಿದೆಯೋ ಆಗ ಎರಡನೆಯ ವಸ್ತುವಿಲ್ಲವಾಗಲಾಗಿ ಆತ್ಮನಿಗೆ ಸಂಗಿತ್ವವು ತಳ್ಳಪಟ್ಟುಹೋಯಿತು.

ಪರಮಾರ್ಥವಾಗಿಯೂ ಆತ್ಮನು ಅದ್ವಿತೀಯನಾದಕಾರಣ ಅಸಂಗಿಯಾಗಿ ಇದ್ದಹೊತ್ತಿಗೂ ವ್ಯವಹಾರಕಾಲದಲ್ಲಿ ಸಂಗಿಯೋಪಾದಿಯಲ್ಲಿ ತೋರುವಂಥ ಆತ್ಮನಿಗೆ ಅಸಂಗಿತ್ವವು ಹೇಗೆ ಕೂಡುವುದೆಂದರೆ ಕೂಡುವುದೆಂಬುದನು ದೃಷ್ಟಾಂತಪೂರ್ವಕವಾಗಿ ಹೇಳೇವು. ರಜ್ಜ್ವಾದಿಗಳಲ್ಲಿ ಆರೋಪಿಸಪಟ್ಟಂಥ ಸರ್ಪದ ಸಂಗಡ ಆ ರಜ್ಜ್ವಾದಿಗಳಿಗೆ ಕಾಲತ್ರಯದಲ್ಲೂ ಹೇಗೆ ಸಂಗವಿಲ್ಲವೋ ಹಾಗೆ ಆತ್ಮನಲ್ಲಿ ಆರೋಪಿಸಪಟ್ಟು ತೋರುವಂಥ ದೇಹೇಂದ್ರಿಯಾದಿಪ್ರಪಂಚದೊಡನೆ ಆತ್ಮನಿಗೆ ಕಾಲತ್ರಯದಲ್ಲೂ ಸಂಗವಿಲ್ಲ. ಇಷ್ಟುಮಾತ್ರವಲ್ಲ. ಲೋಕದಲ್ಲಿ ಸಾವಯವವಾಗಿ ಇರುವಂಥ ಪದಾರ್ಥಗಳಿಗೆ ಅನ್ಯೋನ್ಯಸಂಗವನು ಕಂಡು ಇದ್ದೇವೆ. ನಿರವಯವವಾಗಿರುವಂಥ ಪದಾರ್ಥಗಳಿಗೆ ಸಾವಯವವಾಗಿರುವಂಥ ಪದಾರ್ಥಗಳೊಡನೆ ಕಾಲತ್ರಯದಲ್ಲೂ ಸಂಗವ ಕಾಣೆವು. ಅದೆಂತೆಂದರೆ ಹೇಳಿ ತೋರಿಸುತ್ತ ಇದ್ದೇವೆ. ಪರಮಾರ್ಥದಲ್ಲಿ ನಿರವಯವವೆಂದು ಸನ್ಮತವಾಗಿರುವಂಥ ಆಕಾಶಾದಿಗಳಿಗೆ ಪೃಥ್ವ್ಯಾದಿಗಳೊಡನೆ ಸಂಗವನು ಕಾಣೆವು. ಸಂಗವುಂಟೆಂದು ಹೇಳಿದುದಾದರೆ ಜಲಾದಿಗಳ ಸಂಗದಿಂದ ವಸ್ತ್ರಾದಿಗಳಿಗೆ ಆರ್ದ್ರ್ಯಾದಿಕವು ಹೇಗೆ ಬರುತ್ತಿದೆಯೋ ಹಾಗೆ ಆಕಾಶಾದಿಗಳಿಗೂ ಪೃಥಿವ್ಯಾದಿಗಳ ಸಂಗಡ ಆಯಾ ಪೃಥಿವ್ಯಾದಿವಿಕಾರಗಳು ಬರಬೇಕು. ಹಾಗೆ ಬಂದುದ ಕಾಣೆವಲ್ಲ. ಅದರಿಂದ ಆಯಾಕಾಶಾದಿಗಳಿಗೆ ಪೃಥಿವ್ಯಾದಿಗಳೊಡನೆ ಕೂಡಿಕೊಂಡಿದ್ದೋ

ಪಾಧಿಯಲ್ಲಿ ತೋರುವ ಹೊತ್ತಿಗೂ ಆಯಾಕಾಶಾದಿಗಳ ಸಂಗಡ ಪೃಥಿವ್ಯಾ ದಿಗಳಿಗೆ ಹೇಗೆ ಸಂಗವಿಲ್ಲವೋ, ಹಾಗೆ ಆತ್ಮನು ಭ್ರಾಂತಿಯಿಂದ ದೇಹೇಂದ್ರಿ ಯಾದಿ ಪ್ರಪಂಚದೊಡನೆ ಕೂಡಿಕೊಂಡಿದ್ದವನೋಪಾಧಿಯಲ್ಲಿ ತೋರುವ ಹೊತ್ತಿಗೂ ಆತ್ಮನು ಅಸಂಗಿಯೇ ಸರಿ. ವ್ಯವಹಾರಕಾಲದಲ್ಲಿ ಪರಮತ ವನು ಅನುಸರಿಸಿ ಆಯಾಕಾಶಾದಿಗಳಿಗೆ ನಿರವಯವತ್ವವನು ಅಂಗೀಕರಿಸಿ ಈ ಪ್ರಕಾರವಾಗಿ ಹೇಳಿದೆವು. ಪರಮಾರ್ಥವಾಗಿ ವಿಚಾರಿಸುವಲ್ಲಿ ಆ ಯಾಕಾಶಾದಿಸರ್ವಪದಾರ್ಥಗಳು ಭ್ರಾಂತಿಯಿಂದ ಆತ್ಮನಲ್ಲಿ ಆರೋಪಿತಗ ಳಾಗಿ ಇವೆಯಾದಕಾರಣ ಆರೋಪಿತಗಳಾದ ಪದಾರ್ಥಗಳಿಗೆ ರಜ್ಜ್ವಾದಿಗ ಳಲ್ಲಿ ತೋರುವಂಥ ಸರ್ಪಾದಿಗಳೋಪಾಧಿಯಲ್ಲಿ ಅಧಿಷ್ಠಾನವಾದಂಥ ಆತ್ಮ ಸತ್ತೇ ಸ್ವರೂಪವಾಗಿ ಇದೆಯಾಗಲಾಗಿ, ಆತ್ಮನು ಕಾಲತ್ರಯದಲ್ಲೂ ಅದ್ವಿ ತೀಯನೇ ಸರಿ. ಅದರಿಂದ ಅಸಂಗನೆಂದು ಸಿದ್ಧವಾಯಿತು.

ಈ ಪ್ರಕಾರವಾಗಿ ವಿಚಾರಿಸಿ ಆ ಅಸಂಗನಾದ ಆತ್ಮನೇ ನಾನುಯೆಂದು ಮುಮುಕ್ಷುವಿಗೆ ತಿಳಿಯಬಹುದಲ್ಲ. ಹೀಗೆ ಯಾವನ ತಿಳಿಯುತಿದ್ದಾನೆಯೋ ಆತನೇ ಮುಕ್ತನೆಂದು ವೇದಾಂತಸಿದ್ಧಾಂತ.

ಇನ್ನು ಆತ್ಮನಿಗೆ ಅಕರ್ತೃತ್ವವು ಹೇಗೆಯೆಂದು ವಿಚಾರಿಸುತ್ತ ಇ ದ್ದೇವೆ. ಅದಂತಿರಲಿ. ಆತ್ಮನಿಗೆ ಕರ್ತೃತ್ವವು ಪ್ರಸಕ್ತವಾದರಷ್ಟೆ ಆ ತ್ಮನಿಗೆ ಅಕರ್ತೃತ್ವವು ಹೇಗೆಯೆಂದು ವಿಚಾರಿಸಬೇಕು. ಕರ್ತೃತ್ವವು ಪ್ರಸಕ್ತವಾಯಿತೆ? ಎಂದರೆ ಪ್ರಸಕ್ತವಾಯಿತು. ಅದೆಂತೆಂದರೆ—ದೇಹೇಂ ದ್ರಿಯಾದ್ಯಧ್ಯಾಸದಿಂದ ನಾನು ಸ್ನಾನವ ಮಾಡಿದೆನು, ನಾನು ಸ್ನಾನವ ಮಾಡಹೋಗುತ್ತಿದ್ದೇನೆ, ನಾನು ಜಪವ ಮಾಡಿದೆನು, ಜಪವ ಮಾಡ ಹೋಗುತ್ತಿದ್ದೇನೆ; ನಾನು ಅಗ್ನಿಹೋತ್ರವ ಮಾಡಿದೆನು, ಅಗ್ನಿಹೋತ್ರ ವ ಮಾಡಹೋಗುತ್ತಿದ್ದೇನೆ; ನಾನು ಯಜ್ಞವ ಮಾಡಿದೆನು, ಯಜ್ಞವ ಮಾಡಹೋಗುತ್ತಿದ್ದೇನೆ—ಎಂದು ಕರ್ತೃತ್ವವು ಅಧ್ಯಾಸದಿಂದ ಆತ್ಮನಿಷ್ಠ ವಾಗಿ ತೋರುತ್ತಿದೆಯಾದಕಾರಣ ಈ ಕರ್ತೃತ್ವವು ಇಲ್ಲವೆಂದು ತಿಳಿಯು ವುದಕ್ಕೋಸ್ಕರ ವಿಚಾರಿಸಬೇಕಾಯಿತು. ಲೋಕದಲ್ಲಿ ಕರ್ತೃತ್ವವೆಂದ ರೇನೆಂದರೆ, ಕ್ರಿಯಾಶ್ರಯತ್ವವೆನಿಸುವುದು. ಆ ಕರ್ತೃತ್ವವು ಪರಿಚ್ಛಿನ್ನ ವಾಗಿ ಸಾವಯವವಾಗಿ ವಿಕಾರಿಯಾದಂಥ ವಸ್ತುವನು ಆಶ್ರಯಿಸಿಕೊಂಡಿ

ರುವಂಥದಾಗಿ ಕಂಡು ಇದ್ದೇವೆ. ಆತ್ಮನಾದರೆ ಅಪರಿಚ್ಛಿನ್ನನು, ಅಸಂಗನು, ನಿರ್ವಿಕಾರನು, ನಿರವಯವನು. ಇಂಥ ಆತ್ಮನಿಗೆ ಕರ್ತೃತ್ವವ ಹೇಳಕೂಡದು, ಅದರಿಂದ ಆತ್ಮನು ಅಕರ್ತನೆಂದು ತಿಳಿಯಬಹುದಲ್ಲ. ಆತ್ಮನಿಗೆ ಅದ್ವಿತೀಯತ್ವಜ್ಞಾನದಿಂದಲೇ ಆ ಕರ್ತೃತ್ವವು ಸಿದ್ಧವಾಯಿತು. ಸಿದ್ಧವಾದಹೊತ್ತಿಗೂ ಸ್ಪಷ್ಟವಾಗಿ ತಿಳಿಯಬೇಕಾಗಿ ವಿಶೇಷವಾಗಿ ಹೇಳಿದೆವು. ವ್ಯವಹಾರದಲ್ಲಿ ಸ್ನಾನಾದಿಕ್ರಿಯಾಶ್ರಯತ್ವವನು ದೇಹಾದಿಗಳಿಗೆ ಕಂಡು ಇದ್ದೇವೆ. ವ್ಯಾಪಕವಾದಂಥ ಆಕಾಶಾದಿಗಳಿಗೆ ಕಾಣೆವು. ಅಪರಿಚ್ಛಿನ್ನನಾದ ಆತ್ಮನಿಗೆ ಇಲ್ಲವೆಂಬುದ ಹೇಳಬೇಕೆ? ಭ್ರಾಂತಿಯಿಂದ ಬಂದಂಥ ದೇಹೇಂದ್ರಿಯಾದ್ಯಧ್ಯಾಸದಿಂದ ಆತ್ಮನು ಕರ್ತನ ಹಾಗೆ ತೋರುವ ಹೊತ್ತಿಗೂ ವಿಚಾರಿಸುವಲ್ಲಿ ಆತ್ಮನು ಅಪರಿಚ್ಛಿನ್ನನಾಗಿ ಇದ್ದಾನೆಯಾದ ಕಾರಣ ಆತ್ಮನು ಅಕರ್ತನೇ ಸರಿ. ಸಂದೇಹವಿಲ್ಲ, ಸಿದ್ಧ. ಆ ಅಕರ್ತನಾದ ಆತ್ಮನೇ ನಾನೆಂದು ಮುಮುಕ್ಷುವಾದಂಥವನು ತಿಳಿಯತಕ್ಕದು.

ಇನ್ನು ಆತ್ಮನಿಗೆ ಅಭೋಕ್ತೃತ್ವ ಹೇಗೆಯೆಂದು ವಿಚಾರಿಸುತ್ತ ಇದ್ದೇವೆ. ಆತ್ಮನಿಗೆ ಭೋಕ್ತೃತ್ವವು ಪ್ರಸಕ್ತವಾದರಷ್ಟೆ ಆತ್ಮನಿಗೆ ಅಭೋಕ್ತೃತ್ವವು ಹೇಗೆಂದು ವಿಚಾರಿಸಬೇಕು. ಭೋಕ್ತೃತ್ವವು ಪ್ರಸಕ್ತವಾಯಿತೆ ? ಎಂದರೆ ಪ್ರಸಕ್ತವಾಯಿತು. ಅದೆಂತೆಂದರೆ:—ನಾನು ಭೋಜನವ ಮಾಡಿದೆನು, ನಾನು ಅನೇಕ ಭೋಗಗಳ ಭುಂಜಿಸುತಿದ್ದೇನೆ ಎಂದು ಭ್ರಾಂತಿಯಿಂದ ಆತ್ಮನಿಗೆ ಭೋಕ್ತೃತ್ವವು ತೋರುತ್ತಿದೆ. ವಿಚಾರಿಸುವಲ್ಲಿ ಆತ್ಮನಿಗೆ ಭೋಕ್ತೃತ್ವವು ಇಲ್ಲ. ಅದೆಂತೆಂದರೆ—ಆತ್ಮನು ಅದ್ವಿತೀಯನಾಗಿ ಇದ್ದಾನೆಯಾದಕಾರಣ ಆ ಅದ್ವಿತೀಯನಾದ ಆತ್ಮನಿಗಿಂತಲೂ ಅನ್ಯವಾದ ಭೋಗ್ಯವಸ್ತು ಇಲ್ಲವಾಗಲಾಗಿ ಆತ್ಮನಿಗೆ ಭೋಕ್ತೃತ್ವವ ಹೇಳಕೂಡದು. ಅದರಿಂದ ಆತ್ಮನು ಅಭೋಕ್ತನೇ ಸರಿ. ಸಂದೇಹವಿಲ್ಲ, ಸಿದ್ಧ. ಅದಂತಿರಲಿ.

ಲೋಕದಲ್ಲಿ ದೇವದತ್ತಾದಿಗಳು ತಮಗೆ ವ್ಯತಿರಿಕ್ತವಾದಂಥ ಅನ್ನಾದಿಗಳನು ಭುಂಜಿಸುವುದ ಕಂಡು ಇದ್ದೇವೆಯಾದಕಾರಣ ಆ ದೇವದತ್ತಾದಿಗಳು ತಮಗೆ ತಾವೆ ಭೋಜ್ಯರಾಗಿ ಇರುವಂಥದನು ಎಲ್ಲಿಯೂ ಕಾಣೆವು. ಭೋಜ್ಯವಸ್ತುವು ಇಲ್ಲದೆ ಭೋಕ್ತೃತ್ವವನು ಎಲ್ಲಿಯೂ

ಕಾಣೆವು. ಅದುಕಾರಣ ಅದ್ವಿತೀಯನಾದ ಆತ್ಮನಿಗೂ ಅಭೋಕ್ತೃತ್ವವು ಸಿದ್ಧವೇ ಸರಿ.

ಈ ಪ್ರಕಾರವಾಗಿ ವಿಚಾರಿಸಿ ಅದ್ವಿತೀಯನಾಗಿ ಅಪರಿಚ್ಛಿನ್ನನಾಗಿ ಅಸಂಗನಾಗಿ ಅಕರ್ತನಾಗಿ ಅಭೋಕ್ತನಾದಂಥ ಆತ್ಮನು ನಾನು ಎಂದು ಯಾವನ ತಿಳಿಯುತ್ತಿದ್ದಾನೆಯೋ, ಆತನೇ ಕೃತಾರ್ಥನು, ಆತನೇ ವಿದ್ವಾಂಸನು, ಆತನೇ ಸಮಸ್ತವಾದವರಿಗೂ ಪೂಜ್ಯನು, ಆತನೇ ಜೀವನ್ಮುಕ್ತನೆಂದು ವೇದಾಂತಸಿದ್ಧಾಂತ. ಈಯರ್ಥದಲ್ಲಿ ಸಂಶಯವಿಲ್ಲ. ಸಿದ್ಧ.

ಇಂತೀ ಕನ್ನಡಭಾಷೆಯಿಂ ವಿರಚಿಸಿದ ವಾಸುದೇವ
ಯತೀಂದ್ರಪ್ರೋಕ್ತವಾದ ವಿವೇಕಸಾರದಲ್ಲಿ
ಜ್ಞಾನಾಜ್ಞಾನಪ್ರಕರಣಮಂ ಪೇಳ್ದುದು,
ಚತುರ್ದಶಪ್ರಕರಣಂ.

## ಹದಿನೈದನೆಯ ಪ್ರಕರಣಂ.

॥ ಶರೀರತ್ರಯ ಪ್ರಕರಣ† ॥

ಪಾಶಾಪಹಮಹಾಶೈಲಂ ಮಹಸ್ತ್ವಪಿತಾಮಹಂ ॥
ಜಗತಃ ಕಾರಣಂ ವಂದೇ ಕೇತಾದುಪರಿ ವಾರಣಂ ॥೧॥

ಪ್ರಾಣಿಗಳಿಗೆ ಎಷ್ಟು ಶರೀರವೆಂದು ವಿಚಾರಿಸುತ್ತ ಇದ್ದೇವೆ.

ಈ ವಿಚಾರಕ್ಕೆ ಪ್ರಸಕ್ತಿತಾನೆ ಏನು ? ಪ್ರಯೋಜನತಾನೆ ಏನು ? ಎಂದರೆ ಹೇಳೇವು. ಸ್ಥೂಲಶರೀರಮಾತ್ರ ಅಷ್ಟುಮಂದಿಗು ಪ್ರತ್ಯಕ್ಷವಾಗಿ ತೋರುತ್ತ ಇದೆ. ಮತ್ತೇನೂ ತೋರಲಿಲ್ಲವಾದುದರಿಂದ ಈ ವಿಚಾರಕ್ಕೆ ಪ್ರಸಕ್ತಿಯುಂಟು. ಇಷ್ಟುಮಾತ್ರವಲ್ಲ. ವೇದಾಂತಿಗಳಿಗಿಂತಲು ವ್ಯತಿರಿಕ್ತವಾದಂಥವರಷ್ಟು ಮಂದಿಗು "ಇಂದ್ರಿಯಾದಿಗಳು ತೋರುವ ಹೊತ್ತಿಗೂ ಪ್ರತ್ಯಕ್ಷವಾಗಿರುವಂಥ ಶರೀರವೊಂದು ಮಾತ್ರವೇ ಸರಿ,

† ಇದು ಬಂದು ಪ್ರತಿಯಲ್ಲಿ 20 ನೆಯ ಪ್ರಕರಣವಾಗಿದೆ.

ಮತ್ತು ಶರೀರಗಳು ಇಲ್ಲ '' ಎಂದು ಹೇಳುತ್ತ ಇದ್ದಾರೆ. ಇದರಿಂದಲೂ ಈ ವಿಚಾರಕ್ಕೆ ಪ್ರಸಕ್ತಿಯುಂಟೇ ಸರಿ. ಈ ವಿಚಾರದಿಂದಲೇ ಸಮಸ್ತವಾದ ದೇಹ ಆ ದೇಹಾದಿನಿಷ್ಠವಾದ ವಿಕಾರಗಳು ಆತ್ಮನ ಕಾಲತ್ರಯದಲ್ಲೂ ಸ್ಪರುಶನವ ಮಾಡಲಾರದೆಂದು ತೋರುತ್ತ ಇದೆ. ಹೀಗೆ ತೋರುವುದೇ ಈ ವಿಚಾರಕ್ಕೆ ಫಲವೆನಿಸುವುದು. ಅದರಿಂದಲೇ ಈ ವಿಚಾರಕ್ಕೆ ಪ್ರಸಕ್ತಿಯೂ ಪ್ರಯೋಜನವೂ ಉಂಟಾಯಿತು. ಆದಕಾರಣ ಪ್ರಾಣಿಗಳಿಗೆ ಎಷ್ಟು ಶರೀರವೆಂದು ವಿಚಾರಿಸಬೇಕಾಯಿತು. ತನ್ನಿಮಿತ್ತವಾಗಿ ಪ್ರಾಣಿಗಳಿಗೆ ಎಷ್ಟು ಶರೀರವೆಂದು ವಿಚಾರಿಸುತ್ತಿದ್ದೇವೆ.

ಹೋಗುವಂಥ ಶರೀರಗಳು ಎಷ್ಟೆಂದರೆ ಮೂರೇ ಶರೀರಗಳು. ಅವಾವುವೆಂದರೆ —ಸ್ಥೂಲಶರೀರವೆನುತಲೂ, ಸೂಕ್ಷ್ಮಶರೀರವೆನುತಲೂ, ಕಾರಣಶರೀರವೆನುತಲೂ ಮೂರು ವಿಧಗಳು.

ಇವರಲ್ಲಿ ಸ್ಥೂಲಶರೀರಕ್ಕೆ ಶರೀರ ಲಕ್ಷಣವು ಇದೆಯಾದುದರಿಂದ ಸ್ಥೂಲಶರೀರವು ಶರೀರವಾಗಲಿ; ಕಾರಣಸೂಕ್ಷ್ಮಶರೀರಗಳಿಗೆ ಇದು ಹೇಗೆ ಕೂಡೀತೆಂದರೆ-ಅದಕ್ಕೂ "ಶೀರ್ಯತೆ ಇತಿ ಶರೀರಃ'' ಎಂಬ ಲಕ್ಷಣವು ಇದೆಯಾದುದರಿಂದ ಅವಕ್ಕೂ ಶರೀರತ್ವವುಂಟೇ ಸರಿ. ಇವಕ್ಕೆ ಜೀರ್ಣತ್ವವೆಲ್ಲಿ ಕಾಣಬರುತ್ತದೆ? ಎಂದರೆ-ಸುಷುಪ್ತಿಯಲ್ಲಿಯೂ ಮುಮುಕ್ಷುವಿನಲ್ಲಿಯೂ ಕಾಣಪಡಲಿಲ್ಲವಾಗಲಾಗಿ, ಸೂಕ್ಷ್ಮಕಾರಣ ಶರೀರಗಳೆರಡು ಸ್ಥೂಲಶರೀರದೋಪಾದಿಯಲ್ಲಿ ಪ್ರತ್ಯಕ್ಷವಾಗಿ ಕಾಣಪಡಲಿಲ್ಲವಾಗಲಾಗಿ, ಪ್ರಸಿದ್ಧವಾಗಿ ಹೇಳಪಟ್ಟದೆಯಾದುದರಿಂದಲೂ ದೊಡ್ಡವರಿಂದ ಅಂಗೀಕರಿಸಪಟ್ಟದೆಯಾದುದರಿಂದಲೂ ಈಸೂಕ್ಷ್ಮಕಾರಣಶರೀರಗಳು ಇಲ್ಲವೆಂದು ಹೇಳಕೂಡದು.

ಹಾಗಾದರೆ ಒಬ್ಬೊಬ್ಬ ಪ್ರಾಣಿಗಳಿಗೆ ಸ್ಥೂಲಶರೀರವೆಷ್ಟು ? ಸೂಕ್ಷ್ಮಶರೀರವೆಷ್ಟು? ಕಾರಣಶರೀರವೆಷ್ಟು? ಎಂದರೆ—ಸ್ಥೂಲಶರೀರಗಳು ಅನಂತಗಳು, ಸೂಕ್ಷ್ಮಶರೀರಗಳು ಒಂದೇ ಸರಿ, ಕಾರಣಶರೀರವೊಂದೇ ಸರಿ. ಈ ಮೂರು ಶರೀರಗಳಿಗೂ ಶರೀರತ್ವವು ತುಲ್ಯವಾಗಿ ಇರಲಾಗಿ, ಒಬ್ಬೊಬ್ಬ ಪ್ರಾಣಿಗಳಿಗೆ ಸ್ಥೂಲಶರೀರ ಅನಂತವಾಗುವುದೇತಕ್ಕೆ? ಸೂಕ್ಷ್ಮ ಕಾರಣ ಶರೀರಗಳು ಒಂದೊಂದಾಗುವುದೇತಕ್ಕೆ? ಎಂದರೆ-ಹೇಳೇವು. ಸ್ಥೂಲಶರೀರವು ಕರ್ಮಜನ್ಯವಾದುದರಿಂದ ಅದು ಅನಂತವಾಯಿತು.

ಸೂಕ್ಷ್ಮಶರೀರವು ಕರ್ಮಜನ್ಯವಲ್ಲವಾಗಲಾಗಿಯೂ ಕಾರಣಶರೀರವು ಜನ್ಯವಲ್ಲವಾಗಲಾಗಿಯೂ, ಅವು ಒಂದೊಂದಾಯಿತು.

ಹೀಗೆ ಹೇಳಕೂಡದು. ಸೂಕ್ಷ್ಮಶರೀರವೊಂದು ಜನ್ಯವಲ್ಲವೆಂದು ಹೇಳಿದುದರಿಂದಲೂ ಕಾರಣಶರೀರವು ಜನ್ಯವಲ್ಲವೆಂದು ಹೇಳಿದುದರಿಂದಲೂ ಸೂಕ್ಷ್ಮಶರೀರಕ್ಕೆ ಪ ಕಾರಾಂತರದಿಂದ ಜನ್ಯತ್ವವು ತೋರುತ್ತಿದೆ. ಕಾರಣಶರೀರಕ್ಕೆ ಜನ್ಯತ್ವವಿಲ್ಲವೆಂದು ಹೇಳಿದುದರಿಂದ ಅದಕ್ಕೆ ಶರೀರತ್ವ ಹೇಗೆ ಕೂಡಿತೆನುತಲೂ ತೋರುತ್ತಿದೆ. ತೋರಿದರೂ ತೋರಲಿ, ಎಂದರಾದರೆ ಹೇಳೇವು. ಕಾರಣಶರೀರಕ್ಕೆ ಜನ್ಯತ್ವವ ಅಂಗೀಕರಿಸದೆ ಇರುವುದರಿಂದ ಶರೀರತ್ವವೇ ಇಲ್ಲದೆ ಹೋಯಿತು ಹೋದರೆ ಹೋಗಲಿ, ಎಂದಿರಾದರೆ ಪ್ರಾಣಿಗಳಿಗೆ ಮೂರು ಶರೀರಗಳೆಂದು ಹೇಳಿದುದು ಎತ್ತಹೋಯಿತು. ಇಷ್ಟುಮಾತ್ರವಲ್ಲ ಸೂಕ್ಷ್ಮಶರೀರಕ್ಕೆ ಪ್ರಕಾರಾಂತರವಾಗಿ ಉತ್ಪತ್ತಿಯು ಅಂಗೀಕರಿಸಿದರೆ ಜೀವನಿಗೆ ಅನಾದಿತ್ವ ಎತ್ತಹೋಗುತ್ತಿದೆ. ಸೂಕ್ಷ್ಮಶರೀರಕ್ಕೆ ಉತ್ಪತ್ತಿಯನು ಅಂಗೀಕರಿಸಿದರೆ, ಜೀವನಿಗೆ ಅನಾದಿತ್ವವೇತಕ್ಕೆ ಎತ್ತಹೋಗಬೇಕೆಂದರೆ—ಆತ್ಮನಿಗೆ ಜೀವತ್ವವು ಸೂಕ್ಷ್ಮಶರೀರವೆಂಬ ಉಪಾಧಿಯಿಂದ ಬಂದುದೆಂದು ಹೇಳುತ್ತ ಇದ್ದಾರೆಯಾದುದರಿಂದ ಜೀವನಿಗೆ ಉಪಾಧಿಯಿಂದ ಸೂಕ್ಷ್ಮಶರೀರಕ್ಕೆ ಉತ್ಪತ್ತಿಯು ಹೇಳುವಾಗ್ಯೆ ಜೀವನಿಗೆ ಅನಾದಿತ್ವವು ಎತ್ತಹೋಗುತ್ತದೆ. ಜೀವನಿಗೆ ಅನಾದಿತ್ವವು ಸಿದ್ಧಿಸುವುದಕ್ಕಾಗಿ ಸೂಕ್ಷ್ಮಶರೀರಕ್ಕೆ ಉತ್ಪತ್ತಿಯನು ಅಂಗೀಕರಿಸದೆ ಇದ್ದೇವೆ, ಎಂದರೆ ಸೂಕ್ಷ್ಮಶರೀರಕ್ಕೆ ಉತ್ಪತ್ತಿಯು ಹೇಳುವಂಥ ಶ್ರುತ್ಯಾದಿಗಳಿಗೆ ವಿರೋಧ ಬರುತ್ತಿದೆ. ಇಷ್ಟು ಮಾತ್ರವಲ್ಲ. ಸೂಕ್ಷ್ಮಶರೀರಕ್ಕೆ ಜನ್ಯತ್ವವ ಅಂಗೀಕರಿಸದೆ ಇರುವುದರಿಂದ ಸೂಕ್ಷ್ಮಶರೀರಕ್ಕೆ ನಿತ್ಯತ್ವವು ಸಿದ್ಧಿಸಿತಾದಕಾರಣ ಆತ್ಮನಿಗೆ ಅದ್ವಿತೀಯತ್ವವು ಎತ್ತಹೋಗುತ್ತ ಇದೆ. ಶ್ರುತ್ಯಾದಿಗಳಿಗೆ ಅರ್ಥಸಿದ್ಧಿಸುವುದಕೋಸ್ಕರವಾಗಿಯೂ ಸೂಕ್ಷ್ಮಶರೀರಕ್ಕೆ ಉತ್ಪತ್ತಿಯನು ಅಂಗೀಕರಿಸಿತೆಯಾದರೆ ಜೀವನಿಗೆ [1] ಅನಾದಿತ್ವವು [1] ಎತ್ತಹೋಯಿತು.

ಇಷ್ಟು ಮಾತ್ರವಲ್ಲ. ಲೋಕದಲ್ಲಿ ಯಾವುವುಗಳು ಜನ್ಯವಾದವುಗಳಾಗಿವೆಯೋ ಅವೆಲ್ಲವು ಕರ್ಮಜನ್ಯಗಳಾಗಿಯೆ ಕಂಡು ಇದೆಯಾದುದರಿಂದ

ಪಾ.— 1. ಆವಸ್ಯಾತ್ಮತವು.

ಲೂ (ಸೂಕ್ಷ್ಮಶರೀರಕ್ಕೂ) ಕರ್ಮದ ಜನ್ಯತ್ವವ ಅಂಗೀಕರಿಸುವಾಗ್ಯೆ ಸೂಕ್ಷ್ಮಶರೀರವು ಕರ್ಮಜನ್ಯವೆನುತಲೇ ಅಂಗೀಕರಿಸಬೇಕು. ಇಲ್ಲದೆಹೋದರೆ ದೃಷ್ಟವಿರೋಧ ಬರುತ್ತದೆ. ಬಂದರೂ ಬರಲಿ ಎಂದರೆ, ಅದು ಯುಕ್ತವಲ್ಲ. ಈ ವಿರೋಧವನು ಪರಿಹರಿಸುವುದಕ್ಕೋಸ್ಕರ ಸೂಕ್ಷ್ಮಶರೀರಕ್ಕೆ ಕರ್ಮಜನ್ಯತ್ವವ ಅಂಗೀಕರಿಸಿತೆ ಆದರೆ ಕರ್ಮಜನ್ಯಗಳಾದಂಥ ಸ್ಥೂಲಶರೀರಗಳಿಗೂ ಅನೇಕತ್ವವ ಕಂಡು ಇದ್ದೇವೆ ಆದುದರಿಂದ ಒಬ್ಬೊಬ್ಬ ಪ್ರಾಣಿಯು ಸೂಕ್ಷ್ಮಶರೀರಕ್ಕೂ ಅನೇಕತ್ವ ಬರಬೇಕು. ಬಂದರೂ ಬರಲಿ, ಎಂದರೆ ಒಬ್ಬೊಬ್ಬ ಪ್ರಾಣಿಗೆ ಸೂಕ್ಷ್ಮಶರೀರವೊಂದೊಂದೇ ಸರಿಯೆಂದು ಹೇಳಿದಂಥದು ಎತ್ತಹೋಗುವುದು. ಹೋದರೂ ಹೋಗಲಿ ಎಂದರೆ, ಪೂರ್ವ ಒಂದೊಂದ ಹೇಳಿ ಈಗ ಅನೇಕತ್ವವೆಂದು ಹೇಳಿದುದಕ್ಕೂ ಪೂರ್ವ ಕರ್ಮಜನ್ಯವಲ್ಲವೆಂದು ಹೇಳಿ ಈಗ ಕರ್ಮಜನ್ಯವೆಂದು ಹೇಳಿದುದಕ್ಕೂ ವಿರೋಧ ತೋರುತ್ತ ಇದೆ.

ಹೀಗೆ ಬಂದು ದೋಷವ ಪರಿಹರಿಸಹೋದರೆ ಮತ್ತೊಂದು ದೋಷವು ಬರುತ್ತ ಇದೆಯಾದುದರಿಂದ ಈ ವಿಚಾರವ ಬಿಟ್ಟು ಬಿಟ್ಟು ಮತ್ತೇನಾದರೂ ಒಂದವಮಾಡಿಕೊಂಬುದು ಒಳ್ಳಿತೆಂದು ತೋರುತ್ತ ಇದೆಯೆಂದು ಹೇಳಿದರೆ, ಹಾಗೆ ಹೇಳಕೆಲಸವಿಲ್ಲ. ಏಕಂದರೆ? ಈಗ ಹೇಳಿದಂಥ ಅರ್ಥಗಳಿಗೆ ವಿರೋಧವಿಲ್ಲವಾದುದರಿಂದ ಹಾಗೆ ಹೇಳಕೆಲ ವಿಲ್ಲ ಅದೆಂತೆಂದರೆ ಹೇಳೇವು.

ಸ್ಥೂಲ ಸೂಕ್ಷ್ಮಶರೀರಗಳಿಗೆ ಜನ್ಯತ್ವವನು ಅಂಗೀಕರಿಸಿದುಷ್ಟ್ಟೆ ಅವಕ್ಕೆ ಶರೀರತ್ವವು ಅಂಗೀಕರಿಸಪಟ್ಟಿತು. ಕಾರಣಶರೀರಕ್ಕೆ ಜನ್ಯತ್ವವನು ಅಂಗೀಕರಿಸದೆ ಹೇಗೆ ಶರೀರತ್ವವು ಹೇಳಪಡುವುದೆಂದರೆ ಅದಕ್ಕೂ “ ಶೀರ್ಯತೇ ” ಎಂಬಂಥ ಶರೀರಲಕ್ಷಣವು ಇದೆಯಾದುದರಿಂದ ಅದಕ್ಕೆ ಶರೀರತ್ವವನು ಹೇಳಬಹುದಲ್ಲ.

ಹಾಗಾದರೆ ಅನಾದಿಯಾದ ವಸ್ತುವಿಗೆ ನಾಶವುಂಟೆ? ಎಂದರೆ ನಾಶವುಂಟು. ಅದೆಂತೆಂದರೆ ಹೇಳೇವು. ಘಟಾದಿಪ್ರಾಗಭಾವವು ಅನಾದಿಯಾಗಿ ಇದ್ದ ಹೊತ್ತಿಗೂ ಅದಕ್ಕೆ ಘಟಾದ್ಯುತ್ಪತ್ತಿಯಿಂದ ನಾಶವು ಹೇಗೋ ಪ್ರಕೃತಿಪುರುಷರ ಸಂಯೋಗವು ಅನಾದಿಯಾಗದಿದ್ದಹೊತ್ತಿಗೂ ಆ ಪ್ರಕೃ

ತಿಪ್ರುರುಷ ವಿವೇಕದಿಂದ ಆ ಸಂಯೋಗಕ್ಕೆ ನಾಶವು ಹೇಗೋ ಹಾಗೆ ಅ ಜ್ಞಾನವೆನಿಸುವ ಕಾರಣಶರೀರಕ್ಕೂ [1] ಬ್ರಹ್ಮಾಭಿ [1] ಜ್ಞಾನದಿಂದ ನಾಶವು ಬರಬಹುದಾದಕಾರಣ ಅದಕ್ಕೆ ಶರೀರತ್ವವನು ಅಂಗೀಕರಿಸುವಂಥದು ವಿ ರುದ್ಧವಲ್ಲ. ಹೀಗೆ ಸೂಕ್ಷ್ಮಶರೀರಕ್ಕೆ ಉತ್ಪತ್ತಿಯನು ಅಂಗೀಕರಿಸಿ ಇ ದ್ದೇವೆಯಾದುದರಿಂದ ಅದಕ್ಕೆ ಉತ್ಪತ್ತಿಯನು ಹೇಳುವಂಥ ಶ್ರುತ್ಯಾ ದಿಗಳಿಗೆ ವಿರೋಧವಿಲ್ಲ. ಆ ಸೂಕ್ಷ್ಮಶರೀರವು ಆತ್ಮಕಾರ್ಯವಾಗಿ ಇದೆ ಯಾದುದರಿಂದ ಕಾರಣವಾದ ಆತ್ಮನಿಂದಲು ವ್ಯತಿರಿಕ್ತವಾಗಿ ಆತ್ಮನಿಗೆ ಅದ್ವಿತೀಯತ್ವಹಾನಿಯಿಲ್ಲ. ಹೀಗೆ ಜೀವನಿಗೆ ಅನಾದಿತ್ವಭಂಗವಿಲ್ಲ. ಅ ದೆಂತೆಂದರೆ ಹೇಳೇವು. ಪ್ರಳಯದಲ್ಲೂ ಸೂಕ್ಷ್ಮಶರೀರವು ಕಾರಣಾತ್ಮ ಕವಾಗಿ ಇದೆಯಾದುದರಿಂದ ಆ ಸೂಕ್ಷ್ಮಶರೀರವೆ ಉಪಾಧಿಯಾಗಿ ಉಳ್ಳ ಜೀವಸಂಸ್ಕಾರವು ಇದೆ. ಅದುಕಾರಣ ಜೀವನಿಗೆ ಅನಾದಿತ್ವ ಭಂಗವು ಇಲ್ಲ.

ಹೀಗೆ ಸೂಕ್ಷ್ಮಶರೀರವು ಪ್ರಳಯದಲ್ಲಿ ಇತ್ತೆಯಾದರೆ ಅದಕ್ಕೆ ಉತ್ಪತ್ತಿಯನು ಹೇಳಕೂಡದು. ಅದೆಂತೆಂದರೆ:—ಲೋಕದಲ್ಲಿ ಮೃದಾದಿಗ ಳಲ್ಲಿ ಇಲ್ಲದೆ ಇರುವಂಥ ಘಟಾದಿಗಳಿಗೆ ಉತ್ಪತ್ತಿಯನು ಕಂಡು ಇದ್ದೇ ವೆ, ಇರುವಂಥ ಮೃದಾದಿಗಳಿಗೆ ಉತ್ಪತ್ತಿಯನು ಕಾಣೆವೆಂದು ಹೇ ಳಿಕೆಯಾದರೆ ಹಾಗೆ ಹೇಳಕೂಡದು. ಅದೆಂತೆಂದರೆ ಹೇಳೇವು. ಇಲ್ಲದ ವಸ್ತುವೆಂದರೇನೆಂದರೆ, ಅಸತ್ತು. ಆ ಅಸತ್ತಿಗೆ ಉತ್ಪತ್ತಿಯನು ಹೇಳು ವಾಗ್ಯೆ ಶಶವಿಷಾಣಗಳು ಹುಟ್ಟಬೇಕು. ಅವು ಹುಟ್ಟಲಿಲ್ಲವಾದುದರಿಂದ ಆ ಅಸತ್ತಿಗೆ ಉತ್ಪತ್ತಿಯನು ಹೇಳಕೂಡದು. ಮತ್ತೇನೆಂದರೆ ಇರು ವಂಥ ವಸ್ತುವೇ ಉತ್ಪತ್ತಿನಿಸುವುದು. ಅದಕ್ಕೆ ಉತ್ಪತ್ತಿಯನು ಹೇಳಬೇ ಕು. ಆಯೋಪಾದಿಯಲ್ಲಿಯು ಲೋಕದಲ್ಲಿ ಕಂಡು ಇದ್ದೇವೆ. ಅದೆಂ ತೆಂದರೆ:—ಘಟವ ಮಾಡಬೇಕೆಂದು ಪ್ರವರ್ತಿಸುವಂಥ ಪುರುಷನು ಮಣ್ಣನೆ ಎತ್ತಿಕೊಂಡು ಬರುತ್ತಿದ್ದಾನೆ. ಸೀರೆಯ ನೇಯಬೇಕೆಂಬ ಪುರುಷನು ತಂತುಗಳನೆ ಕೊಂಡು ಬರುತ್ತ ಇದ್ದಾನೆ. ಮೊಸರು ಬೆಣ್ಣೆ ಬೇಕೆಂ ದು ಪ್ರವರ್ತಿಸುವ ಪುರುಷನು ಹಾಲನು ಸಂಪಾದಿಸುತ್ತ ಇದ್ದಾನೆ. ಎಣ್ಣೆ ಬೇಕೆಂದು ಪ್ರವರ್ತಿಸುವ ಪುರುಷನು ಎಳ್ಳನೆ ಸಂಪಾದಿಸುತ್ತ ಇದ್ದಾನೆ

ಪಾ— 1. ಬ್ರಹ್ಮಾತ್ಮೈಕ್ಯ.

ಮೃದಾದಿಗಳಲ್ಲಿ ಘಟಾದಿಗಳು ಇಲ್ಲದಿದ್ದರೆ ಅವನವನು ಆಯಾ ವ
ಸ್ತುಗಳ ನಿಯತವಾಗಿ ಸಂಪಾದಿಸಿಯಾನು, ಸಂಪಾದಿಸನಲ್ಲ. ಸಂಪಾದಿ
ಸುತ್ತಿದ್ದಾನೆಯಾದುದರಿಂದ ಇರುವಂಥ ವಸ್ತುವಿಗೆ ಉತ್ಪತ್ತಿಯು ಹೇಳ
ಬೇಕು. ಇಲ್ಲದಂಥ ವಸ್ತುವಿಗೆ ಉತ್ಪತ್ತಿಯನು ಹೇಳಿಕೆಯಾದರೆ ಇದು
ಕಾರ್ಯ, ಇದು ಕಾರಣ, ಈ ಕಾರ್ಯಕ್ಕೆ ಇದೇ ಕಾರಣವೆಂಬ ನಿಯಮವು
ಇಲ್ಲದೆ ಹೋಯಿತಾಗಲಾಗಿ ತಂತುಗಳಿಂದ ಘಟ ಹುಟ್ಟಬೇಕು, ಮೃ
ತ್ತುವಿನಿಂದ ಪಟ ಹುಟ್ಟಬೇಕು, ನೀರಿನಿಂದ ಮೊಸರು ಬೆಣ್ಣೆಯು ಹುಟ್ಟ
ಬೇಕು, ಮಳಲಿನಿಂದ ಎಣ್ಣೆ ಹುಟ್ಟಬೇಕು. ಹೀಗೆ ಹುಟ್ಟುವುದ ಕಾಣೆ
ವಾಗಲಾಗಿ ಅದಕ್ಕದಕ್ಕೆ ನಿಯತವಾದ ಕಾರಣದಿಂದಲೆ ಆಆ ಕಾರ್ಯಗಳು
ಹುಟ್ಟುವದನು ಕಂಡು ಇದ್ದೇವೆಯಾಗಲಾಗಿಯೂ, ಇರುವಂಥ ವಸ್ತುವೇ
ಹುಟ್ಟುತಿದೆಯೆಂಬು ಹೇಳಬೇಕು. ಆಯಾ ಕಾರ್ಯಕ್ಕೆ ಕಾರಣಗಳಾದ ವ
ಸ್ತುಗಳು ಇವೆಯಾದುದರಿಂದ ಅವು ಹುಟ್ಟಬೇಕೆಂದು ಹೇಳಕೂಡದು.
ಏಕೆ ಹೇಳಕೂಡದೆಂದರೆ—ಅದಕ್ಕೆ ಉತ್ಪತ್ತಿಯನು ಪ್ರತ್ಯಕ್ಷವಾಗಿ ಕಾಣ
ಪಡಲಿಲ್ಲವಾದಕಾರಣ ಈಘಟಾದಿಗಳಿಗೆ ಉತ್ಪತ್ತಿಯನು ಹೇಳದೋಪಾ
ದಿಯಲ್ಲಿ ಅದಕ್ಕೆ ಕಾರಣವಾದ ಮೃದಾದಿಗಳಿಗೆ ಉತ್ಪತ್ತಿಯನು ಹೇಳಕೂ
ಡದು. ಈಕಾರಣಗಳಾದಂಥ ಮೃದಾದಿಗಳಿಗೆ ಒಂದೊಂದು ದಿಕ್ಕಿನಲ್ಲಿ ಉ
ತ್ಪತ್ತಿ ಕಾಣಪಟ್ಟಹೊತ್ತಿಗೂ ಪೃಥಿವ್ಯಾದಿಗಳಿಗೂ ಶ್ರುತ್ಯಾದಿಗಳಿಂದ ಉ
ತ್ಪತ್ತಿಯು ಹೇಳಪಟ್ಟಹೊತ್ತಿಗೂ ಸರ್ವಕಾರಣವಾದಂಥ ಆತ್ಮನಿಗೆ ಉ
ತ್ಪತ್ತಿ ಉಂಟೆಂಬುದರಲ್ಲಿ ಒಂದು ಪ್ರಮಾಣವು ಇಲ್ಲವಾಗಲಾಗಿಯೂ ಅನ
ವಸ್ಥಾದಿದೋಷಗಳು ಬರುತ್ತವೆಯಾಗಲಾಗಿಯೂ ಸರ್ವಕಾರಣಗಳಾದಂ
ಥ ಉತ್ಪತ್ತಿಯು ಹೇಳುವುದು ಯುಕ್ತಿಯುಕ್ತವಲ್ಲವೆನುತಲೂ ಹೇಳಕೂ
ಡದು. ಅದೆಂತೆಂದರೆ ಹೇಳೇವು. ಈಹೇಳಿದಂಥ ಯುಕ್ತಿಯಿಂದ ಅಸ
ತ್ತಿಗೆ ಉತ್ಪತ್ತಿಯನು ಹೇಳಕೂಡದೆ ಹೋಯಿತಾಗಲಾಗಿ ಸತ್ತಿಗೆ ಉತ್ಪ
ತ್ತಿಯನು ಹೇಳಬೇಕು. ಸತ್ತೇನೆಂದರೆ ಇರುವಂಥ ವಸ್ತುವೇ ಸತ್ತು.
ಅದಕ್ಕೆ ಉತ್ಪತ್ತಿ ಹೇಗೆಂದರೆ—ಪೂರ್ವವು ತೋರದೆ ಇರುವಂಥ ನಾಮ
ರೂಪಾತ್ಮಕವಾಗಿ ಕಾರಣಾತ್ಮಕವಾಗಿ ಬೀಜಾದಿಗಳಲ್ಲಿ ಇರುವಂಥ ವೃ
ಕ್ಷಾದಿಗಳಿಗೆ ನಾಮರೂಪಾತ್ಮಕವಾಗಿ ತೋರುವಂಥದು ಹೇಗೆ ಉತ್ಪತ್ತಿ

ಯೋ ಹಾಗೆ ಪ್ರಳಯದಲ್ಲೂ ತೋರದೆ ಇರುವಂಥ ನಾಮರೂಪಾತ್ಮಕ ವಾಗಿ ತೋರುವಂಥ ಸೂಕ್ಷ್ಮಶರೀರಾದಿಗಳಿಗೆ ನಾಮರೂಪವಾಗಿ ತೋರು ವುದೆ ಉತ್ಪತ್ತಿ. ಹಾಗಾದರೆ ಕಾರ್ಯಕಾರಣಾದಿಗಳಿಗೆ ಭೇದವು ಹೇಗೆ? ಎಂದ ರೆ—ಅನಭಿವ್ಯಕ್ತನಾಮರೂಪವಾಗಿರುವಂಥದು ಕಾರಣವೆನಿಸುವುದು, ಅಭಿವ್ಯ ಕ್ತನಾಮರೂಪವಾಗಿ ಇರುವಂಥದು ಕಾರ್ಯವೆಂಬುದೇ ಕಾರ್ಯಕಾರಣಗಳಿಗೆ ಭೇದವೆನಿಸುವುದು. ಕಾಲತ್ರಯದಲ್ಲು ಕಾರ್ಯವು ಕಾರಣಾತ್ಮಕವಾಗಿ (ಇ ದೆ. ಹೀಗೆ ) ಇರುವಂಥ ಕಾರಣವು ಅಭಿವ್ಯಕ್ತನಾಮರೂಪಾತ್ಮಕವಾಗಿ ಇರುವಂಥ ಕಾರ್ಯವಾಗಿ ತೋರುವುದಕ್ಕೆ ಕುಲಾಲಾದಿವ್ಯಾಪರವ ಅಪೇ ಕ್ಷಿಸುವುದು ಯುಕ್ತವೇ ಸರಿ. ಅಸತ್ತಾದಂಥ ಕಾರ್ಯವು ಹುಟ್ಟುತಿದೆ ಎಂ ಬ ಪಕ್ಷದಲ್ಲಿ ಕುಲಾಲಾದಿವ್ಯಾಪಾರಕ್ಕೆ ಆ ಸತ್ತು ಆಶ್ರಯನಲ್ಲವಾಗಲಾ ಗಿಯು, ಅನ್ಯಾಶ್ರಯವಾದ ವ್ಯಾಪಾರದಿಂದ ಅನ್ಯಕ್ಕೆ ಉತ್ಪತ್ತಿಯನು ಹೇಳುವಲ್ಲಿ ಅತಿಪ್ರಸಂಗ ಬರುವುದಾದಕಾರಣ ಕುಲಾಲಾದಿ ವ್ಯಾಪಾರವು ವ್ಯರ್ಥವೇ ಸರಿ. ಆವ್ಯಾಪಾರಕ್ಕೆ ವ್ಯರ್ಥತ್ವವ ಹೇಳಕೂಡದಾಗಲಾಗಿ ಯೂ ಪೂರ್ವದಲ್ಲಿ ಹೇಳಿದ ಯುಕ್ತಿಗಳಿಂದ ಆಕಾಲತ್ರಯದಲ್ಲೂ ಕಾರ್ಯವು ಕಾರಣಾತ್ಮಕವಾಗಿ ಇದೆಯೇ ಸರಿ. ಅದಱಿಂದ ಪ್ರಳಯದಲ್ಲೂ ಆತ್ಮನಿಗೆ ಜೀವತ್ವದಲ್ಲಿ ಉಪಾಧಿಭೂತವಾದಂಥ ಸೂಕ್ಷ್ಮಶರೀರವು ಕಾರಣಾತ್ಮಕ ವಾಗಿ ಇದೆಯಾಗಲಾಗಿ ಅದೇ ಪ್ರಳಯದಲ್ಲೂ ಆತ್ಮನಿಗೆ ಜೀವತ್ವ ಸಂಸ್ಕಾ ರಾತ್ಮಕವಾಗಿ ಇದೆಯಾದುದಱಿಂದ ಜೀವನಿಗೆ ಅನಾದಿತ್ವಭಂಗವು ಇಲ್ಲ. ಆ ಸೂಕ್ಷ್ಮಶರೀರಕ್ಕೆನಾಮರೂಪಾತ್ಮಕವಾಗಿ ತೋರುವಂಥದೇ ಉತ್ಪತ್ತಿಯೆಂ ದು ಅಂಗೀಕರಿಸಪಟ್ಟದೆಯಾದಕಾರಣ ಶ್ರುತ್ಯಾದಿಗಳಿಗೆ ವಿರೋಧವೂ ಇಲ್ಲ.

ಈದೋಷಗಳು ಹೀಗೆ ಪರಿಹರಿಸಿದ ಹೊತ್ತಿಗೂ ಲೋಕದಲ್ಲಿ ಜ ನ್ಯವಾದಂಥ ವಸ್ತುಗಳಿಗೆ ಕರ್ಮಜನ್ಯತ್ವವನು ಅನೇಕತ್ವವನು ಕಂಡು ಇದ್ದೇವೆಯಾಗಲಾಗಿ ಸೂಕ್ಷ್ಮಶರೀರವು ಜನ್ಯವಾಗುವಾಗ್ಯೆ ಆದಕ್ಕೂ ಕ ರ್ಮಜನ್ಯತ್ವವು ಅನೇಕತ್ವವು ಬರಬೇಕೆಂಬಂಥ ದೋಷವು ಪರಿಹರಿಸಪ ಡಲಿಲ್ಲ ಎಂದೆಯಾದರೆ ಪರಿಹರಿಸೇವು. ಅದು ಹೇಗೆ, ಪರಿಹರಿಸಿರಿ? ಎಂ ದರೆ—ಆಸೂಕ್ಷ್ಮಶರೀರಕ್ಕೆ ಕರ್ಮಜನ್ಯತ್ವವನು ಅನೇಕತ್ವವನು ಅಂಗಿ ಕರಿಸಿಯಷ್ಟೆ ಈದೋಷಗಳ ಪರಿಹರಿಸಬೇಕು. ಹಾಗೆ ಅಂಗೀಕರಿಸುವ

ಲ್ಲಿ ಪೂರ್ವದಲ್ಲಿ ಸೂಕ್ಷ್ಮಶರೀರವು ಕರ್ಮಜನ್ಯವಲ್ಲವೆನುತಲೂ ಅದು ಬಂಧು ಮನೆಯೆನುತಲೂ ಹೇಳಿದುದಕೆ ವಿರೋಧವು ತೋರುತ್ತಿದೆಯೆಂದೆಯಾದರೆ ಈವಿರೋಧಗಳು ಅವಿರೋಧಗಳು ಹೇಗೆ ಇಲ್ಲದೆ ಇರುವುದೋ, ಹಾಗೆ ಪರಿಹರಿಸೇವು. ಅದೆಂತೆಂದರೆ ಹೇಳೇವು. ಜನ್ಯವೆಲ್ಲವು ಕರ್ಮಜನ್ಯವೆಂದು ಅಂಗೀಕರಿಸಬೇಕಾದಕಾರಣ ಆಜನ್ಯವು ಸಾಮಾನ್ಯಜನ್ಯವೆನುತಲೂ ವಿಶೇಷ ಜನ್ಯವೆನುತಲೂ ಎರಡು ವಿಧಗಳು. ಹೀಗೆ ಇದ್ದಲ್ಲಿ ಈ ಸೂಕ್ಷ್ಮಶರೀರಕ್ಕೆ ಸಾಮಾನ್ಯಕರ್ಮಜನ್ಯತ್ವವನು ಅಂಗೀಕರಿಸಪಟ್ಟಿದೆಯಾಗಲಾಗಿ ಜನ್ಯಮಾತ್ರಕ್ಕೆ ಕರ್ಮಜನ್ಯತ್ವನಿಯಮಭಂಗವು ಇಲ್ಲ. ಸೂಕ್ಷ್ಮಶರೀರಕ್ಕೆ ಸಾಮಾನ್ಯಕರ್ಮಜನ್ಯತ್ವವ ( ಅಂಗೀಕರಿಸಿ ಇದ್ದರೂ ವಿಶೇಷಕರ್ಮಜನ್ಯತ್ವವ) ಅಂಗೀಕರಿಸಲಿಲ್ಲವಾಗಿ ಪೂರ್ವದಲ್ಲಿ ಸೂಕ್ಷ್ಮಶರೀರವು ಕರ್ಮಜನ್ಯವಲ್ಲವೆಂದು ಹೇಳಿದುದಕ್ಕೆ ವಿರೋಧವು ಇಲ್ಲ. ಸಾಮಾನ್ಯಕರ್ಮಜನ್ಯವಾದ ವಸ್ತುವಿಗೆ ವ್ಯವಹಾರದಲ್ಲಿ ಏಕತ್ವವನು ವಿಶೇಷಕರ್ಮಜನ್ಯವಾದ ವಸ್ತುವಿಗೆ ಅನೇಕತ್ವವನು ಲೋಕದಲ್ಲಿ ಕಂಡು ಇದ್ದೇವೆಯಾಗಲಾಗಿ, ಸೂಕ್ಷ್ಮಶರೀರವು ಸಾಮಾನ್ಯಕರ್ಮಜನ್ಯವಾಗಿ ಇದ್ದಹೊತ್ತಿಗೂ ವಿಶೇಷಕರ್ಮಜನ್ಯವಲ್ಲದೆ ಹೋಯಿತಾದುದರಿಂದ ಸೂಕ್ಷ್ಮಶರೀರ ಬಂಧೆಂದು ಹೇಳಿದುದಕ್ಕೆ ವಿರೋಧವಿಲ್ಲ

ಹೀಗೆ ಸಾಮಾನ್ಯ ಕರ್ಮಜನ್ಯವಾದಂಥ ವಸ್ತುವಿಗೆ ಏಕತ್ವವನು ವಿಶೇಷಕರ್ಮಜನ್ಯವಾದಂಥ ವಸ್ತುವಿಗೆ ಅನೇಕತ್ವವನು ಎಲ್ಲಿಯಾದರೂ ಕಂಡುದುಂಟೆ ಎಂದರೆ, ಲೋಕದಲ್ಲಿ ಕಂಡು ಇದ್ದೇವೆ. (ಅದು ಎಲ್ಲಿ ಕಂಡೆವೆಂದರೆ ಪೃಥಿವ್ಯಾದಿಗಳಲ್ಲಿ ಕಂಡೆವು. ) ಪೃಥಿವ್ಯಾದಿಗಳಿಗೆ ಕರ್ಮಜನ್ಯತ್ವವ ಕಾಣೆವಲ್ಲ, ಹಾಗೆ ಹೇಳಬಹುದೆ? ಎಂದರೆ ಹೇಳಬಹುದು. ಅದೆಂತೆಂದರೆ—[1] ಜಗತ್ತೆಲ್ಲವು ಜನ್ಯವಾಗಲಾಗಿಯೂ ಜಗತ್ತು ಕರ್ಮಜನ್ಯವೆಂದೇ ಹೇಳಬೇಕು. ಜೀವಿಗಳಿಗೆ ಭೋಗ್ಯವಾದರೆ ಜಗತ್ತು ಕರ್ಮಜನ್ಯವಾಗಬೇಕು, ಎಂದೆಯಾದರೆ ಆಗಬಹುದು. ಅದೆಂತೆಂದರೆ ಹೇಳೇವು. 1 ಕರ್ಮಗಳಿಗೆಲ್ಲವ

ಪಾ.— 1. ಜಗತ್ತಪ್ಪು ಕರ್ಮಜನ್ಯವಾಯಿತಾಗಿಯೂ, ಜೀವನಿಗೆ ಭೋಗ್ಯವಾಯಿತಾಗಿಯೂ ಜಗತ್ತು ಕರ್ಮಜನ್ಯವೆಂದು ಹೇಳಬೇಕು. ಜೀವನಿಗೆ ಭೋಗ್ಯವಾದರೆ ಜಗತ್ತು ಕರ್ಮಜನ್ಯವಾಗಬೇಕೇ ? ಎಂದರೆ ಆಗಬೇಕು. ಹೇಗೆಂದರೆ ಹೇಳೇವು.

ಕರ್ಮ ಸುಖದುಃಖಗಳೆಷ್ಟು ಫಲವು. ಆಸುಖದುಃಖಗಳು ಆನುಕೂಲ್ಯ ಪ್ರಾತಿಕೂಲ್ಯ ವಸ್ತುಗಳನು ಅವಲಂಬಿಸಿಕೊಂಡೆ ಬರುತ್ತ ಇದೆ. ಅದಱಿಂದ ಜಗನ್ನಿಷ್ಠವಾದ ಪದಾರ್ಥಗಳೊಳಗೆ ಕೆಲವು ಪದಾರ್ಥಗಳು ಕೆಲವರಿಗೆ ಸಾಧನಗಳಾದಂಥ ಆನುಕೂಲ್ಯಗಳಾಗಿ ಇದ್ದುಕೊಂಡು ಸುಖಕರಗಳಾಗಿ ಇವೆಯಾಗಲಾಗಿಯೂ (ಮತ್ತು ಕೆಲವು ಪದಾರ್ಥಗಳು) ಮತ್ತು ಕೆಲವರಿಗೆ ಪ್ರತಿಕೂಲವಾಗಿದ್ದುಕೊಂಡು ದುಃಖಕರಗಳಾಗಿ ಇವೆಯಾಗಲಾಗಿಯೂ ಆಜೀವರ ಕರ್ಮಗಳು ತಮಗೆ ಫಲವಾದಂಥ ಸುಖದುಃಖಗಳಿಗೆ ಸಾಧನಗಳಾದಂಥ ಆಕಾಶಾದಿಗಳಿಗೆ ಉತ್ಪತ್ತಿಯನು ಸಂಪಾದಿಸಿಕೊಂಡೇ ಜೀವರುಗಳಿಗೆ ಸುಖದುಃಖಗಳನು ಕೊಡುತ್ತ ಇವೆಯಾದುದಱಿಂದಲೂ ಜಗತ್ತೆಲ್ಲವು ಕರ್ಮಜನ್ಯವೆನುತಲೇ ಹೇಳಬೇಕು.

ಸ್ಥಿತಿಕಾಲದಲ್ಲಿಯಷ್ಟು ಜೀವರನು ಅವರಿಗೆ ಕರ್ಮಗಳನು ಕಂಡೆವು, ಪ್ರಳಯದಲ್ಲಾದರೆ ಜೀವರನು ಅವಱ ಕರ್ಮಗಳನು ಕಾಣೆವಲ್ಲ. ಹೀಗೆ ಇರಲಾಗಿ ಜೀವರ ಕರ್ಮದಿಂದ ಆಕಾಶಾದಿ ಜಗತ್ತು ಹುಟ್ಟಿತೆಂಬ ಹೇಗೆ ಹೇಳುವಣವೆಂದರೆ, ಹೇಳಬಹುದು. ಅದೆಂತೆಂದರೆ ಹೇಳೇವು. ಪ್ರಳಯದಲ್ಲೂ ಜೀವರುಗಳು ಅಷ್ಟುಮಂದಿಯೂ ತಮ್ಮ ತಮ್ಮ ಉಪಾಧಿಯೊಡನೆ ಕೂಡಿ [1] ಸುಷುಪ್ತಿಯೋಪಾದಿಯಲ್ಲಿ ಸಂಸ್ಕಾರಾತ್ಮಕವಾಗಿ ಇದ್ದಾರೆಯಾದುದಱಿಂದ (ಆದಂತಿರಲಿ ಹೇಳೇವು. ) ಸಂಸ್ಕಾರಾತ್ಮಕವಾಗಿ ಇದೆ. ಅಂಥ ಕರ್ಮದಿಂದ ಆಕಾಶಾದಿ ಜಗತ್ತು ಹುಟ್ಟುವುದೆಂಬುದು ಕೂಡಿತಲ್ಲ.[1] ಹೀಗೆ ಅಂಗೀಕರಿಸದೆ ಹೋದರೆ ಪೂರ್ವಕಲ್ಪದಲ್ಲಿ ಜೀವರಿಂದ ಮಾಡಪಟ್ಟಂಥ ಕರ್ಮಗಳಿಗೆ ಫಲವು ಇಲ್ಲದೆಹೋಗಬೇಕು; ಪೂರ್ವಕಲ್ಪದಲ್ಲಿ ಮಾಡಿದಂಥ ಕರ್ಮಗಳೇ ಈಕಲ್ಪದಲ್ಲಿ ಬರಬೇಕು. ಇಷ್ಟುಮಾತ್ರವಲ್ಲ. ಶಾಸ್ತ್ರಾದಿಗಳಿಗೂ ವೈಯರ್ಥ್ಯ ಬರಬೇಕು. ಒಂದು ಕಾರಣವು ಇಲ್ಲದೆ ಜಗತ್ತು ಹುಟ್ಟಿತೆಂದು ಹೇಳುವಲ್ಲಿ ಮುಕ್ತಪುರುಷರಿಗೆ ಉತ್ಪತ್ತಿ ಬರಬೇಕು. ಜಗತ್ತಿನಲ್ಲಿ ಮನುಷ್ಯರೆನುತಲು ದೇವತೆಗಳೆನುತಲು ತಿರ್ಯಕ್ಕುಗಳೆನುತಲು ಬ್ರಾಹ್ಮಣ ಕ್ಷತ್ರಿಯ ವೈ

---

ಪಾ.— 1. ಸುಷುಪ್ತಿಯಲ್ಲಿಬೇಕು. ಸಂಸ್ಕಾರಾತ್ಮಕವಾಗ ಇದ್ದಾರೆಯಾಗಲಾಗಿ ಅವರ ಕರ್ಮಗಳು ಸಂಸ್ಕಾರಾತ್ಮಕವಾಗಿಯೇ ಇದೆ. ಅಂಥ ಕರ್ಮದಿಂದ ಆಕಾಶಾದಿ ಜಗತ್ತು ಹುಟ್ಟಿತೆಂಬುವುದು ಕೂಡದು.

ಶ್ಯ ಶೂದ್ರರೆನುತಲು ಇವು ಮೊದಲಾದ ವ್ಯವಸ್ಥೆಗಳಿಲ್ಲದೆ ಹೋಗಬೇಕು. ಈ ದೋಷಗಳು ಬಂದರೂ ಬರಲಿ ಎಂದು ಹೇಳುವಂಥದು ಉಚಿತವಲ್ಲವಾಗಲಾಗಿ ಪ್ರಳಯದಲ್ಲೂ ಸಂಸ್ಕಾರಾತ್ಮಕವಾಗಿರುವಂಥ ಜೀವಕರ್ಮದಿಂದಲೇ ಆಕಾಶಾದಿ ಜಗತ್ತು ಹುಟ್ಟುತೆಂಬುದರಲ್ಲಿ ಸಂದೇಹವಿಲ್ಲ. ಸಿದ್ಧ. ಹೀಗೆ ಆಕಾಶಾದಿಗಳು ಕರ್ಮದಿಂದಲೇ ಹುಟ್ಟಿದಹೊತ್ತಿಗೂ ಸ್ವಗತವಿಕಾರವಿದ್ದ ಹೊತ್ತಿಗೂ ಮುಕ್ತಿಪರ್ಯಂತವು ಹೇಗೆ [3] ಒದಗಿ [3] ಇದೆಯೋ ಪ್ರಳಯಾದಿಗಳಲ್ಲಿ ಲಯಿಸಿ ಇದ್ದಹೊತ್ತಿಗೂ ಆಯಾ ಸೃಷ್ಟಿಗಳಲ್ಲಿ ಆಕಾಶ ಆಕಾಶವಾಗಿಯೋ, ವಾಯು ವಾಯುವಾಗಿಯೋ, ತೇಜಸ್ಸು ತೇಜಸ್ಸಾಗಿಯೋ, ಜಲವು ಜಲವಾಗಿಯೋ, ಪೃಥಿವಿ ಪೃಥ್ವಿಯಾಗಿಯೋ ಹೇಗೆ ಹುಟ್ಟುತ್ತ ಇದೆಯೋ ಹಾಗೆ ಸೂಕ್ಷ್ಮಶರೀರವು ಪ್ರಳಯಗಳಲ್ಲಿ ಲಯಿಸಿಯಿದ್ದ ಹೊತ್ತಿಗೂ ಆಯಾ ಜೀವರ ಕರ್ಮದಿಂದ ಪೂರ್ವಕಲ್ಪದಲ್ಲಿ ಹೇಗೆ ಇತ್ತೋ ಹಾಗೆ ಪ್ರತಿಕಲ್ಪದಲ್ಲೂ ಹುಟ್ಟುತ್ತ ಇದೆ. ಹೀಗೆ ಹುಟ್ಟಿದ ಹೊತ್ತಿಗೂ ಸ್ವಗತವಿಕಾರವಾಗಿ ಇದ್ದಹೊತ್ತಿಗೂ ಸೂಕ್ಷ್ಮಶರೀರವು ಒಬ್ಬ ಪ್ರಾಣಿಗೆ ಮುಕ್ತಿಪರ್ಯಂತವೂ ಒಂದೊಂದಾಗಿ ಇದೆ. ಹೀಗೆ ಹೇಳುವಾಗ್ಯೆ ಮುಕ್ತಿಗೆ ಹಿಂದಕ್ಕೆ ಸೂಕ್ಷ್ಮಶರೀರವು ಒಬ್ಬ ಪ್ರಾಣಿಗೆ ಮುಕ್ತಿಪರ್ಯಾನುಕೂಲ ಅನೇಕವಾಗಿ ಇರುವಂಥದಾಗಿ ತೋರುತ್ತ ಇದೆಯೆಂದು ಹೇಳಿದರೆ ಮುಕ್ತಿಗೆ ಹಿಂದಕ್ಕೂ ಸೂಕ್ಷ್ಮಶರೀರವು ಇಲ್ಲವೇ ಇಲ್ಲವಾಗಲಾಗಿ ಆ ಶಂಕೆಗೆ ಅವಕಾಶವೇ ಇಲ್ಲ. ಈಪ್ರಕಾರವಾಗಿ ಸೂಕ್ಷ್ಮಶರೀರವು ಆಕಾಶಾದಿಗಳೋಪಾದಿಯಲ್ಲಿ ಸಾಮಾನ್ಯಕರ್ಮದಿಂದ ಹುಟ್ಟಿಹುಟ್ಟಿದಾದುದರಿಂದ ಒಬ್ಬೊಬ್ಬ ಪ್ರಾಣಿಗೆ ಒಂದೊಂದು ಶರೀರವೆಂದು ಹೇಳುವುದು ಯುಕ್ತವಲ್ಲವೆ? ಸರಿ. ಅದಂತಿರಲಿ.

ಹೀಗೆ ಹೇಳಿದುದು ವಿರೋಧವಾಗಿ ತೋರುತ್ತ ಇದೆ. ಆ ವಿರೋಧವೇನೆಂದರೆ ಹೇಳೇವು. ಆಕಾಶಾದಿಗಳು ಸರ್ವಪ್ರಾಣಿಗಳ ಕರ್ಮದಿಂದ ಹುಟ್ಟುತಾದಕಾರಣ ಆ ಆಕಾಶಾದಿಗಳೇ ಸಾಮಾನ್ಯಕರ್ಮಜನ್ಯತ್ವವನು ಪ್ರಳಯಪರ್ಯಂತವು ಒಂದೊಂದಾಗಿಯೆ ಇರುವಂಥದನು ಪ್ರತಿಕಲ್ಪದಲ್ಲು ಹಾಗೆ ಹಾಗೆ ಹುಟ್ಟುವಂಥದನು ಹೇಳಬಹುದು. ಆಯಾ ಪ್ರಾಣಿಗಳ ಸೂ

---

ಪಾ.— 3. ಬಂದೆ 3. ಮುಕ್ತಿಯಾದ ಬಳಿಕ.

ಕ್ಷ್ಮಶರೀರಗಳಾದರೆ ಸಮಸ್ತ ಪ್ರಾಣಿಗಳ ಕರ್ಮದಿಂದ ಹುಟ್ಟಿದುದಲ್ಲವಾದುದರಿಂದ ಅದಕ್ಕೆ ಸಾಮಾನ್ಯಕರ್ಮಜನ್ಯತ್ವವನು ಒಬ್ಬೊಬ್ಬ ಪ್ರಾಣಿಗೆ ಒಂದೊಂದೇ ಎಂಬಂಥದನು ಪ್ರತಿಕಲ್ಪದಲ್ಲೂ ಹಾಗೆಯೇ ಹುಟ್ಟುತ್ತ ಇದೆಯೆಂಬಂಥದನು ಮುಕ್ತಿಪರ್ಯಂತವು ನಿತ್ಯವೆಂಬಂಥದನು ಹೇಗೆ ಹೇಳುವಣವೆಂದರೆ, ಹೇಳಬಹುದು. ಅದೆಂತೆಂದರೆ ಹೇಳೇವು. ಆ ಆಕಾಶಾದಿಗಳ ಹಾಗೆ ಆಯಾಪ್ರಾಣಿಗಳ ಸೂಕ್ಷ್ಮಶರೀರಗಳು ಸಮಸ್ತಪ್ರಾಣಿಗಳ ಕರ್ಮದಿಂದ ಹುಟ್ಟದೆ ಇದ್ದಹೊತ್ತಿಗೂ ಆಯಾ ಪ್ರಾಣಿಗಳಿಗೆ ಸೃಷ್ಟಿ ಮೊದಲಾಗಿ ಪ್ರಳಯಪರ್ಯಂತವು ಸ್ಥೂಲಶರೀರದ್ವಾರಾ ಸುಖದುಃಖಾದಿಗಳನು ಕೊಡುವಂಥ ಕರ್ಮಗಳಿಂದ ಆಯಾ ಪ್ರಾಣಿಗಳ ಸೂಕ್ಷ್ಮಶರೀರಗಳು ಹುಟ್ಟುತ್ತ ಇವೆಯಾದುದರಿಂದಲೂ ಮುಕ್ತಿಪರ್ಯಂತವೂ ಆ ಆ ಪ್ರಳಯಗಳಲ್ಲಿ ಸಂಸ್ಕಾರರೂಪವಾಗಿ ಇರುವಂಥ ಆಯಾ ಸೂಕ್ಷ್ಮಶರೀರಗಳನು ಆಶ್ರಯಿಸಿಕೊಂಡಿರುವಂಥ ಕರ್ಮಗಳಿಂದ ಆಯಾಸೃಷ್ಟಿಯಲ್ಲೂ ಹಾಗೆ ಹಾಗೆ ಆಯಾ ಪ್ರಾಣಿಗಳ ಸೂಕ್ಷ್ಮಶರೀರಗಳು ಹುಟ್ಟುತ್ತ ಇವೆಯಾದುದರಿಂದಲೂ ಸೂಕ್ಷ್ಮಶರೀರಗಳಿಗೆ ಸಾಮಾನ್ಯಕರ್ಮಜನ್ಯತ್ವವನು ಒಬ್ಬೊಬ್ಬ ಪ್ರಾಣಿಗೆ ಸೂಕ್ಷ್ಮಶರೀರವು ಒಂದೊಂದೆ ಎಂಬಂಥದನು ಪ್ರತಿಕಲ್ಪದಲ್ಲು ಹಾಗೆ ಹಾಗೆ ಹುಟ್ಟುತ್ತಿದೆಯೆಂಬಂಥದನು ಮುಕ್ತಿಪರ್ಯಂತವು ನಿತ್ಯವಾಗಿರುವುದನು ಹೇಳಬರುವುದಲ್ಲ. ಲೀನವಾದಂಥ ವಸ್ತುವು ಕರ್ಮವ ಅಪೇಕ್ಷಿಸಿ ಹುಟ್ಟುತ್ತ ಇದೆಯೆಂಬುದರಲ್ಲಿಯೂ ಸಾಮಾನ್ಯಕರ್ಮದಿಂದ ಹುಟ್ಟಿದ ವಸ್ತು ಒಂದಾಗಿದೆಯೆಂಬುದರಲ್ಲಿಯೂ ವಿಶೇಷಕರ್ಮದಿಂದ ಹುಟ್ಟಿದ ವಸ್ತು ಈ ನಾನಾರೂಪವಾಗಿ ಅನೇಕವಾಗಿ ಇದೆಯೆಂಬುದರಲ್ಲಿಯೂ ದೃಷ್ಟಾಂತ ಉಂಟೆ ಎಂದರೆ ಉಂಟು. ಹೇಳೇವು. ವಿಶೇಷ ಕರ್ಮದಿಂದ ಹುಟ್ಟಿದ ವಸ್ತು ಕಾಷ್ಠಪಾಷಾಣಗಳಲ್ಲಿ ಲೀನವಾಗಿರುವಂಥ ಅಗ್ನಿಗೆ ಮರ್ದನಾದಿರೂಪವಾದಂಥ ಕರ್ಮದಿಂದ ಹೇಗೆ ಉತ್ಪತ್ತಿಯೋ ಹಾಗೆ ಕಾರಣರೂಪವಾದ ಸೂಕ್ಷ್ಮಶರೀರಾದಿಗಳಿಗೂ ಕಾರ್ಯಕಾರಣವಾಗಿ ತೋರದೆ ಇರುವಂಥ ಕರ್ಮದಿಂದಲೇ ಸರಿ. ಹೀಗೆ ಹೇಳುವುದರಿಂದ ಕಾರ್ಯವು ಅಸತ್ತೆಂಬಂಥದು ತಳ್ಳಲ್ಪಟ್ಟಿತು. ಸಾಮಾನ್ಯಕರ್ಮದಿಂದ ಹುಟ್ಟಿದ ವಸ್ತು ಒಂದೊಂದೆಂಬುದರಲ್ಲಿಯೂ ವಿಶೇಷ ಕರ್ಮದಿಂದ ಹುಟ್ಟಿದ ವಸ್ತು ಅನೇಕ

ವೆಂಬುದರಲ್ಲಿಯು ದೃಷ್ಟಾಂತವ ಹೇಳೇವು. ಕುಂಬಾರನಿಂದ ನಾನಾವಿಧಗಳಾದ ಭಾಂಡಗಳನು ಮಾಡಬೇಕೆಂದು ಸಂಪಾದಿಸಲ್ಪಟ್ಟಂಥ ಮೃತ್ಪಿಂಡವು ಒಂದೇ ಸರಿ. ಅದು ಅನೇಕಕರ್ಮಗಳಿಂದ ಮಾಡಲ್ಪಟ್ಟ ಹೊತ್ತಿಗೂ ಆ ಕರ್ಮಗಳ ಭೇದದಿಂದ ಹುಟ್ಟಿದಂಥ ಭಾಂಡಗಳೆಲ್ಲವು ಸಮಾನಗಳಾಗಿ ಇವೆಯಾದಕಾರಣ ಆ ಮೃತ್ಪಿಂಡವು ಸಾಮಾನ್ಯಕರ್ಮಜನ್ಯವಾದುದರಿಂದ ಆ ಮೃತ್ಪಿಂಡವು ಕರ್ಮದಿಂದ ಮಾಡಲ್ಪಟ್ಟದ್ದರೂ ಮಾಡಲ್ಪಟ್ಟ ಭಾಂಡಗಳೊಳಗೆ ಒಂದು ಭಾಂಡವ ಮಾಡಿದ ಕರ್ಮದಿಂದ ಮತ್ತೊಂದು ಭಾಂಡ ಮಾಡಪಡಲಿಲ್ಲವಾಗಿ ಆ ಭಾಂಡಗಳೆಷ್ಟು ವಿಶೇಷ ಕರ್ಮಜನ್ಯಗಳಾದುವದರಿಂದ ಆ ಭಾಂಡಗಳು ನಾನಾರೂಪಗಳಾಗಿ ಇವೆಯೆಂಬುವದು ಸರ್ವಾನುಭವಸಿದ್ಧ. ಹೀಗೆ ಸೂಕ್ಷ್ಮಶರೀರವು ಸಾಮಾನ್ಯಕರ್ಮಜನ್ಯವಾಯಿತಾಗಲಾಗಿ ಅದು ಒಬ್ಬೊಬ್ಬ ಪ್ರಾಣಿಗೆ ಒಂದೊಂದು ಶರೀರವೆಂಬಂಥದು, ಸ್ಥೂಲಶರೀರವು ವಿಶೇಷ ಕರ್ಮಜನ್ಯವಾಯಿತಾಗಲಾಗಿ ಅದು ಒಬ್ಬೊಬ್ಬ ಪ್ರಾಣಿಗೆ ಅನಂತವೆಂಬಂಥದು ಕೂಡುವದಲ್ಲ.

ಇನ್ನು ಈಯರ್ಥದಲ್ಲಿ ವಿಶೇಷವಾದ ದೃಷ್ಟಾಂತವುಂಟೇ? ಎಂದರೆ ಉಂಟು. ಅದೆಂತೆಂದರೆ ಹೇಳೇವು. ಲೋಕದಲ್ಲಿ ದೇವದತ್ತನಿಗೆ ಕರ್ಮವಶದಿಂದ ನಾನಾವಿಧಗಳಾದ [1]ಅವಸ್ಥೆಗಳು[1] ಬರುತ ಇವೆ. ಆ ಅವಸ್ಥೆಗಳು ಒಂದೊಂದು [2] ವಸ್ತ್ರದೋ[2]ಪಾದಿಯಲ್ಲಿ ಒಂದೊಂದವಸ್ಥೆಯು ಇರಲಿಲ್ಲವಾಗಿ ಹೇಗೆ ವಿಶೇಷಕರ್ಮಗಳಿಂದ ಬರುತ್ತಿವೆಯೋ ಹಾಗೆ ಸ್ಥೂಲಶರೀರಗಳು ಒಬ್ಬೊಬ್ಬ ಪ್ರಾಣಿಗೆ ವಿಚಿತ್ರಗಳಾಗಿ ಅನಂತವಾಗಿ ಬರುತ್ತಿವೆಯಾದಕಾರಣ ಆ ಸ್ಥೂಲಶರೀರಗಳು ವಿಶೇಷಕರ್ಮಜನ್ಯಗಳೇ ಸರಿಯೆಂದು ತಿಳಿದುಕೊಳ್ಳತಕ್ಕದು. ದೇವದತ್ತನಿಗೆ ಆಯಾ ವಿಶೇಷಕರ್ಮಗಳಿಂದ ಬಂದಂಥ ವಸ್ತ್ರಾದಿಗಳಿಂದ ಬರುವ ಸುಖದುಃಖಗಳಿಗೆ ಸಾಧನಭೂತವಾದಂಥ ಸ್ಥೂಲಶರೀರ ಒಂದಾಗಿ ಇದೆಯಾಗಲಾಗಿ ಆ ವಸ್ತ್ರಾದಿಗಳನು ಅಪೇಕ್ಷಿಸಿ ಸ್ಥೂಲಶರೀರವು ಹೇಗೆ ಸಾಮಾನ್ಯಕರ್ಮಜನ್ಯವಾಯಿತೋ ಹಾಗೆ ಸೂಕ್ಷ್ಮಶರೀರವು ಒಬ್ಬೊಬ್ಬ ಪ್ರಾಣಿಗೆ ಒಂದೊಂದಾಗಿ ಇದೆಯಾದುದರಿಂದ ಅದು ಸಾಮಾನ್ಯಕರ್ಮಜನ್ಯವೆನುತಲೇ ತಿಳಿದುಕೊಳ್ಳತಕ್ಕದು. ಹೀಗೆ ಹೇಳ

---

ಪಾ— 1. ವಸ್ತ್ರಗಳ. ಅವಸ್ಥೆ.

ದುದಱಿಂದ ಸಿದ್ಧಿಸಿದುದೇನು? ಎಂದರೆ ಸೂಕ್ಷ್ಮಶರೀರಕ್ಕೆ ಸ್ಥೂಲಶರೀರದ ಗ್ರಹಣವು ಅದಱ ತ್ಯಾಗವು ಸಿದ್ಧಿಸಿತು. ಅದೆಂತೆಂದರೆ ಹೇಳೇವು. ದೃಷ್ಟಾಂತದಲ್ಲಿ ಸೂಕ್ಷ್ಮಶರೀರಕ್ಕೆ ವಸ್ತ್ರಾದಿಗಳ ಗ್ರಹಿಸುವಂಥದನು ಬಿಡುವಂಥದನು ಪ್ರತ್ಯಕ್ಷವಾಗಿ ಹೇಗೆ ಕಂಡು ಇದ್ದೇವೆಯೋ ಹಾಗೆ ಸೂಕ್ಷ್ಮಶರೀರಕ್ಕೂ ಸ್ಥೂಲಶರೀರದ ಪರಿಗ್ರಹವನು ಅದಱ ತ್ಯಾಗವನು ತಿಳದುಕೊಳ್ಳತಕ್ಕದು. ಹೀಗೆ ಇದೆಯಾಗಲಾಗಿ ಸೂಕ್ಷ್ಮಶರೀರಕ್ಕೆ ಸ್ಥೂಲಶರೀರವ ಪರಿಗ್ರಹಿಸುವಂಥದೇ ಜನ್ಮವೆನಿಸುವುದು. ಅದಱೊಡನೆ ಇನ್ನು ಮೇಲೆ ಸಂಬಂಧವಿಲ್ಲದೇ ಬಿಡುವಂಥದೇ ಮರಣವೆನಿಸುವುದು. ಹೀಗೆ ಇರಲಾಗಿ ಸೂಕ್ಷ್ಮಶರೀರಕ್ಕೂ ಪ್ರತ್ಯಕ್ಷವಾದಂಥ ಜನ್ಮಮರಣಗಳು ಇಲ್ಲವೆಂದೇ ತೋಱುತ್ತಿದೆ. ಹೀಗೆ ತೋಱುತ್ತಿದ್ದರೂ ಆತ್ಮನಿಗೆ ಜನ್ಮಮರಣಗಳಿಗೆ ಪ್ರಸಕ್ತಿಯಿಲ್ಲವೆಂದು ತಿಳಿಯತಕ್ಕದು. ಅದಂತಿರಲಿ.

ಹೀಗೆ ಹೇಳುವಲ್ಲಿ ಸೂಕ್ಷ್ಮಶರೀರಕ್ಕೆ ಸ್ಥೂಲಶರೀರಗಳು ಅನಂತಗಳೆಂದು ಹೇಳಪಟ್ಟುದುದಾಗಿ ತೋಱುತ್ತ ಇದೆ. ತೋಱಿದರೆ ತೋಱಲಿ ಎಂದರೆ ಪೂರ್ವದಲ್ಲಿ ಪ್ರಾಣಿಗಳಿಗೆ ಸ್ಥೂಲಶರೀರಗಳು ಅನಂತಗಳೆಂದು ಹೇಳಿ ಈಗ ಸೂಕ್ಷ್ಮಶರೀರಕ್ಕೆ ಸ್ಥೂಲಶರೀರಗಳು ಅನಂತವೆಂದು ಹೇಳುವಲ್ಲಿ ಪೂರ್ವ ಹೇಳಿದುದಕ್ಕೂ ಈಗ ಹೇಳಿದುದಕ್ಕೂ ವಿರೋಧವು ತೋಱುತ ಇದೆ. ಹಾಗಾದರೆ ಈ ಸೂಕ್ಷ್ಮಶರೀರವೇ ಪ್ರಾಣಶಬ್ದಕ್ಕೆ ಅರ್ಥವೆಂದು ಹೇಳುವಣವೆಂದರೆ ಹೇಳಕೂಡದು. ಏಕೆ ಹೇಳಕೂಡದೆಂದರೆ— ಪೂರ್ವದಲ್ಲಿ ಪ್ರಾಣಿಗಳಿಗೆ ಸೂಕ್ಷ್ಮಶರೀರವು ಒಂದೊಂದೆಂದು ಹೇಳಿ ಈಗ ಸೂಕ್ಷ್ಮಶರೀರವೇ ಪ್ರಾಣಶಬ್ದಕ್ಕೆ ಅರ್ಥವೆಂದು ಹೇಗೆ ಹೇಳುವಣವೆಂಬ ವಿರೋಧ ತೋಱುತ್ತಿದೆ ಎಂದೆಯಾದರೆ ವಿರೋಧವು ಹೇಗೆ ತೋಱದೆ ಇರುವುದೊ ಹಾಗೆ ಹೇಳೇವು. ಪ್ರಾಣಾದಿಶಬ್ದಗಳಿಗೆ ಆತ್ಮನೇ ಅರ್ಥ. ಆ ಆತ್ಮನಿಗೆ ಕಾರಣಶರೀರವೆಂಬ ಹೆಸರುಳ್ಳ ಅಜ್ಞಾನದಿಂದ ಬಂದ ಸೂಕ್ಷ್ಮಶರೀರಾಧ್ಯಾಸದಿಂದ ಆತ್ಮ ಸೂಕ್ಷ್ಮಶರೀರದ್ವಾರಾ ಅನಂತವಾದ ಸ್ಥೂಲಶರೀರಗಳು ಬಂದು ಹೋಗುವುದಾಗಲಾಗಿಯೂ ಆ ಸ್ಥೂಲಶರೀರನಿಷ್ಠವಾದ ಜನ್ಮಮರಣಗಳು ಪ್ರಸಕ್ತವಾದೋಪಾದಿಯಲ್ಲಿಯೂ ತೋಱುತ್ತಿದೆ. ಅದೆಂತೆಂದರೆ ಹೇಳೇವು. ದೃಷ್ಟಾಂತದಲ್ಲಿ ಸ್ಥೂಲಶರೀರದಿಂದಲೇ ವಸ್ತ್ರ

ವು ಗ್ರಹಿಸಲ್ಪಡುವುದನು ಬಿಡಲ್ಪಡುವುದನು ಪ್ರತ್ಯಕ್ಷವಾಗಿ ಕಾಣಪಟ್ಟ ಹೊತ್ತಿಗೂ ಆ ಸ್ಥೂಲಶರೀರ ವ್ಯತಿರಿಕ್ತವಾಗಿ ಆ ಸ್ಥೂಲಶರೀರದಲ್ಲಿ ಅಧ್ಯಾಸವ ಮಾಡಿಕೊಂಡಿರುವುದರಿಂದ ದೇವದತ್ತನೆಂಬ ಹೆಸರುಂಟಾದಂಥ ಜೀವನಿಗೆ ಆಸ್ಥೂಲಶರೀರದ್ವಾರಾ ವಸ್ತ್ರಗ್ರಹಣ ತ್ಯಾಗಾದಿಗಳು ಹೇಗೆ ತೋರುತ್ತ ಇದೆಯೋ ಹಾಗೆ ಅಜ್ಞಾನದಿಂದ ಬಂದಂಥ ಸೂಕ್ಷ್ಮಶರೀರಾಧ್ಯಾಸದ್ವಾರಾ ಆತ್ಮನಿಗೂ ಅನಂತವಾದ ಸ್ಥೂಲಶರೀರಗಳು ಬರುವಹಾಗೂ ಹೋಗುವಹಾಗೂ ಮೋಹದಿಂದ ತೋರುತ್ತ ಇದೆ. ವಿಚಾರಿಸುವಲ್ಲಿ ಸ್ಥೂಲಶರೀರಕ್ಕೆ ಜನ್ಮಮರಣಗಳು ಪ್ರತ್ಯಕ್ಷವಾಗಿ ಕಾಣಪಟ್ಟದೆಯಾದಕಾರಣ ಸೂಕ್ಷ್ಮಶರೀರ ಸ್ಥೂಲಶರೀರದೊಡನೆ ಅಧ್ಯಾಸಹೊರತಾಗಿ ಜನ್ಮಮರಣಗಳು ಇಲ್ಲ.

ಸೂಕ್ಷ್ಮಶರೀರಕ್ಕೆ ಜನ್ಮಮರಣಗಳು ಇಲ್ಲದೆ ಹೋಯಿತಾಗಲಾಗಿ ಆತ್ಮನಿಗೆ ಮೋಹಮಾತ್ರವೇ ಹೊರತಾಗಿ ಜನ್ಮಮರಣಗಳು ಇಲ್ಲವೆಂಬುದ ಹೇಳಬೇಕು. ಈಹೇಳಿದಂಥ ಪ್ರಕಾರವಾಗಿ ಪ್ರಾಣಿಗಳಿಗೆ ಸ್ಥೂಲಶರೀರವು ಅನಂತ, ಸೂಕ್ಷ್ಮಶರೀರವು ಒಂದೊಂದು, ಕಾರಣಶರೀರವು ಒಂದೊಂದೆಂದು ಹೇಳಿದುದು ಯುಕ್ತವೇ ಸರಿ.

ಇದರಿಂದ ಸಿದ್ಧಿಸಿದುದೇನು? ಎಂದರೆ—ಶರೀರತ್ರಯವು ಪ್ರಾಣಿಶಬ್ದದಿಂದ ಹೇಳಪಟ್ಟಂಥ [1]ಆತ್ಮನಲ್ಲ[1] ವೆಂಬುದು ಸಿದ್ಧಿಸಿತು. ಅದೆಂತೆಂದರೆ ಹೇಳೇವು. ಲೋಕದಲ್ಲಿ ಒಬ್ಬನು ಮತ್ತೊಬ್ಬನಿಗೆ ರುದ್ರಾಕ್ಷಿಯ ಸರಗಳೆಷ್ಟು ಎಂದು ಕೇಳಿದರೆ ಮೂರು ಎಂದು ಹೇಳುತಿದ್ದಾನೆ. ಮತ್ತು ನಿನಗೆ ಜನಿವಾರಗಳೆಷ್ಟು ಎಂದು ಕೇಳಿದರೆ ಮೂರು ಎಂದು ಹೇಳುತಿದ್ದಾನೆ. ಮತ್ತು ನಿನಗೆ ಧೋತ್ರಗಳೆಷ್ಟು ಎಂದು ಕೇಳಿದರೆ ಮೂರು ಎಂದು ಹೇಳುತ್ತಿದ್ದಾನೆ. ಹೀಗೆ ಪ್ರಾಣಿಗಳಿಗೆ ಎಷ್ಟು ಶರೀರವೆಂದು ವಿಚಾರಿಸುವಲ್ಲಿ ಮೂರು ಶರೀರಗಳೆಂದು ತೋರುತ್ತಿದೆ. ಹೀಗೆ ತೋರಿದುದರಿಂದ ಏನು ಎಂದರೆ ಹೇಳೇವು. ದೃಷ್ಟಾಂತದಲ್ಲಿ ಆಯಾ ರುದ್ರಾಕ್ಷಿಯ ಸರ ಮೊದಲಾದುದು ಅದನು ಧರಿಸಿಕೊಂಡಿರುವಂಥ ದೇವದತ್ತನು ಹೇಗೆ ಅಲ್ಲವೋ, ಆರುದ್ರಾಕ್ಷಾದಿನಿಷ್ಠವಾದಂಥ ವಿಕಾರಾದಿಗಳು ಆಧರಿಸಿಕೊಂಡಿ

---

ಪಾ.—1. ಅರ್ಥವಲ್ಲ.

ರುವಂಥವರನು ಹೇಗೆ ಸ್ಪರ್ಶಿಸಲಾಱದೋ ಹಾಗೆ ದಾರ್ಷ್ಟಾಂತದಲ್ಲೂ
ಸ್ಥೂಲ ಸೂಕ್ಷ್ಮ ಕಾರಣ ಶರೀರಗಳೇ ಪ್ರಾಣಿಶಬ್ದದಿಂದ ಹೇಳಪಟ್ಟಂಥ
ಆತ್ಮವಲ್ಲವೆನುತಲೂ, ಆಶರೀರತ್ರಯನಿಷ್ಠವಾದಂಥ ವಿಕಾರಗಳು ಪ್ರಾ
ಣಿಶಬ್ದವಾಚ್ಯನಾದಂಥ ಆತ್ಮನ ಸ್ಪರ್ಶಿಸುವುದಿಲ್ಲವೆನುತಲೂ ತೋಱುತ್ತ
ಇದೆ. ಇಷ್ಟುಮಾತ್ರವಲ್ಲ. ಲೋಕದಲ್ಲಿ ದೇವದತ್ತಾದಿಗಳಿಗೆ ಗೃಹಿಯೆನು
ತಲೂ ಕ್ಷೇತ್ರಿಯೆನುತಲೂ ಪುತ್ರಿಯೆನುತಲೂ ಮನಿಯೆನುತಲೂ ಕುಂಡಲಿ
ಯೆನುತಲೂ ವ್ಯವಹಾರವ ಕಂಡು ಇದ್ದೇವೆ ಹೀಗೆ ಆತ್ಮನಿಗೂ ಶರೀರಿಯೆ
ನುತಲೂ, ಪ್ರಾಣಿಯೆನುತಲೂ, ಲೋಕವ್ಯವಹಾರಿಯೆನುತಲೂ, ತೋಱುತ್ತ
ಇದೆ. ಹೀಗೆ ತೋಱುತ್ತ ಇರಲಾಗಿ ಆದೃಷ್ಟಾಂತದಲ್ಲಿ ಗೃಹಿಯೆನುತಲೂ
ಪುತ್ರಿಯೆನುತಲೂ ಕ್ಷೇತ್ರಿಯನುತಲೂ ಮನಿಯೆನುತಲೂ ಕುಂಡಲಿಯೆನುತ
ಲೂ ತೋಱುವಂಥ ದೇವದತ್ತಾದಿಗಳು ಆಗೃಹಾದಿಗಳು ಹೇಗೆ ಅಲ್ಲವೋ
ಗೃಹಾದಿ ನಿಷ್ಠಪದಾರ್ಥಗಳು ಅವರ ಹೇಗೆ ಸ್ಪರ್ಶಿಸಲಾಱವೋ ಹಾಗೆ ಶರೀ
ರಿಯೆನುತಲೂ ದೇಹಿಯೆನುತಲೂ ಪ್ರಾಣಿಯೆನುತಲೂ ಉಪಾಧಿಯಿಂದ ತೋ
ಱುವಂಥ ಆತ್ಮನು ಆಶರೀರಪ್ರಾಣಗಳಲ್ಲವಲ್ಲ. ಆಶರೀರಾದಿ ನಿಷ್ಠವಿಕಾ
ರಗಳು ಆಆತ್ಮನ ಕಾಲತ್ರಯದಲ್ಲಿ ಸ್ಪರ್ಶಿಸಲಾಱದೆಂದು ತೋಱುತ್ತ ಇದೆ.
ಈಪ್ರಕಾರವಾಗಿ ಶರೀರತ್ರಯವು ಆತ್ಮನಲ್ಲದೆ ಹೋದರೆ ಶರೀರತ್ರಯ ನಿ
ಷ್ಠವಿಕಾರಗಳು ಆತ್ಮನಿಗೆ ಇಲ್ಲವೆಂಬುದಾಗಿ ಸಾಮಾನ್ಯವಾಗಿ ತೋಱಿದಹೊ
ತ್ತಿಗೂ ವಿಶೇಷವಾಗಿ ಸ್ಥೂಲಶರೀರದೋಪಾದಿಯಲ್ಲಿ ಸೂಕ್ಷ್ಮ ಕಾರಣ ಶರೀರ
ಗಳು ಎರಡು ತೋಱಲಿಲ್ಲವಾಗಲಾಗಿಯು ವೇಳೆವೇಳೆಗೆ ವಿಚಾರಿಸಿದ ಹೊತ್ತಿ
ಗೂ ಈ ಶರೀರಗಳು ಆತ್ಮನಲ್ಲವೆಂದು ತೋಱುವಂಥದು ಕಠಿನವಾಗಿ ಇದೆ
ಯಾಗಲಾಗಿಯೂ ಶರೀರಗಳು ಮೂಱೂ ಸರಿ. ಈಶರೀರಗಳು ಆತ್ಮನಲ್ಲ.
ಈಶರೀರತ್ರಯ ನಿಷ್ಠವಾದಂಥ ವಿಕಾರಗಳು ಆತ್ಮನ ಸ್ಪರ್ಶಿಸಲಾಱವೆಂದು
ದೃಢವಾಗಿ ತೋಱುವುದಱಲ್ಲಿ ವಿಶೇಷ ಯುಕ್ತಿಯುಂಟೆ? ಎಂದರೆ, ಉಂಟು.
ಹೇಳೇವು. ಸ್ಥೂಲಶರೀರವು ಸಮಸ್ತ ಪ್ರಾಣಿಗಳಿಗೂ ಪ್ರತ್ಯಕ್ಷವಾಗ
ಲಾಗಿ ಸ್ಥೂಲಶರೀರ ಉಂಟೋ ಇಲ್ಲವೋ ಎಂಬುದಱಲ್ಲಿ ಯಾರಿಗೂ ಸಂಶ
ಯವಿಲ್ಲ. ಚಾರ್ವಾಕ ಪಾಮರರಿಂದಲೂ ವ್ಯತಿರಿಕ್ತರಾದವರಿಗೆ ಸ್ಥೂಲಶ

ಪಾ.—1. ವ್ಯವಹಾರಿಯೆನುತಲು ವೇದದಲ್ಲಿ.

ರವು ಆತ್ಮನಲ್ಲವೆಂಬುದಱಲ್ಲಿ ಸಂದೇಹವಿಲ್ಲ. ಆಚಾರ್ವಾಕಮತದವರಿಗೂ ಈ ಸ್ಥೂಲಶರೀರವೇ ಆತ್ಮನೆಂದು ಹೇಳುವಂಥದು ಉಚಿತವಲ್ಲವೆಂದರೆ ಹೇಳೇವು. ಸೂಕ್ಷ್ಮಶರೀರದ ಅಧ್ಯಾಸದಿಂದ ಜೀವಸ್ವರೂಪವಾದ ಆತ್ಮನು ಆಸೂಕ್ಷ್ಮಶರೀರ ದ್ವಾರಾ ಸ್ಥೂಲಶರೀರಾಧ್ಯಾಸದಿಂದ ಬಂದಂಥ ಪುತ್ರಾದ್ಯಪೇಕ್ಷೆಯಿಂದ ಪಿತ್ರಾದಿ ಶಬ್ದಗಳಿಂದ ಹೇಳಪಡುತಿದ್ದಾನೆ. ಹೀಗೆ ಪಿತ್ರಾದಿ ಶಬ್ದಗಳಿಂದ ಹೇಳಪಟ್ಟವನೋಪಾದಿಯಲ್ಲಿ ತೋಱುವಂಥ ಆತ್ಮನು ಈ ಸ್ಥೂಲಶರೀರಕ್ಕಿಂತಲೂ ಭಿನ್ನವೇ ಸರಿ. ಆಪಿತ್ರಾದಿಶಬ್ದಗಳಿಂದ ಈಸ್ಥೂಲಶರೀರವೆ ಹೇಳೆಪಡುವುದೊ ಆಗ ಪಿತ್ರಾದಿಗಳು ಸತ್ತುಹೋದ ತಱುವಾಯದಲ್ಲೂ ಆಪಿತ್ರಾದಿಶಬ್ದಗಳಿಗೆ ಅರ್ಥವಾಗಿ ಚಾರ್ವಾಕಮತದವರಿಗೆ ಆತ್ಮನೆಂದು ಅಭಿಮತವಾದಂಥ ಸ್ಥೂಲಶರೀರವು ಇರಬೇಕು. ಆಪಿತ್ರಾದಿಗಳು ಸತ್ತುಹೋದರೆಂದುಹೇಳದೆ ಇರಬೇಕು. ಹಾಗೆ ಇರಲಿಲ್ಲವಾಗಿ ಸ್ಥೂಲಶರೀರದಿಂದ ವ್ಯತಿರಿಕ್ತನೇ ಆತ್ಮನೆಂದು ಚಾರ್ವಾಕಮತದವರೂ ಅಂಗೀಕರಿಸಬೇಕು. ಇಷ್ಟುಮಾತ್ರವಲ್ಲ.

ಮತ್ತು ಯುಕ್ತ್ಯಂತರದಲ್ಲು ಈ ಸ್ಥೂಲಶರೀರವ್ಯತಿರಿಕ್ತನೇ ಆತ್ಮನೆಂದು ತೋಱುತ್ತಿದೆ. ಅದೆಂತೆಂದರೆ ಹೇಳೇವು. ಆಪಿತ್ರಾದಿಶಬ್ದಗಳಿಗೆ ಅರ್ಥದೋಪಾದಿಯಲ್ಲಿ ತೋಱಿದಂಥ ಈ ಪಿತ್ರಾದಿ ಸ್ಥೂಲಶರೀರವು ಸತ್ತುಬಿದ್ದಿರಲಾಗಿ ಅದನು ತಬ್ಬಿಕೊಂಡು ಅಳುತ್ತ ಇರುವಂಥ ಪುತ್ರಾದಿಗಳು-ನಮ್ಮನು ಅನಾಂತರದಲ್ಲಿ ಬಿಟ್ಟುಬಿಟ್ಟು ಸಾಲ ತೆಕ್ಕೊಂಡ ದಿಕ್ಕನು ಕೊಟ್ಟ ದಿಕ್ಕನು ಹೇಳದೆ ನಮ್ಮ ಬಾಯಲ್ಲಿ ಮಣ್ಣು ಹೊಯಿದು ನಮ್ಮ ತಂದೆ ಮೊದಲಾದಂಥವರು ಸತ್ತು ಹೋದರೆಂದು ಹೇಳುತ್ತ ಇದ್ದಾರೆ. ಇಷ್ಟುಮಾತ್ರವಲ್ಲ. ಮತ್ತು ಬಂಧುಜನರು ಸ್ನೇಹಿತರು ಅಱಿದಂಥವರು—"ನಿಮ್ಮ ತಂದೆ ಮೊದಲಾದವರು ಹೋದರಪ್ಪ. ಅಯ್ಯಯ್ಯೊ!" ಎಂದು ದುಃಖವ ಹೇಳೆಬಂದರೆ—"ಅಯ್ಯ ಹೋದರು, ಅಪ್ಪ ಹೋದರು, ಅಣ್ಣ ಹೋದರು, ತಮ್ಮ ತಂದೆ ಹೋದರಯ್ಯಾ! ನಮ್ಮಮ್ಮ ಹೋದಳೆಯ್ಯ! ನನ್ನಾಣೆ ಹೋದಳಯ್ಯ! ನನ್ನ ಬಾಯಲ್ಲಿ ಮಣ್ಣು ಹೊಯಿದು ಅಷ್ಟುಮಂದಿಯು ಹೋದರಯ್ಯಾ! ನಮ್ಮ ಕೆಡಿಸಿ ಹೋದರು! ಇನ್ನು ನಮ್ಮ ಗತಿಯೇನು!" ಎಂದು ಹೇಳಿಕೊಂಡು ಅಳುತ್ತ ಇದ್ದಾರೆ.

ಹೀಗೆ ಹೇಳದಂಥದುದು ಹೇಗೆ ಇದೆ? ಎಂದರೆ— ನಿಮ್ಮ ಮಾವ ಮೊದಲಾದವರು ಬಂದು ಇದ್ದರಲ್ಲ, ಅವರು ಹೋದರೆ ಯೆಂದು ಕೇಳಿದರೆ —"ನಮ್ಮ ಸಂಗಡ ಹೇಳದೆ ತಾವು ಉಟ್ಟುಕೊಂಡ ಧೋತ್ರಬಟ್ಟೆಗಳು ಸಹವಾಗಿ ಸುಮ್ಮನೆ ಹೋದರು" ಎಂದು ಹೇಳಿದೋಪಾದಿಯಲ್ಲಿ ಇದೆ. ಅದರಿಂದ ಆದೃಷ್ಟಾಂತದಲ್ಲಿ ಆಮಾವ ಮೊದಲಾದವರು ಉಟ್ಟುಕೊಂಡಿರುವ ಧೋತ್ರಗಳೊಡನೆ ಕೂಡ ತೋರಿದ ಹೊತ್ತಿಗೂ ಆಧೋತ್ರಗಳ ಬಿಟ್ಟು ಬಿಟ್ಟು ಹೋದವರೇ ಆಮಾವ ಮೊದಲಾದ ಶಬ್ದಗಳಿಗೆ ಹೇಗೆ ಅರ್ಥವೊ ಅವರಿಂದ ಬಿಡಲ್ಪಟ್ಟಂಥ ಧೋತ್ರ ಬಟ್ಟೆಗಳು ಆಮಾವ ಮೊದಲಾದ ಶಬ್ದಗಳಿಗೆ ಹೇಗೆ ಅರ್ಥವಲ್ಲವೋ ಹಾಗೆ ಈಸ್ಥೂಲಶರೀರವನು ಬಿಟ್ಟು ಬಿಟ್ಟು ಕರ್ಮಾನುಸಾರದಿಂದ ಲೋಕಾಂತರಕ್ಕೆ ಹೋದವರೆ ಈಪಿತ್ರಾದಿಶಬ್ದಗಳಿಗೆ ಅರ್ಥವಾಗಿ ತೋರುತ್ತಾ ಇದ್ದಾರೆ. ಈ ಸ್ಥೂಲಶರೀರವು ಆಪಿತ್ರಾದಿಶಬ್ದಗಳಿಗೆ ಅರ್ಥವಾಗಿ ತೋರಲಿಲ್ಲ.

ಹಾಗಾದರೆ ಈಸ್ಥೂಲಶರೀರದಿಂದ ಹೋದಂಥವರೇ ಆಪಿತ್ರಾದಿ ಶಬ್ದಗಳಿಗೆ ಅರ್ಥವಲ್ಲದೆ ಹೊರಟು ಹೋಗುವುದಕ್ಕೆ ಮೊದಲು ಇಲ್ಲಿ ಇರುವ ಸ್ಥೂಲಶರೀರವೇ ಪಿತ್ರಾದಿಶಬ್ದಗಳಿಗೆ ಅರ್ಥವೆಂದು ಹೇಳುವಣವೆಂದರೆ ಹಾಗೆ ಹೇಳಕೂಡದು. ಹಾಗೆ ಹೇಳಿದುದಾದರೆ ಆಧೋತ್ರವ ಬಿಟ್ಟುಹೋದ ಮಾವ ಮೊದಲಾದವರು ಆಧೋತ್ರವ ಬಿಟ್ಟುಬಿಟ್ಟು ಹೋಗುವುದಕ್ಕೆ ಮೊದಲು ಆದೋತ್ರಗಳೇ ಅವರಾಗಬೇಕು. ಇಷ್ಟು ಮಾತ್ರವಲ್ಲ. ಮತ್ತು ಒಂದು ಗೃಹದಲ್ಲಿ ಇದ್ದು ಹೊರಟುಹೋಗುವಂಥ ಪುರುಷನು ಆಗೃಹದಿಂದ ಹೊರಟುಹೋಗುವುದಕ್ಕೆ ಮೊದಲು ಆಗೃಹವೇ ಆಗಬೇಕು. ಹಾಗೆ ಹೇಳಕೂಡದಾಗಲಾಗಿ ಆಧೋತ್ರಗಳೊಡನೆ ಕೂಡಿಕೊಂಡಿರುವಂಥ ಮಾವ ಮೊದಲಾದವರು ಆಧೋತ್ರದೊಡನೆ ಕೂಡಿಕೊಂಡಿದ್ದ ಹೊತ್ತಿಗೂ ಆದೋತ್ರದೊಡನೆ ಕೂಡದೆ ಇದ್ದಹೊತ್ತಿಗೂ ಆಧೋತ್ರಗಳು ಹೇಗೆ ಅಲ್ಲವೋ ಗೃಹದಿಂದ ಹೊರಟುಹೋದಂಥ ಪುರುಷನು ಆಗೃಹವ ಬಿಟ್ಟು ಹೋದ ಹೊತ್ತಿಗೂ ಆಗೃಹದಲ್ಲಿ ಇದ್ದ ಹೊತ್ತಿಗೂ ಆಗೃಹ ಹೇಗೆ ಅಲ್ಲವಾಯಿತೋ ಹಾಗೆ ಆಪಿತ್ರಾದಿ ಶಬ್ದಗಳಿಗೆ ಅರ್ಥವಾದಂಥ ಆಪಿತ್ರಾದಿಗಳು ಈಸ್ಥೂಲಶರೀರದೊಡನೆ ಇದ್ದ

ಹೊತ್ತಿಗೂ ಈಸ್ಥೂಲಶರೀರವ ಬಿಟ್ಟು ಹೋದ ಹೊತ್ತಿಗೂ ಆಪಿತ್ರಾದಿ ಶಬ್ದಗಳಿಗೆ ಆಸ್ಥೂಲಶರೀರವು ಅರ್ಥವಲ್ಲ. ಇಷ್ಟು ಮಾತ್ರವಲ್ಲ.

ಯಾವ ಪಿತ್ರಾದಿ ಶರೀರವನು ಅದಱ ಮರಣಕ್ಕೆ ಮೊದಲು ಪಿತ್ರಾದಿ ಶಬ್ದಕ್ಕೆ ಅರ್ಥವೆಂದೆನಿಸಿಕೊಂಡಿದ್ದರೆ ಆಶರೀಕೋಸ್ಕರ ಒಂದು ಉದಾಸೀನವ ಹೇಳದ ಹೊತ್ತಿಗೂ ಆಶರೀರದಲ್ಲಿ ಒಂದು ಪೆಟ್ಟು ಕೊಂಡ ಹೊತ್ತಿಗೂ ಆಶರೀರದಲ್ಲಿ ವ್ರಣ ಒಂದು ಮಾಡಿದ ಹೊತ್ತಿಗೂ ಇದಕ್ಕೆ ಅನೇಕ ನರಕ ಪ್ರಾಪ್ತಿಯೆಂದು ಶಾಸ್ತ್ರ ಹೇಳುತ್ತಿದೆ. ಅಂಥ ಶರೀರವನೇ ಸುಡುತ್ತಿದ್ದಾನೆ. ಈಪಿತ್ರಾದಿ ಶಬ್ದಗಳಿಗೆ ಸ್ಥೂಲಶರೀರವೇ ಅರ್ಥವಾದುದಾದರೆ ಆಶರೀರವನು ಸುಟ್ಟ ಪುತ್ರರಿಗೆ ಹತ್ಯಾದಿ ದೋಷಗಳು ಬರಬೇಕು. ಆದೋಷಗಳು ಬರುತ್ತಿದೆಯಾದಕಾರಣ ಆಪುತ್ರಾದಿಗಳಿಗೆ ಅನೇಕ ಕೋಟಿ ನರಕಗಳು ಬರಬೇಕು. ಇಷ್ಟುಮಾತ್ರವಲ್ಲ. ಲೋಕದಲ್ಲಿ ಜನರು ಇವರು ಪಿತೃಹತ್ಯಾಕಾಱರು ಮಾತೃಹತ್ಯಾಕಾಱರು ಎಂದು ದೂಷಿಸಬೇಕು. ಹಾಗೆ ಕಾಣೆವಾಗಲಾಗಿಯೂ ಶಾಸ್ತ್ರವು ಪಿತ್ರಾದಿಗಳ ಸುಟ್ಟಂಥವರಿಗೆ ನರಕವ ಹೇಳಲಿಲ್ಲವಾಗಲಾಗಿಯೂ ಈಸ್ಥೂಲಶರೀರವು ಪಿತ್ರಾದಿ ಶಬ್ದಗಳಿಗೆ ಅರ್ಥವಲ್ಲ. ಇಷ್ಟು ಮಾತ್ರವಲ್ಲ.

ಯಾವ ಶರೀರಗಳ ಪಿತ್ರಾದಿಶಬ್ದಗಳಿಗೆ ಅರ್ಥವೆಂದು ಎಣಿಸಿಕೊಂಡು ಅನೇಕ ಉಪಚಾರಗಳಿಂದ ಪೂಜಿಸಿಕೊಂಡು ಬಂದನೋ ಆಶರೀರವನು ಮರಣಾಂತದಲ್ಲಿ ದಹಿಸದೆ ಹೋದನಾದರೆ ಆಪುತ್ರಾದಿಗಳಿಗೆ ಪ್ರತ್ಯವಾಯ ದೋಷವನು ಶಾಸ್ತ್ರವು ಹೇಳುತ್ತಿದೆ. ಆಪುತ್ರಾದಿಗಳು ಆ ದೇಹಕ್ಕೆ ದಹನಾದಿ ಕ್ರಿಯೆಗಳನು ಮಾಡಿದರಾದರೆ ಆ ಸ್ಥೂಲಶರೀರದಿಂದ ಹೊಱಟು ಲೋಕಾಂತರಕ್ಕೆ ಹೋದ ಆಪಿತ್ರಾದಿಗಳಿಗೆ ಪ್ರೇತತ್ವವಿಮೋಚನವಾದಂಥ ಅತಿಶಯವನೂ ಈ ಶರೀರವ ದಹಿಸಿದಂಥ ಪುತ್ರಾದಿಗಳಿಗೆ ಪ್ರತ್ಯವಾಯದೋಷವಿಲ್ಲವೆಂಬುದನೂ ಶಾಸ್ತ್ರದಲ್ಲಿ ಹೇಳುತ್ತಿದೆ.

ಅದೆಂತೆಂದರೆ ಹೇಳೇವು. ಪಾಳ್ಯದಲ್ಲಿ ಇರುವಂಥ ಅರಸು ಹೊಱಟು ಹೋದನಾದರೆ ಅವನಿಗೆ ಅದೃಷ್ಟ ಬರಬೇಕೆಂದು ಅವನ ಭೃತ್ಯರಾದವರು ಪಾಳ್ಯವ ಹೇಗೆ [1]ಧಮಾಣ ಕೋಟೆಯ[1] ಮಾಡುತಿದ್ದಾರೆಯೋ ಅ

ಪಾ.—1. ಕಱು.

ಹೀಗೆ ಹೇಳದಂಥದುದು ಹೇಗೆ ಇದೆ? ಎಂದರೆ— ನಿಮ್ಮ ಮಾವ ಮೊದಲಾದವರು ಬಂದು ಇದ್ದರಲ್ಲ, ಅವರು ಹೋದರೆ ಯೆಂದು ಕೇಳಿದರೆ —"ನಮ್ಮ ಸಂಗಡ ಹೇಳದೆ ತಾವು ಉಟ್ಟುಕೊಂಡ ಧೋತ್ರಬಟ್ಟೆಗಳು ಸಹವಾಗಿ ಸುಮ್ಮನೆ ಹೋದರು" ಎಂದು ಹೇಳದೋಪಾದಿಯಲ್ಲಿ ಇದೆ. ಅದಱಿಂದ ಆದೃಷ್ಟಾಂತದಲ್ಲಿ ಆಮಾವ ಮೊದಲಾದನರು ಉಟ್ಟುಕೊಂಡಿರುವ ಧೋತ್ರಗಳೊಡನೆ ಕೂಡ ತೋಱಿದ ಹೊತ್ತಿಗೂ ಆಧೋತ್ರಗಳ ಬಿಟ್ಟು ಬಿಟ್ಟು ಹೋದವರೇ ಆಮಾವ ಮೊದಲಾದ ಶಬ್ದಗಳಿಗೆ ಹೇಗೆ ಅರ್ಥವೊ ಅವರಿಂದ ಬಿಡಲ್ಪಟ್ಟಂಥ ಧೋತ್ರ ಬಟ್ಟೆಗಳು ಆಮಾವ ಮೊದಲಾದ ಶಬ್ದಗಳಿಗೆ ಹೇಗೆ ಅರ್ಥವಲ್ಲವೋ ಹಾಗೆ ಈಸ್ಥೂಲಶರೀರವನು ಬಿಟ್ಟು ಬಿಟ್ಟು ಕರ್ಮಾನುಸಾರದಿಂದ ಲೋಕಾಂತರಕ್ಕೆ ಹೋದವರೆ ಈಪಿತ್ರಾದಿಶಬ್ದಗಳಿಗೆ ಅರ್ಥವಾಗಿ ತೋಱುತ್ತ ಇದ್ದಾರೆ. ಈ ಸ್ಥೂಲಶರೀರವು ಆಪಿತ್ರಾದಿಶಬ್ದಗಳಿಗೆ ಅರ್ಥವಾಗಿ ತೋಱಲಿಲ್ಲ.

ಹಾಗಾದರೆ ಈಸ್ಥೂಲಶರೀರದಿಂದ ಹೋದಂಥವರೇ ಆಪಿತ್ರಾದಿ ಶಬ್ದಗಳಿಗೆ ಅರ್ಥವಲ್ಲದೆ ಹೊಱಟು ಹೋಗುವುದಕ್ಕೆ ಮೊದಲು ಇಲ್ಲಿ ಇರುವ ಸ್ಥೂಲಶರೀರವೇ ಪಿತ್ರಾದಿಶಬ್ದಗಳಿಗೆ ಅರ್ಥವೆಂದು ಹೇಳುವಣವೆಂದರೆ ಹಾಗೆ ಹೇಳಕೂಡದು. ಹಾಗೆ ಹೇಳದುದಾದರೆ ಆಧೋತ್ರವ ಬಿಟ್ಟುಹೋದ ಮಾವ ಮೊದಲಾದವರು ಆಧೋತ್ರವ ಬಿಟ್ಟುಬಿಟ್ಟು ಹೋಗುವುದಕ್ಕೆ ಮೊದಲು ಆದೋತ್ರಗಳೇ ಅವರಾಗಬೇಕು. ಇಷ್ಟು ಮಾತ್ರವಲ್ಲ. ಮತ್ತು ಒಂದು ಗೃಹದಲ್ಲಿ ಇದ್ದು ಹೊಱಟುಹೋಗುವಂಥ ಪುರುಷನು ಆಗೃಹದಿಂದ ಹೊಱಟುಹೋಗುವುದಕ್ಕೆ ಮೊದಲು ಆಗೃಹವೇ ಆಗಬೇಕು. ಹಾಗೆ ಹೇಳಕೂಡದಾಗಲಾಗಿ ಆಧೋತ್ರಗಳೊಡನೆ ಕೂಡಿಕೊಂಡಿರುವಂಥ ಮಾವ ಮೊದಲಾದನರು ಆಧೋತ್ರದೊಡನೆ ಕೂಡಿಕೊಂಡಿದ್ದ ಹೊತ್ತಿಗೂ ಆದೋತ್ರದೊಡನೆ ಕೂಡದೆ ಇದ್ದಹೊತ್ತಿಗೂ ಆಧೋತ್ರಗಳು ಹೇಗೆ ಅಲ್ಲವೋ ಗೃಹದಿಂದ ಹೊಱಟುಹೋದಂಥ ಪುರುಷನು ಆಗೃಹವ ಬಿಟ್ಟು ಹೋದ ಹೊತ್ತಿಗೂ ಆಗೃಹದಲ್ಲಿ ಇದ್ದ ಹೊತ್ತಿಗೂ ಆಗೃಹ ಹೇಗೆ ಅಲ್ಲವಾಯಿತೋ ಹಾಗೆ ಆಪಿತ್ರಾದಿ ಶಬ್ದಗಳಿಗೆ ಅರ್ಥವಾದಂಥ ಆಪಿತ್ರಾದಿಗಳು ಈಸ್ಥೂಲಶರೀರದೊಡನೆ ಇದ್ದ

ಹೊತ್ತಿಗೂ ಈಸ್ಥೂಲಶರೀರವ ಬಿಟ್ಟು ಹೋದ ಹೊತ್ತಿಗೂ ಆಪಿತ್ರಾದಿ ಶಬ್ದಗಳಿಗೆ ಆಸ್ಥೂಲಶರೀರವು ಅರ್ಥವಲ್ಲ. ಇಷ್ಟು ಮಾತ್ರವಲ್ಲ.

ಯಾವ ಪಿತ್ರಾದಿ ಶರೀರವನು ಅದಱ ಮರಣಕ್ಕೆ ಮೊದಲು ಪಿತ್ರಾದಿ ಶಬ್ದಕ್ಕೆ ಅರ್ಥವೆಂದೆನಿಸಿಕೊಂಡಿದ್ದರೆ ಆಶರೀರಕೋಸ್ಕರ ಬಂದು ಉದಾಸೀನವ ಹೇಳದ ಹೊತ್ತಿಗೂ ಆಶರೀರದಲ್ಲಿ ಬಂದು ಪೆಟ್ಟು ಕೊಂಡ ಹೊತ್ತಿಗೂ ಆಶರೀರದಲ್ಲಿ ವ್ರಣ ಬಂದು ಮಾಡಿದ ಹೊತ್ತಿಗೂ ಇದಕ್ಕೆ ಅನೇಕ ನರಕ ಪ್ರಾಪ್ತಿಯೆಂದು ಶಾಸ್ತ್ರ ಹೇಳುತ್ತಿದೆ. ಅಂಥ ಶರೀರವನೇ ಸುಡುತ್ತಿದ್ದಾನೆ. ಈಪಿತ್ರಾದಿ ಶಬ್ದಗಳಿಗೆ ಸ್ಥೂಲಶರೀರವೇ ಅರ್ಥವಾದುದಾದರೆ ಆಶರೀರವನು ಸುಟ್ಟ ಪುತ್ರರಿಗೆ ಹತ್ಯಾದಿ ದೋಷಗಳು ಬರಬೇಕು. ಆದೋಷಗಳು ಬರುತ್ತಿದೆಯಾದಕಾರಣ ಆಪುತ್ರಾದಿಗಳಿಗೆ ಅನೇಕ ಕೋಟಿ ನರಕಗಳು ಬರಬೇಕು. ಇಷ್ಟುಮಾತ್ರವಲ್ಲ. ಲೋಕದಲ್ಲಿ ಜನರು ಇವರು ಪಿತೃಹತ್ಯಾಕಾಱರು ಮಾತೃಹತ್ಯಾಕಾಱರು ಎಂದು ದೂಷಿಸಬೇಕು. ಹಾಗೆ ಕಾಣೆವಾಗಲಾಗಿಯೂ ಶಾಸ್ತ್ರವು ಪಿತ್ರಾದಿಗಳ ಸುಟ್ಟಂಥವರಿಗೆ ನರಕವ ಹೇಳಲಿಲ್ಲವಾಗಲಾಗಿಯೂ ಈಸ್ಥೂಲಶರೀರವು ಪಿತ್ರಾದಿ ಶಬ್ದಗಳಿಗೆ ಅರ್ಥವಲ್ಲ. ಇಷ್ಟು ಮಾತ್ರವಲ್ಲ.

ಯಾವ ಶರೀರಗಳ ಪಿತ್ರಾದಿಶಬ್ದಗಳಿಗೆ ಅರ್ಥವೆಂದು ಎಣಿಸಿಕೊಂಡು ಅನೇಕ ಉಪಚಾರಗಳಿಂದ ಪೂಜಿಸಿಕೊಂಡು ಬಂದನೋ ಆಶರೀರವನು ಮರಣಾಂತದಲ್ಲಿ ದಹಿಸದೆ ಹೋದನಾದರೆ ಆಪುತ್ರಾದಿಗಳಿಗೆ ಪ್ರತ್ಯವಾಯು ದೋಷವನು ಶಾಸ್ತ್ರವು ಹೇಳುತ್ತಿದೆ. ಆಪುತ್ರಾದಿಗಳು ಆ ದೇಹಕ್ಕೆ ದಹನಾದಿ ಕ್ರಿಯೆಗಳನು ಮಾಡಿದರಾದರೆ ಆ ಸ್ಥೂಲಶರೀರದಿಂದ ಹೊಱಟು ಲೋಕಾಂತರಕ್ಕೆ ಹೋದ ಆಪಿತ್ರಾದಿಗಳಿಗೆ ಪ್ರೇತತ್ವವಿಮೋಚನವಾದಂಥ ಅತಿಶಯವನೂ ಈ ಶರೀರವ ದಹಿಸಿದಂಥ ಪುತ್ರಾದಿಗಳಿಗೆ ಪ್ರತ್ಯವಾಯುದೋಷವಿಲ್ಲವೆಂಬುದನೂ ಶಾಸ್ತ್ರದಲ್ಲಿ ಹೇಳುತ್ತಿದೆ.

ಅದೆಂತೆಂದರೆ ಹೇಳೇವು. ಪಾಳ್ಯದಲ್ಲಿ ಇರುವಂಥ ಅರಸು ಹೊಱಟು ಹೋದನಾದರೆ ಅವನಿಗೆ ಅದೃಷ್ಟ ಬರಬೇಕೆಂದು ಅವನ ಭೃತ್ಯರಾದವರು ಪಾಳ್ಯವ ಹೇಗೆ [1]ಥಮಾಣ ಕೋಟೆಯು[1] ಮಾಡುತಿದ್ದಾರೆಯೋ ಆ

ಪಾ.—1. ಕೂಚು.

ವರು ಪ್ರಮಾಣ ಕೋಟೆಯು ಮಾಡದೆ ಹೋದರಾದರೆ ಅವರನು ಅರಸು ಹೇಗೆ ಶಿಕ್ಷಿಸುತ್ತ ಇದ್ದಾನೆಯೋ ಹಾಗೆ ಸತ್ತು ಬಿದ್ದಿರುವಂಥ ಪಿತ್ರಾದಿ ಶರೀರಗಳನು ಅಪುತ್ರಾದಿಗಳು ಸಂಸ್ಕಾರವ ಮಾಡಿದರಾದರೆ ಆ ಪಿತ್ರಾದಿಗಳು ಒಳ್ಳೆಯ ಗತಿಯು ಸಂಪಾದಿಸಿಕೊಂಡಾರೆಂದು ಆಡುತ್ತ ಇದ್ದಾರೆ; ಸಂಸ್ಕಾರವ ಮಾಡಿದವರನು ದೂಷಿಸುತ್ತ ಇದ್ದಾರೆ. ಇದಱಿಂದಲೂ ಆ ಪಿತ್ರಾದಿ ಶಬ್ದಗಳಿಗೆ ಈ ಸ್ಥೂಲಶರೀರದಿಂದ ಲೋಕಾಂತರಕ್ಕೆ ಹೋದಂಥವರೇ ಅರ್ಥವೆಂದು ತೋಱುತ್ತ ಇದೆ.

ಈಹೇಳಿದ ಯುಕ್ತಿಗಳಿಂದ ಪಿತ್ರಾದಿ ಶಬ್ದಗಳಿಗೆ ಸ್ಥೂಲಶರೀರವು ಅರ್ಥವಲ್ಲದೆ ಹೋದುದಾದರೆ ಈಸ್ಥೂಲಶರೀರಗಳನೇ ಪಿತ್ರಾದಿಗಳೆಂದು ಏತಕ್ಕೆ ಶುಶ್ರೂಷೆ ಮಾಡುತಿದ್ದಾರೆಯೆಂದರೆ, ಈಸ್ಥೂಲಶರೀರದೊಳಗೆ ಇರುವಂಥನಿಗೆ ಪ್ರೀತಿಗೋಸ್ಕರವಾಗಿ ಶುಶ್ರೂಷೆಯ ಮಾಡುತ್ತಿದ್ದಾರೆಯಲ್ಲದೆ ಸ್ಥೂಲಶರೀರಕ್ಕೆ ಪ್ರೀತಿಗೋಸ್ಕರವಾಗಿ ಶುಶ್ರೂಷಿಸಲಿಲ್ಲ.

ಅದೆಂತೆಂದರೆ ಹೇಳೇವು. ಅರಮನೆಯ ಒಳಗೆ ಅರಸು ಇರಲಾಗಿ ಆ ಅರಸಿಗೆ ಪ್ರೀತಿಗೋಸ್ಕರವಾಗಿ ಆಅರಮನೆಗೆ ಮೇಲುಕಟ್ಟು ಮೊದಲಾದ ಅಲಂಕಾರಗಳನು ಹೇಗೆ ಮಾಡುವರೋ ಆಅರಮನೆಯ ಪ್ರೀತಿಗೋಸ್ಕರ ಮೇಲುಕಟ್ಟು ಮೊದಲಾದ ಅಲಂಕಾರಗಳು ಹೇಗೆ ಮಾಡಲಿಲ್ಲವೋ ಹಾಗೆ ಸ್ಥೂಲಶರೀರವ ಶುಶ್ರೂಷೆ ಮಾಡುವಂಥವರು ಈಸ್ಥೂಲಶರೀರದೊಳಗೆ ಇರುವಂಥವನಿಗೆ ಪ್ರೀತಿಗೋಸ್ಕರವಾಗಿಯೇ ಆಸ್ಥೂಲಶರೀರವ ಶುಶ್ರೂಷೆ ಮಾಡುತ್ತಿದ್ದಾರೆ. ಆಸ್ಥೂಲಶರೀರಕ್ಕೆ ಪ್ರೀತಿಗೋಸ್ಕರವಾಗಿ ಶುಶ್ರೂಷಿಸಲಿಲ್ಲ ಅದಱಿಂದ ಈ ಸ್ಥೂಲಶರೀರವು ಮೋಹದಿಂದ ಪಿತ್ರಾದಿ ಶಬ್ದಗಳಿಗೆ ಅರ್ಥವ್ಯೋಪಾದಿಯಲ್ಲಿ ಆಸ್ಥೂಲಶರೀರದೊಳಗೆ ಇರುವಂಥಾತನೇ ಪಿತ್ರಾದಿ ಶಬ್ದಗಳಿಗೆ ಅರ್ಥ.

ಇಷ್ಟುಮಾತ್ರವಲ್ಲ. ಲೋಕದಲ್ಲಿ ಗ್ರಾಮಾಂತರಕ್ಕೆ ಹೋದಂಥವನ ಧೋತ್ರವನ್ನು ಕಳ್ಳರು ಕದ್ದುಕೊಂಡು ಹೋದರಾದರೆ ಆಮಾತನು ಕೇಳಿ ಅವನ ಪುತ್ರರು ಬದಲು ಧೋತ್ರಗಳನು ಕೊಟ್ಟು ಹೇಗೆ ಕಳುಹಿಸುತಿದ್ದಾರೆಯೋ ಹಾಗೆ ಸತ್ತು ಲೋಕಾಂತರಕ್ಕೆ ಹೋದ ಪಿತ್ರಾದಿಗಳು ನಗ್ನರಾಗಿ ಹೋಗುತ್ತಿದ್ದಾರೆಯೆಂದು ಶಾಸ್ತ್ರಗಳು ಹೇಳುತ್ತಿದೆಯಾದ

ಕಾರಣ ಅವರ ಪುತ್ರಾದಿಗಳು ಅವರಿಗೆ ನಗ್ನಪ್ರಚ್ಛಾದನಕೋಸ್ಕರವಾಗಿ ಇಲ್ಲಿ ಬ್ರಾಹ್ಮಣನಿಗೆ ವಸ್ತ್ರಗಳ ಕೊಟ್ಟರೆ ಆವಸ್ತ್ರಗಳು ಅವರಿಗೆ ಹೋಗುವುವೆಂಬ ಶಾಸ್ತ್ರವನು ಕೇಳಿ ಇಲ್ಲಿಯೂ ವಸ್ತ್ರವ ಕೊಡುತ್ತಿದ್ದಾರೆ. ಇದಱಿಂದಲೂ ಸ್ಥೂಲಶರೀರವು ಪಿತ್ರಾದಿ ಶಬ್ದಗಳಿಗೆ ಅರ್ಥವು ಅಲ್ಲವೆಂದು ತೋಱುತ್ತ ಇದೆ.

ಇಷ್ಟುಮಾತ್ರವಲ್ಲ. ಗದ್ದೆಯಲ್ಲಿ ಕೆಲಸ ಮಾಡುವಂಥವನು ಬಿಸಿಲಿನಿಂದ ಕಂಗೆಟ್ಟು ದಾಹತಾಪಗಳಿಂದ ಕಂಗೆಡುತಿದ್ದಾನೆಯೆಂದು ಕೇಳಿ ಗೃಹದಲ್ಲಿ ಇರುವಂಥವರು ಅವನಿಗೆ ಅನ್ನ ಜಲಾದಿಗಳನು ಹೇಗೆ ಕಳುಹಿಸುತ್ತ ಇದ್ದಾರೆಯೋ ಹಾಗೆಯೆ ಸತ್ತು ಲೋಕಾಂತರಕ್ಕೆ ಹೋದ ಪಿತ್ರಾದಿಗಳಿಗೆ ಹಸಿವು ಬಾಯಾಱಿಕೆ ತಾಪಾದಿಗಳು ಇಲ್ಲಿ ಕೊಡುವಂಥ ಪಿಂಡತಿಲೋದಕಾದಿಗಳಿಂದ ಹೋಗುವುದೆಂದು ಶಾಸ್ತ್ರದಿಂದ ಕೇಳಿ ಅವರ ಪುತ್ರಾದಿಗಳು ಅವರಿಗೆ ಪಿಂಡತಿಲೋದಕಾದಿಗಳ ಕೊಡುತ್ತ ಇದ್ದಾರೆ. ಇದಱಿಂದಲೂ ಪಿತ್ರಾದಿ ಶಬ್ದಗಳಿಗೆ ಸ್ಥೂಲಶರೀರವು ಅರ್ಥವಲ್ಲವೆಂದು ತೋಱುತ್ತ ಇದೆ.

ಇಷ್ಟುಮಾತ್ರವಲ್ಲ. ದೇಶಾಂತರಕ್ಕೆ ಹೋಗಬೇಕೆಂದು ಪರಸ್ಥಾನ ಮಾಡಿ ಇರುವಂಥವನಿಗೆ ಕಟ್ಟು ಬುತ್ತಿಯನು ಕೊಟ್ಟು ಹೇಗೆ ಕಳುಹಿಸುತ್ತ ಇದ್ದಾರೆಯೋ ಹಾಗೆ ಸತ್ತು ಲೋಕಾಂತರಕ್ಕೆ ಉಪವಾಸ ಹೋದಂಥ ಪಿತ್ರಾದಿಗಳಿಗೆ ಇಲ್ಲಿ ಸ್ವರ್ಗಪಾಥೆಯವನು ಮಾಡಿಕೊಟ್ಟರೆ ಅವರಿಗೆ ಹಸಿವು ಹೋಗುವುದೆಂದು ಶಾಸ್ತ್ರದಿಂದ ಕೇಳಿ ಅವರ ಪುತ್ರರು ಸ್ವರ್ಗಪಾಥೇಯವನು ಕೊಡುತ್ತಿದ್ದಾರೆಯಾದುದಱಿಂದ ಈಸ್ಥೂಲಶರೀರವು ಪಿತ್ರಾದಿ ಶಬ್ದಗಳಿಗೆ ಅರ್ಥವಲ್ಲ.

ಇಷ್ಟುಮಾತ್ರವಲ್ಲ. ಬೇಱೆ ಊರಿಗೆ ಹೋಗಬೇಕೆಂದು ಕಳುಹಿಸಿಕೊಂಡ ಪುರುಷನು ದಾರಿಯಲ್ಲಿ ಹೊಳೆ ಬಂದಿತೆಂದು ದಾಟಿ ಹೋಗುವುದಕ್ಕೆ ವಶವಲ್ಲದೆ ತಡಿಯಲ್ಲಿ ಇದ್ದಾನೆಯೆಂಬುದ ಕೇಳಿ ಮನೆಯಲ್ಲಿ ಇರುವಂಥವರು ತೆಪ್ಪವನು ಕಟ್ಟಿ ಕಳುಹಿಸುವೋಪಾದಿಯಲ್ಲಿ ಲೋಕಾಂತರಕ್ಕೆ ಹೋದಂಥ ಪಿತ್ರಾದಿಗಳಿಗೆ ಸ್ವರ್ಗಪ್ರಾಪ್ತಿಯ ಕುಱಿತು ವಿಘಾತಕವಾಗಿ ವೈತರಣಿಯ ನದಿ ಇದೆಯೆಂದು ಶಾಸ್ತ್ರದಿಂದ ಕೇಳಿ ಅದನು ದಾಟಿ ಹೋ

ಗುವುದಕೋಸ್ಕರ ಅವನ ಪುತ್ರರು ಇಲ್ಲಿ ವೈತರಣಿಯು ಗೋದಾನವನು ಕೊಡುತ್ತ ಇದ್ದಾರೆ. ಇದಱಿಂದ ಸ್ಥೂಲಶರೀರವು ಪಿತ್ರಾದಿಶಬ್ದಗಳಿಗೆ ಅರ್ಥವಲ್ಲವೆಂದು ತೋಱುತ್ತ ಇದೆ.

ಇಷ್ಟುಮಾತ್ರವಲ್ಲ. ಸತ್ತುಹೋದ ಪಿತ್ರಾದಿಗಳಿಗೋಸ್ಕರ ಅವರು ಸತ್ತದುದು ಮೊದಲು ಸಂವತ್ಸರ ಪರ್ಯಂತವು ತಿಂಗಳು ತಿಂಗಳಿಗೆ ಮಾಸಿಕಗಳನೂ ಆ ತಱುವಾಯದಲ್ಲಿ ಅವರ ಪುತ್ರರುಗಳು ಎಷ್ಟು ಪರ್ಯಂತ ಜೀವಿಸಿಕೊಂಡಿದ್ದಾರೋ ಆಪರ್ಯಂತವು ಪ್ರತಿಸಂವತ್ಸರವು ಅವರ ಉದ್ದೇಶಿಸಿ ತದ್ದಿನಗಳನು ಮಧ್ಯೇಮಧ್ಯೆ ಅಷ್ಟಕಾದಿ ಶ್ರಾದ್ಧಗಳನು ಪುಣ್ಯಕ್ಷೇತ್ರಗಳಲ್ಲಿ ತೀರ್ಥಶ್ರಾದ್ಧಗಳನು ಮಾಡುತ್ತ ಇದ್ದಾರೆ. ಈ ಹೇಳಿದೆಲ್ಲವು ಭಸ್ಮವಾಗಿ ಹೋದಂಥ ಈಸ್ಥೂಲಶರೀರವೇ ಪಿತ್ರಾದಿ ಶಬ್ದಗಳಿಗೆ ಅರ್ಥವಾದಂತೆ ಕೂಡದು. ಈಸ್ಥೂಲಶರೀರದಿಂದ ಹೊಱಟು ಲೋಕಾಂತರಕ್ಕೆ ಹೋದವರೆ ಈಪಿತ್ರಾದಿ ಶಬ್ದಗಳಿಗೆ ಅರ್ಥವಾದುದಾದರೆ ಕೂಡುವುದು. ಅದಱಿಂದಲೂ ಸ್ಥೂಲಶರೀರವು ಪಿತ್ರಾದಿ ಶಬ್ದಗಳಿಗೆ ಅರ್ಥವಲ್ಲ.

ಈಹೇಳಿದಂಥ ಯುಕ್ತಿಗಳಿಂದ ಸ್ಥೂಲಶರೀರಕ್ಕೆ ಅರ್ಥವಾಗದೆ ಹೋದರೆ ಹೋಗಲಿ. ಇದಱಿಂದ ಸೂಕ್ಷ್ಮಶರೀರಸಿದ್ಧಿಯಲ್ಲಿ ನಿಮಗೆ ಸಿದ್ಧಿಸಿದುದು ಏನು ಯೆಂದರೆ, ಈಸ್ಥೂಲಶರೀರವನು ಬಿಟ್ಟು ಬಿಟ್ಟು ಲೋಕಾಂತರಕ್ಕೆ ಯಾವುದು ಹೋಯಿತೋ ಅದೇ ಸೂಕ್ಷ್ಮ ಶರೀರವೆಂದು ನಮಗೆ ಸಿದ್ಧಿಸಿತು. ಹೀಗೆ ಹೇಳುವಾಗ್ಗೆ ಪಿತ್ರಾದಿ ಶಬ್ದಗಳಿಗೆ ಸ್ಥೂಲಶರೀರವಲ್ಲ ಅರ್ಥವೆಂದು ಹೇಳಿದುದಾಯಿತು.

ಆದರೆ ಏನೆಂದರೆ—ಪಿತ್ರಾದಿ ಶಬ್ದಗಳಿಗೆ ಚೇತನವಷ್ಟೆ ಅರ್ಥವು. ಸೂಕ್ಷ್ಮಶರೀರವು ಅಚೇತನವಷ್ಟೆ. ಆ ಅಚೇತನವಾದಂಥ ಸೂಕ್ಷ್ಮಶರೀರವು ಪಿತ್ರಾದಿ ಶಬ್ದಗಳಿಗೆ ಹೇಗೆ ಅರ್ಥವಾಗುವುದೆಂದರೆ ಹೇಳೇವು. ಚೇತನವೆಂದರೆ ಆತ್ಮನಷ್ಟೆ. ಆತ್ಮನು ಆಕಾಶದೋಪಾದಿಯಲ್ಲಿ ವ್ಯಾಪಕನಾಗಲಾಗಿ ಆತ್ಮನಿಗೆ ಲೋಕಾಂತರ ಗಮನಾಗಮನಗಳು ಕೂಡದಾಗಲಾಗಿಯೂ ಆತ್ಮನು ನಿರವಯವನಾಗಲಾಗಿ ಆತ್ಮನಿಗೆ ಕರ್ಮಾದಿಸಂಸ್ಕಾರಕ್ಕೆ ಆಶ್ರಯವಾಗಿ ಬಂದನು ಅಂಗೀಕರಿಸದೆ ಹೋದನಾದರೆ ಕೃತನಾಶಾಕೃತಾಭ್ಯಾಗಮಾದಿ ದೋಷಗಳು ಬರುತ್ತಿದೆಯಾಗಲಾಗಿ ಕರ್ಮಾದಿಸಂ

ವು ಗ್ರಹಿಸಲ್ಪಡುವುದನು ಬಿಡಲ್ಪಡುವುದನು ಪ್ರತ್ಯಕ್ಷವಾಗಿ ಕಾಣಪಟ್ಟ ಹೊತ್ತಿಗೂ ಆ ಸ್ಥೂಲಶರೀರ ವ್ಯತಿರಿಕ್ತವಾಗಿ ಆ ಸ್ಥೂಲಶರೀರದಲ್ಲಿ ಅಧ್ಯಾಸವ ಮಾಡಿಕೊಂಡಿರುವುದರಿಂದ ದೇವದತ್ತನೆಂಬ ಹೆಸರುಂಟಾದಂಥ ಜೀವನಿಗೆ ಆಸ್ಥೂಲಶರೀರದ್ವಾರಾ ವಸ್ತ್ರಗ್ರಹಣ ತ್ಯಾಗಾದಿಗಳು ಹೇಗೆ ತೋರುತ್ತ ಇದೆಯೋ ಹಾಗೆ ಅಜ್ಞಾನದಿಂದ ಬಂದಂಥ ಸೂಕ್ಷ್ಮಶರೀರಾಧ್ಯಾಸದ್ವಾರಾ ಆತ್ಮನಿಗೂ ಅನಂತವಾದ ಸ್ಥೂಲಶರೀರಗಳು ಬರುವಹಾಗೂ ಹೋಗುವಹಾಗೂ ಮೋಹದಿಂದ ತೋರುತ್ತ ಇದೆ. ವಿಚಾರಿಸುವಲ್ಲಿ ಸ್ಥೂಲಶರೀರಕ್ಕೆ ಜನ್ಮಮರಣಗಳು ಪ್ರತ್ಯಕ್ಷವಾಗಿ ಕಾಣಪಟ್ಟದೆಯಾದಕಾರಣ ಸೂಕ್ಷ್ಮಶರೀರ ಸ್ಥೂಲಶರೀರದೊಡನೆ ಅಧ್ಯಾಸಹೊಂದಿತಾಗಿ ಜನ್ಮಮರಣಗಳು ಇಲ್ಲ.

ಸೂಕ್ಷ್ಮಶರೀರಕ್ಕೆ ಜನ್ಮಮರಣಗಳು ಇಲ್ಲದೆ ಹೋಯಿತಾಗಲಾಗಿ ಆತ್ಮನಿಗೆ ಮೋಹಮಾತ್ರವೇ ಹೊಂದಿತಾಗಿ ಜನ್ಮಮರಣಗಳು ಇಲ್ಲವೆಂಬುದ ಹೇಳಬೇಕು. ಈಹೇಳಿದಂಥ ಪ್ರಕಾರವಾಗಿ ಪ್ರಾಣಿಗಳಿಗೆ ಸ್ಥೂಲಶರೀರವು ಅನಂತ, ಸೂಕ್ಷ್ಮಶರೀರವು ಒಂದೊಂದು, ಕಾರಣಶರೀರವು ಒಂದೊಂದೆಂದು ಹೇಳಿದುದು ಯುಕ್ತವೇ ಸರಿ.

ಇದರಿಂದ ಸಿದ್ಧಿಸಿದುದೇನು? ಎಂದರೆ—ಶರೀರತ್ರಯವು ಪ್ರಾಣಿಶಬ್ದದಿಂದ ಹೇಳಪಟ್ಟಂಥ [1]ಆತ್ಮನಲ್ಲ[1] ವೆಂಬುದು ಸಿದ್ಧಿಸಿತು. ಅದೆಂತೆಂದರೆ ಹೇಳೇವು. ಲೋಕದಲ್ಲಿ ಒಬ್ಬನು ಮತ್ತೊಬ್ಬನಿಗೆ ರುದ್ರಾಕ್ಷಿಯ ಸರಗಳೆಷ್ಟು ಎಂದು ಕೇಳಿದರೆ ಮೂರು ಎಂದು ಹೇಳುತಿದ್ದಾನೆ. ಮತ್ತು ನಿನಗೆ ಜನಿವಾರಗಳೆಷ್ಟು ಎಂದು ಕೇಳಿದರೆ ಮೂರು ಎಂದು ಹೇಳುತಿದ್ದಾನೆ. ಮತ್ತು ನಿನಗೆ ಧೋತ್ರಗಳೆಷ್ಟು ಎಂದು ಕೇಳಿದರೆ ಮೂರು ಎಂದು ಹೇಳುತ್ತಿದ್ದಾನೆ. ಹೀಗೆ ಪ್ರಾಣಿಗಳಿಗೆ ಎಷ್ಟು ಶರೀರವೆಂದು ವಿಚಾರಿಸುವಲ್ಲಿ ಮೂರು ಶರೀರಗಳೆಂದು ತೋರುತ್ತಿದೆ. ಹೀಗೆ ತೋರಿದುದರಿಂದ ಏನು ಎಂದರೆ ಹೇಳೇವು. ದೃಷ್ಟಾಂತದಲ್ಲಿ ಆಯಾ ರುದ್ರಾಕ್ಷಿಯ ಸರ ಮೊದಲಾದುದು ಅದನು ಧರಿಸಿಕೊಂಡಿರುವಂಥ ದೇವದತ್ತನು ಹೇಗೆ ಅಲ್ಲವೋ, ಆರುದ್ರಾಕ್ಷಾದಿನಿಷ್ಠವಾದಂಥ ವಿಕಾರಾದಿಗಳು ಆಧರಿಸಿಕೊಂಡಿ

---

ಪಾ.—1. ಅರ್ಥವಲ್ಲ.

ರುವಂಥವರನು ಹೇಗೆ ಸ್ಪರ್ಶಿಸಲಾರದೋ ಹಾಗೆ ದಾರ್ಷ್ಟಾರ್ಂತದಲ್ಲೂ ಸ್ಥೂಲ ಸೂಕ್ಷ್ಮ ಕಾರಣ ಶರೀರಗಳೇ ಪ್ರಾಣಿಶಬ್ದದಿಂದ ಹೇಳಪಟ್ಟಂಥ ಆತ್ಮವಲ್ಲವೆನುತಲೂ, ಆಶರೀರತ್ರಯನಿಷ್ಠವಾದಂಥ ವಿಕಾರಗಳು ಪ್ರಾಣಿಶಬ್ದವಾಚ್ಯನಾದಂಥ ಆತ್ಮನ ಸ್ಪರ್ಶಿಸುವುದಿಲ್ಲವೆನುತಲೂ ತೋರುತ್ತ ಇದೆ. ಇಷ್ಟುಮಾತ್ರವಲ್ಲ. ಲೋಕದಲ್ಲಿ ದೇವದತ್ತಾದಿಗಳಿಗೆ ಗೃಹಿಯೆನುತಲೂ ಕ್ಷೇತ್ರಿಯೆನುತಲೂ ಪುತ್ರಿಯೆನುತಲೂ ಮನಿಯೆನುತಲೂ ಕುಂಡಲಿಯೆನುತಲೂ ವ್ಯವಹಾರವ ಕಂಡು ಇದ್ದೇವೆ ಹೀಗೆ ಆತ್ಮನಿಗೂ ಶರೀರಿಯೆನುತಲೂ, ಪ್ರಾಣಿಯೆನುತಲೂ, ಲೋಕವ್ಯವಹಾರಿಯೆನುತಲೂ, ತೋರುತ್ತ ಇದೆ. ಹೀಗೆ ತೋರುತ್ತ ಇರಲಾಗಿ ಆದೃಷ್ಟಾಂತದಲ್ಲಿ ಗೃಹಿಯೆನುತಲೂ ಪುತ್ರಿಯೆನುತಲೂ ಕ್ಷೇತ್ರಿಯನುತಲೂ ಮನಿಯೆನುತಲೂ ಕುಂಡಲಿಯೆನುತಲೂ ತೋರುವಂಥ ದೇವದತ್ತಾದಿಗಳು ಆಗೃಹಾದಿಗಳು ಹೇಗೆ ಅಲ್ಲವ್ರೋ ಗೃಹಾದಿ ನಿಷ್ಠಪದಾರ್ಥಗಳು ಅವರ ಹೇಗೆ ಸ್ಪರ್ಶಿಸಲಾರವ್ರೋ ಹಾಗೆ ಶರೀರಿಯೆನುತಲೂ ದೇಹಿಯೆನುತಲೂ ಪ್ರಾಣಿಯೆನುತಲೂ ಉಪಾಧಿಯಿಂದ ತೋರುವಂಥ ಆತ್ಮನು ಆಶರೀರಪ್ರಾಣಗಳಲ್ಲನಲ್ಲ. ಆಶರೀರಾದಿ ನಿಷ್ಠವಿಕಾರಗಳು ಆಆತ್ಮನ ಕಾಲತ್ರಯದಲ್ಲಿ ಸ್ಪರ್ಶಿಸಲಾರದೆಂದು ತೋರುತ್ತ ಇದೆ. ಈಪ್ರಕಾರವಾಗಿ ಶರೀರತ್ರಯವು ಆತ್ಮನಲ್ಲದೆ ಹೋದರೆ ಶರೀರತ್ರಯ ನಿಷ್ಠವಿಕಾರಗಳು ಆತ್ಮನಿಗೆ ಇಲ್ಲವೆಂಬುದಾಗಿ ಸಾಮಾನ್ಯವಾಗಿ ತೋರಿದಹೊತ್ತಿಗೂ ವಿಶೇಷವಾಗಿ ಸ್ಥೂಲಶರೀರದೋಪಾದಿಯಲ್ಲಿ ಸೂಕ್ಷ್ಮ ಕಾರಣ ಶರೀರಗಳು ಎರಡು ತೋರಲಿಲ್ಲವಾಗಲಾಗಿಯು ವೇಳೆವೇಳೆಗೆ ವಿಚಾರಿಸಿದ ಹೊತ್ತಿಗೂ ಈ ಶರೀರಗಳು ಆತ್ಮನಲ್ಲವೆಂದು ತೋರುವಂಥದು ಕಠಿನವಾಗಿ ಇದೆಯಾಗಲಾಗಿಯೂ ಶರೀರಗಳು ಮೂರೇ ಸರಿ. ಈಶರೀರಗಳು ಆತ್ಮನಲ್ಲ. ಈಶರೀರತ್ರಯ ನಿಷ್ಠವಾದಂಥ ವಿಕಾರಗಳು ಆತ್ಮನ ಸ್ಪರ್ಶಿಸಲಾರದೆಂದು ದೃಢವಾಗಿ ತೋರುವುದರಲ್ಲಿ ವಿಶೇಷ ಯುಕ್ತಿಯುಂಟೆ? ಎಂದರೆ, ಉಂಟು. ಹೇಳೇವು. ಸ್ಥೂಲಶರೀರವು ಸಮಸ್ತ ಪ್ರಾಣಿಗಳಿಗೂ ಪ್ರತ್ಯಕ್ಷವಾಗಲಾಗಿ ಸ್ಥೂಲಶರೀರ ಉಂಟೋ ಇಲ್ಲವ್ರೋ ಎಂಬುವದರಲ್ಲಿ ಯಾರಿಗೂ ಸಂಶಯವಿಲ್ಲ. ಚಾರ್ವಾಕ ಪಾಮರರಿಂದಲೂ ವ್ಯತಿರಿಕ್ತರಾದವರಿಗೆ ಸ್ಥೂಲಶ

---

ಪಾ.—1. ವ್ಯವಹಾರಿಯೆನುತಲು ವೇದದಲ್ಲಿ.

ರವು ಆತ್ಮನಲ್ಲನೆಂಬುದಱಲ್ಲಿ ಸಂದೇಹವಿಲ್ಲ. ಆಚಾರ್ವಾಕ ಮತದವರಿಗೂ ಈ ಸ್ಥೂಲಶರೀರವೇ ಆತ್ಮನೆಂದು ಹೇಳುವಂಥದು ಉಚಿತವಲ್ಲವೆಂದರೆ ಹೇಳೇವು. ಸೂಕ್ಷ್ಮಶರೀರದ ಅಧ್ಯಾಸದಿಂದ ಜೀವಸ್ವರೂಪವಾದ ಆತ್ಮನು ಆಸೂಕ್ಷ್ಮಶರೀರ ದ್ವಾರಾ ಸ್ಥೂಲಶರೀರಾಧ್ಯಾಸದಿಂದ ಬಂದಂಥ ಪುತ್ರಾದ್ಯಪೇಕ್ಷೆಯಿಂದ ಪಿತ್ರಾದಿ ಶಬ್ದಗಳಿಂದ ಹೇಳಪಡುತ್ತಿದ್ದಾನೆ. ಹೀಗೆ ಪಿತ್ರಾದಿ ಶಬ್ದಗಳಿಂದ ಹೇಳಪಟ್ಟವನೋಪಾದಿಯಲ್ಲಿ ತೋಱುವಂಥ ಆತ್ಮನು ಈ ಸ್ಥೂಲಶರೀರಕ್ಕಿಂತಲೂ ಭಿನ್ನನೇ ಸರಿ. ಆಪಿತ್ರಾದಿಶಬ್ದಗಳಿಂದ ಈಸ್ಥೂಲಶರೀರವೆ ಹೇಳೆಪಡುವುದೊ ಆಗ ಪಿತ್ರಾದಿಗಳು ಸತ್ತುಹೋದ ತಱುವಾಯದಲ್ಲೂ ಆಪಿತ್ರಾದಿಶಬ್ದಗಳಿಗೆ ಅರ್ಥವಾಗಿ ಚಾರ್ವಾಕ ಮತದವರಿಗೆ ಆತ್ಮನೆಂದು ಅಭಿಮತವಾದಂಥ ಸ್ಥೂಲಶರೀರವು ಇರಬೇಕು. ಆಪಿತ್ರಾದಿಗಳು ಸತ್ತುಹೋದರೆಂದುಹೇಳದೆ ಇರಬೇಕು. ಹಾಗೆ ಇರಲಿಲ್ಲವಾಗಿ ಸ್ಥೂಲಶರೀರದಿಂದ ವ್ಯತಿರಿಕ್ತನೇ ಆತ್ಮನೆಂದು ಚಾರ್ವಾಕಮತದವರೂ ಅಂಗೀಕರಿಸಬೇಕು. ಇಷ್ಟುಮಾತ್ರವಲ್ಲ.

ಮತ್ತು ಯುಕ್ತ್ಯಂತರದಲ್ಲು ಈ ಸ್ಥೂಲಶರೀರವ್ಯತಿರಿಕ್ತನೇ ಆತ್ಮನೆಂದು ತೋಱುತ್ತಿದೆ. ಅದೆಂತೆಂದರೆ ಹೇಳೇವು. ಆಪಿತ್ರಾದಿಶಬ್ದಗಳಿಗೆ ಅರ್ಥದೋಪಾದಿಯಲ್ಲಿ ತೋಱಿದಂಥ ಈ ಪಿತ್ರಾದಿ ಸ್ಥೂಲಶರೀರವು ಸತ್ತುಬಿದ್ದಿರಲಾಗಿ ಅದನು ತಬ್ಬಿಕೊಂಡು ಅಳುತ್ತ ಇರುವಂಥ ಪುತ್ರಾದಿಗಳು–ನಮ್ಮನು ಅನಾಂತರದಲ್ಲಿ ಬಿಟ್ಟುಬಿಟ್ಟು ಸಾಲ ತೆಕ್ಕೊಂಡ ದಿಕ್ಕನು ಕೊಟ್ಟ ದಿಕ್ಕನು ಹೇಳದೆ ನಮ್ಮ ಬಾಯಲ್ಲಿ ಮಣ್ಣು ಹೊಯಿದು ನಮ್ಮ ತಂದೆ ಮೊದಲಾದಂಥವರು ಸತ್ತು ಹೋದರೆಂದು ಹೇಳುತ್ತ ಇದ್ದಾರೆ. ಇಷ್ಟುಮಾತ್ರವಲ್ಲ. ಮತ್ತು ಬಂಧುಜನರು ಸ್ನೇಹಿತರು ಆಱಿದಂಥವರು—" ನಿಮ್ಮ ತಂದೆ ಮೊದಲಾದವರು ಹೋದರಪ್ಪ. ಅಯ್ಯಯ್ಯೋ!" ಎಂದು ದುಃಖವ ಹೇಳಬಂದರೆ—" ಅಯ್ಯ ಹೋದರು, ಅಪ್ಪ ಹೋದರು, ಅಣ್ಣ ಹೋದರು, ತಮ್ಮ ತಂದೆ ಹೋದರಯ್ಯಾ! ನಮ್ಮಮ್ಮ ಹೋದಳಯ್ಯ! ನನ್ನಾಣೆ ಹೋದಳಯ್ಯ! ನನ್ನ ಬಾಯಲ್ಲಿ ಮಣ್ಣು ಹೊಯಿದು ಅಷ್ಟವಂದಿಯು ಹೋದರಯ್ಯಾ! ನಮ್ಮ ಕೆಡಿಸಿ ಹೋದರು! ಇನ್ನು ನಮ್ಮ ಗತಿಯೇನು!" ಎಂದು ಹೇಳಿಕೊಂಡು ಅಳುತ್ತ ಇದ್ದಾರೆ.

ಹೀಗೆ ಹೇಳದಂಥದುದು ಹೇಗೆ ಇದೆ? ಎಂದರೆ— ನಿಮ್ಮ ಮಾವ ಮೊದಲಾದವರು ಬಂದು ಇದ್ದರಲ್ಲ, ಅವರು ಹೋದರೆ ಯೆಂದು ಕೇಳಿದರೆ—"ನಮ್ಮ ಸಂಗಡ ಹೇಳದೆ ತಾವು ಉಟ್ಟುಕೊಂಡ ಧೋತ್ರಬಟ್ಟೆಗಳು ಸಹವಾಗಿ ಸುಮ್ಮನೆ ಹೋದರು" ಎಂದು ಹೇಳದೋಪಾದಿಯಲ್ಲಿ ಇದೆ. ಅದಋಂದ ಆದೃಷ್ಟಾಂತದಲ್ಲಿ ಆಮಾವ ಮೊದಲಾದನರು ಉಟ್ಟುಕೊಂಡಿರುವ ಧೋತ್ರಗಳೊಡನೆ ಕೂಡ ತೋಱದ ಹೊತ್ತಿಗೂ ಆಧೋತ್ರಗಳ ಬಿಟ್ಟು ಬಿಟ್ಟು ಹೋದವರೇ ಆಮಾವ ಮೊದಲಾದ ಶಬ್ದಗಳಿಗೆ ಹೇಗೆ ಅರ್ಥವೊ ಅವರಿಂದ ಬಿಡಲ್ಪಟ್ಟಂಥ ಧೋತ್ರ ಬಟ್ಟೆಗಳು ಆಮಾವ ಮೊದಲಾದ ಶಬ್ದಗಳಿಗೆ ಹೇಗೆ ಅರ್ಥವಲ್ಲವೋ ಹಾಗೆ ಈಸ್ಥೂಲಶರೀರವನು ಬಿಟ್ಟು ಬಿಟ್ಟು ಕರ್ಮಾನುಸಾರದಿಂದ ಲೋಕಾಂತರಕ್ಕೆ ಹೋದವರೆ ಈಪಿತ್ರಾದಿಶಬ್ದಗಳಿಗೆ ಅರ್ಥವಾಗಿ ತೋಱುತ್ತ ಇದ್ದಾರೆ. ಈ ಸ್ಥೂಲಶರೀರವು ಆಪಿತ್ರಾದಿಶಬ್ದಗಳಿಗೆ ಅರ್ಥವಾಗಿ ತೋಱಲಿಲ್ಲ.

ಹಾಗಾದರೆ ಈಸ್ಥೂಲಶರೀರದಿಂದ ಹೋದಂಥವರೇ ಆಪಿತ್ರಾದಿ ಶಬ್ದಗಳಿಗೆ ಅರ್ಥವಲ್ಲದೆ ಹೊಱಟು ಹೋಗುವುದಕ್ಕೆ ಮೊದಲು ಇಲ್ಲಿ ಇರುವ ಸ್ಥೂಲಶರೀರವೇ ಪಿತ್ರಾದಿಶಬ್ದಗಳಿಗೆ ಅರ್ಥವೆಂದು ಹೇಳುವಣವೆಂದರೆ ಹಾಗೆ ಹೇಳಕೂಡದು. ಹಾಗೆ ಹೇಳದುದಾದರೆ ಆಧೋತ್ರವ ಬಿಟ್ಟುಹೋದ ಮಾವ ಮೊದಲಾದವರು ಆಧೋತ್ರವ ಬಿಟ್ಟುಬಿಟ್ಟು ಹೋಗುವುದಕ್ಕೆ ಮೊದಲು ಆದೋತ್ರಗಳೇ ಅವರಾಗಬೇಕು. ಇಷ್ಟು ಮಾತ್ರವಲ್ಲ. ಮತ್ತು ಒಂದು ಗೃಹದಲ್ಲಿ ಇದ್ದು ಹೊಱಟುಹೋಗುವಂಥ ಪುರುಷನು ಆಗೃಹದಿಂದ ಹೊಱಟುಹೋಗುವುದಕ್ಕೆ ಮೊದಲು ಆಗೃಹವೇ ಆಗಬೇಕು. ಹಾಗೆ ಹೇಳಕೂಡದಾಗಲಾಗಿ ಆಧೋತ್ರಗಳೊಡನೆ ಕೂಡಿಕೊಂಡಿರುವಂಥ ಮಾವ ಮೊದಲಾದನರು ಆಧೋತ್ರದೊಡನೆ ಕೂಡಿಕೊಂಡಿದ್ದ ಹೊತ್ತಿಗೂ ಆದೋತ್ರದೊಡನೆ ಕೂಡದೆ ಇದ್ದಹೊತ್ತಿಗೂ ಆಧೋತ್ರಗಳು ಹೇಗೆ ಅಲ್ಲವೋ ಗೃಹದಿಂದ ಹೊಱಟುಹೋದಂಥ ಪುರುಷನು ಆಗೃಹವ ಬಿಟ್ಟು ಹೋದ ಹೊತ್ತಿಗೂ ಆಗೃಹದಲ್ಲಿ ಇದ್ದ ಹೊತ್ತಿಗೂ ಆಗೃಹ ಹೇಗೆ ಅಲ್ಲವಾಯಿತೋ ಹಾಗೆ ಆಪಿತ್ರಾದಿ ಶಬ್ದಗಳಿಗೆ ಅರ್ಥವಾದಂಥ ಆಪಿತ್ರಾದಿಗಳು ಈಸ್ಥೂಲಶರೀರದೊಡನೆ ಇದ್ದ

ಹೊತ್ತಿಗೂ ಈಸ್ಥೂಲಶರೀರವ ಬಿಟ್ಟು ಹೋದ ಹೊತ್ತಿಗೂ ಆಪಿತ್ರಾದಿ ಶಬ್ದಗಳಿಗೆ ಆಸ್ಥೂಲಶರೀರವು ಅರ್ಥವಲ್ಲ. ಇಷ್ಟು ಮಾತ್ರವಲ್ಲ.

ಯಾವ ಪಿತ್ರಾದಿ ಶರೀರವನು ಅದರ ಮರಣಕ್ಕೆ ಮೊದಲು ಪಿತ್ರಾದಿ ಶಬ್ದಕ್ಕೆ ಅರ್ಥವೆಂದೆನಿಸಿಕೊಂಡಿದ್ದರೆ ಆಶರೀಕೋಸ್ಕರ ಬಂದು ಉದಾಸೀನವ ಹೇಳಿದ ಹೊತ್ತಿಗೂ ಆಶರೀರದಲ್ಲಿ ಬಂದು ಪೆಟ್ಟು ಕೊಂಡ ಹೊತ್ತಿಗೂ ಆಶರೀರದಲ್ಲಿ ವ್ರಣ ಬಂದು ಮಾಡಿದ ಹೊತ್ತಿಗೂ ಇದಕ್ಕೆ ಅನೇಕ ನರಕ ಪ್ರಾಪ್ತಿಯೆಂದು ಶಾಸ್ತ್ರ ಹೇಳುತ್ತಿದೆ. ಅಂಥ ಶರೀರವನೇ ಸುಡುತ್ತಿದ್ದಾನೆ. ಈಪಿತ್ರಾದಿ ಶಬ್ದಗಳಿಗೆ ಸ್ಥೂಲಶರೀರವೇ ಅರ್ಥವಾದುದಾದರೆ ಆಶರೀರವನು ಸುಟ್ಟ ಪುತ್ರರಿಗೆ ಹತ್ಯಾದಿ ದೋಷಗಳು ಬರಬೇಕು. ಆದೋಷಗಳು ಬರುತ್ತಿದೆಯಾದಕಾರಣ ಆಪುತ್ರಾದಿಗಳಿಗೆ ಅನೇಕ ಕೋಟಿ ನರಕಗಳು ಬರಬೇಕು. ಇಷ್ಟುಮಾತ್ರವಲ್ಲ. ಲೋಕದಲ್ಲಿ ಜನರು ಇವರು ಪಿತೃಹತ್ಯಾಕಾರರು ಮಾತೃಹತ್ಯಾಕಾರರು ಎಂದು ದೂಷಿಸಬೇಕು. ಹಾಗೆ ಕಾಣವಾಗಲಾಗಿಯೂ ಶಾಸ್ತ್ರವು ಪಿತ್ರಾದಿಗಳ ಸುಟ್ಟಂಥವರಿಗೆ ನರಕವ ಹೇಳಲಿಲ್ಲವಾಗಲಾಗಿಯೂ ಈಸ್ಥೂಲಶರೀರವು ಪಿತ್ರಾದಿ ಶಬ್ದಗಳಿಗೆ ಅರ್ಥವಲ್ಲ. ಇಷ್ಟು ಮಾತ್ರವಲ್ಲ.

ಯಾವ ಶರೀರಗಳ ಪಿತ್ರಾದಿಶಬ್ದಗಳಿಗೆ ಅರ್ಥವೆಂದು ಎಣಿಸಿಕೊಂಡು ಅನೇಕ ಉಪಚಾರಗಳಿಂದ ಪೂಜಿಸಿಕೊಂಡು ಬಂದನೋ ಆಶರೀರವನು ಮರಣಾಂತದಲ್ಲಿ ದಹಿಸದೆ ಹೋದನಾದರೆ ಆಪುತ್ರಾದಿಗಳಿಗೆ ಪ್ರತ್ಯವಾಯು ದೋಷವನು ಶಾಸ್ತ್ರವು ಹೇಳುತ್ತಿದೆ. ಆಪುತ್ರಾದಿಗಳು ಆ ದೇಹಕ್ಕೆ ದಹನಾದಿ ಕ್ರಿಯೆಗಳನು ಮಾಡಿಸರಾದರೆ ಆ ಸ್ಥೂಲಶರೀರದಿಂದ ಹೊರಟು ಲೋಕಾಂತರಕ್ಕೆ ಹೋದ ಆಪಿತ್ರಾದಿಗಳಿಗೆ ಪ್ರೇತತ್ವವಿಮೋಚನವಾದಂಥ ಅತಿಶಯವನೂ ಈ ಶರೀರವ ದಹಿಸಿದಂಥ ಪುತ್ರಾದಿಗಳಿಗೆ ಪ್ರತ್ಯವಾಯುದೋಷವಿಲ್ಲವೆಂಬುದನೂ ಶಾಸ್ತ್ರದಲ್ಲಿ ಹೇಳುತ್ತಿದೆ.

ಅದೆಂತೆಂದರೆ ಹೇಳೇವು. ಪಾಳ್ಯದಲ್ಲಿ ಇರುವಂಥ ಅರಸು ಹೊರಟು ಹೋದನಾದರೆ ಆವನಿಗೆ ಅದೃಷ್ಟ ಬರಬೇಕೆಂದು ಅವನ ಭೃತ್ಯರಾದವರು ಪಾಳ್ಯವ ಹೇಗೆ [1]ಧಮಾಣ ಕೋಟೆಯು[1] ಮಾಡುತಿದ್ದಾರೆಯೋ ಅ

---

ಪಾ.—1. ಕಾಚು.

ವರು ಧನಮಾಣ ಕೊಟ್ಟರೆ ಮಾಡದೆ ಹೋದರಾದರೆ ಅವರನು ಅರಸು ಹೇಗೆ ಶಿಕ್ಷಿಸುತ್ತ ಇದ್ದಾನೆಯೋ ಹಾಗೆ ಸತ್ತು ಬಿದ್ದಿರುವಂಥ ಪಿತ್ರಾದಿ ಶರೀರಗಳನು ಆಪ್ತರಾದಿಗಳು ಸಂಸ್ಕಾರವ ಮಾಡಿದರಾದರೆ ಆ ಪಿತ್ರಾದಿಗಳು ಒಳ್ಳೆಯ ಗತಿಯು ಸಂಪಾದಿಸಿಕೊಂಡಾರೆಂದು ಆಡುತ್ತ ಇದ್ದಾರೆ; ಸಂಸ್ಕಾರವ ಮಾಡಿದವರನು ದೂಷಿಸುತ್ತ ಇದ್ದಾರೆ. ಇದರಿಂದಲೂ ಆ ಪಿತ್ರಾದಿ ಶಬ್ದಗಳಿಗೆ ಈ ಸ್ಥೂಲಶರೀರದಿಂದ ಲೋಕಾಂತರಕ್ಕೆ ಹೋದಂಥವರೇ ಅರ್ಥವೆಂದು ತೋರುತ್ತ ಇದೆ.

ಈ ಹೇಳಿದ ಯುಕ್ತಿಗಳಿಂದ ಪಿತ್ರಾದಿ ಶಬ್ದಗಳಿಗೆ ಸ್ಥೂಲಶರೀರವು ಅರ್ಥವಲ್ಲದೆ ಹೋದುದಾದರೆ ಈ ಸ್ಥೂಲಶರೀರಗಳನೇ ಪಿತ್ರಾದಿಗಳೆಂದು ಏತಕ್ಕೆ ಶುಶ್ರೂಷೆ ಮಾಡುತಿದ್ದಾರೆಯೆಂದರೆ, ಈ ಸ್ಥೂಲಶರೀರದೊಳಗೆ ಇರುವಂಥನಿಗೆ ಪ್ರೀತಿಗೋಸ್ಕರವಾಗಿ ಶುಶ್ರೂಷೆಯ ಮಾಡುತ್ತಿದ್ದಾರೆಯಲ್ಲದೆ ಸ್ಥೂಲಶರೀರಕ್ಕೆ ಪ್ರೀತಿಗೋಸ್ಕರವಾಗಿ ಶುಶ್ರೂಷಿಸಲಿಲ್ಲ.

ಅದೆಂತೆಂದರೆ ಹೇಳೇವು. ಅರಮನೆಯ ಒಳಗೆ ಅರಸು ಇರಲಾಗಿ ಆ ಅರಸಿಗೆ ಪ್ರೀತಿಗೋಸ್ಕರವಾಗಿ ಆ ಅರಮನೆಗೆ ಮೇಲುಕಟ್ಟು ಮೊದಲಾದ ಅಲಂಕಾರಗಳನು ಹೇಗೆ ಮಾಡುವರೋ ಆ ಅರಮನೆಯ ಪ್ರೀತಿಗೋಸ್ಕರ ಮೇಲುಕಟ್ಟು ಮೊದಲಾದ ಅಲಂಕಾರಗಳು ಹೇಗೆ ಮಾಡಲಿಲ್ಲವೋ ಹಾಗೆ ಸ್ಥೂಲಶರೀರವ ಶುಶ್ರೂಷೆ ಮಾಡುವಂಥವರು ಈ ಸ್ಥೂಲಶರೀರದೊಳಗೆ ಇರುವಂಥವನಿಗೆ ಪ್ರೀತಿಗೋಸ್ಕರವಾಗಿಯೇ ಆ ಸ್ಥೂಲಶರೀರವ ಶುಶ್ರೂಷೆ ಮಾಡುತ್ತಿದ್ದಾರೆ. ಆ ಸ್ಥೂಲಶರೀರಕ್ಕೆ ಪ್ರೀತಿಗೋಸ್ಕರವಾಗಿ ಶುಶ್ರೂಷಿಸಲಿಲ್ಲ ಅದರಿಂದ ಈ ಸ್ಥೂಲಶರೀರವು ಮೋಹದಿಂದ ಪಿತ್ರಾದಿ ಶಬ್ದಗಳಿಗೆ ಅರ್ಥವೋ ಪಾದಿಯಲ್ಲಿ ಆ ಸ್ಥೂಲಶರೀರದೊಳಗೆ ಇರುವಂಥಾತನೇ ಪಿತ್ರಾದಿ ಶಬ್ದಗಳಿಗೆ ಅರ್ಥ.

ಇಷ್ಟುಮಾತ್ರವಲ್ಲ. ಲೋಕದಲ್ಲಿ ಗ್ರಾಮಾಂತರಕ್ಕೆ ಹೋದಂಥವನ ಧೋತ್ರವನ್ನು ಕಳ್ಳರು ಕದ್ದುಕೊಂಡು ಹೋದರಾದರೆ ಆ ಮಾತನು ಕೇಳಿ ಅವನ ಪುತ್ರರು ಬದಲು ಧೋತ್ರಗಳನು ಕೊಟ್ಟು ಹೇಗೆ ಕಳುಹಿಸುತಿದ್ದಾರೆಯೋ ಹಾಗೆ ಸತ್ತು ಲೋಕಾಂತರಕ್ಕೆ ಹೋದ ಪಿತ್ರಾದಿಗಳು ನಗ್ನರಾಗಿ ಹೋಗುತ್ತಿದ್ದಾರೆಯೆಂದು ಶಾಸ್ತ್ರಗಳು ಹೇಳುತ್ತಿದೆಯಾದ

ಕಾರಣ ಅವರ ಪುತ್ರಾದಿಗಳು ಅವರಿಗೆ ನಗ್ನಪ್ರಚ್ಛಾದನಕೋಸ್ಕರವಾಗಿ ಇಲ್ಲಿ ಬ್ರಾಹ್ಮಣನಿಗೆ ವಸ್ತ್ರಗಳ ಕೊಟ್ಟರೆ ಆವಸ್ತ್ರಗಳು ಅವರಿಗೆ ಹೋಗುವುವೆಂಬ ಶಾಸ್ತ್ರವನು ಕೇಳಿ ಇಲ್ಲಿಯೂ ವಸ್ತ್ರವ ಕೊಡುತ್ತಿದ್ದಾರೆ. ಇದಱಿಂದಲೂ ಸ್ಥೂಲಶರೀರವು ಪಿತ್ರಾದಿ ಶಬ್ದಗಳಿಗೆ ಅರ್ಥವು ಅಲ್ಲವೆಂದು ತೋಱುತ್ತ ಇದೆ.

ಇಷ್ಟುಮಾತ್ರವಲ್ಲ. ಗದ್ದೆಯಲ್ಲಿ ಕೆಲಸ ಮಾಡುವಂಥವನು ಬಿಸಿಲಿನಿಂದ ಕಂಗೆಟ್ಟು ದಾಹತಾಪಗಳಿಂದ ಕಂಗೆಡುತಿದ್ದಾನೆಯೆಂದು ಕೇಳಿ ಗೃಹದಲ್ಲಿ ಇರುವಂಥವರು ಅವನಿಗೆ ಅನ್ನ ಜಲಾದಿಗಳನು ಹೇಗೆ ಕಳುಹಿಸುತ್ತ ಇದ್ದಾರೆಯೋ ಹಾಗೆಯೆ ಸತ್ತು ಲೋಕಾಂತರಕ್ಕೆ ಹೋದ ಪಿತ್ರಾದಿಗಳಿಗೆ ಹಸಿವು ಬಾಯಾಱಿಕೆ ತಾಪಾದಿಗಳು ಇಲ್ಲಿ ಕೊಡುವಂಥ ಪಿಂಡತಿಲೋದಕಾದಿಗಳಿಂದ ಹೋಗುವುದೆಂದು ಶಾಸ್ತ್ರದಿಂದ ಕೇಳಿ ಅವರ ಪುತ್ರಾದಿಗಳು ಅವರಿಗೆ ಪಿಂಡತಿಲೋದಕಾದಿಗಳ ಕೊಡುತ್ತ ಇದ್ದಾರೆ. ಇದಱಿಂದಲೂ ಪಿತ್ರಾದಿ ಶಬ್ದಗಳಿಗೆ ಸ್ಥೂಲಶರೀರವು ಅರ್ಥವಲ್ಲವೆಂದು ತೋಱುತ್ತ ಇದೆ.

ಇಷ್ಟುಮಾತ್ರವಲ್ಲ. ದೇಶಾಂತರಕ್ಕೆ ಹೋಗಬೇಕೆಂದು ಪರಸ್ಥಾನಮಾಡಿ ಇರುವಂಥವನಿಗೆ ಕಟ್ಟುಬುತ್ತಿಯನು ಕೊಟ್ಟು ಹೇಗೆ ಕಳುಹಿಸುತ್ತ ಇದ್ದಾರೆಯೋ ಹಾಗೆ ಸತ್ತು ಲೋಕಾಂತರಕ್ಕೆ ಉಪವಾಸ ಹೋದಂಥ ಪಿತ್ರಾದಿಗಳಿಗೆ ಇಲ್ಲಿ ಸ್ವರ್ಗಪಾಥೆಯುವನು ಮಾಡಿಕೊಟ್ಟರೆ ಅವರಿಗೆ ಹಸಿವು ಹೋಗುವುದೆಂದು ಶಾಸ್ತ್ರದಿಂದ ಕೇಳಿ ಅವರ ಪುತ್ರರು ಸ್ವರ್ಗಪಾಥೇಯುವನು ಕೊಡುತ್ತಿದ್ದಾರೆಯಾದುದಱಿಂದ ಈಸ್ಥೂಲಶರೀರವು ಪಿತ್ರಾದಿ ಶಬ್ದಗಳಿಗೆ ಅರ್ಥವಲ್ಲ.

ಇಷ್ಟುಮಾತ್ರವಲ್ಲ. ಬೇಱೆ ಊರಿಗೆ ಹೋಗಬೇಕೆಂದು ಕಳುಹಿಸಿಕೊಂಡ ಪುರುಷನು ದಾರಿಯಲ್ಲಿ ಹೊಳೆ ಬಂದಿತೆಂದು ದಾಟ ಹೋಗುವುದಕ್ಕೆ ವಶವಲ್ಲದೆ ತಡಿಯಲ್ಲಿ ಇದ್ದಾನೆಯೆಂಬುದ ಕೇಳಿ ಮನೆಯಲ್ಲಿ ಇರುವಂಥವರು ತೆಪ್ಪವನು ಕಟ್ಟಿ ಕಳುಹಿಸುವೋಪಾದಿಯಲ್ಲಿ ಲೋಕಾಂತರಕ್ಕೆ ಹೋದಂಥ ಪಿತ್ರಾದಿಗಳಿಗೆ ಸ್ವರ್ಗಪ್ರಾಪ್ತಿಯ ಕುಱಿತು ವಿಘಾತಕವಾಗಿ ವೈತರಣಿಯ ನದಿ ಇದೆಯೆಂದು ಶಾಸ್ತ್ರದಿಂದ ಕೇಳಿ ಅದನು ದಾಟ ಹೋ

ಗುವುದಕೋಸ್ಕರ ಅವನ ಪುತ್ರರು ಇಲ್ಲಿ ವೈತರಣಿಯು ಗೋದಾನವನು ಕೊಡುತ್ತ ಇದ್ದಾರೆ. ಇದಱಿಂದ ಸ್ಥೂಲಶರೀರವು ಪಿತ್ರಾದಿಶಬ್ದಗಳಿಗೆ ಅರ್ಥವಲ್ಲವೆಂದು ತೋಱುತ್ತ ಇದೆ.

ಇಷ್ಟುಮಾತ್ರವಲ್ಲ. ಸತ್ತುಹೋದ ಪಿತ್ರಾದಿಗಳಿಗೋಸ್ಕರ ರು ಸತ್ತದುದು ಮೊದಲು ಸಂವತ್ಸರ ಪರ್ಯಂತವು ತಿಂಗಳು ತಿಂಗಳಿಗೆ ಮಾ ಸಿಕಗಳನೂ ಆ ತಱುವಾಯದಲ್ಲಿ ಅವರ ಪುತ್ರರುಗಳು ಎಷ್ಟು ಪರ್ಯಂತ ಜೀವಿಸಿಕೊಂಡಿದ್ದಾರೋ ಆಪರ್ಯಂತವು ಪ್ರತಿಸಂವತ್ಸರವು ಅವರ ಉದ್ದೇಶಿಸಿ ತದ್ದಿನಗಳನು ಮಧ್ಯೇಮಧ್ಯೆ ಅಷ್ಟಕಾದಿ ಶ್ರಾದ್ಧಗಳನು ಪುಣ್ಯಕ್ಷೇತ್ರಗಳಲ್ಲಿ ತೀರ್ಥಶ್ರಾದ್ಧಗಳನು ಮಾಡುತ್ತ ಇದ್ದಾರೆ. ಈ ಹೇಳಿದೆಲ್ಲವು ಭಸ್ಮವಾಗಿ ಹೋದಂಥ ಈಸ್ಥೂಲಶರೀರವೇ ಪಿತ್ರಾದಿ ಶಬ್ದಗಳಿಗೆ ಅರ್ಥವಾದಂತೆ ಕೂಡದು. ಈಸ್ಥೂಲಶರೀರದಿಂದ ಹೊಱಟು ಲೋಕಾಂತರಕ್ಕೆ ಹೋದವರೆ ಈಪಿತ್ರಾದಿ ಶಬ್ದಗಳಿಗೆ ಅರ್ಥವಾದುದಾದರೆ ಕೂಡುವುದು. ಅದಱಿಂದಲೂ ಸ್ಥೂಲಶರೀರವು ಪಿತ್ರಾದಿ ಶಬ್ದಗಳಿಗೆ ಅರ್ಥವಲ್ಲ.

ಈಹೇಳಿದಂಥ ಯುಕ್ತಿಗಳಿಂದ ಸ್ಥೂಲಶರೀರಕ್ಕೆ ಅರ್ಥವಾಗದೆ ಹೋದರೆ ಹೋಗಲಿ. ಇದಱಿಂದ ಸೂಕ್ಷ್ಮಶರೀರಸಿದ್ಧಿಯಲ್ಲಿ ನಿಮಗೆ ಸಿದ್ಧಿಸಿದುದು ಏನು ಯೆಂದರೆ, ಈಸ್ಥೂಲಶರೀರವನು ಬಿಟ್ಟು ಬಿಟ್ಟು ಲೋಕಾಂತರಕ್ಕೆ ಯಾವುದು ಹೋಯಿತೋ ಅದೇ ಸೂಕ್ಷ್ಮ ಶರೀರವೆಂದು ನಮಗೆ ಸಿದ್ಧಿಸಿತು. ಹೀಗೆ ಹೇಳುವಾಗ್ಗೆ ಪಿತ್ರಾದಿ ಶಬ್ದಗಳಿಗೆ ಸ್ಥೂಲಶರೀರವಲ್ಲ ಅರ್ಥವೆಂದು ಹೇಳಿದುದಾಯಿತು.

ಆದರೆ ಏನೆಂದರೆ—ಪಿತ್ರಾದಿ ಶಬ್ದಗಳಿಗೆ ಚೇತನವಷ್ಟೆ ಅರ್ಥವು, ಸೂಕ್ಷ್ಮಶರೀರವು ಅಚೇತನವಷ್ಟೆ. ಆ ಅಚೇತನವಾದಂಥ ಸೂಕ್ಷ್ಮಶರೀರವು ಪಿತ್ರಾದಿ ಶಬ್ದಗಳಿಗೆ ಹೇಗೆ ಅರ್ಥವಾಗುವುದೆಂದರೆ ಹೇಳೇವು. ಚೇತನವೆಂದರೆ ಆತ್ಮನಷ್ಟೆ. ಆತ್ಮನು ಆಕಾಶದೋಪಾದಿಯಲ್ಲಿ ವ್ಯಾಪಕನಾಗಲಾಗಿ ಆತ್ಮನಿಗೆ ಲೋಕಾಂತರ ಗಮನಾಗಮನಗಳು ಕೂಡದಾಗಲಾಗಿಯೂ ಆತ್ಮನು ನಿರವಯವನಾಗಲಾಗಿ ಆತ್ಮನಿಗೆ ಕರ್ಮಾದಿಸಂಸ್ಕಾರಕ್ಕೆ ಆಶ್ರಯವಾಗಿ ಬಂದನು ಅಂಗೀಕರಿಸದೆ ಹೋದನಾದರೆ ಕೃತನಾಶಾ ಕೃತಾಭ್ಯಾಗಮಾದಿ ದೋಷಗಳು ಬರುತ್ತಿದೆಯಾಗಲಾಗಿ ಕರ್ಮಾದಿ

ಸ್ಕಾರಕ್ಕೆ ಆಶ್ರಯವಾಗಿದ್ದಂಥ ಸೂಕ್ಷ್ಮಶರೀರವೇ ಲೋಕಾಂತರಕ್ಕೆ ಹೋಗುವಂಥದು ಬರುವಂಥದು ಎಂದು ಅಂಗೀಕರಿಸಬೇಕು. ಹಾಗಾದರೆ ಸಾಯುವಂಥದು ಹುಟ್ಟುವಂಥದು ಲೋಕಾಂತರಕ್ಕೆ ಹೋಗುವಂಥದು ಬರುವಂಥದು ಪುಣ್ಯಪಾಪಗಳ ಮಾಡುವಂಥದು—ಚೇತನವಾಗಿ ಧರ್ಮವಾಗಿ ಏತಕ್ಕೆ ತೋರುತ್ತಿದೆಯೆಂದರೆ—ವ್ಯಾಪಕನಾದಂಥ ಆತ್ಮನಿಗೆ ಸೂಕ್ಷ್ಮಶರೀರಕ್ಕೆ ಪ್ರಧಾನಾವಯವವಾದಂಥ ಅಂತಃಕರಣದಲ್ಲಿಯ ಪ್ರತಿಬಿಂಬದ್ವಾರಾ ಆ ಸೂಕ್ಷ್ಮಶರೀರದೊಡನೆ ಅಧ್ಯಾಸವು ಬಂದುದರಿಂದ ಅಗ್ನಿ (ಯ ಸಂಗದ) ತಾದಾತ್ಮ್ಯದಿಂದ ಆಯಃಪಿಂಡವು ಅಗ್ನಿಯೋಪಾದಿಯಲ್ಲಿ ಹೇಗೆ ತೋರುತ್ತಲಿದೆಯೋ, ಹಾಗೆ ಆ ಸೂಕ್ಷ್ಮಶರೀರವು ಚೇತನನೋಪಾದಿಯಲ್ಲಿ ತೋರುತ್ತಿದೆ. ಈ ಸೂಕ್ಷ್ಮಶರೀರದ ಸಂಗಡ ತಾದಾತ್ಮ್ಯದಿಂದ ಸ್ಥೂಲಶರೀರವು ಮೋಹದಿಂದ ಚೇತನನೋಪಾದಿಯಲ್ಲಿ ತೋರುತ್ತಿದೆ. ಅದರಿಂದ ಈ ಸಾಯುವಂಥದು ಹುಟ್ಟುವಂಥದು ಮೊದಲಾದ ಧರ್ಮಗಳು ಮೋಹದಿಂದ ಚೇತನಧರ್ಮಗಳೋಪಾದಿಯಲ್ಲೇ ತೋರುತ್ತಿದೆಯಾದುದರಿಂದ ಸ್ಥೂಲಶರೀರವು, ಸೂಕ್ಷ್ಮಶರೀರವು, ಕಾರಣಶರೀರವು, ಅಂತಃಕರಣದಲ್ಲಿ ಆತ್ಮಪ್ರತಿಬಿಂಬವು ಇದಕ್ಕೆ ಅಧಿಷ್ಠಾನಭೂತವಾದ ಚೈತನ್ಯವು—ಈ ಇಷ್ಟು ಮೋಹದಿಂದ ಕೂಡಿ ಪಿತ್ರಾದಿಶಬ್ದಗಳಿಗೆ ಅರ್ಥವಾಗಿ ತೋರುತ್ತದೆ. ವಿಚಾರಿಸುವಲ್ಲಿ ಅವಷ್ಟು ಅವಕ್ಕದಕ್ಕೆ ವಾಚಕವಾದ ಶಬ್ದಗಳಿಂದ ಹೇಳಪಟ್ಟು ಹೋಯಿತುಹೊರತಾಗಿ ಆ ಪಿತ್ರಾದಿ ಶಬ್ದಗಳಿಗೆ ಇದರೊಳಗೆ ಬಂದದ್ದು ಅರ್ಥವಾಗಿ ತೋರಲಿಲ್ಲ. ಜನ್ಮಮರಣಗಳು ಸ್ಥೂಲಶರೀರಕ್ಕೆ ಪ್ರತ್ಯಕ್ಷವಾಗಿ ಕಾಣಪಟ್ಟದೆಯಾಗಲಾಗಿಯೂ, ಗಮನಾಗಮನಾದಿಗಳು ಕ್ರಿಯಾಶ್ರಯತ್ವವು ಅಪರಿಚ್ಛಿನ್ನವಾದಂಥ ವಸ್ತುವಿಗೆ ಪ್ರತ್ಯಕ್ಷವಾಗಿ ಕಾಣತ್ತದೆಯಾಗಲಾಗಿಯೂ, ಪುಣ್ಯಾಪುಣ್ಯಾದಿ ಕ್ರಿಯೆಯುಂಬ[1] ಪ್ರಕಾ[1]ರಾಂಶ್ರಯತ್ವವು [2]ವಿಕಾರಿಯಾ[2]ದಂಥ ವಸ್ತುವಿಗೆ ಸಿದ್ಧಿಸಿ ಇದೆಯಾಗಲಾಗಿಯೂ, ದೃಷ್ಟವಾಗಿ ನಿತ್ಯವಾಗಿ ವ್ಯಾಪಕನಾಗಿ ಚೈತನ್ಯಸ್ವರೂಪವಾದ ಆತ್ಮನಿಗೆ ಮೋಹದಿಂದ ಬಂದಂಥ ಈ ಹೇಳಿದಂಥ ಧರ್ಮಗಳೊಳಗೆ ಬಂದು ಕ್ರಮವು ಇಲ್ಲವೆಂದು ತೋರುತ್ತಿದೆ. ಇಂಥ ಸ್ವರೂಪನಾದ ಆತ್ಮನಿಗೆ

ಪಾ.—1. ವಿಕಾರಾ. 2. ಪ್ರಕಾರಿಯಾ.

ಮೋಹದಿಂದ ಬಂದಂಥ ಜೀವತ್ವವು, ಲೋಕಾಂತರದ ಗಮನಾಗಮನಗಳು, ಪಿತ್ರಾದಿಶಬ್ದವಾಚ್ಯತ್ವವು ಆವುದರಲ್ಲಿ ಅಧ್ಯಾಸವಾಗಿ ಬಂದಿತೋ ಅದೇ ಸ್ಥೂಲಶರೀರವ್ಯತಿರಿಕ್ತವಾದಂಥ ಸೂಕ್ಷ್ಮಶರೀರವೆಂದು ತಿಳಿಯುತಕ್ಕದ್ದು.

ಮತ್ತು ಯುಕ್ತ್ಯಂತರದಿಂದಲೂ ಸ್ಥೂಲಶರೀರಕಿಂತಲೂ ಸೂಕ್ಷ್ಮಶರೀರವು ಭಿನ್ನವೆಂದು ತೋರುತ್ತ ಇದೆ. ಆಯುಕ್ತ್ಯಂತರವೇನೆಂದರೆ ಹೇಳೇವು. ಈಗ ವಿಚಿತ್ರಗಳಾಗಿ ನಾನಾ ವಿಧವಾದಂಥ ವ್ಯಾಪಾರಗಳು ಯಾವುದರಿಂದ ಮಾಡಪಡುತ್ತಿದೆಯೋ ಅದೇ ಸೂಕ್ಷ್ಮಶರೀರವೆನಿಸುವುದು. ಈ ವ್ಯಾಪಾರಗಳಷ್ಟು ಸ್ಥೂಲಶರೀರಗಳಿಂದಲೇ ಮಾಡುತ್ತಿದೆಯೆಂದು ಹೇಳುವಣವೆಂದರೆ-ಪ್ರೇತಶರೀರದಿಂದಲೂ ಮಾಡಪಡಬೇಕು. ಹಾಗೆ ಕಾಣೆವಾಗಲಾಗಿ ಸ್ಥೂಲಶರೀರಕಿಂತಲು ವ್ಯತಿರಿಕ್ತವಾದಂಥ ಸೂಕ್ಷ್ಮಶರೀರದಿಂದಲೇ ಮಾಡಪಟ್ಟುದಾಗಿ ತೋರುತ್ತಿದೆ. ಹೀಗೆ ಏತಕ್ಕೆ ಹೇಳಬೇಕು ? ಆತ್ಮನೇ ಸಕಲ ಕರ್ಮಗಳನು ಮಾಡುತ್ತಿದ್ದಾನೆಯೆಂದು ಹೇಳುವಣವೆಂದರೆ—ಆತ್ಮನು ವ್ಯಾಪಕನಾಗಿ ಇದ್ದಾನೆಯಾಗಲಾಗಿ, ಆಕಾಶಾದಿಗಳ ಹಾಗೆ ಇರುವಂಥ ಆತ್ಮನು ಕರ್ಮವ ಮಾಡಬೇಕು. ಹಾಗೆ ಮಾಡಲಿಲ್ಲವಾಗಲಾಗಿ, ಆತ್ಮನು ಕರ್ಮವ ಮಾಡುತ್ತಿದ್ದಾನೆಯೆಂದು ಹೇಳಕೂಡದು.

ಹಾಗಾದರೆ ಆಕಾಶಾದಿಗಳಲ್ಲಿ ಇರುವ ಆತ್ಮನು ಕರ್ಮವ ಮಾಡದೆ ಹೋದರೆ ಹೋಗಲಿ. ಸ್ಥೂಲಶರೀರದೊಡನೆ ಕೂಡಿಕೊಂಡಿರುವಂಥ ಆತ್ಮನು ಕರ್ಮವ ಮಾಡುತ್ತಿದ್ದಾನೆಯೆಂದು ಹೇಳುವಣವೆಂದರೆ-ಹೀಗೆ ಹೇಳುವಾಗ ಪ್ರೇತಶರೀರದೊಡನೆ ಕೂಡಿಕೊಂಡಿರುವಂಥ ಆತ್ಮನು ಕರ್ಮವ ಮಾಡಬೇಕು. ಹಾಗೆ ಮಾಡಲಿಲ್ಲವಾಗಲಾಗಿ ಸ್ಥೂಲಶರೀರದೊಡನೆ ಕೂಡಿಕೊಂಡಿರುವಂಥ ಆತ್ಮನು ಕರ್ಮವ ಮಾಡುತ್ತಿದ್ದಾನೆಯೆಂದು ಹೇಳಕೂಡದು. ಹಾಗಾದರೆ ಆತ್ಮನೊಡನೆ ಕೂಡಿಕೊಂಡಿರುವಂಥ ಸ್ಥೂಲಶರೀರವೇ ಕರ್ಮ ಮಾಡುತ್ತಿದೆಯೆಂದು ಹೇಳುವಣವೆಂದರೆ—ವ್ಯಾಪಕನಾದ ಆತ್ಮನೊಡನೆ ಕೂಡಿಕೊಂಡಿರುವಂಥ ಪ್ರೇತಶರೀರವು ಕರ್ಮವ ಮಾಡಬೇಕು. ಹಾಗೆ ಮಾಡುವಂಥದನು ಕಾಣೆವಾದುದರಿಂದ ಆತ್ಮನೊಡನೆ ಕೂಡಿಕೊಂಡಿರುವಂಥ ಸ್ಥೂಲಶರೀರವು ಕರ್ಮವ ಮಾಡುತ್ತಿದೆಯೆಂದು ಹೇಳಕೂಡದು.

ಈಪ್ರಕಾರವಾಗಿ ಕೇವಲವಾದ ಸ್ಥೂಲಶರೀರವು ಕರ್ಮವ ಮಾಡುವಂಥದ ಕಾಣೆವು. ಸದ್ರೂಪನಾಗಿ ಕೇವಲವಾದಂಥ ಆತ್ಮನು ಕರ್ಮವ ಮಾಡುವುದ ಕಾಣೆವು. ಸ್ಥೂಲಶರೀರದೊಡನೆ ಕೂಡಿಕೊಂಡಿರುವಂಥ ಆತ್ಮನು ಕರ್ಮವ ಮಾಡುವುದ ಕಾಣೆವು. ಆತ್ಮನೊಡನೆ ಕೂಡಿಕೊಂಡಿರುವಂಥ ಸ್ಥೂಲಶರೀರವು ಕರ್ಮವ ಮಾಡುವುದ ಕಾಣೆವು. ಹೀಗೆ ಇದ್ದ ಹೊತ್ತಿಗೂ ವಿಚಿತ್ರಗಳಾಗಿ ನಾನಾವಿಧಗಳಾದಂಥ ಕರ್ಮಗಳು ಮಾಡಪಡುವುದಾಗಿ ಕಾಣಪಡುತ್ತ ಇದೆ. ಈ ಕರ್ಮಗಳೆಷ್ಟು ಏತರಿಂದ ಮಾಡಪಡುತ್ತ ಇದೆಯೋ ಅದೇ ಸೂಕ್ಷ್ಮಶರೀರವೆನಿಸುವುದು. ಸದ್ರೂಪನಾದ ಆತ್ಮನಾರೆ ವ್ಯಾಪಕನಾಗಿ ಇದ್ದಾನೆಯಾಗಲಾಗಿಯು, ನಿರವಯವನಾಗಿ ನಿರ್ವಿಕಾರನಾಗಿ ಇದ್ದಾನೆಯಾಗಲಾಗಿಯು, ಅದ್ವಿತೀಯನಾಗಿ ಇದ್ದಾನೆಯಾಗಲಾಗಿಯು, ಆತ್ಮನು ಬಂದರ ಸಂಗಡಲು ಕೂಡಲಿಲ್ಲ. ಆತನಿಗಿಂತಲು ಅನ್ಯವಾದ ವಸ್ತುವಿಲ್ಲವಾದಕಾರಣ ಆತ್ಮನೊಡನೆ ಒಂದು ಕೂಡಿಕೊಂಡಿರಲಿಲ್ಲ. ಕರ್ಮವೆಲ್ಲವು ಕಾರಕಸಾಪೇಕ್ಷವಾಗಿ ಇದೆಯಾದ ದರಿಂದ ಆತ್ಮನು ಒಂದು ಕರ್ಮವನು ಮಾಡಲಿಲ್ಲ.

ಹಾಗಾದ ಹೊತ್ತಿಗೂ ಇಂಥ ಆತ್ಮನಲ್ಲಿ ಅನಾದಿಯಾಗಿ ಕಲ್ಪಿತವಾದಂಥ ಅವಿದ್ಯೆಯೆಂಬ ಅಜ್ಞಾನದಿಂದ ಕಲ್ಪಿಸಪಟ್ಟಂಥ ಅಪಂಚೀಕೃತ ಪಂಚಮಹಾಭೂತದ್ವಾರಾ ಕಲ್ಪಿಸಪಟ್ಟ ಆತ್ಮಸತ್ತೆಯಿಂದ ಸತ್ತೆನೋಪಾದಿಯಲ್ಲಿ ತೋರುವಂಥ ಸೂಕ್ಷ್ಮಶರೀರವು ಸ್ಥೂಲಶರೀರವೊಡನೆ ಕೂಡಿಕೊಂಡು ಏತಕ್ಕೆ ಕರ್ಮವ ಮಾಡಬೇಕು? ಸೂಕ್ಷ್ಮಶರೀರವು ಸೂಕ್ಷ್ಮಶರೀರದೊಡನೆ ಕೂಡಿಕೊಂಡು ಕರ್ಮವ ಮಾಡದಹೊತ್ತಿಗೂ ಆ ಕರ್ಮವು ಸೂಕ್ಷ್ಮಶರೀರದಿಂದ ಮಾಡಪಡುತ್ತಿದೆಯೆಂದು ಹೇಗೆ ತಿಳಿಯಬೇಕೆಂದರೆ ಹೇಳೇವು. ಈ ಸೂಕ್ಷ್ಮಶರೀರವು ಸೂಕ್ಷ್ಮವಾಗಲಾಗಿ ಸ್ಥೂಲಶರೀದೋಪಾದಿಯಲ್ಲಿ ತೋರಲಿಲ್ಲ ಲೋಕದಲ್ಲಿ ಯಾವ ವಸ್ತುವು ಕರ್ಮಕ್ಕೆ ಕರ್ತೃವಾಗಿ ಇದೆಯೋ ಆಯಾ ವಸ್ತುವು ಬಂದನು ಆಶ್ರಯಿಸಿ ಕರ್ಮವ ಮಾಡುವುದಾಗಲಾಗಿಯು, ಹಾಗೆ ಕರ್ಮವ ಮಾಡಿದಹೊತ್ತಿಗೂ ಯಾವಯಾವ ವಸ್ತುವನಾಶ್ರಯಿಸಿಕೊಂಡು ಕರ್ಮವ ಮಾಡುತ್ತಿದೆಯೋ ಆಯಾ ಕರ್ಮವು ಆಶ್ರಯದಿಂದಲೇ ಮಾಡಪಟ್ಟುದಾಗಿ ಅಜ್ಞಾನಿಗಳಲ್ಲಿ ತೋರುತ್ತ ಇದೆ.

ಹಾಗೆ ಸೂಕ್ಷ್ಮಶರೀರವು ಸ್ಥೂಲಶರೀರವ ಆಶ್ರಯಿಸಿಕೊಂಡು ಸಕಲ ಕರ್ಮವನು ಮಾಡಿದ ಹೊತ್ತಿಗೂ ಆಶ್ರಯವಾದಂಥ ಸೂಕ್ಷ್ಮಶರೀರವ ಕರ್ಮವೇ ಸಮಸ್ತ ಕರ್ಮವು. ಅದಱಿಂದ ಈ ಕರ್ಮದ್ವಾರಾ ಸ್ಥೂಲಶರೀರದೋಪಾದಿಯಲ್ಲಿ ಈ ಸೂಕ್ಷ್ಮಶರೀರವು ಈ ಸೂಕ್ಷ್ಮಶರೀರಕ್ಕಿಂತಲು ಭಿನ್ನವಾಗಿ ವಿಚಾರಿಸುವಂಥ ಪುರುಷನಿಗೆ ತೋಱುತ್ತಿದೆ.

ಅದೆಂತೆಂದರೆ—ನನ್ನ ಚಕ್ಷುಸ್ಸು, ನನ್ನ ಶ್ರೋತ್ರ, ನನ್ನ ವಾಕ್ಕು, ನನ್ನ ಪ್ರಾಣ, ನನ್ನ ಅಂತಃಕರಣ, ನನ್ನ ಬುದ್ಧಿಯೆಂಬಂಥ ಅನುಭವದಿಂದಲೂ ಸ್ಥೂಲಶರೀರಕಿಂತಲೂ ಭಿನ್ನವಾಗಿ ಸೂಕ್ಷ್ಮಶರೀರವು ಮತ್ತೊಂದು ತೋಱುತ್ತದೆ. ಹೀಗೆ ಕಾರ್ಯವಾದಂಥ ಸ್ಥೂಲ ಸೂಕ್ಷ್ಮ ಶರೀರಗಳಿಂದ ಇದಕ್ಕೆ ಕಾರಣವಾಗಿ ಆತ್ಮನಿಗೆ ಜೀವತ್ವದಲ್ಲು ಜಗತ್ಕಾರಣತ್ವದಲ್ಲು ಉಪಾಧಿಯಾದಂಥವಾಗಿ ಸದಸದಾದಿಗಳಿಂದ ಅನಿರ್ವಚನೀಯವಾಗಿ ಶುತ್ಯಾದಿಗಳಿಂದ ಪ್ರಕೃತಿಯೆನುತಲು ಮಾಯೆಯೆನುತಲು ಹೇಳಪಟ್ಟಂಥ ಕಾರಣ ಶರೀರವು ಬಂದುಂಟೆಂದು ತೋಱುತ್ತ ಇದೆ. ಇಷ್ಟು ಮಾತ್ರವಲ್ಲ. ನಾನು ಅಜ್ಞನು. ನಾನು ಜಡನು, ನಾನು ಏನನು ಅಱಿಯೆನೆಂಬಂಥ ಅನುಭವದಿಂದಲು ಕಾರಣಶರೀರ ಬಂದುಂಟೆಂದು ತೋಱುತ್ತಿದೆ. ಈ ಪ್ರಕಾರವಾಗಿ ಸಮಸ್ತ ಪ್ರಾಣಿಗಳಿಗೂ ಮೂಱು ಶರೀರಗಳುಂಟೆಂದು ನಿಶ್ಚಯಿಸಪಟ್ಟಿತು.

ಹೀಗೆ ಆತ್ಮನು ಈ ಮೂಱು ಶರೀರಗಳನು ತಿಳಿಯುತ್ತಿರುವಂಥವನಾಗಲಾಗಿ ಈ ಮೂಱು ಶರೀರಗಳೊಡನೆ ಕೂಡಿಕೊಂಡಿದ್ದ ಹೊತ್ತಿಗು ಆಕಾಶದೋಪಾದಿಯಲ್ಲಿ ಆ ಶರೀರಗಳೊಡನೆ ಕೂಡದೆ ಇರುವಂಥವನಾಗಿಯೂ, ಕಾಲತ್ರಯದಲ್ಲು ಇದ್ದಾನೆಯಾಗಲಾಗಿ ಸದೂಪನಾಗಿ ಸಮಷ್ಟಿವ್ಯಷ್ಟಿರೂಪವಾದಂಥ ಶರೀರತ್ರಯಾತ್ಮಕವಾದ ಪ್ರಪಂಚನಿಷ್ಠವಾಗಂಥ ಪದಾರ್ಥಗಳೊಳಗೆ ಬಂದು ಪದಾರ್ಥದಿಂದಲ ತಾನು ತಿಳಿಯಪಡಲಿಲ್ಲವಾಗಲಾಗಿಯೂ, ತಾನು ಸಮಸ್ತ ಪದಾರ್ಥಗಳನು ತಿಳಿಯುತಿದ್ದಾನೆಯಾದುದಱಿಂದ ಚಿದ್ರೂಪನಾಗಿಯು, ಪರಮಪ್ರೇಮಾಸ್ಪದನಾಗಲಾಗಿ ಆನಂದಸ್ವರೂಪನಾಗಿಯೂ, ತೋಱುತ್ತ ಇದ್ದಾನೆ. ಇಂಥ ಆತ್ಮನೇ ನಾನೆಂದು ಮುಮುಕ್ಷುವಾದಂಥವ ತಿಳಿಯತಕ್ಕುದು.

ಕಾರ್ಯವಾದಂಥ ಶರೀರತ್ರಯವು ಕಾರಣವಾದಂಥ ಪೃಥಿವ್ಯಾದಿಗಳು ಪ್ರತ್ಯಕ್ಷವಾಗಿ ತೋರುತ್ತ ಇರಲಾಗಿ ಗ್ರುತ್ಯಾದಿಗಳಿಂದ ಹೇಳಪಟ್ಟಂಥ ಅದ್ವಿತೀಯತ್ವವು ಪರಿಪೂರ್ಣತ್ವವು ಆತ್ಮನಿಗೆ ಹೇಗೆ ಕೂಡುವುದು? ಎಂದರೆ ಕೂಡುವುದು. ಅದೆಂತೆಂದರೆ ಹೇಳೇವು. ಸಮಷ್ಟಿವ್ಯಷ್ಟ್ಯಾತ್ಮಕವಾದಂಥ ಶರೀರತ್ರಯವೆಂದೀಪ್ರಪಂಚವು ಆ ಆತ್ಮನಲ್ಲಿ ಆರೋಪಿತಗಳಾಗಿ ಇವೆಯಾಗಲಾಗಿ, ರಜ್ಜ್ವಾದಿಗಳಲ್ಲಿ ಆರೋಪಿಸಪಟ್ಟಂಥ ಸರ್ಪಾದಿಗಳಿಗೆ ಹೇಗೆ ರಜ್ಜುಮಾತ್ರ ಸ್ವರೂಪವೋ, ಹಾಗೆ ಆತ್ಮನಲ್ಲೂ ಆರೋಪಿತವಾದ ಪ್ರಪಂಚಕ್ಕೆ ಆತ್ಮನೇ ಸ್ವರೂಪನೆನಿಸುವನು. ಆತ್ಮನೇ ಹೊರತಾಗಿ ವಸ್ತ್ವಂತರವು ಇಲ್ಲವಾದುದರಿಂದ ಆತ್ಮನಿಗೆ ಸದ್ವಿತೀಯತ್ವಾಪಾದಕವಾದಂಥ ವಸ್ತ್ವಂತರವು ಇಲ್ಲವಾಗಲಾಗಿ ಆತ್ಮನು ಅದ್ವಿತೀಯನೇ ಸರಿ; ಸಂದೇಹವಿಲ್ಲ. ಯಾವಾಗ ಆತ್ಮನಿಗೆ ಅದ್ವಿತೀಯತ್ವ ಸಿದ್ಧಿಸಿತೋ ಆಗಲೇ ಪರಿಪೂರ್ಣತ್ವವು ಸಿದ್ಧಿಸಿತೇ ಸರಿ.

ಅದೆಂತೆಂದರೆ, ಆತ್ಮನಿಗೆ ಭ್ರಾಂತಿಯಿಂದ ಪರಿಚ್ಛೇದಗಳೋಪಾದಿಯಲ್ಲಿ ತೋರುವಂಥ ದೇಶ ಕಾಲ ವಸ್ತುಗಳು ಆತ್ಮವ್ಯತಿರಿಕ್ತವಾಗಿ ಇಲ್ಲದೆ ಹೋಯಿತಾಗಲಾಗಿ ತ್ರಿವಿಧಪರಿಚ್ಛೇದ ಶೂನ್ಯತ್ವಸ್ವರೂಪವಾದಂಥ ಪರಿಪೂರ್ಣತ್ವ ಸಿದ್ಧಿಸಿತು.

ಇಂಥ ಆತ್ಮನೇ ನಾನುಯೆಂದು ಮುಮುಕ್ಷು ತಿಳಿಯಬಹುದು. ಈ ಪ್ರಕಾರವಾಗಿ ಯಾವನ ತಿಳಿಯುತ್ತ ಇದ್ದಾನೆಯೋ ಆತನಿಗೆ ಕಾಲತ್ರಯದಲ್ಲೂ ಪ್ರಪಂಚವೇ ಇಲ್ಲ.

ಆದಹೊತ್ತಿಗೂ ಪ್ರಾರಬ್ಧ ಎಷ್ಟುಪರ್ಯಂತ ಇದೆಯೋ ಅಷ್ಟುಪರ್ಯಂತವೂ ದೇಹೇಂದ್ರಿಯಾಗಿ ಪ್ರಪಂಚವು ಮಿಥ್ಯಾಭೂತವಾಗಿ ತೋರಬಹುದು. ಹೀಗೆ ತೋರಿದುದರಿಂದ ಜೀವನ್ಮುಕ್ತಿಗೆ ಮಿಥ್ಯಾಭೂತವಾಗಿ ಆಭಾಸರೂಪವಾದಂಥ ಸುಖದುಃಖಪ್ರತೀತಿಯಿಂದ ಬಾಧೆಯಿಲ್ಲ. ಮಿಥ್ಯೆಯೇನೆಂದರೆ ರಜ್ಜುಸರ್ಪಗಳೋಪಾದಿಯಲ್ಲಿ ಸ್ವಾಧಿಷ್ಠಾನಜ್ಞಾನದಿಂದ [1]ಬಾಧಿ[1] ಸಪಡುವಂಥದು ಮಿಥ್ಯೆಯೆನುತಲೂ, ಸ್ವಪ್ನಮನೋರಾಜ್ಯಗಳೋಪಾದಿಯಲ್ಲಿ ನೋಡುತ್ತ ಇರಲಾಗಿಯೇ ನಾಶವಾಗಿ ಹೋಗುವಂಥದು ಮಿಥ್ಯೆಯೆನುತಲೂ, ಮು

---

ಪಾ.—1. ಬೋಧಿ.

ರುಮರೀಚಿಕಾಜಲಗಳೋಪಾದಿಯಲ್ಲಿ ಅನಿರ್ವಚನೀಯವೇ ಮಿಥ್ಯೆಯೆನುತಲೂ, ಘಟಾದಿಗಳೋಪಾದಿಯಲ್ಲಿ ಸತ್ತಾರಾಹಿತ್ಯಗಳಾಗಿ ತೋಱುವಂಥದು ಮಿಥ್ಯೆಯೆನುತಲೂ, ಶಾಸ್ತ್ರಗಳಲ್ಲಿ ಹೇಳಪಟ್ಟಂಥ ಮಿಥ್ಯಾತ್ವಲಕ್ಷಣವು ಈ ಸಮಷ್ಟಿವ್ಯಷ್ಟ್ಯಾತ್ಮಕವಾದ ದೇಹೇಂದ್ರಿಯಾದಿ ಪ್ರಪಂಚದಲ್ಲಿ ಇದೆಯಲ್ಲ. ಆದಱಿಂದ ಪಾರಮಾರ್ಥಿಕ ಸ್ವರೂಪವಾದಂಥ ಆತ್ಮನೇ ಪರತತ್ವನೆನಿಸುವನು. ಆತ್ಮನಿಂದಲು ಭಿನ್ನದೋಪಾದಿಯಲ್ಲಿ ಭ್ರಾಂತಿಯಿಂದ ತೋಱುವಂಥ ಜಗತ್ತು ಮಿಥ್ಯೆಯೆಂಬುದಱಲ್ಲಿ ಸಂದೇಹವಿಲ್ಲ. ಆದುದಱಿಂದ ಆವವನಾದರೇನು? ಶಾಸ್ತ್ರೋಕ್ತಸಾಧನಸಂಪನ್ನನಾಗಿ ಪರಮಾರ್ಥ ದ್ವಿತೀಯ ಪರಿಪೂರ್ಣ ಸಚ್ಚಿದಾನಂದಸ್ವರೂಪನಾದ ಆತ್ಮನೇ ನಾನು, ನನ್ನ ಹೊಱತಾಗಿ ಜಗತ್ತೇ ಇಲ್ಲವೆಂದು ತೋಱಿದಹೊತ್ತಿಗೂ, ಈ ಮಿಥ್ಯಾಭೂತವಾದ ಜಗತ್ತಿನಿಂದ ನನಗೆ ಸ್ಪರ್ಶವೇ ಇಲ್ಲವೆಂದು ಸಂಶಯಸಂಭಾವನೆ ವಿಪರೀತ ಸಂಭಾವನೆಗಳು ಇಲ್ಲದಹಾಗೆ ಆವವ ತಿಳಿಯುತ್ತ ಇದ್ದಾನೆಯೋ, ಆತನೇ ಜೀವನ್ಮುಕ್ತನು, ಆತನೇ ವಿದ್ವಾಂಸನು, ಆತನೇ ಸಕಲ ಶಾಸ್ತ್ರಗಳಿಂದಲೂ ಹೇಳಪಡುವಂಥವನು, ಆತನೇ ಸಮಸ್ತವಾದವರಿಗೂ ಪೂಜ್ಯನೆಂದು ಶಾಸ್ತ್ರಸಿದ್ಧಾಂತ. ಈ ಅರ್ಥದಲ್ಲಿ ಸಂಶಯವಿಲ್ಲ.

ಇಂತೀ ಕನ್ನಡ ಕನ್ನಡ ಭಾಷೆಯೊಳ್ ವಿರಚಿಸಿದ
ವಾಸುದೇವಯತೀಂದ್ರಪ್ರೋಕ್ತಮಪ್ಪ
ವೇದಾಂತವಿವೇಕಸಾರಗ್ರಂಥದಲ್ಲಿ
ಶರೀರತ್ರಯಲಕ್ಷಣಪ್ರಕರಣಮಂ ಪೇಳ್ದುದು
ಪಂಚದಶಪ್ರಕರಣಂ,

---